ಸಂವಾದ

ಡಿಸೆಂಬರ್ ೨೦೦೯ ರೂ. ೨೦

ವಂದೇ ಮಾತರಂ:

ಹಿಂದೂ ರಾಷ್ಟ್ರ !

ಮುಸ್ಲಿಂ ದ್ವೇಷ !!

ಬ್ರಿಟಿಷ್ ಭಕ್ತಿ !!!

ಕೆಸರಿನ ಕಮಲ ಮುದುಡುತ್ತಿರುವುದೇಕೆ?

ಸಂವಾದ

ಮಾಸ ಪತ್ರಿಕೆ

ಸಂಪುಟ ೮ ಸಂಚಿಕೆ ೨
ಡಿಸೆಂಬರ್ ೨೦೦೯

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು–೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 080- 23480278, 9945264687
e- mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ❑ ಪತ್ರಗಳು ೦೩
- ❑ ಹೊಸ ಪುಸ್ತಕ ೦೪
- ❑ ಸಂಪಾದಕರೊಂದಿಗೆ ಸಂವಾದ:
  - ○ ಜಿ. ವಿ. ಸುಂದರ್ ೦೬
  - ○ ಡಿ. ಎಸ್. ನಾಗಭೂಷಣ ೦೭
  - ○ ಭರತ್ ರಾಜ್ ೦೮
  - ○ ಅಪೂರ್ವ ಡಿ ಸಿಲ್ವಾ ೦೯
- ❑ "ವಂದೇ ಮಾತರಂ" ಹಿಂದೂ ರಾಷ್ಟ್ರ, ಮುಸ್ಲಿಂ ದ್ವೇಷ, ಬ್ರಿಟಿಷ್ ಭಕ್ತಿ!
  - ○ ಶಿವಸುಂದರ್ ೧೨
- ❑ ಪ್ರಜಾಪ್ರಭುತ್ವ ಪ್ರಭಾ(ಹಾ)ವಳಿ
  - ○ ಎಸ್. ಬಿ. ಜೋಗುರ ೧೬
- ❑ ಕೆಸರಿನ ಕಮಲ ಮುದುಡುತ್ತಿರುವುದೇಕೆ?
  - ○ ನಾ ದಿವಾಕರ ೧೮







- ❑ ಹಿಂದುಳಿದ ವರ್ಗಗಳ ಜನಗಣತಿ ಸಂವಿಧಾನ ಬಾಹಿರವಲ್ಲ
  - ○ ದಾಸನೂರು ಕೂಸಣ್ಣ ೨೪
- ❑ ಜನತೆಯ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವ ಮಾಧ್ಯಮಗಳು
  - ○ ನರಸಿಂಹ ಗುಂಜಹಳ್ಳಿ ೨೬
- ❑ ಮತ್ತೆ ನಮ್ಮ ನಡುವೆ ಕುವೆಂಪು ಮತ್ತು ಒಕ್ಕಲಿಗರ ಆತ್ಮಹತ್ಯೆಗೆ ಆಹ್ವಾನ
  - ○ ಹಿ. ಶಿ. ರಾಮಚಂದ್ರೇಗೌಡ ೩೦
- ❑ ಪುಸ್ತಕ ಅವಲೋಕನ : ಸುಗಮ ಸಂಗೀತಕ್ಕೊಂದು ಪಠ್ಯ ಕೃತಿ
  - ○ ಡಾ. ಎ. ರಘುರಾಂ ೩೬

- ❑ ಕಾಲಮಾನ... ೧ ಗಾಂಧಿಯ ರ‍್ಯಾಡಿಕಲಿಸಂ ರ‍್ಯಾಡಿಕಲಿಸಂನ ಗಾಂಧಿ!
  - ○ ಡಾ. ಮುಜಾಫ್ಫರ್ ಅಸ್ಸಾದಿ ೩೮
- ❑ ಧರೆ ಹತ್ತಿ ಉರಿದರೆ... ೧೭ ಆಹಾರದ ಬಿಕ್ಕಟ್ಟು: ಆಹಾರದ ಹಕ್ಕು
  - ○ ಡಾ. ಟಿ. ಆರ್ ಚಂದ್ರಶೇಖರ್ ೪೨
- ❑ ದಲಿತ್ ಡೈರಿ
  - ○ ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್ ೪೬
- ❑ ಬುದ್ಧಾಯಣ ೫೦
  - ○ ಸಿ. ಎಚ್. ರಾಜಶೇಖರ್

ಕವನಗಳು : ❑ ಒಂದು ಬೊಗಸೆ ಕ್ರಾಂತಿ ೦೫ ❑ ಹೆಣ ಹೊತ್ತ ಮನೆಯಲಿ ೧೧
❑ ಝೂನ್ ಗಜಲ್‌ಗಳು ೧೫ ❑ ನೋವು ೨೮



ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಗಣಿ ಕಳ್ಳರನ್ನು ಸದೆ ಬಡಿಯಬೇಕು

ಮಾನ್ಯರೆ,

ರಾಜ್ಯದಲ್ಲಿ ಗಣಿ ವಹಿವಾಟು ನಡೆಸಿದವರೆಲ್ಲಾ ಇಂದು ಕಪ್ಪು ಹಣದ ಗಣಿ ಕಳ್ಳರೆಂದು ಕರೆದರೆ ಅಪರಾಧವಾಗುವುದಿಲ್ಲ. ಇಂದಿನ ರಾಜ್ಯದ ರಾಜಕೀಯ ಬಿಕ್ಕಟಿಗೆ ಕಪ್ಪು ಹಣದ ಪ್ರಭಾವದಿಂದ ಬಿಜೆಪಿ ಆಪರೇಷನ್ ಕಮಲದ ಮೂಲಕ ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದು ವಂಚಿಸುವ ಜಾಲ ಪತ್ತೆ ಮಾಡುವ ಕಾಲ ಸಮೀಪಿಸುತ್ತಿದೆ.

ಇಂದಿನ ರಾಜ್ಯದ ವಿದ್ಯಮಾನ ಒಂದು ಕಡೆ ಅಧಿಕಾರದ ವ್ಯಾಮೋಹ, ಮತ್ತೊಂದು ಕಡೆ ಹಣದ ಹೊಳೆ ಹರಿಸಿ ಅಧಿಕಾರಕ್ಕೆ ಬಂದಿರುವ ಕೆಲವು ಸಚಿವರುಗಳು ತಿರುಪತಿ ತಿಮ್ಮಪ್ಪನನ್ನೇ ತಮ್ಮ ವಶದಲ್ಲಿ ಇಟ್ಟುಕೊಂಡಂತೆ ವರ್ತಿಸುತ್ತಿದ್ದಾರೆ. ಸದಾ ಏನು ಮಾಡಿದರೂ ತಿಮ್ಮಪ್ಪನ ಬಲ ಹಾಗೂ ಅನುಗ್ರಹ ಇದೆ ಎಂದು ತಿಳಿದುಕೊಂಡು ಜಯವಿರುವವರೆಗೆ ಭಯವಿಲ್ಲ ಎಂಬ ಗಾದೆಯಂತೆ ವರ್ತಿಸುತ್ತಿರುವ ಬಿಜೆಪಿ ಶಾಸಕರುಗಳ ಒಂದು ಗುಂಪು ರಾಜ್ಯದಲ್ಲಿ ತಲೆದೋರಿರುವ ಸಂತ್ರಸ್ತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿಕೊಡಬೇಕಾದ ಜವಾಬ್ದಾರಿ ಮರೆತು ಮತದಾರರನ್ನು ವಂಚಿಸುತ್ತಿರುವುದು ಖಂಡನೀಯ.

ರಾಜ್ಯ ಎದುರಿಸುತ್ತಿರುವ ಅತಿವೃಷ್ಠಿಯಿಂದ ತತ್ತರಿಸಿರುವ ಸಂತ್ರಸ್ತರ ಸಮಸ್ಯೆಗಳನ್ನು ಕ್ಷೇತ್ರದಲ್ಲಿ ಕೆಲಸ ಮಾಡಿ ಪರಿಹರಿಸಬೇಕಾದ ಶಾಸಕರು ರೆಸಾರ್ಟ್‌ನಲ್ಲಿ ಉಳಿದುಕೊಂಡು ಕರ್ತವ್ಯ ಮರೆತು ಅಧಿಕಾರಕ್ಕಾಗಿ ಕಚ್ಚಾಡುತ್ತಿರುವುದಕ್ಕೆ ಮತದಾರರು ಅಂತ್ಯ ಆಡಬೇಕು. ಅಂದರೆ ಶಾಸಕರು ರಾಜೀನಾಮೆ ಸಲ್ಲಿಸುವಂತೆ ಒತ್ತಾಯ ಮಾಡಬೇಕು. ಇಂದು ತಲೆದೋರಿರುವ ಸಂವಿಧಾನ ಬಿಕ್ಕಟ್ಟಿಗೆ ಬಿಜೆಪಿ ಶಾಸಕರುಗಳು ಹೊಣೆಗಾರರೆಂಬುವುದನ್ನು ಎಲ್ಲರೂ ಮನಗಾಣಬೇಕು. ಈ ಹಂತದಲ್ಲಿ ಪ್ರತಿಪಕ್ಷದ ನಾಯಕರು ಮೌನ ಆಚರಿಸುತ್ತಾ ಕುಳಿತಿರುವುದು ಒಪ್ಪುವಂತಹದಲ್ಲ. ಸಂತ್ರಸ್ತರಿಗೆ ಪಕ್ಷ ಭೇಧ ಮರೆತು ಉದ್ಭವವಾಗಿರುವ ಜಟಿಲ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿಕೊಡುವುದು ಎಲ್ಲಾ ಶಾಸಕಾಂಗದ (ಶಾಸಕರು) ಪ್ರಜಾಪ್ರತಿನಿಧಿಗಳ ಆದ್ಯ ಕರ್ತವ್ಯ. ಕೇಂದ್ರದ ಕಾನೂನು ಸಚಿವರು ಈಗಾಗಲೇ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ಕುಂಠಿತಗೊಂಡಿರುವುದೇ ಅಲ್ಲದೆ ನೆರೆ ಸಂತ್ರಸ್ತರು ದಿನನಿತ್ಯ ಜೀವನದಲ್ಲಿ ಅನುಭವಿಸುತ್ತಿರುವ ಜಟಿಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದ ಸರ್ಕಾರದ ವೈಫಲ್ಯತೆ ಬಗ್ಗೆ ಹೇಳಿಕೆ ಕೊಟ್ಟಿರುವುದು ಶ್ಲಾಘನೀಯ.

ಆದಾಗ್ಯೂ ಪ್ರತಿಪಕ್ಷಗಳ ಪ್ರಮುಖ ನಾಯಕರುಗಳ ಮೌನ ರಾಜ್ಯಕ್ಕೆ ಶೋಭೆ ತರುವಂತಹದಲ್ಲ. ಗಣಿ ಲೂಟಿ ಮಾಡಿರುವವರನ್ನು ತಕ್ಷಣ ಪತ್ತೆಹಚ್ಚಿ ಶಿಕ್ಷೆಗೆ ಗುರಿಪಡಿಸಲು ಲೋಕಾಯುಕ್ತರು ಈಗಾಗಲೇ ಕ್ರಮ ತೆಗೆದುಕೊಂಡಿರುವ ಬಗ್ಗೆ ಹೆಚ್ಚಿನ ಅಧಿಕಾರ ಹಾಗೂ ನೆರವು ನೀಡಬೇಕು. ಈ ದಿಕ್ಕಿನಲ್ಲಿ ಮುಖ್ಯಮಂತ್ರಿ ಕಾರ್ಯೋನ್ಮುಖರಾಗಬೇಕು.

ಎ.ಮಾದಯ್ಯ, ಮೈಸೂರು

ಪತ್ರಾಗಾರ

ಸಂಸ್ಕೃತ ವಿ.ವಿ: ಹೆಣದ ಶೃಂಗಾರ?

ಮಾನ್ಯರೆ,

ನವೆಂಬರ್ ತಿಂಗಳ ಸಂವಾದದಲ್ಲಿ ಪ್ರಕಟವಾದ ಕೆ.ಎಲ್. ಚಂದ್ರಶೇಖರ್ ಐಜೂರ್ ರವರ "ಸಂಸ್ಕೃತ ವಿಶ್ವವಿದ್ಯಾಲಯವೆಂಬ ಹೆಣದ ಶೃಂಗಾರ" ಲೇಖನ ಓದಲು ತುಂಬಾ ಆಸಕ್ತಿದಾಯಕವಾಗಿತ್ತು. ನಾಡಿನ ಇಬ್ಬರು ಹಿರಿಯ ಸಾಹಿತಿಗಳಾದ ಡಾ॥ ಜಿ.ಎಸ್. ಶಿವರುದ್ರಪ್ಪ ಹಾಗೂ ಡಾ॥ಚಂದ್ರಶೇಖರ್ ಕಂಬಾರರೊಂದಿಗೆ ನಡೆಸಿದ ಸಂವಾದವೂ ಫಲಪ್ರದವಾಗಿದೆ. ಲೇಖಕರೇ ಹೇಳಿರುವಂತೆ ಒಂದು ಕಾಲದಲ್ಲಿ ದಲಿತರಿಗೆ ನಿರಾಕರಿಸಲ್ಪಟ್ಟ ಭಾಷೆಯೊಂದಕ್ಕೆ ಇಂದು ಈ ಬಿಜೆಪಿ ಸರಕಾರ ಒಂದು ಸಮುದಾಯದ ಜನರ ಓಲೈಕೆಗಾಗಿ ಸಂಸ್ಕೃತ ವಿ.ವಿ ಸ್ಥಾಪಿಸಲು ಮುಂದಾಗಿರುವುದು ಸರಿಯಾದ ನಿರ್ಧಾರವಲ್ಲ.

ಸತ್ತ ಹೆಣವನ್ನು ಮಣ್ಣುಹಾಕಿ ಮುಚ್ಚುವುದನ್ನು ಬಿಟ್ಟು ಅದಕ್ಕೆ ಶೃಂಗಾರ ಮಾಡಿ ಕೂಡಿಸಿದರೆ ದುರ್ವಾಸನೆ ಬರುತ್ತದೇ ವಿನಃ ಸುವಾಸನೆ ಬರಲು ಹೇಗೆ ಸಾಧ್ಯ? ನಮ್ಮ ರಾಜ್ಯದಲ್ಲಿ ಹಲವಾರು ಭಾಷೆಗಳು ಬಂದು ನೆಲೆ ಊರುತ್ತಿರುವುದರಿಂದ ಕನ್ನಡ ಭಾಷೆಯ ಪರಿಸ್ಥಿತಿಯೇ ಚಿಂತಾಜನಕವಾಗಿರುವಾಗ ಇದನ್ನು ಉಳಿಸಿಕೊಳ್ಳುವುದರ ಬಗ್ಗೆ ಚಿಂತನೆ ಮಾಡುವುದನ್ನು ಬಿಟ್ಟು ಯಾರಿಗೂ ಬೇಡವಾದ ಸಂಸ್ಕೃತವನ್ನು ಸಮಾಧಿಯಿಂದ ಹೆಕ್ಕಿ ತೆಗೆಯುತ್ತಿರುವುದು ಯಾರ ಉದ್ದಾರಕ್ಕಾಗಿ.?

ಇಂದು ಸಮಾಜ ಹಳೆ ಗೊಡ್ಡು ಸಂಪ್ರದಾಯಗಳನ್ನು ಧಿಕ್ಕರಿಸಿ ಮುನ್ನುಗುತ್ತಿರುವಾಗ ಮತ್ತೆ ಸನಾತನಿಗಳ ಸಂಪ್ರಾದಾಯಕ್ಕೆ ಜೀವ ತುಂಬಲು ಸಂಸ್ಕೃತ ವಿವಿ ಸ್ಥಾಪನೆ, ಶಿಕ್ಷಣದಲ್ಲಿ ಜ್ಯೋತಿಷ್ಯ ಶಾಸ್ತ್ರದ ಸೇರ್ಪಡೆ ಮಾಡುವ ಮಾತನಾಡುವುದು ಮೂರ್ಖರ ಲಕ್ಷಣವಲ್ಲದೆ ಇನ್ನೇನು?

ಪ್ರಸ್ತುತ ಸಂದರ್ಭದಲ್ಲಿ ಲೇಖನ ಮೂಡಿಬಂದಿರುವುದು ಉಪಯುಕ್ತವಾಗಿದೆ ಸಂವಾದ ಸಂದರ್ಭಕ್ಕನುಗುಣವಾಗಿ ಲೇಖನಗಳನ್ನು ಪ್ರಕಟಿಸುತ್ತಿರುವುದರಿಂದ ಓದುಗರ ನಿಲುವು ಮತ್ತಷ್ಟು ಭದ್ರವಾಗುತ್ತಿದೆ ಎಂಬುವುದು ನನ್ನ ಅಭಿಪ್ರಾಯ.

'ಸಂವಾದ'ಕ್ಕೆ ಶುಭಾಷಯಗಳು.

ಮಡಿವಾಳಪ್ಪ .ಎಸ್. ಕೆ.

ವಾಡಿ(ಜಂ), ತಾ॥ ಚಿತ್ತಾಪುರ

ಸಮಾನತೆ ನೈತಿಕತೆಯಾಗಿಲ್ಲ ಮಾನವೀಯತೆ ಧರ್ಮವಾಗಿಲ್ಲ

ಮಾನ್ಯ ಸಂಪಾದಕರಿಗೆ,

"ಹಿಂದುತ್ವದ ಪಾಳಯದಲ್ಲಿ ಜಿನ್ನಾ ಎಂಬ ಭೂತ"ವು ನಮ್ಮ ಪ್ರಜಾತಂತ್ರದ ಅಯೋಮಯ ಸ್ಥಿತಿಯನ್ನು ಕಾಣಿಸುತ್ತದೆ. (ಅಕ್ಟೋಬರ್ 09).

ಯಾವುದೇ ರಾಜಕೀಯ ಪಕ್ಷಕ್ಕೆ "ಹಸಿವೆ"ಯೊಂದು ಚಿಂತನೆಯ ವಿಷಯವಾಗಿಲ್ಲ; ಸಮಾನತೆಯು ನೈತಿಕತೆಯಾಗಿಲ್ಲ; ಮಾನವೀಯತೆಯು ಧರ್ಮವಾಗಿಲ್ಲ. ಎಲ್ಲ ರಾಜಕೀಯ ಪಕ್ಷಗಳದ್ದೂ 'ಯಜಮಾನ ಮತ್ತು ಸೇವಕ (Master and Servant) ಎನ್ನುವುದೇ ಸೈದ್ಧಾಂತಿಕತೆ. ಸಂವಿಧಾನ ಬದ್ಧತೆಯೆಂದರೆ "ಬಾಯಲ್ಲಿ ಗೀತೋಪದೇಶ ಕಂಕುಳಲ್ಲಿ ದೊಣ್ಣೆ.

ಈಗ ರಾಜಕಾರಣಕ್ಕೆ ಹಣಬೇಕು: ಹಣ ಹೊಂದಬೇಕಾದರೆ ಅಧಿಕಾರಬೇಕು: ಅಧಿಕಾರಬೇಕಾದರೆ ಚುನಾವಣೆಬೇಕು, ಇದು ಎದ್ದು ಕಾಣುವ ಸಂಗತಿ. ಪ್ರಜಾಪ್ರಭುತ್ವವನ್ನು ಕಬಳಿಸಲು ಹಣವಂತ ರಾಜಕಾರಣಿಗಳ ಈ ವಿಷ ವರ್ತುಲವು ಭೂತವಷ್ಟೇ ಅಲ್ಲ; ಪೆಡಂ ಭೂತವಲ್ಲವೆ?

ಬಡರೈತರ ಕೊಲೆಗಾರನಾಗಿರುವ ಬೋರ್ಲಾಗ್‌ನನ್ನು ಹಸಿರುಕ್ರಾಂತಿಯ ಹರಿಕಾರನೆಂದಿರುವುದು ಇದೇ ರಾಜಕಾರಣವಲ್ಲವೆ?

ಬರ್ಬರ ಚೌರಿಸೇವೆಗೆ ಅಧ್ಯಾತ್ಮಿಕತೆಯ ಮಾನ್ಯತೆಯನ್ನಿತ್ತಿರುವುದು; ನಿರಾತಂಕಗೊಳಿಸಿರುವುದು ಇದೇ ಹಣವಂತರ ರಾಜಕಾರಣವಲ್ಲವೆ? ಸಂವಾದದ ಒಡಲು ಇಡೀ ಸಿಡಿಲಾಗಿದೆ.

ಪಿ. ಗೋಕುಲ್‌ದಾಸ್

ಮಂಗಳೂರು

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ		
ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ		
ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ		
ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಮಾತು ಮೌನದ ನಡುವೆ
ಕವಿ: ಆರ್ ಚೌಡರೆಡ್ಡಿ
ಬೆಲೆ: ರೂ.೪೫/-

ಈ ಸಂಕಲನದ ಕವಿತೆಗಳನ್ನು ಓದುವಾಗ ಕಾವ್ಯೋತ್ಸಾಹ ಗರಿಗೆದರಿ ಭಾವವೊಂದರ ತಂಗಾಳಿ ಬೀಸುತ್ತದೆ. ಇದರ ಅಲೆಯೊಂದಿಗೆ ಹಿತದ ಓದು ಪುಟ ತೆರೆದುಕೊಳ್ಳುತ್ತದೆ. ಇಲ್ಲಿನ ಕಾವ್ಯ ಸಜ್ಜನಿಕೆ ಮನಸ್ಸನ್ನು ಹಿತಾನುಭವಕ್ಕೆ ತರುತ್ತದೆ. ಗಾಂಭೀರ್ಯದ ಮುಖವಾಡವಿಲ್ಲದ ಕವಿತೆಗಳು ಅವಾಗಿಯೇ ಮನಸ್ಸಿನೊಂದಿಗೆ ಮಾತನಾಡುವುದರಿಂದ ಅರ್ಥದ ತೊಡಕು ಉಂಟಾಗುವಿದಿಲ್ಲ. ಹಾಗಾಗಿ ಇಲ್ಲಿನ ಕವಿತೆಗಳು ಖುಷಿನೀಡುತ್ತವೆ.

ಪ್ರಕಾಶನ: ಕಾವ್ಯಶ್ರೀ ಪ್ರಕಾಶನ
ಪನಸಮಾಕನಹಳ್ಳಿ,
ಶ್ರೀನಿವಾಸಪುರ ತಾಲ್ಲೂಕು,
ಕೋಲಾರ ಜಿಲ್ಲೆ -೫೬೩೧೩೫





ಎಚ್ಚೆತ್ತ ಚೆಮ್ಮಾವುಗೆ
ಲೇ: ಚೆನ್ನಬಸವಪ್ಪ ಬೆಟ್ಟದೂರು
ಬೆಲೆ: ರೂ.೪೦/-

ಬೇರೆ ಬೇರೆ ಸಂದರ್ಭಗಳಲ್ಲಿ ವಿವಿಧ ಪತ್ರಿಕೆಗಳಿಗಾಗಿ ಬರೆದ ಹರಟೆಗಳ ಸಂಕಲನ ಇದು. ಸಮಾಜದಲ್ಲಿ ಯಾರೂ ಮೇಲಲ್ಲ, ಯಾರೂ ಕೀಳಲ್ಲ. ಅವರವರ ಕೆಲಸಗಳನ್ನು ನಿಷ್ಠೆಯಿಂದ ಮಾಡಿಕೊಂಡು ಹೋಗುವುದರಲ್ಲಿಯೇ ಸಾಮಾಜಿಕ ಆರೋಗ್ಯವಿದೆಯೆಂಬ ಸಂದೇಶ ನೀಡುವುದೇ ಈ ಕೃತಿಯ ವಿಶೇಷ. ಇದು ಚೆಮ್ಮಾವುಗೆಯ ಆತ್ಮಕತೆಯೂ ಹೌದು; ವರ್ಗಸಂಘರ್ಷದ ವಸ್ತುನಿಷ್ಠ ಸಂವಾದವೂ ಹೌದು. ಇಲ್ಲಿನ ಬರಹಗಳು ಚರ್ಚೆಯಾಗಿ, ವೈಚಾರಿಕ ಪ್ರಬಂಧವಾಗಿ ಆಪ್ತವಾಗುತ್ತ ಹೋಗುತ್ತವೆ.

ಪ್ರಕಾಶನ: ಬಸವ ಪ್ರಕಾಶನ
ಮುಖ್ಯರಸ್ತೆ, ಗುಲಬರ್ಗಾ

ಹೊಸ ಪುಸ್ತಕ



ಇದೆಂಥ ದೇಶ? ಇವರೆಂಥ ಜನ?
ಲೇ: ಡಾ.ಯಲ್ಲಪ್ಪ ಕೆಕೆಪುರ
ಬೆಲೆ: ರೂ. 120/-

ಅಲೆಮಾರಿಗಳ ಜೀವನ ಕುರಿತ ನಾಟಕ ಈ ಕೃತಿ. ಊರು ಕೇರಿಯ ಹೊರಗಿನವರ ಬದುಕು ಇಲ್ಲಿ ಅನಾವರಣಗೊಳ್ಳುವ ರೀತಿ ವಿಸ್ಮಯಕಾರಿ. ಇಲ್ಲಿ ಸಣ್ಣ ಸಣ್ಣ, ಅತಿ ಸೂಕ್ಷ್ಮವಾದ ವಿವರಗಳಿವೆ, ಕನಸಿದೆ, ಬದುಕಿದೆ, ನೋವಿದೆ, ಕ್ರಾಂತಿ, ಶಾಂತಿ ಪ್ರೀತಿಯಿದೆ. ಮಿಗಿಲಾಗಿ ಅಲೆಮಾರಿಗಳ ಜೀವನ ಸಂದೇಶವಿದೆ. ನಾಟಕಕಾರರ ಸಮಾಜಮುಖಿ ಚಿಂತನೆ, ಸಾಹಿತ್ಯಾಸಕ್ತರನ್ನು ತಟ್ಟುತ್ತದೆ.

ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು
ಮೊಳಕಾಲ್ಮೂರು, ಚಿತ್ರದುರ್ಗ ಜಿಲ್ಲೆ

ರಂಗ ದರ್ಶನ
ಲೇ: ಮೋನಪ್ಪ ಗಾಡದ
ಬೆಲೆ: ರೂ. 100/-

10–11 ವರ್ಷದವನಿರುವಾಗಿನಿಂದ ನೋಡಿದ ನಾಟಕ, ನಾಟಕದ ಹಾಡು, ದೃಶ್ಯಗಳನ್ನು ಲೇಖಕರು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಮೂಲಕ ಆ ಕಾಲದ ರಂಗ ವೈಭವವನ್ನು ನಮಗೆ ದರ್ಶನ ಮಾಡಿಸಿದ್ದಾರೆ. ರಂಗ ವೈಭವ ಇಲ್ಲದ ಈ ದಿನಗಳಲ್ಲಿ ಇದು ನಮಗೆ ಅಪರೂಪದ ದರ್ಶನ ಮಾಡಿಸುತ್ತದೆ. ತಾವು ಕಂಡ ರಂಗಸಂಗತಿಗಳನ್ನು ಆಪ್ತವಾಗಿ ಹೇಳುವ ಲೇಖಕರ ಶೈಲಿ ಮೆಚ್ಚುಗೆಯಾಗುತ್ತದೆ. ಇದು ಉತ್ತರ ಕರ್ನಾಟಕದ ರಂಗ ದರ್ಶನ ಮಾಡಿಸುವ ಅಪರೂಪದ ಕೃತಿ ಎಂಬುದೇ ಇದರ ಹೆಗ್ಗಳಿಕೆ.

ಪ್ರಕಾಶಕರು: ಗ್ರಾಮೀಣ ಸಾಹಿತ್ಯ
ಮಾಲೆ, ಡಂಬಳ-ಗದಗ



*** ಚನ್ನಬಸವಪ್ಪ ಬೆಟ್ಟದೂರು, ಬೆಲೆ: ರೂ. ೧೦/-**
ಲೇ: ಗುರು ಬಸವಯ್ಯ ಅಮ್ಮಪುರ
*** ಮೋಕ್ಷ ದರ್ಶನ ಸಂಗ್ರಹ, ಬೆಲೆ: ರೂ. ೭೫/-**
ಲೇ: ಪ್ರೊ. ಜಿ. ಎ. ಶಿವಲಿಂಗಯ್ಯ,
*** ವಚನ ಸಂಕಲನ, ಬೆಲೆ: ರೂ.೭೫/-**
ಲೇ: ಡಾ.ವೀರಣ್ಣ ರಾಜೂರ,
*** ಕರಸ್ಥಲ ಬಸವಲಿಂಗದ ಮಹತ್ವ**
ಬೆಲೆ: ರೂ. ೧೦೦/-
ಲೇ: ಬಸವರಾಜ ಮೆಣಸಿನಕಾಯಿ,



ಮೇಲಿನ ನಾಲ್ಕೂ ಪುಸ್ತಕಗಳು ಉತ್ತರ ಕರ್ನಾಟಕ ನೆಲದಿಂದ ಮೂಡಿಬಂದ ಸಾಹಿತ್ಯ ಕೃತಿಗಳು. ಮೊದಲನೆಯದು ಹೈದರಾಬಾದ್ ಕರ್ನಾಟಕದ ಸಾಹಿತ್ಯ-ಸಂಸ್ಕೃತಿಗಳ ಜೀವನಾಡಿ, ಕರ್ನಾಟಕ ಏಕೀಕರಣ ಹಾಗೂ ರೈತ ಚಳವಳಿಗಳ ಮುಖಂಡರಾದ ಚೆನ್ನಬಸವಪ್ಪ ಬೆಟ್ಟದೂರು ಅವರ ಪರಿಚಯಾತ್ಮಕ ಕೃತಿ.

'ಮೋಕ್ಷ ದರ್ಶನ ಸಂಗ್ರಹ'ವು ಒಂದು ರೀತಿಯಲ್ಲಿ ಪ್ರಭು ಸಂಹಿತೆಯಲ್ಲಿ ನಿರೂಪಿಸಿರುವಂತೆ ತೋರುತ್ತದೆ. ಔಚಿತ್ಯ ಪೂರ್ಣಾವಾಗಿ ಸಂಸ್ಕೃತ ಶ್ಲೋಕಗಳನ್ನು ಮತ್ತು ಶರಣರ ವಚನಗಳನ್ನು ಆಧಾರವಾಗಿ ಕೊಟ್ಟಿರುವುದರಿಂದ ಇವರ ಆಳವಾದ ಪಾಂಡಿತ್ಯ, ಶ್ರದ್ಧೆ ಎಂತಹ ಉನ್ನತ ಸ್ಥಾನದಲ್ಲಿದೆ ಎಂಬುದು ವ್ಯಕ್ತವಾಗುತ್ತದೆ.

'ಕರಸ್ಥಲ ಬಸವಲಿಂಗದ ಮಹತ್ವ' ಕೃತಿಯಲ್ಲಿ ಬಸವಲಿಂಗವೆಂದರೆ ಸಾಕ್ಷಾತ್ ಪರಬ್ರಹ್ಮ, ಪರಮಾತ್ಮ, ಪರಂಜ್ಯೋತಿ ಜ್ಞಾನಗುರುವಾಗಿದೆ. ಪೂರ್ವದಿಂದಲೂ ಲಿಂಗದ ವಿಚಾರ ಬರುತ್ತದೆ. ಆದರೆ ಎಲ್ಲ ಕಾಲದ ಲ್ಲಿಯೂ ಒಂದೇ ತೆರನಾದ ಲಿಂಗವಿರುವುದಿಲ್ಲ. ಬೇರೆ ಬೇರೆ ಕಾಲಕ್ಕೆ ಬೇರೆಬೇರೆ ಲಿಂಗವನ್ನು ಪೂಜಿಸುತ್ತಿದ್ದ ರೆಂಬುದನ್ನು ಇದರಲ್ಲಿ ಸವಿಸ್ತಾರವಾಗಿ ಬರೆಯಲಾಗಿದೆ.

'ವಚನ ಸಂಕಲನ' ಸಂಪುಟ-೭ರಲ್ಲಿನ ವಚನಗಳಲ್ಲಿ ಅತಿ ಹೆಚ್ಚಿನ ಆದ್ಯತೆ ನೀಲಮ್ಮನ ವಚನಗಳಿಗೆ ಸಂದರೆ, ದ್ವಿತೀಯ ಪ್ರಾಶಸ್ತ್ಯ ಸಿದ್ಧರಾಮನ ವಚನಗಳಿಗೆ ಪ್ರಾಪ್ತವಾಗಿದೆ. ಇದರಲ್ಲಿನ ೭ ವಚನಗಳು ಇದುವರೆಗೆ ಪ್ರಕಟ ವಾದ ಯಾವುದೇ ಮುದ್ರಿತ ಕೃತಿಯಲ್ಲಿ ಸೇರದೆ ಇರುವುದು ಗಮನಾರ್ಹ ಅಂಶವಾಗಿದೆ.

ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ,
ಎಡೆಯೂರು ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನಮಠ, ಗದಗ

ಒಂದು ಬೊಗಸೆ ಕ್ರಾಂತಿ-೧





೧.ನೆಲ.

ನೀ ಹುಗಿದಿಟ್ಟೆ ನನ್ನ
ಈ ನೆಲದೊಳಗೆ
ಓ ವೈರಿಯೇ
ನೀನೆಲ್ಲಿ
ಹುಗಿದಿರುವೆ ನನ್ನ ನೆಲವನ್ನು

೨.ಯುದ್ಧ

ನಿನ್ನ ಹಳ್ಳಿಯಲ್ಲಿ
ನಿನಗೆ ನಿನ್ನ
ಮಸಣ ಭೂಮಿಯಿದೆ
ಮಸಣ ಭೂಮಿಯ ನಡುವೆ
ನನಗೆ ನನ್ನ ಹಳ್ಳಿಯಿದೆ.

೩. ಕಾಮ್ರೇಡ್‌ಶಿಪ್

ಆಕೆ
ಸೈನಿಕನಿಗೆ ತೆಗೆದುಕೊಟ್ಟಳು
ತನ್ನ ಬಂಗಾರದ ಬಳೆಯನ್ನು:
ನಿನ್ನ ಖರ್ಚಿಗಾಗಿ
ಅದನ್ನಿಟ್ಟುಕೋ
ನಿಮ್ಮಲ್ಲಿ ಬಹುಮಂದಿಗೆ
ಕೈಯಿಲ್ಲದಿರುವಾಗ
ನಾನು ಬಂಗಾರದ ಬಳೆ ತೊಡಬೇಕೆ?

○ ಕಾಸಿ ಆನಂದನ್

ಕನ್ನಡಕ್ಕೆ: ಶ್ರೀಶ ಉಡುಪ



ಒಗೋನಿ! ಒಗೋನಿ!!

ಒಗೋನಿ ಎಂದರೆ ನೆಲ,
ಒಗೋನಿ ಎಂದರೆ ಜನ,
ಅದು ಪಿತೃಭೂಮಿಯ ಕಾಡುಗಳ
ಸಾವಿನ ನಿಟ್ಟುಸಿರು;
ಕಲುಷಿತ ನದಿಗಳ ಬಿಕ್ಕಳಿಕೆ;
ಸಾಯುವ ಮಕ್ಕಳ
ಅದೃಷ್ಟಹೀನ ಶ್ವಾಸಕೋಶಗಳ ವಿಷಾನಿಲ:

ಒಗೋನಿ ಎಂದರೆ ಕನಸು:
'ಷೆಲ್'ಘಾತದ ನೆಲದಲ್ಲಿ
ಬಾಗಿದ ಭುಜಗಳ ಮೇಲಿನ
ನಿರಂತರ ಸರಪಳಿ

○ ಕೆನ್ ಸಾರೋ ವಿವಾ

ಸಂಪಾದಕರೊಡನೆ ಸಂವಾದ

ಜಿ. ವಿ. ಸುಂದರ್

ಮಾನ್ಯರೇ,

ಶಿವಸುಂದರ್ ರವರ "ಹಸಿರುಕ್ರಾಂತಿಯ ಹರಿಕಾರ ಬಡ ರೈತರ ಕೊಲೆಗಾರ" ಲೇಖನವನ್ನು ಓದುತ್ತಿದ್ದಾಗ, ನನ್ನ ಬಾಲ್ಯದ ದಿನಗಳು ನೆನಪಾದವು.

1962–65 ರ ದಿನಗಳು ನಾನು ಆಗಷ್ಟೇ ಮೈಸೂರಿಗೆ ಓದಲಿಕ್ಕೆ ಬಂದಿದ್ದು, ನಾನು ಮಾಧ್ಯಮಿಕ ಶಾಲೆಯ 5 ನೇ ತರಗತಿಗೆ ಸೇರಿದ್ದೆ. ಗೋವಾ ಸ್ವತಂತ್ರಗೊಂಡಿದ್ದು, ಚೈನಾ ಟಿಬೆಟ್ಟನ್ನು ಆಕ್ರಮಿಸಿಕೊಂಡು, ಸಾವಿರಾರು ಜನ ಟಿಬೆಟ್ಟಿಯನ್ನರು ನಮ್ಮ ದೇಶಕ್ಕೆ ಓಡಿಬಂದ ಸುದ್ದಿ ತಿಳಿಯುತಿತ್ತು. ಚೈನಾ ಯುದ್ಧದಲ್ಲಿ ಭಾರತದ ಪರಾಭವದ ಹಿಂದೆಯೇ ಇಡೀ ದೇಶದಲ್ಲಿ ಬರಗಾಲ. ರೈತರು, ಬಡವರು ಅನುಭವಿಸುತ್ತಿದ್ದ ಕಷ್ಟಗಳ ಸುದ್ದಿಯನ್ನು ನಮ್ಮ ಹಳ್ಳಿಯಿಂದ ಬರುವಾಗ, ನಮ್ಮ ತಂದೆ ತರುತ್ತಿದ್ದರು. ಆಗ ಪಡಿತರ ಪದ್ಧತಿ ಇರಲಿಲ್ಲ, ಸರ್ಕಾರದ ಗಂಜಿ ಕೇಂದ್ರಗಳೂ ಇರಲಿಲ್ಲ. ಯಾವುದಾದರೂ ಮಠಗಳು, ಕೆಲವು ಶ್ರೀಮಂತರು ಸ್ವಲ್ಪ ದಿನಗಳವರಗೆ ಗಂಜಿ ಕೇಂದ್ರಗಳನ್ನು ನಡೆಸಿರಬಹುದು. ಆದರೆ ಭೀಕರ ಬರಗಾಲ ಒಂದು ವರ್ಷವಲ್ಲ, 2–3 ವರ್ಷ ಕಾಡಿತ್ತು. ರೈತರು, ಬಡವರು ಬಹಳ ಕಂಗೆಟ್ಟಿದ್ದರು. ನೀರಿಲ್ಲದೆ, ಆಹಾರವಿಲ್ಲದೆ, ದನ ಕುರಿಗಳು ಸಾಯುತ್ತಿದ್ದವು. ಜನರು ಹಸಿವು ತಡೆಯಲಾರದೆ ಹತ್ತಿರದ ಗುಡ್ಡಗಳಿಗೆ ಹೋಗಿ ತಿನ್ನಬಹುದಾದ ಸೊಪ್ಪು, ಗಡ್ಡೆ ಕಿತ್ತು ಬೇಯಿಸಿ ತಿನ್ನುತ್ತಿದ್ದರು. ದವಸ, ಧಾನ್ಯ ಇಟ್ಟುಕೊಂಡಿದ್ದವರ ಮನೆಗಳಲ್ಲಿ ಕಳ್ಳತನವಾಗುತ್ತಿತ್ತು.

ಆಗ ಕೇಳಿದ, ನನ್ನ ಹಳ್ಳಿಯ ಬಡ ಕುಟುಂಬದ ಒಂದು ಸುದ್ದಿ ನನಗಿನ್ನೂ ನೆನಪಿದೆ. ಮೂರುಕಾಸಿಗೆ ಸಿಗುವ ಟೀ ಪೊಟ್ಟಣ ತಂದು, ಒಂದು ಸಣ್ಣ ಬೆಲ್ಲದ ಉಂಡೆಯನ್ನು ಒಂದು ತಂಬಿಗೆ ನೀರಲ್ಲಿ ಕರಗಿಸಿ, ಹಾಲಿಲ್ಲದ ಟೀ ಕಾಯಿಸಿ, ಇಡೀ ಕುಟುಂಬ ಅದನ್ನು ಹಂಚಿಕೊಂಡು ಕುಡಿದು ಇಡೀ ದಿನ ಉಪವಾಸವಿರುತ್ತಿದ್ದ ಧಾರುಣ ಸ್ಥಿತಿಯನ್ನು ಕೇಳಿ ನನ್ನ ಎಳೆಯ ಮನಸ್ಸು ಘಾಸಿಗೊಂಡಿತ್ತು.

ಆಗಲೇ ರೇಷನ್ ಕಾರ್ಡ್ ನಾವು ಕಂಡಿದ್ದು. ಆಹಾರದ ಅಭಾವದಿಂದ ಸರ್ಕಾರ ಅಮೇರಿಕಾದ ಸಹಾಯ ಕೇಳಿತ್ತು. ಅಮೇರಿಕಾದಿಂದ ಬರುತ್ತಿದ್ದ ಬಿಳಿ



ನಾರ್ಮನ್ ಬೋರ್ಲಾಗ್,

ಗೋಧಿಯನ್ನು ರೇಷನ್ ಕಾರ್ಡಿನ ಮೂಲಕ ಹಂಚುತ್ತಿದ್ದರು ಗೋಧಿಯನ್ನು ಇದಕ್ಕೂ ಮುನ್ನ ನಾವು ಕಂಡಿದ್ದೇ ಇಲ್ಲ. ಅನುಕೂಲಸ್ಥರ ಮನೆಗಳಲ್ಲಿ ಗೋಧಿ ಹಿಟ್ಟಿನಿಂದ ಪೂರಿ ಮಾಡುವುದನ್ನು ಕೇಳಿದ್ದೆವು. ಆದರೆ ಅದುವರೆಗೂ ಚಪಾತಿ ಅಂದರೇನೆಂದು ತಿಳಿಯದ ಮೈಸೂರಿನ ಜನ, ಆಹಾರದ ಅಭಾವದಿಂದಾಗಿ, ಅಮೇರಿಕಾದ ಬಿಳಿ ಗೋಧಿಯಿಂದ ಚಪಾತಿ ಮಾಡಲು ಕಲಿತರು. ಚಪಾತಿಯನ್ನು ಇಷ್ಟವಿಲ್ಲದಿದ್ದರೂ ಕಷ್ಟಪಟ್ಟು ಅಗಿದು ಅಗಿದೂ ಬಾಯಿ ನೋಯಿಸಿಕೊಳ್ಳುತ್ತಾ ತಿನ್ನಲು ಕಲಿತರು. ಅಮೇರಿಕಾದ ಗೋಧಿಯೂ ಸುಲಭವಾಗಿ ಸಿಗುತ್ತಿರಲಿಲ್ಲ. ವಾರಕ್ಕೆ 4–5 ಕೆ.ಜಿ ಸಿಗುವುದಕ್ಕೆ, ಗಂಟೆಗಟ್ಟಲೆ ಕ್ಯೂ, ಗಲಾಟೆ, ಜಗಳ.

ಅದೇ ಕಾಲಕ್ಕೆ ನಮ್ಮ ಸ್ಕೂಲುಗಳಲ್ಲಿ, ಅಮೇರಿಕಾದ ಜೋಳದ ರವೆಯ ಉಪ್ಪಿಟ್ಟು, ಸಕ್ಕರೆ ಇಲ್ಲದ ಪೌಡರ್ ಹಾಲು ಮಧ್ಯಾಹ್ನದ ಬಿಡುವಿನ ವೇಳೆಯಲ್ಲಿ ಕೊಡುತ್ತಿದ್ದರು. ಅದೆಷ್ಟೇ ಕೆಟ್ಟದಾಗಿದ್ದರೂ, ಹೊಟ್ಟೆಯ ಹಸಿವು ಜಯಗಳಿಸಿ, ನಾವು ಅದನ್ನು ಹೊಟ್ಟೆಗೆ ಸೇರಿಸುತ್ತಿದ್ದೆವು.

ಮೂರು ಕಾಸಿಗೆ ಸಿಗುವ ಟೀ ಪೊಟ್ಟಣ ತಂದು, ಒಂದು ಸಣ್ಣ ಬೆಲ್ಲದ ಉಂಡೆಯನ್ನು ಒಂದು ತಂಬಿಗೆ ನೀರಲ್ಲಿ ಕರಗಿಸಿ, ಹಾಲಿಲ್ಲದ ಟೀ ಕಾಯಿಸಿ, ಇಡೀ ಕುಟುಂಬ ಅದನ್ನು ಹಂಚಿಕೊಂಡು ಕುಡಿದು ಇಡೀ ದಿನ ಉಪವಾಸವಿರುತ್ತಿದ್ದ ಧಾರುಣ ಸ್ಥಿತಿಯನ್ನು ಕೇಳಿ ನನ್ನ ಎಳೆಯ ಮನಸ್ಸು ಘಾಸಿಗೊಂಡಿತ್ತು.

ಈ ನಡುವೆ ನೆಹರೂ ಸಾವು, ಲಾಲ್ ಬಹದ್ದೂರ್‌ಗೆ ಪ್ರಧಾನಿಯ ಪಟ್ಟ, ಭಾರತದೊಂದಿಗೆ ಸಾವಿರ ವರ್ಷಗಳ ಯುದ್ಧದ ಆಯೂಬ್ ಖಾನ್‌ನ ಘೋಷಣೆ, ಬರಗಾಲ, ಯುದ್ಧಗಳಿಂದ ದೇಶ ತತ್ತರಿಸುತ್ತಿತ್ತು. ಈ ಮಧ್ಯೆ ಸಾವಿರಾರು ರೈತರು, ಬಡವರು, ಹೊಟ್ಟೆಗಿಲ್ಲದೆ ಎಲುಬುಗೂಡುಗಳಾಗಿ ನವೆನವೆದು ಸಾಯುತ್ತಿದ್ದರು. ದೇಶದ ಬವಣೆಯನ್ನು ನೋಡಿ, ದೇಶದ ಪ್ರಧಾನಿ ಒಂದು ಹೊತ್ತಿನ ಊಟ ಬಿಟ್ಟಿದ್ದರು. ದೇಶ ಬಾಂಧವರಿಗೂ ಒಂದು ಹೊತ್ತಿನ ಊಟ ಬಿಡಲು ಕರೆಕೊಟ್ಟಿದ್ದರು. ಅದು ಮರೆತು ಹೋಗಿದ್ದರೂ, ಆಗ ಶುರುವಾದ ಅಭ್ಯಾಸದಿಂದ ಇವತ್ತಿಗೂ, ತಮಿಳುನಾಡಿನ ಅನೇಕ ಪಟ್ಟಣಗಳ ಹೋಟೆಲುಗಳಲ್ಲಿ ರಾತ್ರಿ ಊಟ ಸಿಗುವುದಿಲ್ಲ, ಬರೀ ತಿಂಡಿ ಸಿಗುತ್ತದೆ.

ನೂರಾರು ಹಡಗುಗಳಲ್ಲಿ ಅಮೇರಿಕದಿಂದ ಪಿ.ಎಲ್ 480 ಎನ್ನುವ ಹೆಸರಿನೊಂದಿಗೆ, ಪ್ರತಿ ನಿತ್ಯ ಗೋಧಿ, ಜೋಳ ಮತ್ತಿತರ ಆಹಾರ ವಸ್ತುಗಳ ಅನುದಾನ ಬರುತ್ತಿತ್ತು. ಹಡಗುಗಳು ಬಂದರಿಗೆ ಬರುತ್ತಿದ್ದಂತೆಯೆ, ದಾಸ್ತಾನು ಖಾಲಿಯಾಗುತ್ತಿದ್ದವು. ಆಗ ಬಂದಿದ್ದು 'ಶಿಪ್ ಟು ಮೌಥ್' ಎನ್ನುವ ಉದ್ಗಾರ.

ಲಕ್ಷಾಂತರ ಜನರ ಸಾವು, ನೋವು, ಕೃಷಿ ಉತ್ಪಾದನೆಯಲ್ಲಿ ಇಳಿಮುಖ, ದೇಶದಲ್ಲಿನ ಆಹಾರದ ಕೊರತೆ ಇವುಗಳಿಂದ ಹೊರ ಬರಲು ಬಹುಶಃ ಲಾಲ್ ಬಹದ್ದೂರ್ ಸರ್ಕಾರ, ಹೈಬ್ರಿಡ್ ಬೀಜಗಳನ್ನು ಹೊರ ದೇಶಗಳಿಂದ ತರಿಸಲು ತೀರ್ಮಾನಿಸಿರಬೇಕು, ಅಥವಾ ಶಿವಸುಂದರ್ ಹೇಳುವಂತೆ ಅಮೇರಿಕಾದ ಸಂಚಿಗೆ, ಪೆದ್ದು ಪೆದ್ದಾಗಿ ಬಲಿ ಬಿದ್ದಿರಬೇಕು. ಈ ಕಾರಣದಿಂದಾಗಿಯೇ ಶಿವಸುಂದರ್ ಅವರ ಲೇಖನ, ಕೋಲ್ಡ್ ವಾರ್ ಕಾಲದ ಥ್ರಿಲ್ಲರಿನಂತೆ ಕಾಣಿಸುತ್ತದೆ. ವಿದೇಶಿ ಏಜೆಂಟ್ ಒಬ್ಬನನ್ನು ಸೃಷ್ಟಿಸಿ ಮತ್ತು ಯಾವುದೋ ಎಂ.ಎನ್.ಸಿ ಕಂಪನಿ ತೋರಿಸಿದ ಆಮಿಷಕ್ಕೆ ಬಲಿಯಾಗಿ, ಆಗಿನ ಪ್ರಧಾನಿ ಮತ್ತು ಕೃಷಿ ಮಂತ್ರಿಗಳು, ನಾರ್ಮನ್ ಬೋರ್ಲಾಗ್ ಅವರನ್ನು ಆಮಂತ್ರಿಸಿದ್ದರು ಎಂದು ಸೂಚಿಸಿದ್ದರೆ, ಶಿವಸುಂದರ್ ರವರ ಕತೆ ಇನ್ನೂ ರೋಚಕವಾಗಬಹುದಿತ್ತು.

ನನ್ನ ಎಳೆತನದ ಇನ್ನೂ ಒಂದೆರಡು ವಿಷಯಗಳು ನೆನಪಿಗೆ ಬರುತ್ತಿವೆ. ಕೆಲವು ಬ್ರಾಹ್ಮಣರ ಮನೆಗಳಲ್ಲಿ ಶ್ರಾದ್ಧದ ದಿನ ಮೆಣಸಿನಕಾಯಿಯನ್ನು ಉಪಯೋಗಿಸುತ್ತಿರಲಿಲ್ಲ. ಅವತ್ತಿನ ಅಡುಗೆಗೆ ಮೆಣಸಿನಕಾಯಿ ಬದಲಾಗಿ, ಮೆಣಸು ಉಪಯೋಗಿಸುವ ಪದ್ಧತಿ ಇತ್ತು. ಮುನ್ನೂರು – ನಾನೂರು ವರ್ಷಗಳ ಹಿಂದೆ, ನಮ್ಮಲ್ಲಿ ಮೆಣಸಿನಕಾಯಿ ಇರಲಿಲ್ಲ. ಆಗೆಲ್ಲಾ ನಾವು ಉಪಯೋಗಿಸುತ್ತಿದ್ದುದು ಕರಿಮೆಣಸು. ಮೆಕ್ಸಿಕೊ ದೇಶದಿಂದ ಬಂದ ಮೆಣಸಿನಕಾಯಿಯ ಬಣ್ಣಕ್ಕೆ ಮತ್ತು ಅದರ ರುಚಿಗೆ ಇಲ್ಲಿನ ಜನ ಮಾರುಹೋಗಿ ಕರಿಮೆಣಸಿನ ಉಪಯೋಗ ಕಮ್ಮಿಯಾಗಿರಬೇಕು. ಇಲ್ಲಿನ ಭೂಮಿ ಮತ್ತು ಹವಾಮಾನಕ್ಕೆ ಹೊಂದಿಕೊಂಡು ಅದು ಹುಲುಸಾಗಿ ಬೆಳೆಯತ್ತಿದ್ದುದೂ, ಒಂದು ಕಾರಣವಾಗಿರಬೇಕು. ಹೊರದೇಶದಿಂದ ಬಂದ, ಈ ಸಾಂಬಾರು ಪದಾರ್ಥಕ್ಕೆ ಮೊದಮೊದಲು ಕೆಲವರ ವಿರೋಧ, ಅಸ

(8ನೇ ಪುಟಕ್ಕೆ)

ತೆರೆದುಕೊಳ್ಳದ ಮನಸ್ಸುಗಳು !

ಸಂಪಾದಕರೊಡನೆ ಸಂವಾದ

‘ತುಕ್ಕು ಹಿಡಿದ ವಾದ’

ಡಿ.ಎಸ್.ನಾಗಭೂಷಣ

ಮಾನ್ಯರೇ,

ಜಿ.ರಾಜಶೇಖರರು, ಸಾಹಿತ್ಯ ವಿಮರ್ಶೆಯೋ, ಸಾಮಾಜಿಕ ಚಿಂತನೆಯೋ, ಏನು ಬರೆದರೂ ಕೊನೆಗೆ, ಹಿಂದೂ ಕೋಮುವಾದಿಗಳ ವಿರುದ್ಧ ಮತ್ತು ಅದರ ಜೊತೆಗೆ ನೆಂಚಿಕೊಳ್ಳಲು ವ್ಯಂಜನದಂತೆ ಮುಸ್ಲಿಂ ಕೋಮುವಾದದ ಬಗ್ಗೆ ಆತಂಕ ವ್ಯಕ್ತಪಡಿಸುವವರ ವಿರುದ್ಧ ಹರಿಹಾಯುವುದನ್ನು ಒಂದು ಪರಿಪಾಠ ಮಾಡಿಕೊಂಡಿದ್ದಾರೆ. ಹಾಗಿದ್ದೂ, ಉಂಡು ಹೊಟ್ಟೆ ಮುಂದು ಮಾಡಿಕೊಂಡು ಸುಳ್ಳು ಹೇಳುವವರ ಹಾಗೆ, ಅವರ ಇಂತಹ ಹರಿಹಾಯುವಿಕೆಗೆ ಪ್ರತಿಕ್ರಿಯಿಸಿದ ನನ್ನ ಮೇಲೆ ಪ್ರತಿವಾದಿ ಭಯಂಕರತ್ವವನ್ನು ಆರೋಪಿಸಿದ್ದಾರೆ. (ಸಂವಾದ, ನವೆಂ. 2009). ಹಾಗೇ ನಮ್ಮಂತಹವರನ್ನು ಲಿಬರಲ್ ಮಾನವತಾವಾದಿಗಳೆಂದು ಹೆಸರಿಸಿದ್ದಾರೆ. ಹೀಗೆ, ಎದುರಾಡುವವರಿಗೆ ಹೆಸರುಗಳನ್ನಿಟ್ಟು ಘಾತಗೊಳಿಸಲು ಯತ್ನಿಸುವುದು ಅವರ ವಿಚಾರವಂತಿಕೆ ಮುಟ್ಟಿರುವ ಹತಾಶೆಯ ಲಕ್ಷಣವಷ್ಟೆ. ಜನ, ಮಾಧ್ಯಮಗಳು, ಪೋಲೀಸರು, ನ್ಯಾಯಾಲಯಗಳು ಎಲ್ಲವೂ ತಮ್ಮ ನಿಲುವಿಗೆ ವಿರುದ್ಧವಾಗಿವೆ ಎಂಬ ಅವರ ಊಹೆಯೂ ಇದನ್ನೇ ಸೂಚಿಸುತ್ತದೆ.

ನನ್ನ ಮೇಲೆ ರಾಜಶೇಖರರು ಅವರ ಲೇಖನದ ತಾತ್ಪರ್ಯವನ್ನೋ, ಪೂರ್ವ ಪಕ್ಷವನ್ನೋ ತಿರುಚಿರುವ ಅರೋಪವನ್ನೂ ಮಾಡಿದ್ದಾರೆ. ಆದರೆ ಅವರೇ ಈಗ ಹೇಳಿಕೊಂಡಿರುವಂತೆ, ಅವರು ತಮ್ಮ ಆ ಲೇಖನದಲ್ಲಿ ಸೆಕ್ಯುಲರಿಸಂನ ರಕ್ಷಣೆಯ ಹೆಸರಿನಲ್ಲಿ ಕೋಮುವಾದಿಯಾದ ಕೊಲೆಗಾರ ಕುಟುಂಬದ ರಕ್ಷಣೆಗೆ ಧಾವಿಸಿರುವುದು ಸ್ಪಷ್ಟವಾಗಿದೆ. ಆಗ ಅದರ ಅಗತ್ಯ ಮತ್ತು ಔಚಿತ್ಯ ಏನಿತ್ತೋ ತಿಳಿಯದಾಗಿದೆ. ಮುಸ್ಲಿಂ ಸಮಾಜದ ಎಲ್ಲ ನೈತಿಕ ಹೊಣೆಗಾರಿಕೆಯ ಗುತ್ತೇದಾರಿಕೆಯನ್ನು ಪಡೆದುಕೊಂಡಂತೆ ತೋರುವ ಇವರು, ಭಾರತೀಯ ಮುಸ್ಲಿಮರ ಸಂಕಷ್ಟವನ್ನು ಶ್ರೀಲಂಕಾದ ತಮಿಳರ, ಜರ್ಮನಿಯ ಯೆಹೂದಿಗಳ ಸಂಕಷ್ಟಕ್ಕೆ ಹೋಲಿಸಿರುವುದು ಸಹಜವೇ ಆಗಿದೆ. ಇಂತಹ ಅಸಂಬದ್ಧ ಹೋಲಿಕೆಗಳಿಂದ ಭಾರತೀಯ ಮುಸ್ಲಿಂ ಸಮಾಜಕ್ಕೆ ಅವರು ಇನ್ನಷ್ಟು ಸಂಕಷ್ಟಗಳನ್ನು ತಂದೊಡ್ಡುವ ಅಪಾಯವನ್ನಷ್ಟೇ ಆಹ್ವಾನಿಸಿದ್ದಾರೆ ಎಂದು ಹೇಳಬಹುದು.

ನಮಗೂ ಸಾಕಷ್ಟು ಮುಸ್ಲಿಂ ಸ್ನೇಹಿತರಿದ್ದಾರೆ; ಅವರೊಂದಿಗೆ ನಮ್ಮ ದಿನ ನಿತ್ಯದ ಒಡನಾಟ ಸಹಜವಾಗಿಯೇ ಇದೆ. ಅವರೆಂದೂ ಯೆಹೂದಿಗಳಂತೆ ಬಲಿಪಶು ಮಾನಸಿಕತೆಯನ್ನು ಪ್ರದರ್ಶಿಸಿದ್ದನ್ನು ನಾನು ನೋಡಿಲ್ಲ. ಹಾಗೆ ಅವರು ಭಯದಲ್ಲಿದ್ದಾರೇನೋ ಎಂದು ನಾವು ಅನುಮಾನಿಸುವುದೂ, ಅವರಿಗೆ ಮತ್ತು ನಮಗೆ ನಾವೇ ಮಾಡಿಕೊಳ್ಳುವ ಅವಮಾನ ಎಂದೇ ನಾವು ಭಾವಿಸಿದ್ದೇವೆ. ಬದಲಿಗೆ, ಕೆಲವು ಕೋಮುವಾದಿ ಮನಸ್ಸಿನ(ಅಂದರೆ ನಮ್ಮಂತಹವರೊಂದಿಗೆ ಪೂರ್ತಿ ಬೆರೆಯಲಾಗದ) ಮುಸ್ಲಿಮರು, ಕೋಮುವಾದಿ ಹಿಂದೂಗಳ(ಇವರೂ ನಮ್ಮಂತಹವರೊಂದಿಗೆ ಪೂರ್ತಿ ಬೆರೆಯಲಾರರು) ಸಾರ್ವಜನಿಕ ಆಟಾಟೋಪದಿಂದ ಬೆದರಿರುವುದನ್ನು ಬಲ್ಲೆ. ಹಾಗೇ, ಅಂತಹುದನ್ನು ಕಂಡು ರಾಜಶೇಖರರಂತಹ ಕೋಮು ಸೌಹಾರ್ದಿಗಳು ತಕ್ಷಣ ಮರುಗಿ, ಅದರ ಆಧಾರದ ಮೇಲೆ ತಾವು ಓದಿಕೊಂಡಿರುವುದನ್ನೆಲ್ಲ ಬಳಸಿ, ಉಲ್ಲೇಖಿಸಿ ವಿಶಾಲ ಬೌದ್ಧಿಕ ಚರ್ಚೆಗಳನ್ನು ಕಟ್ಟಿರುವುದನ್ನೂ; ಆ ಮೂಲಕ ಅವರಿಬ್ಬರೂ ಆ (ದುಃ)ಸ್ಥಿತಿಯಲ್ಲೇ ಇರುವಂತೆ ನೋಡಿಕೊಂಡಿರುವುದನ್ನೂ ಬಲ್ಲೆ. ಕರ್ನಾಟಕದ ಮುಸ್ಲಿಮರಿಗೆ ರಾಜಶೇಖರರಂತಹ ಮಿತ್ರರಿರುವವರೆಗೆ, ಅನ್ಯ ಶತ್ರುಗಳೇ ಬೇಕಿಲ್ಲ!

ರಾಜಶೇಖರರು ಜಾಗತಿಕ ತೈಲ ಸಂಪತ್ತಿನ ರಾಜಕಾರಣದ ಹಿನ್ನೆಲೆಯಲ್ಲಿ ಜೆಹಾದಿ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಾ, ಸದ್ಯದ ಭಾರತದ ಕೋಮು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲು ಇರುವ ನೇರ ದಾರಿಯನ್ನೇ ಮುಚ್ಚುವ ಪ್ರಯತ್ನ ಮಾಡಿದ್ದಾರೆ. ಪಶ್ಚಿಮ ಏಷ್ಯಾ ದೇಶಗಳ ತೈಲ ಸಂಪತ್ತು, ಐರೋಪ್ಯ ವಸಹಾತುಶಾಹಿ ಮತ್ತು ಅಮೆರಿಕಾದ ಸಾಮ್ರಾಜ್ಯಶಾಹಿಯನ್ನಷ್ಟೇ ಅಲ್ಲ, ಜಾಗತಿಕ ಮಟ್ಟದಲ್ಲಿ ನವ ಮೂಲಭೂತವಾದಿ ಇಸ್ಲಾಮನ್ನೂ ಸೃಷ್ಟಿಸಿದೆ ಎಂಬುದನ್ನು ಇದು ಮರೆಮಾಚಲು ಯತ್ನಿಸಿದೆ.

ಪೆಟ್ರೋಲ್ ಒಡೆತನದ ಮೇಲೆ ಬೇರೆಯವರು ಕಣ್ಣು ಹಾಕಿದ್ದರ ಪರಿಣಾಮಗಳ ಜೊತೆಗೆ, ಅದರ ಒಡೆತನವಿದ್ದ ರಾಷ್ಟ್ರಗಳಲ್ಲಿ ಆ ಸಂಪತ್ತಿನ ಒಡೆತನವೇ ಸೃಷ್ಟಿಸತೊಡಗಿದ್ದ ಧಾರ್ಮಿಕ ರಾಜಕಾರಣದ ಪರಿಣಾಮಗಳನ್ನೂ ನಾವು ಅರಿಯಬೇಕಿದೆ. ಹಾಗೇ, ಪೆಟ್ರೋಡಾಲರ್ ರಾಜಕಾರಣ ಜಾಗತಿಕ ಇಸ್ಲಾಂ ಮೇಲೆ ಏನು ಪರಿಣಾಮ ಮಾಡಿದೆ ಎನ್ನುವುದರ ಒಂದು ಆವೃತ್ತಿಯನ್ನು ನಾವು ಕಳೆದ ಐವತ್ತು ವರ್ಷಗಳಲ್ಲಿ ಭಾರತದಲ್ಲೇ ಕಣ್ಣಾರೆ ಕಂಡಿದ್ದೇವೆ. ನಿಧಾನವಾಗಿ ತಲೆ ಎತ್ತುತ್ತಿದ್ದ ಹಿಂದೂ ಕೋಮುವಾದವನ್ನು ಸುಲಭವಾಗಿ ಎದುರಿಸಬಲ್ಲವರಾಗಿದ್ದ ಇಲ್ಲಿನ ‘ಜಾತ್ಯತೀತ ಪ್ರಗತಿಪರ’ರಿಗೆ, ಅದು ಕ್ರಮೇಣ ಏಕೆ ಕಷ್ಟವಾಗತೊಡಗಿತು ಎಂಬುದನ್ನೂ ನಾವು ಹಿಂದೊಮ್ಮೆ ತಿರುಗಿ ನೋಡಿ ಯೋಚಿಸಬೇಕಿದೆ. ಹೀಗೆ ಯೋಚಿಸಲು ವ್ಯವಧಾನವೇ ಇಲ್ಲದಂತೆ ತೋರುವ ರಾಜಶೇಖರರಂತಹವರು ಮಾತ್ರ ಜಗತ್ತಿನಲ್ಲಿ ಈಗಾಗುತ್ತಿರುವುದನ್ನೆಲ್ಲ ಗಮನಿಸಿಯೂ, ಭಗವದ್ಗೀತೆಯ ಒಂದು ನಿರ್ದಿಷ್ಟ ಸಂದರ್ಭದ ಉಪದೇಶವನ್ನು (ಅದನ್ನು ಒಪ್ಪುವುದು ಬಿಡುವುದು ಬೇರೆ ವಿಷಯ) ಜೆಹಾದ್ ಪರಿಕಲ್ಪನೆಗೆ ಹೋಲಿಸಬಲ್ಲರು.

ಭಾರತದ ಕೋಮು ಪರಿಸ್ಥಿತಿ ಹದಗೆಟ್ಟದ್ದು, ಬಾಬ್ರಿ ಮಸೀದಿ ಉರುಳಿದಾಗಿನಿಂದ ಅಥವಾ ಗುಜರಾತ್ ಹತ್ಯಾಕಾಂಡ ನಡೆದಾಗಿನಿಂದ ಎಂದು– ಅವನ್ನು ಈ ಸಂಬಂಧ ಪದೇ ಪದೇ ಪ್ರಸ್ತಾಪಿಸುವ ಮೂಲಕ–ನಂಬಿಸುವ ಪ್ರಯತ್ನಗಳೂ ಹೀಗೇ ದಾರಿತಪ್ಪಿಸುವ ಪ್ರಯತ್ನಗಳಾಗಿವೆ. ಗಾಂಧಿ ಹತ್ಯೆಯನಂತರ ತಲೆ ಮರೆಸಿಕೊಂಡಿದ್ದ ಹಿಂದೂ ಕೋಮುವಾದ ಮತ್ತೆ ದೊಡ್ಡ ರೀತಿಯಲ್ಲಿ ‘ವಿಶ್ವಾಸಾರ್ಹತೆ’ ಗಳಿಸಿ ತಲೆ ಎತ್ತಲಾರಂಭಿಸಿದ್ದು ಮತ್ತು ಕೆಲವೇ ವರ್ಷಗಳಲ್ಲಿ ಬಾಬ್ರಿ ಮಸೀದಿ ನಾಶಕ್ಕೆ ಕಾರಣವಾದದ್ದು, ಷಾಬಾನು ಪ್ರಕರಣದಿಂದಾಗಿ ಎಂಬ ಮುಖ್ಯ ಸಂಗತಿಯನ್ನು ಮರೆಮಾಚುವ ಪ್ರಯತ್ನವಿದು. ಮುಸ್ಲಿಂ ವಿವಾಹ ವಿಚ್ಛೇದಿತೆಯೊಬ್ಬಳಿಗೆ ಜೀವನಾಂಶ ನೀಡಲು ನಿರಾಕರಿಸಿದ ಮುಸ್ಲಿಂ ಪುರೋಹಿತಶಾಹಿಯ ಕ್ರಮವನ್ನು ಅಸಿಂಧುಗೊಳಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನೇ ರಾಜೀವ್ ಗಾಂಧಿ ನೇತೃತ್ವದ ಸರ್ಕಾರ ಸಂವಿಧಾನ ತಿದ್ದುಪಡಿಯ ಮೂಲಕ ತಲೆ ಕೆಳಗು ಮಾಡಬೇಕಾಯಿತು!(ಈ ರಾಜೀವ್ ಗಾಂಧಿಯನ್ನು, ಭಾರತವನ್ನು 21ನೇ ಶತಮಾನಕ್ಕೆ ಒಯ್ದ ಮಹಾನ್ ಪ್ರಗತಿಪರ ನಾಯಕನೆಂದು ಬಿಂಬಿಸಲಾಗುತ್ತಿರುವುದು ಮಾತ್ರ ಎಂತಹ ವಿಪರ್ಯಾಸ!)

ಇಂತಹ ಒತ್ತಡವನ್ನು ಸರ್ಕಾರದ ಮೇಲೆ ಮುಸ್ಲಿಂ ಪುರೋಹಿತಶಾಹಿ ತಂದಾಗ ಅದನ್ನು ಸಂಘಟಿತವಾಗಿ ಪ್ರತಿಭಟಿಸಲಾಗದ ಮುಸ್ಲಿಂ ಸಮಾಜ, ಬಹುಶಃ ಆ ಕ್ಷಣದಲ್ಲೇ ಹಿಂದೂ ಕೋಮುವಾದಿಗಳ ಹಳೆಯ ಮುಸ್ಲಿಂ ವಿರೋಧಿ ವಾದಕ್ಕೆ, ಜನ ಸಾಮಾನ್ಯರ ನೆಲೆಯಲ್ಲಿ ಸಮರ್ಥನೆ ಒದಗಿಸಲಾರಂಭಿಸಿತು. ಅಸ್ಗರಲಿ ಇಂಜಿನಿಯರ್, ಅರೀಫ್ ಮಹಮ್ಮದ್ ಖಾನ್ ಮತ್ತು ನಮ್ಮ ಸಾರಾ ಅಬೂಬಕ್ಕರ್ ಇತ್ಯಾದಿ ಬೆರಳೆಣಿಕೆಯ ಜನರ ಹೊರತಾಗಿ ಯಾವ ಮುಸ್ಲಿಂ ಅಭಿಪ್ರಾಯ ಮುಖಂಡನೂ, ಬುದ್ಧಿಜೀವಿಯೂ, ಲೇಖಕನೂ ಷಾ ಬಾನು ಬೆಂಬಲಕ್ಕೆ ಮುಂದೆ ಬರಲಿಲ್ಲ. ಇದು ಇಸ್ಲಾಂನ ಸಮಕಾಲೀನತೆ ಮತ್ತು ಸ್ಥಳೀಯತೆಗಳ ಬಗೆಗೆ ಈ ಮುನ್ನ ಎತ್ತಲಾಗಿದ್ದ ಅನೇಕ ಸಂದೇಹಗಳಿಗೆ ಮತ್ತೆ ಜೀವ ನೀಡಿತು.

ಅಂತಿಮ ಸತ್ಯವನ್ನು ಈಗಾಗಲೇ ಹೇಳಲಾಗಿದೆ; ಇನ್ನು ಮುಂದೆ ಸತ್ಯವಿಲ್ಲ; ಹಾಗಾಗಿ, ಇದರಾಚೆ ಹೇಳಲಾಗುವುದೆಲ್ಲ ಅಸತ್ಯ ಎಂದು ನಂಬಿರುವ ಸಮುದಾಯವೊಂದರ ವಿಕಾಸಶೀಲತೆ ಮತ್ತು ಪ್ರಜಾಪ್ರಭುತ್ವದ ನಿಷ್ಠೆ ಸಂದೇಹಾಸ್ಪದವೇ ಎಂದು ಬಹುಜನರಿಗೆ ಅನ್ನಿಸತೊಡಗಿತು. ನಂತರ ಸೆಕ್ಯುಲರ್ ಬುದ್ಧಿಜೀವಿಗಳು ಏನೇ ತತ್ವ ಹೇಳಿದರೂ, ಜನ ಕೇಳದಾದ ಪರಿಸ್ಥಿತಿ ದೇಶದಲ್ಲಿ ಉಂಟಾಯಿತು. ಆದರೂ ಜಿ.ರಾಜಶೇಖರರು ಮುಸ್ಲಿಂ ಮೂಲಭೂತವಾದದಿಂದ ನಿಮಗೇನು ತೊಂದರೆಯಾಗಿದೇರೀ ಎಂದು ಈಗಲೂ ನಮ್ಮಂತಹವರನ್ನು ಕೇಳುತ್ತಲೇ ಇರುತ್ತಾರೆ. ಮತ್ತು ಇದೆಲ್ಲ ಫ್ಯಾಸಿಸ್ಟರ ವರಸೆ, ನಿಮಗೆಲ್ಲ ಅರ್ಥವಾಗುವುದಿಲ್ಲ ಎಂದು ತುಕ್ಕು ಹಿಡಿದ ಶಬ್ದಗಳನ್ನು ಬಳಸಿ ವಾದಿಸುತ್ತಲೇ ಇರುತ್ತಾರೆ. ಬಹುಶಃ ಅವರಿಗೆ ಎಲ್ಲೋ ಹಿಂದೂ(ವೈದಿಕ?) ಮೂಲಭೂತವಾದದ ‘ರುಚಿ’ ಹತ್ತಿದೆ ಎಂದು ಕಾಣುತ್ತದೆ! ಹಾಗಾಗಿಯೇ ಅವರು ಮುಸ್ಲಿಂ ಮೂಲಭೂತವಾದವನ್ನು ಹೀಗೆ ಸುತ್ತಿ ಬಳಸಿ ಸಮರ್ಥಿಸುವ ಖಂಡನೆಗೆ ಒಳಗಾಗಿದ್ದಾರೆ. ಇಲ್ಲದಿದ್ದರೆ ರಾಜಶೇಖರರಿಗೇಕೆ ಈ ಪಡಿಪಾಟಲು? □

ಸಂಪಾದಕರೊಡನೆ ಸಂವಾದ

ಪ್ರಜಾಪ್ರಭುತ್ವದ ಅನ್ವೇಷಣೆಯತ್ತ...

ಭರತ್ ರಾಜ್

> ದೇರ್ ಇಸ್ ನೊ ಆಲ್ಟರ್‌ನೇಟಿವ್ ಎಂದು ಬಿಂಬಿಸಿಕೊಂಡಿದ್ದ ಬಂಡವಾಳ ಶಾಹಿ ವ್ಯವಸ್ಥೆಯ ಇಂದಿನ ಪರಿಸ್ಥಿತಿ ದಿಕ್ಕಿಲ್ಲದಂತಾಗಿದೆ. ಇದಕ್ಕೆ ಪರಿಹಾರವೇನು ಎಂದು ಜಗತ್ತಿನ ಜನರು ಆಲೋಚಿಸುತ್ತಿದ್ದಾರೆ. ಆದರೆ ಒಂದಂತೂ ಸ್ಪಷ್ಟ ಬಂಡವಾಳಶಾಹಿ ಪ್ರಜಾತಂತ್ರ ಬಹುಸಂಖ್ಯಾತ ಜನಸಾಮಾನ್ಯರಿಗೆ ಪ್ರಜಾತಂತ್ರವನ್ನು ನಿರಾಕರಿಸಿದೆ.

ಮಾನ್ಯ ಸಂಪಾದಕರೆ,

ಸಂವಾದದಲ್ಲಿ ನಡೆದ ಶಿವಸುಂದರ್ ಹಾಗೂ ಡಿ.ಎಸ್.ನಾಗಭೂಷಣ್ ನಡುವಿನ ಪತ್ರವಾಗ್ವಾದದ ಕುರಿತು ನನ್ನ ಅನಿಸಿಕೆ ಬರೆಯುತ್ತಿರುವೆ. ಚುನಾವಣೆ ಸಂದರ್ಭದಲ್ಲಿ ಈ ಚರ್ಚೆ ಆರಂಭವಾಗಿ ಈಗಲೂ ನಡೆಯುತ್ತಿದೆ.

ಇದನ್ನು ಗಮನಿಸಿದಾಗ ಭಾರತದಲ್ಲಿ ಈಗಿರುವ ಆಡಳಿತ ವ್ಯವಸ್ಥೆಯು ಜನಸಾಮಾನ್ಯರಿಂದ ಬಲು ದೂರ ಇರುವ ವಿಚಾರವನ್ನು ಒಪ್ಪಲು ನಾಗಭೂಷಣರಿಗೆ ಸಾಧ್ಯವಾಗುತ್ತಿಲ್ಲ. ಅವರು ಈಗಿರುವ ವ್ಯವಸ್ಥೆಯೇ ಇದ್ದುದರಲ್ಲಿ ಉತ್ತಮ. ಕೆಲವು ಲೋಪದೋಷಗಳನ್ನು ಅವರು ಒಪ್ಪಿಕೊಂಡರೂ ಬೇರೆ ಪರ್ಯಾಯ ಅವರು ಆಲೋಚಿಸಲು ಹೋಗುತ್ತಿಲ್ಲ. ಅವರು ಪ್ರತಿಪಾದಿಸುವ ಲೋಹಿಯಾವಾದದಲ್ಲೂ ಪರಿಹಾರ ಇದೆ ಎಂದು ಹೇಳಲು ಅವರಿಗೆ ಸಾಧ್ಯವಾಗುತ್ತಿಲ್ಲ.

18ನೇಶತಮಾನದ ಕೈಗಾರಿಕಾ ಕ್ರಾಂತಿಯ ನಂತರ ರೂಪು ತಾಳಿದ ಬಂಡವಾಳಶಾಹಿ ಪ್ರಜಾಪ್ರಭುತ್ವ ಮತ್ತದರ ಪರಿಣಾಮಗಳನ್ನು ಜಗತ್ತಿನ ಜನಸಾಮಾನ್ಯರು ಅನುಭವಿಸುತ್ತಾ ಬರುತ್ತಿದ್ದಾರೆ. ಎರಡು ಮಹಾಯುದ್ಧಗಳು ಕೋಟ್ಯಾಂತರ ಜನರ ಸಾವು ನೋವುಗಳು, ಕ್ಷಾಮಡಾಮರಗಳು, ರೋಗರುಜಿನಗಳು, ಜಗತ್ತಿನ ಬಂಡವಾಳಶಾಹಿಗಳು ಸೃಷ್ಟಿಸಿದ ಆಹಾರದ ಕೃತಕ ಅಭಾವದಿಂದಾಗಿ ಆದ ಅಸಂಖ್ಯಾತ ಸಾವುನೋವುಗಳು, ಅಪೌಷ್ಟಿಕತೆ, ರೋಗರುಜಿನಗಳ ಕತೆ ಹೇಳಲಾಗದಷ್ಟಿವೆ. ಯುದ್ಧಗಳು ಇನ್ನೂ ನಿಂತಿಲ್ಲ. ಜನರ ಅಭಿವೃದ್ಧಿಗಿಂತಲೂ ಸೇನೆ, ಶಸ್ತ್ರಾಸ್ತ್ರ ಸಂಗ್ರಹಣೆ ಹಾಗು ಬಂಡವಾಳಶಾಹಿಗಳ ಸಂರಕ್ಷಣೆಗೆ ಬಹುಪಾಲು ಹಣಕಾಸು ವಿನಿಯೋಗವಾಗುತ್ತಿದೆ.

ದೇರ್ ಇಸ್ ನೊ ಆಲ್ಟರ್‌ನೇಟಿವ್(ಬೇರೆ ಪರ್ಯಾಯವೇ ಇಲ್ಲ)ಎಂದು ಬಿಂಬಿಸಿಕೊಂಡಿದ್ದ ಬಂಡವಾಳಶಾಹಿ ವ್ಯವಸ್ಥೆಯ ಇಂದಿನ ಪರಿಸ್ಥಿತಿ ದಿಕ್ಕಿಲ್ಲದಂತಾಗಿದೆ. ಇದಕ್ಕೆ ಪರಿಹಾರವೇನು ಎಂದು ಜಗತ್ತಿನ ಜನರು ಆಲೋಚಿಸುತ್ತಿದ್ದಾರೆ. ಆದರೆ ಒಂದಂತೂ ಸ್ಪಷ್ಟ ಬಂಡವಾಳಶಾಹಿ ಪ್ರಜಾತಂತ್ರ ಬಹುಸಂಖ್ಯಾತ ಜನಸಾಮಾನ್ಯರಿಗೆ ಪ್ರಜಾತಂತ್ರವನ್ನು ನಿರಾಕರಿಸಿದೆ. ಅದು ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿಯೂ ಇರಬಹುದು. ಇದು ಸಾಕಷ್ಟು ಜನರಿಗೆ ತಿಳಿದಿರುವ ವಿಚಾರ. ಅಮೇರಿಕ ಬ್ರಟನ್ನಿನಂತಹ ದೇಶಗಳಲ್ಲೇ ಬಂಡವಾಳಶಾಹಿ ಪ್ರಜಾಪ್ರಭುತ್ವ ತೀವ್ರತರವಾದ ಇಕ್ಕಟ್ಟಿನಲ್ಲಿ ಇದೆ. ಆದರೆ ನಾಗಭೂಷಣರು ಇದನ್ನೇ ಸಮರ್ಥಿಸುತ್ತಿದ್ದಾರೆನಿಸುತ್ತದೆ. ಇವರ ಚರ್ಚೆಗಳಲ್ಲಿ ವಿಚಾರಕ್ಕಿಂತಲೂ ವ್ಯಕ್ತಿಪರ ವಿರೋಧ ಎದ್ದು ಕಾಣಿಸುತ್ತಿದೆ.

ಶಿವಸುಂದರ್ ತಮ್ಮ ಲೇಖನ ಹಾಗೂ ಪತ್ರಗಳಲ್ಲಿ ಭಾರತದ ಚುನಾವಣಾ ವ್ಯವಸ್ಥೆಯಲ್ಲಿನ ಪ್ರಜಾಪ್ರಭುತ್ವಕ್ಕೆ ಮಾರಕವಾಗಿರುವ ಗಂಭೀರ ಸ್ವರೂಪದ ಕೆಲವು ಅಂಶಗಳ ಬಗ್ಗೆ ಚರ್ಚಿಸಿದ್ದಾರೆ. ಭಾರತದ ರಾಜಕೀಯ ಆಡಳಿತ ವ್ಯವಸ್ಥೆ ಹೇಗೆ ಜನಸಾಮಾನ್ಯರಿಂದ ಹೇಗೆ ಬೇರ್ಪಟ್ಟಿದೆ ಎಂಬುದನ್ನು ಉದಾಹರಣೆಗಳ ಮೂಲಕ ವಿವರಿಸಲು ಪ್ರಯತ್ನಿಸಿದ್ದಾರೆ ಆದರೆ ಪರ್ಯಾಯವೇನು ಎಂಬುದರ ಬಗ್ಗೆ ಅವರ ಚರ್ಚೆ ಹೆಚ್ಚು ಮುಂದುವರೆದಿಲ್ಲ. ಅವರು ಕೂಡ ಈ ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನೇ ಸುಧಾರಿಸಿ ಸರಿಪಡಿಸಬಹುದು ಎಂಬಂತೆ ಮಾತಾಡುತ್ತಿದ್ದಾರೇನೋ ಅನಿಸುತ್ತದೆ. ಅವರ ಬರಹ ಎಲ್ಲರಿಗೂ ಓದಿಸಿಕೊಂಡು ಹೋಗುವುದಿಲ್ಲ. ಅನಗತ್ಯವಾಗಿ ಕ್ಲಿಷ್ಟವಾಗಿ ಪ್ರತಿಪಾದನೆ ಮಾಡುತ್ತಾರೆ.

ಪ್ರಜಾಪ್ರಭುತ್ವ ಜಾರಿಯಾಗುವಿಕೆಗೂ ಹಾಗೂ ಜನರ ಆರ್ಥಿಕ ಸ್ಥಾನಮಾನಗಳಿಗೂ ನೇರ ಸಂಬಂಧ ಇರುವುದನ್ನು ಮೇಲ್ನೋಟದಲ್ಲೇ ನಾವು ಕಾಣಬಹುದು. ಬಹುತೇಕವಾಗಿ ಜನ ಪ್ರತಿನಿಧಿಗಳೆನಿಸಿಕೊಳ್ಳುವವರೆಲ್ಲರೂ ಕೋಟ್ಯಾಧಿಪತಿಗಳೋ ಅಥವಾ ಬಿಲಿಯಾಧಿಪತಿಗಳೋ ಆಗಿರುತ್ತಾರೆ. ಓಟು ಹಾಕಬೇಕಿರುವವರಲ್ಲಿ ಬಹುಸಂಖ್ಯಾತರು ನಿರ್ಗತಿಕರು, ಬಡವರು, ಮಧ್ಯಮವರ್ಗದವರು ಆಗಿರುತ್ತಾರೆ. ಇದರಲ್ಲಿ ದಲಿತರು, ಆದಿವಾಸಿಗಳು, ಹಿಂದುಳಿದವರು, ಹಾಗೂ ಇನ್ನಿತರ ಬಡವರೇ ಪ್ರಧಾನವಾಗಿದ್ದಾರೆ.

ದೇಶದ ಆರ್ಥಿಕತೆಗೆ ಈ ಜನಗಳದೇ ಬಲು ಪ್ರಧಾನ ಕೊಡುಗೆ ಆಗಿರುತ್ತದೆ. ಆದರೆ ಅದರ ನಿರ್ವಹಣೆ ಹಾಗು ಪಾಲುದಾರಿಕೆ ಪ್ರಶ್ನೆ ಬಂದಾಗ ಪ್ರಧಾನವಾಗಿ ಈ ಜನಸಾಮಾನ್ಯರ ಪಾತ್ರವೇನೂ ಇರುವುದಿಲ್ಲ. ಅವರಿಗೆ ಅದರಲ್ಲಿ ಕನಿಷ್ಠ ಮಟ್ಟದ ಪಾಲೂ ಕೂಡ ಇರದ ಸ್ಥಿತಿ ಇದೆ. ಜನರು ಇಂದು ಬಹಳ ಗಂಭೀರವಾಗಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕಾದ ಬಲು ಗಹನವಾದ ವಿಚಾರ ಇದಾಗಿದೆ. ಹಾಗಾಗಿ ಈ ಚರ್ಚೆಯಲ್ಲಿ ಇನ್ನಷ್ಟು ಜನರು ಪಾಲ್ಗೊಳ್ಳುವಂತಾಗಿ ಮತ್ತಷ್ಟು ಮುಂದುವರೆದರೆ ಈ ವಿಚಾರ ಇನ್ನಷ್ಟು ಉಪಯೋಗಕರ ಎನಿಸುತ್ತದೆ. □

ತೆರೆದುಕೊಳ್ಳದ ಮನಸ್ಸುಗಳು!

(6ನೇ ಪುಟದಿಂದ)

ಮ್ಮತಿ ಇದ್ದಿರಬೇಕು. ಆದರೂ ಮೆಣಸಿನಕಾಯಿ ಸರ್ವವ್ಯಾಪಿಯಾಗಿ ಎಲ್ಲ ಜನರೂ ಉಪಯೋಗಿಸತೊಡಗಿ ಈಗ ಅದು ಈ ನೆಲದ್ದೇ ಎನ್ನುವಷ್ಟರ ಮಟ್ಟಿಗೆ ಆಗಿದೆ. ಆದರೆ ಮೆಣಸಿನಕಾಯಿಯು ನಮ್ಮ ದೇಶಕ್ಕೆ ಬಂದಾಗ ಎದುರಿಸಿದ ವಿರೋಧ ಮತ್ತು ಅಸಮ್ಮತಿಯನ್ನು ಈಗಲೂ ಕೆಲ ಬ್ರಾಹ್ಮಣ ಕುಟುಂಬಗಳು ಸಾಂಕೇತಿಕವಾಗಿ ಒಂದು ಸಂಪ್ರದಾಯವಾಗಿ ಅನುಸರಿಸಿಕೊಂಡು ಬರುತ್ತಿದ್ದಾರೆ.

ಇನ್ನು ಕೆಲವು ಬ್ರಾಹ್ಮಣರ ಮನೆಗಳಲ್ಲಿ, ಆಚಾರ ವಿಚಾರಗಳನ್ನು ಅನುಸರಿಸುವ ಹಿರಿಯರು, ಮೂಲಂಗಿ, ಬದನೆಕಾಯಿ ಮುಂತಾದ ತರಕಾರಿಗಳನ್ನು ತಿನ್ನುತ್ತಿರಲಿಲ್ಲ. ಅದಕ್ಕೆ ಅವರು ಕೊಡುತ್ತಿದ್ದ ಕಾರಣ, ಇವುಗಳು ಬ್ರಹ್ಮಸೃಷ್ಟಿಯಲ್ಲ, ಇವು ವಿಶ್ವಾಮಿತ್ರ ಸೃಷ್ಟಿ ಆದ್ದರಿಂದ ಇವುಗಳು ತ್ಯಾಜ್ಯ ಎನ್ನುವ ಮಡಿ ವಂತಿಕೆಯನ್ನು ತೋರುತ್ತಿದ್ದರು. ಪುರಾತನ ಕಾಲದ ಯಾವುದೋ ಘಟ್ಟದಲ್ಲಿ, ಸೃಜನ ಶೀಲ ವ್ಯಕ್ತಿಯೊಬ್ಬನಿಂದ ಅವಿಷ್ಕಾರಗೊಂಡ ಈ ತರಕಾರಿಗಳನ್ನು ಮಡಿವಂತಿಕೆಯ ಜನ ಆಗ ವಿರೋಧಿಸಿರಬೇಕು. ಈಗಲೂ ಕೆಲ ಬ್ರಾಹ್ಮಣ ಮನೆಗಳಲ್ಲಿ ಈ ವಿರೋಧ ಸಾಂಕೇತಿಕವಾಗಿದ್ದರೂ, ಮಡಿವಂತಿಕೆಯ ಲಕ್ಷಣವಾಗಿ ಉಳಿದುಕೊಂಡಿರುವುದು ಆಶ್ಚರ್ಯ.

ಈ ಎರಡೂ ಉದಾಹರಣೆಗಳನ್ನು ಏಕೆ ಹೇಳಿದನೆಂದರೆ, ಹೊಸ ಅವಿಷ್ಕಾರಗಳ ಬಗ್ಗೆ ಯಾವಾಗಲೂ ಒಂದು ರೀತಿಯ ಗುಮಾನಿಯಿಂದ ನೋಡುವ, ಅದರ ಬಳಕೆಯನ್ನು ವಿರೋಧಿಸುವ ಬುದ್ಧಿಜೀವಿಗಳ ಗುಂಪಿಗೆ ಶಿವಸುಂದರ್ ಸೇರಿರಬಹುದು. ಅನೇಕ ವರ್ಷಗಳ ಪ್ರಯೋಗ-ಉಪಯುಕ್ತತೆಯ ಮನವರಿಕೆಯ ನಂತರವೂ, ಇಲ್ಲಸಲ್ಲದ ಕಾರಣಹುಡುಕಿ ವಿರೋಧಿಸುತ್ತಲೇ ಇರುತ್ತಾರೆ. ಅದಕ್ಕೇ, ನಾರ್ಮನ್‌ಬೋರ್ಲಾಗ್‌ನ ಅವಿಷ್ಕಾರಗಳು, ನಮ್ಮ ನೆಲದ ರೈತರು, ಬಡವರು, ಆಹಾರವಿಲ್ಲದೆ, ಮೂಳೆ ಚಕ್ಕಳಗಳಾಗಿ, ನವೆದು ನವೆದು ಸಾಯುವುದನ್ನು ತಪ್ಪಿಸಿದ್ದರೂ ಅವನು ಶಿವಸುಂದರ್ ಅವರಂತ ಬುದ್ದಿಜೀವಿಗಳಿಗೆ ದೊಡ್ಡ ದೇಶವೊಂದರ ಗೂಢಚಾರನಾಗಿ, ಕೊಲೆಗಾರನಾಗಿ ಕಾಣುತ್ತಾನೆ. ಇದು ನಮ್ಮ ದೇಶದ ಬುದ್ಧಿಜೀವಿಗಳ ದುರಂತ.

ಬಡ ರೈತರ ಜೊತೆ ಬಿಸಿಲು ಮಳೆಯನ್ನದೆ ದಶಕಗಟ್ಟಲೆ ದುಡಿದ ನಾರ್ಮನ್ ಬೋರ್ಲಾಗ್, ನೋಬೆಲ್ ಪಾರಿತೋಷಕ ಪಡೆದಿದ್ದರೂ, ನಮ್ಮ ರಾಜಕೀಯ ನಾಯಕರಂತೆ, ಅಥವಾ ನಮ್ಮ ಉದ್ಯಮಿಗಳಂತೆ, ಐಷಾರಾಮಿ ಜೀವನ ನಡೆಸಲಿಲ್ಲ. ಅವನ ಬಗೆಗಿನ ಎಲ್ಲಾ ಟೀಕೆಗಳಿಗೆ ಅವನ ಮೃದುವಾದ ಉತ್ತರ ಇಷ್ಟೇ. "ನಿಮಗಾರಿಗೂ ನಿಜವಾದ ಹಸಿವಿನ ಅರಿವಿಲ್ಲ. ನಿಮ್ಮ ಆಫೀಸಿನ ಆರಾಮ ಕುರ್ಚಿಗಳನ್ನು ಬಿಟ್ಟು, ಕೇವಲ ಒಂದೇ ಒಂದು ತಿಂಗಳು ಬಡ ದೇಶಗಳ ರೈತರ ಜೊತೆ ಬದುಕಿ, ಅವನ ಬವಣೆಗಳನ್ನು ಅರಿತುಕೊಳ್ಳಿ, ಆಗ ಮಾತ್ರ ಬಡ ರೈತರ ಅವಶ್ಯಕತೆ ಏನು ಎನ್ನುವುದು ನಿಮಗೆ ತಿಳಿಯುವುದು."

ಕೇವಲ ವಿರೋಧಕ್ಕಾಗಿಯೇ ವಿರೋಧವನ್ನು ವ್ಯಕ್ತಪಡಿಸುವ ಮತ್ತು ಹೊಸ ವಿಚಾರ, ಆವಿಷ್ಕಾರಗಳ ಬಗ್ಗೆ ಆಸಕ್ತಿಯಿಲ್ಲದ ಮತ್ತು ತೆರೆದುಕೊಳ್ಳದ ಮನಸ್ಸುಗಳು ನಮ್ಮ ಹಿಂದಿನ ಗೊಡ್ಡು ಸಂಪ್ರದಾಯಸ್ಥ ಸಮಾಜದ ತುಣುಕುಗಳೆ? □

ಸಂಪಾದಕರೊಡನೆ ಸಂವಾದ

ಬದುಕನ್ನೇ ದೋಚುವ ಬಿ.ಟಿ!

ಅಪೂರ್ವ ಡಿ ಸಿಲ್ವಾ

ಮಾನ್ಯ ಸಂಪಾದಕರಿಗೆ,

ಕುಲಾಂತರಿ ಆಹಾರದ ಮೂಲಕ ಮತ್ತೆ ನಮ್ಮ ಸ್ವಾತಂತ್ರ್ಯ ಕಿತ್ತುಕೊಳ್ಳುವ ಹುನ್ನಾರ ನಡೆದಿದೆ. ನಾವು ಬಹು ರಾಷ್ಟ್ರೀಯ ಕಂಪನಿಗಳ ಗುಲಾಮರಲ್ಲ ಎಂದು ಸಾಬೀತು ಪಡಿಸಬೇಕಿದೆ. ಬೇರೆ ಪ್ರಾಣಿಯ ಜೀವತಂತುಗಳನ್ನು ಸಸ್ಯಗಳಿಗೆ ಬೆರೆಸಿ ಆ ಸಸ್ಯದಿಂದ ಉತ್ಪತ್ತಿಯಾದ ತರಕಾರಿಯನ್ನು ಹಣ್ಣುಗಳನ್ನು ಮನುಷ್ಯರು ತಿನ್ನುವಂತೆ ಮಾಡುವ ಹುನ್ನಾರ. ಎಷ್ಟೋ ಸಾವಿರ ವರ್ಷಗಳಿಂದ ಉಳಿದು ಬೆಳೆದು ಬಂದ ಸಸ್ಯಸಂಕುಲದ ವೈವಿಧ್ಯತೆಯನ್ನು ತಲೆಗೆ ಹುಳ ಬಿಟ್ಟುಕೊಂಡ ವಿಜ್ಞಾನಿಗಳು ಕ್ಷಣಾರ್ಧದಲ್ಲಿ ಅದರ ಗುಣವಿಶೇಷಗಳನ್ನು ಸ್ವಾಭಾವವನ್ನು ಬದಲಾಯಿಸಿ, ನಮಗೆ ತಿನ್ನಲು ಹೇಳಿ, ಅದರಿಂದಾಗುವ ಅನಾಹುತವನ್ನು ನೋಡಲು ನಾವೇನು ಪ್ರಯೋಗಾಲಯದ ಇಲಿಗಳೇ?

ಹಾಗೆ ಪ್ರಯೋಗಲಯದ ಇಲಿಗಳಾದ ಎಷ್ಟೊ ಮನುಷ್ಯರು ಚರ್ಮರೋಗದಿಂದ, ಕಿಡ್ನಿ ವೈಫಲ್ಯದಿಂದ ಸತ್ತಿರುವ ಉದಾಹರಣೆಯಿದೆ. ಅಮೇರಿಕಾದಲ್ಲೇ ECOSINO PHILIA-MYALGIA SYNDROMEನಿಂದ ನೂರು ಮಂದಿ ಸತ್ತಿದ್ದು ೫೦೦೦ ಮಂದಿ ಅಸ್ವಸ್ಥರಾಗಿದ್ದಾರೆ. ಜೆನಿಟಿಕಲಿ ಮಾಡಿಫೈಡ್ ಸೋಯಾದಿಂದ ಈ ಅನಾಹುತ ಸಂಭವಿಸಿದೆ. ಇದನ್ನು ಉತ್ಪತ್ತಿ ಮಾಡಿದ ಜಪಾನ್ ಕಂಪನಿ ಕೋಟಿಗಟ್ಟಲೆ ಹಣವನ್ನು ಪರಿಹಾರವಾಗಿ ಕೊಟ್ಟಿದೆ.

೧೯೮೦ರಲ್ಲೆ ನಡೆದ ಈ ಅನಾಹುತದಿಂದ ಅಮೇರಿಕಾ ಪಾಠ ಕಲಿತಿಲ್ಲ. ತನ್ನ ಆಸೆ ಆಮಿಷಗಳಿಗೆ ಜಗತ್ತಿನ ಸಾವಿರಾರು, ಲಕ್ಷಾಂತರ ಮಂದಿಯನ್ನು ಸಾಯಿಸುವ ಇರಾದೆ ಅವರಿಗಿದೆ. ಮನ್ಸಾಂಡೊ ಅಂತಹ ಕಂಪನಿಗೆ ಜನಗಳನ್ನು ಪ್ರಯೋಗಾಲಯದ ಇಲಿಗಳಾಗಲು ಬಳಸಿಕೊಳ್ಳುವಂತೆ ಹೇಳಿ ಅಮೇರಿಕಾ ಸರ್ಕಾರ ಅನಾಹುತಕ್ಕೆ ದಾರಿ ಮಾಡಿದೆ. ಈಗಾಗಲೇ ಬಿ.ಟಿ ಹತ್ತಿ ಭಾರತಕ್ಕೆ ಬಂದು ಅದನ್ನು ತಿಂದ ಎಷ್ಟೊ ಆಡುಗಳು, ಹಸುಗಳು ಚಿಟ್ಟೆಗಳು ಆಹುತಿಯಾಗಿರುವುದನ್ನು ಕೇಳಿದ್ದೀರಿ.

ಟೊಮ್ಯಾಟೊನಲ್ಲಿ ಮೀನಿನ ಜೀನ್ಸ್, ಹಂದಿ ಜೀನ್ಸ್ ಇನ್ಯಾವುದೊ ಸಸ್ಯಕ್ಕೆ ಮಣ್ಣಿನ ಯಾವುದೊ ಬ್ಯಾಕ್ಟೀರಿಯಾ ಇವೆಲ್ಲಾ ಸಸ್ಯಗಳಲ್ಲಿ ಬೆರೆತು ನಮ್ಮ ತಿನ್ನುವ ಆಹಾರದ ತಟ್ಟೆಗೆ ಬರುತ್ತಿದೆ. ಇದನ್ನು ತಿಂದು ಮನುಷ್ಯ ವಿಕಾರವಾಗುತ್ತಾ, ಮಾರ್ಕ್ವೆಜ್ ಕಾದಂಬರಿಯಲ್ಲಿ ಹುಟ್ಟುವ ಬಾಲವಿರುವ ಮಗುವಿನಂತೆ, ತನ್ನ ಅತಿ ಬುದ್ಧಿವಂತಿಕೆಯಿಂದ ಮಾನವ ಯಾವ ಯಾವ ಅನಾಹುತಕ್ಕೆ ಗುರಿಯಾಗುತ್ತಾನೊ ಗೊತ್ತಿಲ್ಲ.

ಮಹಾರಾಷ್ಟ್ರ ಹೈಬ್ರಿಡ್ ಸೀಡ್ ಕಂಪನಿ ಬದನೆಕಾಯಿಯನ್ನು ಮಾರುಕಟ್ಟೆಗೆ ಬಿಡಲು ಮನ್ಸಾಂಟೊ ಜೊತೆ ಒಪ್ಪಂದ ಮಾಡಿಕೊಂಡಿದೆ. BT ಬದನೆ ಈ ಕಂಪನಿಯ ಮೂಲಕ ಬಂದರೆ ಅದರ ವಿಕಾರಗಳನ್ನು ನಿಮಗೆ ವಿವರಿಸಬೇಕಿಲ್ಲ. ಹಲವಾರು ವೈವಿದ್ಯತೆಯನ್ನು ನಾಶ ಮಾಡಿ ನಮ್ಮ ಆಹಾರ ಪದ್ಧತಿಯನ್ನು ನಾಶಮಾಡಿ, ಈ ಜಿ.ಎಮ್ ದುಷ್ಟ ಧಣಿಗಳು ಕೊಟ್ಟ ಆಹಾರದ ಮೂಲಕ ಇವರು ಹೇಳುವಂತೆ ಕೇಳುವ ಹಾಗೆ, ಇವರು ಕೊಟ್ಟ ಆಹಾರವನ್ನು ಮಾತ್ರ ತಿನ್ನುವ ಪರಿಸ್ಥಿತಿಗೆ ನಮ್ಮನ್ನು ಮಾಡುತ್ತಿದ್ದಾರೆ. ಎತ್ತಿನ ಬೀಜ ಅಮುಕಿ(ಇಡಾ) ಹೇಳುವಂತೆ ಕೇಳುವ ಹಾಗೆ ಮಾಡುವ ರೀತಿ ಈ ಮನ್ಸಾಂಟೊ ಅಂತಹ ಕಂಪನಿಗಳು ನಮ್ಮನ್ನು ನಪುಂಸಕರಾಗಿ ಮಾಡಿ ಜೀವಂತ ರೋಬೋಟ್‌ಗಳನ್ನಾಗಿಸುವ ಸ್ಥಿತಿಯನ್ನು ನಾವು ಪ್ರಬಲವಾಗಿ ವಿರೋಧಿಸಬೇಕಾಗಿದೆ.

ಈ ಆಹಾರವನ್ನು ತಿನ್ನುವ ಮಕ್ಕಳಂತೂ ಬಹುಬೇಗನೆ ದೇಹದ ರೋಗನಿರೋಧಕ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಭಾರತದಲ್ಲಿ ಜೆನಿಟಿಕ್ ಇಂಜಿನಿಯರಿಂಗ್ ಅಪ್ರೂವಲ್ ಕಮಿಟಿ ಇದ್ದು ಅದು ಬಯೊಟೆಕ್ನಾಲಜಿ ಇಂಡಸ್ಟ್ರಿ ಹೇಳಿದ ಹಾಗೆ ಕೇಳುವ ಬಸವನಂತೆ ತಲೆ ಆಡಿಸುತ್ತಿದೆ. ಸುಪ್ರಿಂ ಕೋರ್ಟ್‌ನಲ್ಲಿ ಇದರ ವಿರುದ್ಧ ಹೂಡಿದ ದಾವೆಗಳೆಲ್ಲಾ ಆದೇಶಕ್ಕಾಗಿ ಕಾಯುತ್ತಿವೆ.

ಇನ್ನು ಸ್ವಲ್ಪ ದಿನಗಳಲ್ಲಿ ನಮ್ಮ ಮಾರುಕಟ್ಟೆಯಲ್ಲಿರುವ ಬದನೆ ಬಿ.ಟಿ ಬದನೆಯಾ ನೈಸರ್ಗಿಕ ಬದನೆಯಾ ಕೇಳಿದರೆ ಮಾರುವವನಿಗೆ ಗೊತ್ತಿರುವುದಿಲ್ಲ. ನಾವು ಎಚ್ಚರಿಕೆಯಿಂದ ಇರದಿದ್ದರೆ ಯಾಮಾರಿಸುವ ಕೆಲಸವನ್ನು ಈ ಕಂಪನಿಗಳು ಮಾಡುತ್ತವೆ. ನಾವು ಪ್ರೀತಿಸುವ ಮಕ್ಕಳು, ನೆರೆಹೊರೆಯವರಿಗೆ ಬಾಯಿ ಮಾತಿನ ಮೂಲಕ ಇದರ ಬಗ್ಗೆ ಅರಿವು ಮೂಡಿಸಬೇಕು. ಅವರು ಮತ್ತೊಂದಿಷ್ಟು ಜನರಿಗೆ ಈ ಬಗ್ಗೆ ವಿವರಿಸಬೇಕು.

> **ಗುಣ ವಿಶೇಷಗಳನ್ನು ಸ್ವಭಾವವನ್ನು ಬದಲಾಯಿಸಿ, ನಮಗೆ ತಿನ್ನಲು ಹೇಳಿ, ಅದರಿಂದಾಗುವ ಅನಾಹುತವನ್ನು ನೋಡಲು ನಾವೇನು ಪ್ರಯೋಗಾಲಯದ ಇಲಿಗಳೇ?**

೧೮೦ ದೇಶಗಳು ಜಿ.ಎಂ ಆಹಾರಕ್ಕೆ ವಿರೋಧ ವ್ಯಕ್ತಪಡಿಸಿವೆ. ವಿಶ್ವಬ್ಯಾಂಕಿನ ಅಂದಾಜಿನ ಪ್ರಕಾರ ಕ್ರಿ.ಶ. ೨೦೧೫ರ ವೇಳೆಗೆ ನಮ್ಮ ದೇಶದಲ್ಲಿ ಸುಮಾರು ೪೦ ಕೋಟಿ ಪ್ರಜೆಗಳು ಕೃಷಿಯನ್ನು ಬಿಟ್ಟು ಬೇರೆ ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಬರಲಿದ್ದಾರೆ. ಆಗ ಕೃಷಿ ದೊಡ್ಡ ಇಂಡಸ್ಟ್ರಿಯ ರೂಪ ತಾಳಿ ಮನ್ಸಾಂಡೊ ಅಂತಹ ಕಂಪನಿಗಳು ಬೆಳೆದ ಅಹರವನ್ನೇ ತಿನ್ನುವ ಸ್ಥಿತಿ ನಮಗೆ ಬರ ಬಾರದಂತೆ ಈ ಅಂಕಿಅಂಶದ ಅಂದಾಜೆಲ್ಲಾ ಬುಡಮೇಲು ಮಾಡಬೇಕು.

ಬುದ್ಧನ ಮೈಂಡ್‌ಲೆಸ್ ಥಿಂಕಿಂಗ್ ಮತ್ತು ಅಲ್ಲಮನ ಅರಿಯಲಿಲ್ಲವ ಅರಿವೆ ತಾನಾಗಿ ಅಮ ಗುಹೇಶ್ವರನಲ್ಲದೆ ಬೇರಲ್ಲ ಎಂದು ಹೇಳಿದ ಸತ್ಯ ಬಹುಷ ಮನುಷ್ಯನ ಕುಯುಕ್ತಿ ಮಿದುಳಿನ ವರ್ತನೆಯನ್ನು ನೋಡಿಯೆ ಇರಬೇಕು. ಇಲ್ಲದಿದ್ದರೆ ಈ ವಿಷ ಆಹಾರವನ್ನು ತಿನ್ನುವಂತೆ ಮನುಷ್ಯನ ಮಿದುಳು ಆಲೋಚಿಸುತ್ತಿರಲಿಲ್ಲವೇನೋ? □



ಸೇನಾ ಕಾರ್ಯಾಚರಣೆ ನಿಲ್ಲಿಸಿ

ಒಂದು ಬಹಿರಂಗ ಪತ್ರ

ಗೆ,

ಮಾನ್ಯ ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ

ಭಾರತದ ಅತೀ ಹೆಚ್ಚು ಹಿಂದುಳಿದ ಪ್ರದೇಶಗಳಲ್ಲಿರುವ ಆದಿವಾಸಿಗಳು, ದಲಿತರು, ಮಹಿಳೆಯರು ಇನ್ನಿತರ ಹಿಂದುಳಿದವರು ಬಡತನ ರೇಖೆಗಿಂತಲೂ ಬಹಳ ಕೆಳಗಿನ ಹಂತದಲ್ಲಿದ್ದಾರೆ. ತಮ್ಮ ಬದುಕಿಗಾಗಿ ಕಾಡಿನ ಉತ್ಪತ್ತಿ ಹಾಗೂ ಸಣ್ಣ ಪುಟ್ಟ ಕೃಷಿ ಚಟುವಟಿಕೆಗಳನ್ನು ನಡೆಸುತ್ತಾರೆ. ಆದಿವಾಸಿಗಳಲ್ಲಿ ಒಂದು ಗಣನೀಯ ವಿಭಾಗ ಇನ್ನೂ ಅಲೆಮಾರಿ ಬೇಸಾಯ ಮಾಡುವ ಹಂತದಲ್ಲಿದ್ದಾರೆ. ಅಲ್ಲದೆ ಅವರಿಗೆ ತಮ್ಮದೇ ಎನ್ನುವ ಸ್ವಂತ ಭೂಮಿ ಇಲ್ಲ. ಸ್ಥಿರ ಬೇಸಾಯಕ್ಕೆ ಬದಲಿಸಿಕೊಂಡಿರುವ ಆದಿವಾಸಿಗಳು ಮುಖ್ಯವಾಗಿ ಸಂಘಟಿತರಾಗಿರುವ ಆದಿವಾಸಿಗಳಲ್ಲಿ ಕಂಡುಬರುತ್ತಾರೆ. ಆದರೂ ಅವರಿಗೆ ಭೂಮಿ ಹಕ್ಕು ದಾಖಲೆಗಳು ಇಲ್ಲ.

ಆಂಧ್ರ, ಮಹಾರಾಷ್ಟ್ರ, ಒರಿಸ್ಸಾ, ಮಧ್ಯಪ್ರದೇಶ, ಜಾರ್ಖಂಡ, ಬಿಹಾರ, ಛತ್ತೀಸ್‌ಘಡ್, ಪಶ್ಚಿಮ ಬಂಗಾಳ, ಮೊದಲದ ರಾಜ್ಯಗಳಲ್ಲಿ ಆದಿವಾಸಿಗಳು, ದಲಿತರು ಇನ್ನಿತರ ಹಿಂದುಳಿದವರು ದೊಡ್ಡ ಮಟ್ಟದಲ್ಲಿ ಸಂಘಟಿತರಾಗಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣ ಬೃಹತ್ ಬಂಡವಾಳ ಕೇಂದ್ರಿತ ಭಾರಿ ಯೋಜನೆಗಳಾದ ದೊಡ್ಡ ಡ್ಯಾಂಗಳು, ವಿದ್ಯುತ್ ಸ್ಥಾವರಗಳು, ಗಣಿಗಾರಿಕೆಗಳು, ವಿಶೇಷ ಆರ್ಥಿಕ ವಲಯಗಳು (SEZ) ಮೊದಲಾದವುಗಳಿಂದಾಗಿ ಅವರ ಪ್ರಾಣ ಹಾಗೂ ಬದುಕುಗಳಿಗೇ ಸಂಚಕಾರಗಳನ್ನು ತಂದಿರುವುದೇ ಅಗಿದೆ. ಬೃಹತ್ ಸಂಖ್ಯೆಯಲ್ಲಿ ಅವರನ್ನು ಒಕ್ಕಲೆಬ್ಬಿಸಿಬಿಡುವ ಕಾರ್ಯಕ್ಕೆ ಸರ್ಕಾರಗಳು ಮುಂದಾಗಿವೆ. ನರ್ಮದಾ ಯೋಜನೆಯಿಂದ ನಿರ್ವಹಿಸಿತರಾಗಿರುವವರ ಗೋಳು ಹೇಳತೀರದಾಗಿದೆ. ಜನರು ನರ್ಮದಾ ಯೋಜನೆಯನ್ನು ಭಾರೀ ಸಂಖ್ಯೆಯಲ್ಲಿ ವಿರೋಧಿಸಿದ್ದರೂ ಬಲಾತ್ಕಾರದಿಂದ ಯೋಜನೆಯನ್ನು ಜನರ ಮೇಲೆ ಹೇರಲಾಗಿದೆ. ಇದೇ ರೀತಿಯಲ್ಲಿ SEZಗಳಿಗೆ ಪೊಸ್ಕೊ, ಜಿಂದಾಲ್, ಮಿತ್ತಲ್, ವೇದಾಂತ, ಎಸ್ಸಾರ್, ಟಾಟಾಗಳಂತಹ ಕಂಪನಿಗಳಿಗೆ ಜನರು ಹಾಗೂ ಪರಿಸರಕ್ಕೆ ಭಾರಿ ಅನಾಹುತಗಳನ್ನು ತಂದೊಡ್ಡುವ ಗಣಿಗಾರಿಕೆಗಳನ್ನು ನಡೆಸಲು ಸರ್ಕಾರಗಳು ಉದಾರವಾಗಿ ಅವಕಾಶಗಳನ್ನು ನೀಡಿವೆ.

ಇವೆಲ್ಲದರ ಭೀಕರ ಪರಿಣಾಮಗಳನ್ನು ಈಗಾಗಲೇ ಜನರು ಅನುಭವಿಸುತ್ತಿದ್ದಾರೆ. ಮೊದಲಿನಿಂದಲೂ ಇಂತಹವುಗಳನ್ನು ವಿರೋಧಿಸಿ ಪ್ರತಿಭಟನೆ, ರ್‍ಯಾಲಿಗಳನ್ನು ನಡೆಸಿ ಹಲವಾರು ಮನವಿಗಳನ್ನು ಸರ್ಕಾರಗಳಿಗೆ ನೀಡಿದ್ದರೂ ಅಂತಹ ಯಾವುದೇ ಪ್ರತಿಭಟನೆಗಳಿಗೆ ಮನವಿಗಳಿಗೆ ಯಾವ ಬೆಲೆಯನ್ನೂ ನೀಡದೆ ಇಂತಹ ಮಾರಕ ಯೋಜನೆಗಳನ್ನು ಸಮಾಜದ ಅತ್ಯಂತ ಕೆಳಸ್ತರದ ಜನರ ಮೇಲೆ ಬಲಾತ್ಕಾರದಿಂದ ಹೇರಿ ಅವರನ್ನು ಒಕ್ಕಲೆಬ್ಬಿಸಿ ಬಿಸುಡುವ ಕಾರ್ಯಗಳನ್ನು ಸರ್ಕಾರಗಳು ನಿರಂತರವಾಗಿ ನಡೆಸುತ್ತಾ ಬರುತ್ತಿವೆ. ಕರ್ನಾಟಕದ ನಾಗರಹೊಳೆ, ಬಂಡೀಪುರ, ಕೈಗಾ ಅಣುಸ್ಥಾವರ, ಸೀಬರ್ಡ್ ನೌಕಾನೆಲೆ ಮೊದಲಾದ ಯೋಜನೆಗಳಿಂದಾಗಿ ನಿರ್ವಸಿತರಾದವರಿಗೆ ಬದಲಿ ವ್ಯವಸ್ಥೆಯನ್ನು ಸರಿಯಾಗಿ ಇನ್ನೂ ಕಲ್ಪಿಸಿಲ್ಲ. ಅಭದ್ರತೆ ಹಾಗೂ ಅತಂತ್ರ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಅದೂ ಅಲ್ಲದೆ ದೇಶದ ಬಹುಸಂಖ್ಯಾತ ಜನರಿಗೆ ಮೂಲಭೂತ ಹಕ್ಕುಗಳಾದ ಭೂಮಿ, ವಸತಿ, ನೀರು, ರಸ್ತೆ, ಆಸ್ಪತ್ರೆ, ಶಾಲೆ, ಸಾರಿಗೆ ಮೊದಲಾವುಗಳು ಮರೀಚಿಕೆಯಾಗಿವೆ. ಜೊತೆಗೆ ಕನಿಷ್ಠ ಗುಡಿಸಲುಗಳಲ್ಲಿ ಹೇಗಾದರೂ ಜೀವನ ನಡೆಸಿಕೊಳ್ಳೋಣ ಎಂದರೂ ಅಂತಹ ಅವಕಾಶಗಳನ್ನೂ ಅವರಿಗೆ ನಿರಾಕರಿಸುವ ಮಟ್ಟಕ್ಕೆ ಸರ್ಕಾರಗಳು ಇಳಿಯುತ್ತಿರುವಾಗ ಅನಿವಾರ್ಯವಾಗಿ ಅಂತಹ ಜನರು ಉಗ್ರ ರೂಪದ ಹೋರಾಟಗಳಿಗೆ ಇಳಿಯುತ್ತಿದ್ದಾರೆ. ಕರ್ನಾಟಕದ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲೂ ಗಿರಿಜನರು ಹಿಂದುಳಿದವರು ಈ ರೀತಿಯ ಉಗ್ರ ಪ್ರತಿಭಟನೆಗಳಿಗೆ ಇಳಿದಿದ್ದಾರೆ. ಅದಕ್ಕೆ ಕಾರಣ ಬಲವಂತದ ಒಕ್ಕಲೆಬ್ಬಿಸುವಿಕೆ ಹಾಗೂ ಸಾಮಾಜಿಕ ಆರ್ಥಿಕ ಅಭದ್ರತೆಗಳೇ ಆಗಿವೆ.

> **ಈಗ ಭಾರತ ಸರ್ಕಾರ ಮಾವೋವಾದಿಗಳಿಂದ ಪ್ರದೇಶಗಳನ್ನು ಬಿಡಿಸಿಕೊಳ್ಳುವ ಕಾರಣ ನೀಡಿ ಆಪರೇಷನ್ ಗ್ರೀನ್ ಹಂಟ್ ಆಪರೇಷನ್ ಗೋದಾವರಿ ಆಪರೇಷನ್ ಲಾಲ್‌ಗಡ್‌ಗಳಂತಹ ಸೇನಾ ಕಾರ್ಯಾಚರಣೆಗಳನ್ನು ಮಾಡುವುದರ ಮೂಲಕ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿವೆ. ಇದು ಆದಿವಾಸಿ ದಲಿತ ಜನ ಸಾಮಾನ್ಯರ ಮೇಲೆ ನೇರವಾಗಿ ಕೇಂದ್ರೀಕರಿಸಲ್ಪಡುತ್ತವೆ. ತನ್ನದೇ ಪ್ರಜೆಗಳ ಮೇಲೆ ಸರ್ಕಾರವೊಂದು ಈ ರೀತಿ ಸೇನಾ ಕಾರ್ಯಾಚರಣೆ ನಡೆಸಿ ಅವರ ದನಿಗಳನ್ನು ಹತ್ತಿಕ್ಕುವ ಕಾರ್ಯದಲ್ಲಿ ತೊಡಗುತ್ತಿರುವುದು ಪ್ರಜಾತಾಂತ್ರಿಕವಾದುದಲ್ಲ. ಅಲ್ಲದೆ ಈ ರೀತಿಯ ಸೇನಾ ಕ್ರಮಗಳು, ಅಂತರ್ಯುದ್ಧವಾಗಿ ಪರಿಣಮಿಸಿ ಬೇರೆಡೆಗೂ ವಿಸ್ತರಿಸುವ ಸಾಧ್ಯತೆಗಳೂ ಇವೆ. ಆಪರೇಷನ್ ಲಾಲ್‌ಗಡದ ನಂತರ PSBJC ಸಶಸ್ತ್ರ ಮಿಲಿಷಿಯಾ ಪಡೆಯನ್ನು ಸ್ಥಾಪಿಸಿಕೊಂಡು ಕಾದಾಡುತ್ತಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. ಇಂತಹವುಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ದೇಶ–ಜನರ ಮೇಲೆ ಗಂಭೀರ ಪರಿಣಾಮಗಳು ಉಂಟಾಗುತ್ತವೆ.**

ಈ ರೀತಿ ಉಗ್ರ ರೂಪ ತಾಳಿ ಪ್ರಾಣ ಭಯವನ್ನೂ ಲೆಕ್ಕಿಸದೆ ಹೋರಾಟಕ್ಕ ಇಳಿಯಲು ಇರುವ ಕಾರಣಗಳೇನು ಎಂಬುದನ್ನು ಸರ್ಕಾರಗಳು ನೋಡಬೇಕು. ಅದು ನಿಸ್ಸಂಶಯವಾಗಿ ಈ ಜನರ ಮೇಲಾಗುತ್ತಿರುವ ನಿರಂತರ ಶೋಷಣೆ, ದಮನ ದೌರ್ಜನ್ಯಗಳು, ಅವಕಾಶ ವಂಚನೆ, ಬದುಕುವ ಹಕ್ಕಿನ ಹರಣಗಳೇ ಆಗಿವೆ. ಹೆತ್ತ ಮಕ್ಕಳೇ ಆದರೂ ತಮಗೆ ಅನ್ಯಾಯವಾದಾಗ ಹೆತ್ತವರ ವಿರುದ್ಧವೇ ತಿರುಗಿ ಬೀಳುವುದನ್ನು ನಾವು ನೋಡುತ್ತಿರುವಾಗ ನಿರಂತರವಾಗಿ ಅತ್ಯಂತ ಕೆಳಮಟ್ಟದಲ್ಲಿ ಬದುಕುತ್ತಿರುವ ಜನರು ತಮ್ಮ ಮೇಲಾಗುತ್ತಿರುವ ನಿರಂತರ ಶೋಷಣೆ, ಅವಕಾಶ ವಂಚನೆ ಕೊನೆಗೆ ಬದುಕಲೂ ಸಾಧ್ಯವಾಗದಂತೆ ಮಾಡುವುದನ್ನು ವಿರೋಧಿಸಿ ಉಗ್ರ ರೂಪದ ಪ್ರತಿಭಟನೆಗಳಿಗೆ ಇಳಿಯುವುದು ಸಹಜವೇ ಆಗಿದೆ.

ಈ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವ ಬದಲಿಗೆ ಸರ್ಕಾರಗಳು ಪೊಲೀಸ್, ಪ್ಯಾರಾಮಿಲಿಟರಿ ಪಡೆಗಳನ್ನು ಕಳುಹಿಸಿ ಅಮಾಯಕ ಜನರನ್ನು ಕಗ್ಗೊಲೆ ಮಾಡುವ, ಬಂಧಿಸಿ ಚಿತ್ರಹಿಂಸೆ ಮಾಡುವ, ಮಹಿಳೆಯರ ಮೇಲೆ ಅತ್ಯಚಾರಗಳನ್ನು ನಡೆಸುವ, ಹಳ್ಳಿಗಳನ್ನೇ ಸುಟ್ಟು ಹಾಕುವ, ಹಳ್ಳಿಗಳನ್ನೆಲ್ಲಾ ಖಾಲಿ ಮಾಡಿಸಿ, ಅಲ್ಲಿನ ಜನರನ್ನು ಕ್ಯಾಂಪುಗಳಲ್ಲಿ ಕೂಡಿಹಾಕುವ, ಕ್ಯಾಂಪುಗಳಲ್ಲೂ ಕೂಡ ಕೊಲೆ, ಕಣ್ಮರೆ, ಅತ್ಯಾಚಾರಗಳನ್ನು ನಡೆಸುವ, ಆದಿವಾಸಿ ಬಡಜನರ ಮೇಲೆ ಅಂತಹ ಜನರನ್ನೇ ಎತ್ತಿಕಟ್ಟಿ ಸೆಲ್ವಜುಡುಂ, ಸೇಂದ್ರದಂತಹ ಪಡೆಗಳನ್ನು ಮಾಡಿ ಮಾರಣಾಂತಿಕ ದಾಳಿಗಳನ್ನು ನಡೆಸುವ ಕಾರ್ಯಗಳಿಗೆ ಸರ್ಕಾರಗಳು ಇಳಿಯುತ್ತಿವೆ. ಇಂತಹವುಗಳು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಯಾವುದೇ ರೀತಿಯಲ್ಲೂ ಕಾಣಿಸಬಾರದಿತ್ತು. ಇಂತಹ ಕಾರ್ಯಗಳನ್ನು ಯಾರೂ ಕೂಡ ಸಮರ್ಥಿಸಲು ಸಾಧ್ಯವಾಗುವುದಿಲ್ಲ.

ಈಗ ಭಾರತ ಸರ್ಕಾರ ಮಾವೋವಾದಿಗಳಿಂದ ಪ್ರದೇಶಗಳನ್ನು ಬಿಡಿಸಿಕೊಳ್ಳುವ ಕಾರಣ ನೀಡಿ ಆಪರೇಷನ್ ಗ್ರೀನ್ ಹಂಟ್ ಆಪರೇಷನ್ ಗೋದಾವರಿ ಆಪರೇಷನ್ ಲಾಲ್‌ಗಡ್‌ಗಳಂತಹ ಸೇನಾ ಕಾರ್ಯಾಚರಣೆಗಳನ್ನು ಮಾಡುವುದರ ಮೂಲಕ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿವೆ. ಇದು ಆದಿವಾಸಿ ದಲಿತ ಜನ ಸಾಮಾನ್ಯರ ಮೇಲೆ ನೇರವಾಗಿ ಕೇಂದ್ರೀಕರಿಸಲ್ಪಡುತ್ತವೆ. ತನ್ನದೇ ಪ್ರಜೆಗಳ ಮೇಲೆ ಸರ್ಕಾರವೊಂದು ಈ ರೀತಿ ಸೇನಾ ಕಾರ್ಯಾಚರಣೆ ನಡೆಸಿ ಅವರ ದನಿಗಳನ್ನು ಹತ್ತಿಕ್ಕುವ ಕಾರ್ಯದಲ್ಲಿ ತೊಡಗುತ್ತಿರುವುದು ಪ್ರಜಾತಾಂತ್ರಿಕವಾದುದಲ್ಲ. ಅಲ್ಲದೆ ಈ ರೀತಿಯ ಸೇನಾ ಕ್ರಮಗಳು, ಅಂತರ್ಯುದ್ಧವಾಗಿ ಪರಿಣಮಿಸಿ ಬೇರೆಡೆಗೂ ವಿಸ್ತರಿಸುವ ಸಾಧ್ಯತೆಗಳೂ ಇವೆ. ಆಪರೇಷನ್ ಲಾಲ್‌ಗಡದ ನಂತರ PSBJC ಸಶಸ್ತ್ರ ಮಿಲಿಷಿಯಾ ಪಡೆಯನ್ನು ಸ್ಥಾಪಿಸಿ

ಕೊಂಡು ಕಾದಾಡುತ್ತಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. ಇಂತಹವುಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ದೇಶ ಹಾಗೂ ಜನರ ಮೇಲೆ ಗಂಭೀರ ಪರಿಣಾಮಗಳು ಉಂಟಾಗುತ್ತವೆ. ಜನರ ಮೂಲಭೂತ ಸಮಸ್ಯೆಗಳು ಹಾಗೂ ಅವರ ದನಿಗಳನ್ನು ಕಡೆಗಣಿಸಿ ನಡೆಸುವ ಸೇನಾ ಕಾರ್ಯಾಚರಣೆಗಳು ಯಶಸ್ವಿಯಾಗುವುದಿಲ್ಲ. ಪ್ರಜಾತಾಂತ್ರಿಕ ವ್ಯವಸ್ಥೆಯೊಂದರಲ್ಲಿ ಆ ರೀತಿ ಜನರ ಮೇಲೆ ನಡೆಯುವ ಸೇನಾ ಕಾರ್ಯಚರಣೆಗಳು ಒಪ್ಪತಕ್ಕಂತಹವಲ್ಲ.

ಹಾಗಾಗಿ ಆದಿವಾಸಿ ದಲಿತ ಹಿಂದುಳಿದ ಜನರನ್ನು ನೇರವಾಗಿ ಗುರಿ ಮಾಡುವ ಕಾರ್ಯಾಚರಣೆಗಳನ್ನು ಕೂಡಲೇ ನಿಲ್ಲಿಸಿ ಜನರ ಸಮಸ್ಯೆಗಳನ್ನು ಪರಿಹರಿಸಿ ಅವರ ಬದುಕಿಗೆ ಭದ್ರತೆ ಕಲಿಸಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

ಹಕ್ಕೊತ್ತಾಯಗಳು

* ಭಾರತ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಸೇರಿಕೊಂಡು ನಡೆಸಲು ಹೊರಟಿರುವ 'ಆಪರೇಷನ್ ಗ್ರೀನ್ ಹಂಟ್' 'ಆಪರೇಷನ್ ಗೋದಾವರಿ' ಇತ್ಯಾದಿ ಹೆಸರಿನ ಜನರ ಮೇಲಿನ ಯುದ್ಧವನ್ನು ನಿಲ್ಲಿಸಬೇಕು.
* ದಲಿತರು ಆದಿವಾಸಿಗಳು, ಭೂ ಹೀನ ನಿರ್ಗತಿಕ ಜನರು ನೆಲೆಸಿರುವ ಪ್ರದೇಶಗಳಿಂದ ಸೇನೆ ಹಾಗೂ ಪೊಲೀಸ್ ಪಡೆಗಳನ್ನು ಕೂಡಲೇ ವಾಪಸ್ ಕರೆಸಿಕೊಳ್ಳಬೇಕು.
* ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹಾಗೂ ಜನರು ಪರಿಹರಿಸಲು ಒತ್ತಾಯಿಸುತ್ತಿರುವ ಸಮಸ್ಯೆಗಳನ್ನು ಆದ್ಯತೆಯಾಗಿಟ್ಟು ಪರಿಹರಿಸಬೇಕು.
* ದೇಶದ ಅಮೂಲ್ಯವಾದ ಖನಿಜ, ಅರಣ್ಯ, ನೀರು ಮುಂತಾದವನ್ನು ವಿದೇಶಿ ಹಾಗೂ ದಲ್ಲಾಳಿ ಕಂಪನಿಗಳು ಲೂಟಿ ಮಾಡಲು ಬಿಡಬಾರದು.
* ಜನರು ಹಾಗೂ ಪ್ರಕೃತಿ ವಿನಾಶಕ್ಕೆ ಕಾರಣವಾಗುವ ಯಾವುದೇ ಭಾರೀ ಯೋಜನೆಗಳನ್ನು ಕೈಬಿಟ್ಟು ಜನರು ಹಾಗೂ ಪ್ರಾಕೃತಿಕ ಪರಿಸರಕ್ಕೆ ಪೂರಕವಾಗುವ ಸಣ್ಣ ಮಧ್ಯಮ ಗಾತ್ರದ ಯೋಜನೆಗಳನ್ನು ಜಾರಿಗೊಳಿಸಬೇಕು.
* ನವ ವಸಾಹತುಗಳಾಗಿ ಮಾರ್ಪಡುವ ಜನರ ಬದುಕು ಹಾಗೂ ಪ್ರಕೃತಿಕ ಹಾನಿಗೆ ಕಾರಣವಾಗುವ (SEZ)ಗಳಂತಹ ಯೋಜನೆಗಳನ್ನು ರದ್ದು ಮಾಡಬೇಕು.
* ದೇಶದ ದಲಿತರು, ಆದಿವಾಸಿಗಳು, ಬಹುಸಂಖ್ಯಾತ ಜನರು ಅನುಭವಿಸುತ್ತಿರುವ ತೀವ್ರತರವಾದ ಶೋಷಣೆ ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸಲು ವೈಜ್ಞಾನಿಕವಾಗಿ ಭೂಮಿ ಹಂಚಿಕೆ ನಡೆಯಬೇಕು.
* ಹೆಚ್ಚುವರಿ ಭೂಮಿ ಹಾಗೂ ಇನ್ನಿತರ ಅಕ್ರಮ ಸಂಪತ್ತನ್ನು ವಶಪಡಿಸಿಕೊಂಡು ಎಲ್ಲಾ ಜನರಿಗೆ ಸಿಗುವಂತೆ ಮಾಡಬೇಕು.
* ಈಗಾಗಲೇ ಹತ್ತು ಹಲವು ಯೋಜನೆಗಳ ನೆಪದಲ್ಲಿ ನಿರ್ಗತಿಕರಾಗಿ ಬದುಕುವ ಹಾಗೂ ಆದಾಯ ಮೂಲಗಳನ್ನು ಕಳೆದುಕೊಂಡಿರುವ ಲಕ್ಷಾಂತರ ಜನರಿಗೆ ಕೂಡಲೇ ಭೂಮಿ ಇತರ ಎಲ್ಲಾ ಸವಲತ್ತು ಒದಗಿಸಿಕೊಡಬೇಕು.

○ ಯುದ್ಧ ವಿರೋಧಿ ಜನರ ವೇದಿಕೆ
(50 ಜನಪರ ಸಂಘಟನೆಗಳ ಒಕ್ಕೂಟ)

ಹೆಣ ಹೊತ್ತ ಮನೆಯಲಿ



ನೋವಿನ ಒಳ ಮುಖಕೆ
ಅಭಿಮುಖ ಕಣ್ಣ ಹನಿ

ದೃಷ್ಟಿಯಾಚಿಗಿನ ನಿರ್ವಚನ
ಹೃದಯವೇ ಹರಣ
ಕರುಳೇ ಮರಣ!

ವೇದನೆಗೆ ನಾಡಿ
ಅಂತಃ ಕರಣ
ಸ್ಪರ್ಶಕೆ
ಶೀತಲವೇಧ ಮನ!!

ಹೋಗುತ್ತದೆ ಬಿದ್ದು ನಾಲಗೆ
ವೇದನೆಗೆ
ಕೊರಳು ಮೌನ ದಾಚೆಗೆ!

ಗಾಯವಿಲ್ಲದ ಎದೆ
ನಿಡುಸುಯ್ಯುವ ನಿಟ್ಟುಸಿರು
ಹೋಮಾಗ್ನಿ ಮೆದುಳು

ಎಣ್ಣೆ ಗಂಧ ಬೆಂಕಿ ನಾಲಗೆ
ಅಂದುಕೊಂಡದ್ದೆಲ್ಲಿ ಬವರ!
ತಾವಾಂಶ ಕವಚಿಕೊಂಡದ್ದೆಲ್ಲಿ
ವಾಸೆ ಕಾಡಿಗೆಯಲಿ ಕವಳ
ಸೊರಗಿದೆ ದೀಪ
ಹೆಣ ಹೊತ್ತ ಮನೆಯಲಿ!

○ ಟಿ. ಎಸ್. ರಾಜೇಂದ್ರ ಪ್ರಸಾದ್.

'ವಂದೇ ಮಾತರಂ': ಹಿಂದೂ ರಾಷ್ಟ್ರ, ಮುಸ್ಲಿಂ ದ್ವೇಷ, ಬ್ರಿಟಿಷ್ ಭಕ್ತಿ!

ಶಿವಸುಂದರ್

> **"ವಂದೇ ಮಾತರಂ" ಹಾಡಿನ ರಾಜಕಾರಣವನ್ನು ಗಮನಿಸುವ ಮುನ್ನ ಇದನ್ನು ಹಾಡಲು ನಿರಾಕರಿಸುತ್ತಿರುವ ಕೆಲವು ಮುಸ್ಲಿಂ ಸಂಘಟನೆಗಳು ಕೊಡುತ್ತಿರುವ ಕಾರಣಗಳು ಸಕಾರಣವಾದದ್ದೇ ಎಂದು ನೋಡಬೇಕು. ಈ ಸಂಘಟನೆಗಳ ಆಕ್ಷೇಪ ಈ ದೇಶಕ್ಕೆ ಬದ್ಧತೆ ತೋರುವ ಗೀತೆಯನ್ನು ಹಾಡುವುದು ಇಸ್ಲಾಮಿಗೆ ವಿರೋಧ ಎಂಬುವುದಲ್ಲವೇ ಅಲ್ಲ. ಏಕೆಂದರೆ ಈವರೆಗೆ ಮುಸ್ಲಿಮರು ರಾಷ್ಟ್ರಗೀತೆಯಾದ "ಜನಗಣ ಮನ" ಹಾಡಬಾರದೆಂದು ಯಾವ ಮುಸ್ಲಿಂ ಸಂಘಟನೆಗಳೂ ಫತ್ವಾ ಹೊರಡಿಸಿರಲಿಲ್ಲ. ಅಷ್ಟು ಮಾತ್ರವಲ್ಲ ದೇಶದೆಲ್ಲೆಡೆ ಎಲ್ಲಾ ಶಾಲೆಗಳಲ್ಲೂ ಮುಸ್ಲಿಮ್ ವಿದ್ಯಾರ್ಥಿಗಳು ಹಿಂದೂ ವಿದ್ಯಾರ್ಥಿಗಳಷ್ಟೇ ಬದ್ಧರಾಗಿ "ಜನ ಗಣ ಮನ" ಹಾಡುತ್ತಿದ್ದಾರೆ. ದೇಶ ಭಕ್ತಿಯ ಲಾಂಛನಗಳು ಧರ್ಮಾತೀತವಾಗಿದ್ದಷ್ಟು ಕಾಲ ಅದರ ಬಗ್ಗೆ ಯಾರಿಗೂ ಆಕ್ಷೇಪಣೆ ಇರಲು ಸಾಧ್ಯವಿಲ್ಲ.**

ಉತ್ತರ ಪ್ರದೇಶದ ದೇವಬಂದ್ ಮುಸ್ಲಿಂ ಸಂಘಟನೆಯೊಂದು "ವಂದೇ ಮಾತರಂ" ಹಾಡುವುದರ ವಿರುದ್ಧ ಫತ್ವಾ ಹೊರಡಿಸಿರುವುದನ್ನು ವಿರೋಧಿಸಿ ದೇಶಾದ್ಯಂತ ಹೇಳಿಕೆಗಳು ಮತ್ತು ಪ್ರತಿಹೇಳಿಕೆಗಳು ಪ್ರಾರಂಭವಾಗಿವೆ. ನಿರೀಕ್ಷೆಯಂತೆ ಇಂಥಾ ಒಂದು ಸದವಕಾಶಕ್ಕಾಗಿಯೇ ಕಾಯುತ್ತಿದ್ದ ಸಂಘಪರಿವಾರದ ಹಲವು ಮಂಗಗಳು ವಂದೇ ಮಾತರಂ ಹಾಡದವರನ್ನು ದೇಶ ಬಿಟ್ಟು ಓಡಿಸಬೇಕೆಂದು ಕೂಗಾಡುತ್ತಿದ್ದಾರೆ. ಆದರೆ ಹಲವು ಮುಸ್ಲಿಂ ಸಂಘಟನೆಗಳೇ ವಂದೇ ಮಾತರಂ ವಿರುದ್ಧದ ಫತ್ವಾವನ್ನು ವಿರೋಧಿಸಿದ್ದಾರಲ್ಲದೆ ಉತ್ತರ ಪ್ರದೇಶದಲ್ಲಿ ಮುಸ್ಲಿಂ ಸಂಘಟನೆಯೊಂದು ಸಾಮೂಹಿಕವಾಗಿ ವಂದೇ ಮಾತರಂ ಹಾಡಿದ್ದಾರೆ. ಇಷ್ಟಾದರೂ ಇಡೀ ಮುಸ್ಲಿಂ ಸಮುದಾಯವನ್ನು ಸಂಘ ಪರಿವಾರದವರು ಮತ್ತು ಮಾಧ್ಯಮಗಳು ದೇಶದ್ರೋಹಿಗಳೆಂದು ಬಣ್ಣಿಸುವುದು ತಪ್ಪಿಲ್ಲ.

ಏಕೆಂದರೆ ಮುಸ್ಲಿಮರ ವಿರುದ್ಧ ಸಂಘಪರಿವಾರದ ರಾಜಕಾರಣ ಬಿತ್ತಿರುವ ಪೂರ್ವಗ್ರಹ ಅತ್ಯಂತ ಆಳವಾದದ್ದು. ಇದು ಎಷ್ಟು ಆಳವಾದದ್ದೆಂದರೆ ಈ "ವಂದೇ ಮಾತರಂ" ಹಾಡಿನ ಒಟ್ಟು ಸಾರಾಂಶವನ್ನಾಗಲೀ, ಆ ಹಾಡು ಇರುವ "ಆನಂದ ಮಠ" ಕಾದಂಬರಿಯ ಒಟ್ಟಾರೆ ತಿರುಳನ್ನಾಗಲೀ, ಅದನ್ನು ಬರೆದ ಬಂಕಿಮಚಂದ್ರ ಚಟ್ಟೋಪಾಧ್ಯಾಯರ ರಾಜಕೀಯವನ್ನಾಗಲೀ, ಆ ಕಾದಂಬರಿ ರಚನೆಯಾದ ಚಾರಿತ್ರಿಕ ಸಂದರ್ಭವನ್ನಾಗಲೀ, ಮತ್ತು ಅದನ್ನು ಈಗ ಬಳಸುತ್ತಿರುವವರ ರಾಜಕಾರಣ ವನ್ನಾಗಲೀ ಕಿಂಚಿತ್ತೂ ತಿಳಿದುಕೊಳ್ಳದೆ ಪರಿವಾರದವರ ಜೊತೆ ಹಲವಾರು ಪ್ರಗತಿಪರರೂ ಮುಸ್ಲಿಮರ ವಿರುದ್ಧ ಫತ್ವಾ ಹೊರಡಿಸುತ್ತಿದ್ದಾರೆ. ಇತ್ತೀಚೆಗೆ ಮೂಡಬಿದ್ರೆಯ ಆಳ್ವಾಸ್ ನುಡಿಸಿರಿಯ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿದ್ದ ಸಾಹಿತಿ ಹಂ.ಪ, ನಾಗ ರಾಜಯ್ಯನವರು ವಂದೇ ಮಾತರಂ ಹಾಡದವರು ಅರಬ್ಬಿ ಸಮುದ್ರಕ್ಕಾದರೂ ಬೀಳಲಿ, ಇಲ್ಲವೇ ವಿಮಾನ ಹತ್ತಿ ದೇಶ ಬಿಟ್ಟು ಹೋಗಲಿ ಎಂದು ಪಕ್ಕಾ ಪ್ರಮೋದ್ ಮುತಾಲಿಕ್ ಶೈಲಿಯಲ್ಲಿ ಫತ್ವಾ ಹೊರಡಿಸಿದ್ದರೆ, ಅನಂತ ಮೂರ್ತಿಗಳಂತವರೂ ಸಹ ಮುಸ್ಲಿಮರು ವಂದೇ ಮಾತರಂ ಹಾಡುವುದುದರಲ್ಲೀ ಏನೂ ತಪ್ಪಿಲ್ಲ ಎಂಬ ಫರ್ಮಾನು ಹೊರಡಿಸಿದ್ದಾರೆ.

ಬಂಕಿಮ ಚಂದ್ರ ಚಟರ್ಜಿ

ಹೀಗೆ ವಂದೇ ಮಾತರಂ ಅನ್ನು ಮುಸ್ಲಿಮರು ಏಕೆ ಹಾಡಲು ನಿರಾಕರಿಸುತ್ತಿದ್ದಾರೆ ಎಂದು ತಿಳಿದುಕೊಳ್ಳುವ ಮುಂಚೆಯೇ ಅವರ ವಿರುದ್ಧ ಅಂತಿಮ ತೀರ್ಮಾನ ಘೋಷಿಸಲಾಗಿದೆ. ಈ ತೀರ್ಮಾನಕ್ಕೆ ತಲುಪಲು ಇರುವ ಎರಡು ಪ್ರಮುಖ ಕಾರಣ "ವಂದೇ ಮಾತರಂ" ಈ ದೇಶವನ್ನು ಬ್ರಿಟಿಷ್ ವಸಾಹತುಶಾಹಿ ವಿರೋಧೀ ದೇಶಭಕ್ತಿ ಆಶಯದಿಂದ ಬರೆಯಲಾಗಿದೆ ಎಂಬ ತಿಳವಳಿಕೆ. ಎರಡನೆಯದು ಈ ದೇಶಕ್ಕೆ ಮುಸ್ಲಿಮರು ಎಂದಿಗೂ ಬೇಷರತ್ ನಿಷ್ಠೆಯನ್ನು ತೋರುವುದಿಲ್ಲ ಎಂಬ ಪೂರ್ವಾಗ್ರಹ. ಎರಡು ತಿಳವಳಿಕೆಗಳು ಸಹ ತಪ್ಪೇ!

"ವಂದೇ ಮಾತರಂ" ಹಾಡಿನ ರಾಜಕಾರಣವನ್ನು ಗಮನಿಸುವ ಮುನ್ನ ಇದನ್ನು ಹಾಡಲು ನಿರಾಕರಿಸುತ್ತಿರುವ ಕೆಲವು ಮುಸ್ಲಿಂ ಸಂಘಟನೆಗಳು ಕೊಡುತ್ತಿರುವ ಕಾರಣಗಳು ಸಕಾರಣವಾದದ್ದೇ ಎಂದು ನೋಡಬೇಕು. ಈ ಸಂಘಟನೆಗಳ ಆಕ್ಷೇಪ ಈ ದೇಶಕ್ಕೆ ಬದ್ಧತೆ ತೋರುವ ಗೀತೆಯನ್ನು ಹಾಡುವುದು ಇಸ್ಲಾಮಿಗೆ ವಿರೋಧ ಎಂಬುವುದಲ್ಲವೇ ಅಲ್ಲ. ಏಕೆಂದರೆ ಈವರೆಗೆ ಮುಸ್ಲಿಮರು ರಾಷ್ಟ್ರಗೀತೆಯಾದ "ಜನಗಣ ಮನ" ಹಾಡಬಾರದೆಂದು ಯಾವ ಮುಸ್ಲಿಂ ಸಂಘಟನೆಗಳೂ ಫತ್ವಾ ಹೊರಡಿಸಿರಲಿಲ್ಲ. ಅಷ್ಟು ಮಾತ್ರವಲ್ಲ ದೇಶದೆಲ್ಲೆಡೆ ಎಲ್ಲಾ ಶಾಲೆಗಳಲ್ಲೂ ಮುಸ್ಲಿಮ್ ವಿದ್ಯಾರ್ಥಿಗಳು ಹಿಂದೂ ವಿದ್ಯಾರ್ಥಿಗಳಷ್ಟೇ ಬದ್ಧರಾಗಿ "ಜನ ಗಣ ಮನ" ಹಾಡುತ್ತಿದ್ದಾರೆ. ದೇಶಭಕ್ತಿಯ ಲಾಂಛನಗಳು ಧರ್ಮಾತೀತವಾಗಿದ್ದಷ್ಟು ಕಾಲ ಅದರ ಬಗ್ಗೆ ಯಾರಿಗೂ ಆಕ್ಷೇಪಣೆ ಇರಲು ಸಾಧ್ಯವಿಲ್ಲ. ಅದರ ಬದಲಿಗೆ ದೇಶಭಕ್ತಿಯ ಲಾಂಛನಗಳು ಯಾವುದಾದರೂ ಒಂದು ಧರ್ಮದ ಹೇರಿಕೆಯ ಪರೋಕ್ಷ ಸಾಧನವಾದಾಗ ಅದು ಸಹಜವಾಗಿಯೇ ಅನುಮಾನಗಳನ್ನು ಮತ್ತು ವಿರೋಧಗಳನ್ನು ಹುಟ್ಟುಹಾಕುತ್ತದೆ.

"ವಂದೇ ಮಾತರಂ" ನಿಜಕ್ಕೂ ದೇಶಭಕ್ತಿಯನ್ನು ಅಂದರೆ ಬ್ರಿಟಿಷ್ ವಸಾಹತುಶಾಹಿಯ ವಿರುದ್ಧದ ವಿಮೋಚನೆಯ ಆಶಯವನ್ನು ಪ್ರತಿನಿಧಿಸುತ್ತದೆಯೇ ಎಂದು ನಂತರ ನೋಡೋಣ. ಈ ಸದ್ಯಕ್ಕೆ "ವಂದೇ ಮಾತರಂ" ಹಾಡು ಧರ್ಮಾತೀತವಾದ ರಾಷ್ಟ್ರಸೂಚಕ ಅಭಿ ವ್ಯಕ್ತಿಗಳನ್ನು ಹೊಂದಿದೆಯೇ ಎಂಬುದು ಪ್ರಶ್ನೆ. ಈಗ ಜನಪ್ರಿಯ ಗೊಂಡಿರುವ "ವಂದೇ ಮಾತರಂ" ಹಾಡಿನ ಮೊದಲೆರೆಡು ಚರಣಗಳು ದೇಶವನ್ನು ತಾಯಿಯೆಂದು ಪರಿಭಾವಿಸಿಸ್ತುತಿಸುತ್ತದೆಯಾದರೂ ನಂತರದ ಚರಣಗಳಲ್ಲಿ ಈ ತಾಯಿ ಹಿಂದೂಗಳು ಆರಾಧಿಸುವ ಕಾಳಿಯಾಗುತ್ತದೆ, ದುರ್ಗೆಯಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸಂಪೂರ್ಣ ಆಯುಧಪಾಣಿಯಾಗಿ ಯುದ್ಧ ಸನದ್ಧಳಾಗಿ ತನ್ನ ಮಕ್ಕಳಿಗೆ ಯುದ್ಧ ಮಾಡಲು ಕರೆ ಕೊಡುತ್ತಾಳೆ. ಯಾರ ಮೇಲೆ? "ಆನಂದ ಮಠ" ಕಾದಂಬರಿ ಸ್ಪಷ್ಟಪಡಿಸುವಂತೆ ಮುಸ್ಲಿಮರ ಮೇಲೆ ಹಿಂದೂಗಳು ಯುದ್ಧ ಸಾರುವುದಕ್ಕೆ ಸ್ಫೂರ್ತಿ ಕೊಡುವ ಯುದ್ಧಗೋಷವೇ "ವಂದೇ ಮಾತರಂ"!

ದೇಶವನ್ನು ದೇವರಂತೆ, ಅದೂ ಹಿಂದೂ ದೇವರಂತೆ ಪರಿಭಾ ವಿಸುವ ಬಗ್ಗೆ ಮುಸ್ಲಿಮರಿಗೆ ಆಕ್ಷೇಪಣೆ ಇದ್ದರೆ ಅದರಲ್ಲಿ ತಪ್ಪೇನು? ಅದರ ಹಿಂದೆ ಎಲ್ಲಾ ಧರ್ಮೀಯರಿಗೂ ಸೇರಿದ ಈ ದೇಶವನ್ನು ಕೇವಲ ಹಿಂದೂ ಧರ್ಮೀಯರ ಸ್ವತ್ತೆಂಬೆಂತೆ ಚಿತ್ರಿಸುವ ರಾಜಕಾರಣವನ್ನು ಕಂಡರೆ ಅದರಲ್ಲಿ ತಪ್ಪೇನಿದೆ? ದೇಶಭಕ್ತಿಗೂ, ಧರ್ಮಕ್ಕೂ ನಂಟಿಲ್ಲದೆ, ಈ ದೇಶದ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಈ ದೇಶದ ಮುಸ್ಲಿಮರು

ಧಾರ್ಮಿಕವಾಗಿ ಇಸ್ಲಾಮನ್ನು ಅನುಸರಿಸುತ್ತಲೇ ಯಾವ ಹಿಂದೂಗಳಿಗೂ ಕಮ್ಮಿಯಿಲ್ಲದಷ್ಟು ದೇಶಭಕ್ತರಾಗಿಯೇ ಹೋರಾಟ ನಡೆಸಿದ್ದರು. ಆದರೆ ದೇಶಭಕ್ತಿ ಬೇರೆ. ಧರ್ಮ ಶ್ರದ್ಧೆ ಬೇರೆ. ಒಂದು ಪ್ರಜಾತಾಂತ್ರಿಕ ದೇಶದಲ್ಲಿ ಹಲವು ಬಗೆಯ ಧಾರ್ಮಿಕ ಶ್ರದ್ಧೆಯನ್ನು ಆಚರಿಸುವ ಹಕ್ಕು ಇದ್ದೇ ಇರುತ್ತದೆ. ಭಾರತದ ಸಂವಿಧಾನ ಸಹ ಈ ದೇಶದ ನಾಗರೀಕರಿಗೆ ತಮಿಗಿಷ್ಟ ಬಂದ ಧಾರ್ಮಿಕ ಶ್ರದ್ಧೆ ಯನ್ನು ಆಚರಿಸುವ ಹಕ್ಕನ್ನು ನೀಡುತ್ತದೆ.

ಇಸ್ಲಾಮ್ ಶ್ರದ್ಧೆಯು ಏಕದೇವೋಪಾಸನೆಯಲ್ಲಿ ನಂಬಿಕೆಯಿಡುತ್ತದೆ. ಮತ್ತು ವಿಗ್ರಹಾರಾಧನೆಯನ್ನು ವಿರೋಧಿಸುತ್ತದೆ. ಹೀಗಾಗಿ "ವಂದೇ ಮಾತರಂ"ನಲ್ಲಿ ಪ್ರತಿನಿಧಿಸಲ್ಪಟ್ಟಿರುವ ದೈವದ ಕಲ್ಪನೆ-ಅದರ ಸ್ತುತಿ ಇಸ್ಲಾಮಿಕ್ ನಂಬಿಕೆಗಳಿಗೆ ವಿರುದ್ಧವಾಗುತ್ತದೆ. ಆದ್ದರಿಂದಲೇ ಒಂದು ಸೆಕ್ಯುಲಾರ್ ದೇಶದ ಲಾಂಛನಗಳು ಧರ್ಮಾತೀತವಾಗಿರಬೇಕು. ಆದ್ದರಿಂದಲೇ "ವಂದೇ ಮಾತರಂ" ಹಾಡಲು ಕೆಲವು ಮುಸ್ಲಿಮರಿಗಿರಬಹುದಾದ ಆಕ್ಷೇಪಣೆಯನ್ನು "ವಂದೇ ಮಾತರಂ"ನಲ್ಲಿರುವ ಹಿಂದೂ ಧರ್ಮ ಸೂಚಕಗಳಲ್ಲಿ ಕಾಣಬೇಕೇ ವಿನಃ ಮುಸ್ಲಿಮರ ದೇಶಭಕ್ತಿಯಲ್ಲಲ್ಲ.

ಆದರೆ ವಸಾಹತುಶಾಹಿ ವಿರೋಧೀ ಹೋರಾಟದಲ್ಲಿ ಲಕ್ಷಾಂತರ ಮಂದಿ ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಸಹ "ವಂದೇ ಮಾತರಂ" ಘೋಷಿಸುತ್ತಾ ಭಾಗವಹಿಸಿದ್ದು ನಿಜ. ಆಗ ಆ ಹೋರಾಟಗಾರರ ಕಲ್ಪನೆಯಲ್ಲಿ "ವಂದೇ ಮಾತರಂ" ಹಾಡು ಒಂದು ಅಮೂರ್ತವಾದ ಸ್ವಾತಂತ್ರ್ಯದ ಆಶಯವಾಗಿತ್ತಷ್ಟೆ. ಆದರೆ ಸ್ವಾತಂತ್ರ್ಯ ಹೋರಾಟದಲ್ಲಿ "ವಂದೇ ಮಾತರಂ" ಹಾಕಿದವರ ದೇಶಭಕ್ತಿ ಹೇಗೆ ಪ್ರಶ್ನಾತೀತವಾಗಿರಲಿಲ್ಲವೋ "ಅಲ್ಲಾ ಹೋ ಅಕ್ಬರ್" ಎಂದವರ ರಾಷ್ಟ್ರಭಕ್ತಿಯೂ ಪ್ರಶ್ನಾತೀತವಾಗಿರಲಿಲ್ಲ. ಆದರೂ "ಅಲ್ಲಾ ಹೋ ಅಕ್ಬರ್" ಎಷ್ಟು ಧರ್ಮ ಸೂಚಕವೋ "ವಂದೇ ಮಾತರಂ" ಸಹ ಅಷ್ಟೇ ಧರ್ಮ ಸೂಚಕ. ಆದ್ದರಿಂದಲೇ ಒಂದು ಸೆಕ್ಯುಲಾರ್ ದೇಶದಲ್ಲಿ "ಅಲ್ಲಾ ಹೋ ಅಕ್ಬರ್" ಸಹ ದೇಶಭಕ್ತಿ ಸೂಚಕ ಘೋಷಣೆಯಾಗಬಾರದು. "ವಂದೇ ಮಾತರಂ" ಸಹ ದೇಶ ಭಕ್ತಿ ಸೂಚಕ ಘೋಷಣೆಯಾಗಬಾರದು.

ಇವೆಲ್ಲದರಾಚೆಗೆ ಉಳಿಯುವ ಅಸಲಿ ಪ್ರಶ್ನೆಯೇನೆಂದರೆ "ವಂದೇ ಮಾತರಂ" ನಿಜಕ್ಕೂ ಬ್ರಿಟಿಷ್ ವಸಾಹತುಶಾಹಿ ವಿರೋಧೀ ಸ್ವಾತಂತ್ರ್ಯ ಪ್ರೇಮೀ ಗೀತೆಯೋ ಅಥವಾ ಕೇವಲ ಮುಸ್ಲಿಂ ವಿರೋಧಿ ಮತ್ತು ಬ್ರಿಟಿಷ್ ಓಲೈಕೆಯನ್ನೂ ಮಾಡುವ ಹಿಂದೂತ್ವ ರಾಜಕಾರಣದ ಗೀತೆಯೋ ಎಂಬುದು?

"ವಂದೇ ಮಾತರಂ" ಹಾಡನ್ನು ಬಂಗಾಳದ ಪ್ರಸಿದ್ಧ ಸಾಹಿತಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರವರು 1870ರಲ್ಲೇ ರಚಿಸಿದರೂ ಅದು ಈಗಿರುವ ರೂಪದಲ್ಲಿ ತಿದ್ದುಪಡಿಗೊಂಡು ಅವರ "ಆನಂದ ಮಠ" ಕಾದಂಬರಿಯಲ್ಲಿ ಸೇರ್ಪಡೆಯಾದದ್ದು 1881ರಲ್ಲಿ. ಆನಂದಮಠ ಕಾದಂಬರಿಯ ತಿರುಳನ್ನು ಅರ್ಥಮಾಡಿಕೊಳ್ಳದೆ "ವಂದೇ ಮಾತರಂ" ಗೀತೆಯನ್ನಾಗಲೀ, ಅದನ್ನು ಕಡ್ಡಾಯ ಮಾಡಲು ಈಗ 'ಚಳವಳಿ' ಮಾಡುತ್ತಿರುವ ಹಿಂದೂತ್ವವಾದಿಗಳ ನಿಜವಾದ ಉದ್ದೇಶವನ್ನಾಗಲೀ ಅರ್ಥಮಾಡಿಕೊಳ್ಳಲಾಗುವುದಿಲ್ಲ. "ಆನಂದಮಠ" ಕಾದಂಬರಿ ಬ್ರಿಟಿಷರ ಆಡಳಿತದಿಂದಾಗಿ ಬಂಗಾಳವು ಹಿಂದೆಂದೂ ಕಾಣದಷ್ಟು ತೀವ್ರವಾಗಿ ಬರಗಾಲಕ್ಕೆ ತುತ್ತಾಗಿದ್ದ ಕಾಲಘಟ್ಟದಿಂದ ಪ್ರಾರಂಭವಾಗುತ್ತದೆ. ಬರಗಾಲದಿಂದ ತನ್ನ ಹಿಂದಿನ ಎಲ್ಲಾ ವೈಭವವನ್ನು ಕಳೆದುಕೊಂಡು ಹೆಂಡತಿ ಮತ್ತು ಮಗಳೊಂದಿಗೆ ಬದುಕನ್ನು ಅರಸುತ್ತಾ ಗುಳೆ ಹೊರಡುವ ಬ್ರಾಹ್ಮಣ ಭೂಮಾಲಿಕ ಮಹೇಂದ್ರ ಇದರ ಕಥಾನಾಯಕ. ಆದರೆ ಮಹೇಂದ್ರ ಇಲ್ಲಿ ಕಳೆದು ಹೋದ ಹಿಂದೂ ಬ್ರಾಹ್ಮಣ ವೈಭವಕ್ಕೆ ಪ್ರತಿನಿಧಿಯಷ್ಟೆ.

'ವಂದೇ ಮಾತರಂ' ಚರ್ಚೆಯಲ್ಲಿ ಮಹಾತ್ಮ ಗಾಂಧಿ, ಠಾಗೋರ್

> **"ವಂದೇ ಮಾತರಂ" ಹಾಡನ್ನು ಬಂಗಾಳದ ಪ್ರಸಿದ್ಧ ಸಾಹಿತಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರವರು 1870ರಲ್ಲೇ ರಚಿಸಿದರೂ ಅದು ಈಗಿರುವ ರೂಪದಲ್ಲಿ ತಿದ್ದುಪಡಿಗೊಂಡು ಅವರ "ಆನಂದ ಮಠ" ಕಾದಂಬರಿಯಲ್ಲಿ ಸೇರ್ಪಡೆಯಾದದ್ದು 1881ರಲ್ಲಿ. ಆನಂದಮಠ ಕಾದಂಬರಿಯ ತಿರುಳನ್ನು ಅರ್ಥಮಾಡಿಕೊಳ್ಳದೆ "ವಂದೇ ಮಾತರಂ" ಗೀತೆಯನ್ನಾಗಲೀ, ಅದನ್ನು ಕಡ್ಡಾಯ ಮಾಡಲು ಈಗ 'ಚಳವಳಿ' ಮಾಡುತ್ತಿರುವ ಹಿಂದೂತ್ವವಾದಿಗಳ ನಿಜವಾದ ಉದ್ದೇಶವನ್ನಾಗಲೀ ಅರ್ಥಮಾಡಿಕೊಳ್ಳಲಾಗುವುದಿಲ್ಲ. "ಆನಂದ ಮಠ" ಕಾದಂಬರಿ ಬ್ರಿಟಿಷರ ಆಡಳಿತದಿಂದಾಗಿ ಬಂಗಾಳವು ಹಿಂದೆಂದೂ ಕಾಣದಷ್ಟು ತೀವ್ರವಾಗಿ ಬರಗಾಲಕ್ಕೆ ತುತ್ತಾಗಿದ್ದ ಕಾಲಘಟ್ಟದಿಂದ ಪ್ರಾರಂಭವಾಗುತ್ತದೆ.**

ಹೀಗಾಗಿ ಮತ್ತೆ ಆ ವೈಭವನ್ನು ಗಳಿಸಿಕೊಳ್ಳುವುದು ಹೇಗೆ ಎಂಬುದೇ "ಆನಂದ ಮಠ"ದ ನಿಜವಾದ ಕಥೆ. ಇಲ್ಲಿ ವೈಭವ ಕಿತ್ತುಕೊಂಡುವರು ಮುಸ್ಲಿಮ್ ದೊರೆಗಳು. ಹೀಗಾಗಿ ಈ ದೇಶದ ಪ್ರಧಾನ ಶತ್ರುಗಳು ಮುಸ್ಲಿಮರೆಂಬುದೇ ಕಾದಂಬರಿಯ ಸಂದೇಶ. ಆದ್ದರಿಂದಲೇ ಕಾದಂಬರಿಯು ಬರಗಾಲದ ಬವಣೆ, ರೈತಾಪಿಗಳು ನೊಣಗಳಂತೆ ಸಾಯುತ್ತಿರುವ ದೃಶ್ಯಗಳಿಂದ ಪ್ರಾರಂಭವಾದರೂ ಅವೆಲ್ಲವೂ ನಂತರ ಸಂಪೂರ್ಣ ಮರೆಯಾಗಿಬಿಡುತ್ತದೆ. ಅದೇ ರೀತಿ ಈ ಬರಗಾಲಕ್ಕೆ ಕಾರಣವಾದ ಬ್ರಿಟಿಷ್ ಆಡಳಿದ ಪ್ರಸ್ತಾಪವೂ ಕಾದಂಬರಿಯಲ್ಲಿ ಬರುವುದಿಲ್ಲ. ಮುಸ್ಲಿಂ ದರೋಡೆಕೋರರು ಮತ್ತು ಮುಸ್ಲಿಂ ನವಾಬರ ದಾಳಿ ಇವೆರಡರ ವಿರುದ್ಧ ಸಮರ ಸಾರಲು ಹಿಂದೂಗಳು ಸಂಸಾರವನ್ನು ತೊರೆದು ಸನ್ಯಾಸಿಗಳಾಗಿ ಸಶಸ್ತ್ರ ಬಂಡಾಯ ಹೂಡಿರುತ್ತಾರೆ. ಮಹೇಂದ್ರನನ್ನು ಈ ಬಂಡಾಯದಲ್ಲಿ ಸೇರುವಂತೆ ಮಾಡಲು ಆತನನ್ನು ಗುಪ್ತ ಗುಹೆಯಲ್ಲಿ ಕರೆದುಕೊಂಡು ದೇವಿ-ಭಾರತ ಮಾತೆ-ಯ ದರ್ಶನ ಮಾಡಿಸಲಾಗುತ್ತದೆ.

ಆ ದೇವಿಯ ಮುಂದೆ ಮುಸ್ಲಿಮರನ್ನು ಕೊಂದು ಹಾಕಿ ಈ ದೇಶವನ್ನು ವಿಮೋಚನೆಮಾಡುವ ವೀರ ಪ್ರತಿಜ್ಞೆಯ ಭಾಗವಾಗಿಯೇ "ವಂದೇ ಮಾತರಂ" ಹಾಡನ್ನು ಹಾಡಲಾಗುತ್ತದೆ. "ವಂದೇ ಮಾತರಂ" ಹಾಡುತ್ತಲೇ ಮಹೇಂದ್ರನಂತವರು ಮುಸ್ಲಿಮರ ಮಾರಣ ಹೋಮಕ್ಕೆ ಸಜ್ಜಾಗುತ್ತಾರೆ. ಇದಕ್ಕೆ ಪೂರಕವಾಗಿ ಈ ಬರಗಾಲದ ಬವಣೆಗೆ ಹಿಂದೂಗಳಷ್ಟೆ ಮುಸ್ಲಿಮ್ ರೈತರು ಸಹ ತುತ್ತಾಗಿ ಇರುವೆಗಳಂತೆ ಸಾಯುತ್ತಿದ್ದರೂ ಇಡೀ ಮುಸ್ಲಿಂ ಸಮುದಾಯವನ್ನೇ ಹಿಂದೂಗಳ ಬವಣೆಗೆ ಕಾರಣವೆಂಬಂತೆ ಚಿತ್ರಿಸಲಾಗಿದೆ. ಹೀಗೆ ಕಾದಂಬರಿ ಮೊದಲಿನಿಂದಲೂ ಇಡೀ ಮುಸ್ಲೀಮ್ ಸಮುದಾಯವನ್ನೇ ದೇಶದಿಂದ ಬಿಟ್ಟೋಡಿಸುವಂತೆ ಮಾಡುವುದನ್ನು ತನ್ನ ಗುರಿಯನ್ನಾಗಿರಿಗಿಸಿಕೊಳ್ಳುತ್ತದೆ. ಕಾದಂಬರಿಯ ನಾಯಕನಾದ ಸತ್ಯಾನಂದ ಘೋಷಿಸುವಂತೆ "ನಮಗೆ ಅಧಿಕಾರ ಬೇಕಿಲ್ಲ. ನಮ್ಮ ಉದ್ದೇಶ ಎಲ್ಲಾ ಮುಸ್ಲಿಮರನ್ನು ಕೊಂದುಹಾಕುವುದು. ಏಕೆಂದರೆ ಅವರು ದೇವರ ಶತ್ರುಗಳು!". ಇದೇ ಆ ಕಾದಂಬರಿಯ ಪ್ರಧಾನ ಧಾತು. "ಸನಾತನ ಧರ್ಮದ ಪುನರುತ್ಥಾನವೇ" ನಮ್ಮ ಗುರಿಯೆಂದು ಘೋಷಿಸುವ "ಆನಂದಮಠದ" ಬಂಡಾಯಗಾರರು ತಮ್ಮನ್ನು ತಾವು

[illegible] ಗುರುತಿಸಿಕೊಳ್ಳುತ್ತಾರೆ.

ಹೀಗೆ "ಆನಂದ ಮಠ" ಕಾದಂಬರಿಯಾಗಲೀ, "ವಂದೇ ಮಾತರಂ" ಗೀತೆಯಾಗಲೀ ಸನಾತನ ಹಿಂದೂ ಸಾಮ್ರಾಜ್ಯದ ಪುನರುತ್ಥಾನವನ್ನು ಗುರಿಯಾಗಿಯುಳ್ಳ, ಮುಸ್ಲಿಮರೇ ಈ ದೇಶದ ವಿನಾಶಕ್ಕೆ ಕಾರಣ ಎಂದು [illegible] ಸಾಮಾನ್ಯ ಮುಸ್ಲಿಮರನ್ನು ಕೊಚ್ಚಿಕೊಲ್ಲಬೇಕೆಂಬ ಗುರಿಯುಳ್ಳ ದ್ವೇಷಸಿಕ್ತ ಕಾದಂಬರಿಯಾಗಿದೆ. ಆದ್ದರಿಂದಲೇ ಇದು, ದ್ವೇಷವನ್ನೇ ಉಸಿರಾಡುವ ಕೋಮುವಾದಿ ಹಿಂದೂತ್ವ ರಾಜಕಾರಣ ಮಾಡುತ್ತಿರುವ ಇಂದಿನ ಹಿಂದೂತ್ವವಾದಿಗಳಿಗೆ ಅಪ್ಯಾಯಮಾನವಾಗಿಯೂ ಕಾಣಿಸುತ್ತದೆ!

ಆದರೂ "ಆನಂದ ಮಠ" ಕಾದಂಬರಿಯನ್ನೂ ಮತ್ತು "ವಂದೇ ಮಾತರಂ"ಗೀತೆಯನ್ನು ಬ್ರಿಟಿಷ್ ವಸಾಹತುಶಾಹಿ ವಿರೋಧಿ ಆಶಯ ಹೊಂದಿರುವ ಕೃತಿಗಳೆಂದು ಪ್ರಚಾರ ಮಾಡುವ ಸನ್ನಾಹಗಳು ನಡೆಯುತ್ತಿವೆ. ನಿಜಕ್ಕೂ ಆನಂದಮಠ ಕಾದಂಬರಿ ವಸಾಹತುಶಾಹಿ ವಿರೋಧೀ ಆಶಯಗಳನ್ನು ಹೊಂದಿತ್ತೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ ಈ ಕಾದಂಬರಿಯಲ್ಲಿ ಬ್ರಿಟಿಷರನ್ನೂ ಹೇಗೆ ಪರಿಗಣಿಸಲಾಗಿದೆಯೆಂಬುದನ್ನು ಮತ್ತು ಈ ಕಾದಂಬರಿಯನ್ನು ಮತ್ತು ಕಾದಂಬರಿಕಾರರಾದ ಬಂಕಿಮ ಚಂದ್ರರನ್ನು ಬ್ರಿಟಿಷ್ ಆಡಳಿತ ಹೇಗೆ ನಡೆಸಿಕೊಂಡಿತು ಎಂಬುದನ್ನೂ ನೋಡಿದರೆ ಗೊತ್ತಾಗುತ್ತದೆ.

ಈ ಮೊದಲೇ ಹೇಳಿದಂತೆ ಬಂಗಾಳದ ಕಂಡುಕೇಳರಿಯದ ಬರಗಾಲಕ್ಕೆ ಬ್ರಿಟಿಷರು ಜಾರಿಗೆ ತಂದ ಕೃಷಿ ಮತ್ತು ಆಡಳಿತ ನೀತಿಗಳೇ ಕಾರಣ. ಅದನ್ನು ಜಾರಿಗೆ ತಂದವರು ಮುಸ್ಲಿಮ್ ನವಾಬರು. ಆದರೆ ಕಾದಂಬರಿಯಲ್ಲಿ ಬ್ರಿಟಿಷರೂ ವಿರುದ್ಧ ಸೊಲ್ಲೇ ಕೇಳಿ ಬರುವುದಿಲ್ಲ. ಉದಾಹರಣೆಗೆ ಮುಸ್ಲಿಂ ನವಾಬನ ಜೊತೆ ಬ್ರಿಟಿಷ್ ಸೈನ್ಯ ಸೇರಿಕೊಂಡಾಗ ಕಾದಂಬರಿಯ ನಾಯಕನಿಗೆ ಬಂಡಾಯಗಾರರು ನಮಗೆ ಬ್ರಿಟಿಷರು ಶತ್ರುಗಳಲ್ಲ. ಅವರು ಗೆಲ್ಲಲಿ. ಎಂದು ಆದೇಶಿಸುತ್ತಾರೆ. ಕಾದಂಬರಿಯ ಅಂತಿಮದಲ್ಲಿ ನವಾಬರನ್ನು ಸಂಪೂರ್ಣವಾಗಿ ಸೋಲಿಸಿ ಸನಾತನ ಬಂಡಾಯ ಜಯಗಳಿಸಿದ ಮೇಲೆ ಒಂದು ಅಶರೀರ ವಾಣಿಯು ಕಾದಂಬರಿಯ ನಾಯಕನನ್ನು ಉದ್ದೇಶಿಸಿ ಮುಸ್ಲಿಮರನ್ನು ಕಿತ್ತೊಗೆದದ್ದರಿಂದ ಅವನ ಗುರಿ ಈಡೇರಿದೆಯೆಂದು ಘೋಷಿಸುತ್ತದೆ.

ಇನ್ನೂ ಬಂಗಾಳದ ಆಡಳಿತವನ್ನು ದೈವಕೃಪೆಯಿಂದ ಬ್ರಿಟಿಷರೇ ವಹಿಸಿಕೊಳ್ಳುವುದರಿಂದ ಹಿಂದೂಗಳಿಗೆ ಯಾವುದೇ ತೊಂದರೆಯಾಗುವುದಿಲ್ಲವೆಂದೂ, ಈ ಬಂಡಾಯದ ಉದ್ದೇಶವಿದ್ದದ್ದೇ ಬ್ರಿಟಿಷರು ನೇರವಾಗಿ ಆಡಳಿತ ವಹಿಸುವಂತೆ ಮಾಡುವುದಾಗಿತ್ತೆಂದು ಆ ದೈವ ವಾಣಿ ತಿಳಿಹೇಳುತ್ತದೆ. ಆದರೆ ಇದರಿಂದ ಸಮಾಧಾನವಾಗದ ಕಥಾನಾಯಕ ಮುಸ್ಲಿಂ ಆಡಲಿತ ಕಿತ್ತೊಗೆದರೂ ಹಿಂದೂಗಳ ಆಡಳಿತವನ್ನು ಸ್ಥಾಪಿಸಲಾಗದೇ ಇರುವುದರಿಂದ ನಮ್ಮ ಗುರಿ ಇನ್ನೂ ಮುಟ್ಟಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸುತ್ತಾನೆ. ಆದರೆ ಆ ದೈವವಾಣಿಯು ಅದರ ಬಗ್ಗೆ ಯೋಚಿಸುವ ಅಗತ್ಯವಿಲ್ಲವೆಂದೂ ಬ್ರಿಟಿಷರು ಸನಾತನ ಧರ್ಮವನ್ನು ಗೌರವಿಸುತ್ತಾರೆಂದೂ, ಅವರ ಆಡಳಿತದಿಂದ ಹಿಂದೂಗಳಿಗೆ ಭೌತಿಕ ಲಾಭವಿದೆಯೆಂದೂ ಸಮಾಧಾನಪಡಿಸುತ್ತದೆ.

ಹೀಗೆ ಯಾವುದನ್ನು ದೇಶಭಕ್ತಿಯ ಪ್ರತೀಕ ಎಂದು ಪ್ರಚಾರ ಮಾಡಲಾಗುತ್ತಿದೆಯೋ ಆ ಗೀತೆ ಮತ್ತು

ಬಂಗಾಳದ ಕಂಡುಕೇಳರಿಯದ ಬರಗಾಲಕ್ಕೆ ಬ್ರಿಟಿಷರು ಜಾರಿಗೆ ತಂದ ಕೃಷಿ ಮತ್ತು ಆಡಳಿತ ನೀತಿಗಳೇ ಕಾರಣ. ಅದನ್ನು ಜಾರಿಗೆ ತಂದವರು ಮುಸ್ಲಿಮ್ ನವಾಬರು. ಆದರೆ ಕಾದಂಬರಿಯಲ್ಲಿ ಬ್ರಿಟಿಷರೂ ವಿರುದ್ಧ ಸೊಲ್ಲೇ ಕೇಳಿ ಬರುವುದಿಲ್ಲ. ಉದಾಹರಣೆಗೆ ಮುಸ್ಲಿಂ ನವಾಬನ ಜೊತೆ ಬ್ರಿಟಿಷ್ ಸೈನ್ಯ ಸೇರಿಕೊಂಡಾಗ ಕಾದಂಬರಿಯ ನಾಯಕನಿಗೆ ಬಂಡಾಯಗಾರರು ನಮಗೆ ಬ್ರಿಟಿಷರು ಶತ್ರೂಗಳಲ್ಲ. ಅವರು ಗೆಲ್ಲಲಿ ಎಂದು ಆದೇಶಿಸುತ್ತಾರೆ. ಕಾದಂಬರಿಯ ಅಂತಿಮದಲ್ಲಿ ನವಾಬರನ್ನು ಸಂಪೂರ್ಣವಾಗಿ ಸೋಲಿಸಿ ಸನಾತನ ಬಂಡಾಯ ಜಯಗಳಿಸಿದ ಮೇಲೆ ಒಂದು ಅಶರೀರ ವಾಣಿಯು ಕಾದಂಬರಿಯ ನಾಯಕನನ್ನು ಉದ್ದೇಶಿಸಿ ಮುಸ್ಲಿಮರನ್ನು ಕಿತ್ತೊಗೆದದ್ದರಿಂದ ಅವನ ಗುರಿ ಈಡೇರಿದೆಯೆಂದು ಘೋಷಿಸುತ್ತದೆ.

ಕಾದಂಬರಿಯ ಉದ್ದೇಶವೇ ನೇರ ಬ್ರಿಟಿಷ್ ವಸಾಹತು ಆಡಳಿತವನ್ನು ಜಾರಿಗೆ ತರುವುದಾಗಿತ್ತು!!

ಕಾದಂಬರಿಯ ಈ ನಿಜವಾದ ಸಂದೇಶವನ್ನು ಅರ್ಥಮಾಡಿಕೊಂಡೇ ಬ್ರಿಟಿಷ್ ಸರ್ಕಾರವು 1881ರಲ್ಲಿ ಹಣಕಾಸು ಇಲಾಖೆಯಲ್ಲಿ ಹುಟ್ಟುಹಾಕಿದ ಹೊಸ ಅಸಿಸ್ಟೆಂಟ್ ಸೆಕ್ರೆಟರಿ ಹುದ್ದೆಗೆ ಬಂಕಿಮಚಂದ್ರರನ್ನು ಆಯ್ಕೆ ಮಾಡಿ ಪುರಸ್ಕರಿಸಿತು. ಆಮೇಲೆ ಕೆಲವರ ವಿರೋಧದಿಂದಾಗಿ ಅವರನ್ನು ಅಧೀನ ಕಾರ್ಯದರ್ಶಿ ಹುದ್ದೆಗೆ ಇಳಿಸಲಾಯಿತಾದರೂ ಕೆಲಸದಿಂದೇನೂ ತೆಗೆಯಲಿಲ್ಲ. ವಾಸ್ತವವಾಗಿ ಆ ಸಂದರ್ಭದಲ್ಲಿ ಬ್ರಿಟಿಷ್ ಆಡಳಿತ ತನ್ನ ವಿರುದ್ಧ ವ್ಯಕ್ತವಾಗುತ್ತಿದ್ದ ಎಲ್ಲಾ ಬಗೆಯ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನೂ ಹತ್ತಿಕ್ಕುತ್ತಿದ್ದ ಕಾಲ. ಉದಾಹರಣೆಗೆ ದೀನ ಬಂಧು ಮಿತ್ರರವರ "ನೀಲ್ ದರ್ಪಣ್" ಎಂಬ ಕೃತಿ 1861ರಲ್ಲಿ ಪ್ರಕಟವಾಯಿತು.

ಅದು ಪ್ಲಾಂಟೇಷನ್‌ಗಳಲ್ಲಿ ಬ್ರಿಟಿಷರು ಹೇಗೆ ಸ್ವದೇಶೀಯರನ್ನು ಶೋಷಿಸುತ್ತಿದ್ದಾರೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿತ್ತು. ಅದರ ಇಂಗ್ಲೀಷ್ ಅನುವಾದ ಆಳರಸರ ಕೆಂಗಣ್ಣಿಗೆ ಗುರಿಯಾಗಿದ್ದು ಮಾತ್ರವಲ್ಲದೇ ಅದರ ಅನುವಾದಕ ರೆವೆರೆಂಡ್ ಜೇಮ್ಸ್ ಲಾಂಗ್‌ನನ್ನು ಸೆರೆಮನೆಗೂ ದೂಡಲಾಯಿತು. ಅದೇ ರೀತಿ ಬ್ರಿಟಿಷರನ್ನು ವಿಮರ್ಶಿಸಿ ಬರೆದ ಕೃತಿಗಳಾದ ಉಪೇಂದ್ರನಾಥ ದಾಸರ "ಶರ್ ಸರೋಜಿನಿ ನಾಟಕ್ ಮತ್ತು "ಸುರೇಂದ್ರ ಬಿನೋದಿನಿ ನಾಟಕ್"ಗಳನ್ನು ಬ್ರಿಟಿಷ್ ಸರ್ಕಾರ ಬಹಿಷ್ಕರಿಸಿ ಲೇಖಕರನ್ನು ಬಂಧಿಸಿತು. 1876ರಲ್ಲಿ ಪ್ರಕಟವಾದ ದಕ್ಷಿಣರಂಜನ್ ಚಟ್ಟೋಪಾಧ್ಯಾಯರವರ "ಚಾ ಕಾರ್ ದರ್ಪಣ್" ಕೃತಿಯಂತೂ ಬ್ರಿಟಿಷ್ ಸರ್ಕಾರವು ಇಂಥಾ ಕೃತಿಗಳನ್ನು ಬಹಿಷ್ಕರಿಸಲು "ಡ್ರಾಮಾಟಿಕ್ ಪರ್ಫಾರ್ಮೆನ್ಸ್ ಆಕ್ಟ್" ಅನ್ನು ಜಾರಿಗೆ ತರಲು ಕಾರಣವಾಯಿತು.

ಇದು ನಿಜಕ್ಕೂ ಬ್ರಿಟಿಷ್ ವಿರೋಧೀ ದೇಶಭಕ್ತಿ ಸಂಪನ್ನ ಕೃತಿಗಳ ಬಗ್ಗೆ ಬ್ರಿಟಿಷ್ ಸರ್ಕಾರ ನಡೆದುಕೊಳ್ಳುತ್ತಿದ್ದ ರೀತಿ. ಆದರೆ "ದೇಶಭಕ್ತ" ಕೃತಿಯೆಂದು ಪರಿಗಣಿಸಲ್ಪಡುತ್ತಿರುವ "ಆನಂದಮಠ"ವನ್ನು ಬ್ರಿಟಿಷ್ ಸರ್ಕಾರ ಹೇಗೆ ಭಾವಿಸಿತು?. ಆನಂದಮಠದ ಮೊದಲ ಆವೃತ್ತಿಗೆ ಬರೆದ ಮುನ್ನುಡಿಯಲ್ಲೇ ಬಂಕಿಮಚಂದ್ರರು ತನ್ನ ಕಾದಂಬರಿಯ ಬಂಡಾಯ "ಸಾಮಾಜಿಕ ಬಂಡಾಯ"ವೇ ಹೊರತು ರಾಜಕೀಯ ಬಂಡಾಯವಲ್ಲವೆಂದು-ಅರ್ಥಾತ್ ಬ್ರಿಟಿಷ್ ವಿರೋಧಿ ಕೃತಿಯಲ್ಲವೆಂದು- ಸ್ಪಷ್ಟಬಿಡಿಸಿಬಿಟ್ಟಿದ್ದರು. 1883ರ ಮಾರ್ಚ್ 31ರಂದು ಬ್ರಿಟಿಷ್ ಆಡಳಿತದ ಅಧಿಕೃತ ಗೆಜೆಟ್ಟಿನಲ್ಲಿ ಈ ಕಾದಂಬರಿಯು "ಧಾರ್ಮಿಕ ಭಾವನೆಗಳಿಂದ ಪ್ರೇರಿತಗೊಂಡ, ಮುಸ್ಲಿಮ್ ಆಳ್ವಿಕೆಯ ಕೊನೆಯನ್ನು ಬಯಸುವ ಮತ್ತು ಬ್ರಿಟಿಷರು ಭಾರತದ ಮೇಲೆ ಸಂಪೂರ್ಣ ಸ್ವಾಮ್ಯ ಪಡೆಯಬೇಕೆಂಬ ಆಶಯವುಳ್ಳ" ಕಾದಂಬರಿಯೆಂದು ಹೊಗಳಲಾಗಿತ್ತು. 1937ರಲ್ಲಿ ವೈಸ್‌ರಾಯ್ ಕೌನ್ಸಿಲ್ನ ಸದಸ್ಯನಾಗಿದ್ದ ಸರ್ ಹೆನ್ರಿ ಕ್ರೈಕ್ "ಈ ಕಾದಂಬರಿಯು ಮುಸ್ಲಿಮರ ವಿರುದ್ಧ ಘೋಷಗೀತೆ" ಯೆಂದೇ ಬಣ್ಣಿಸಿದ್ದನು. ಹೀಗಾಗಿಯೇ ಈ ಹಾಡನ್ನಾಗಲೀ, ಕಾದಂಬರಿಯನ್ನಾಗಲೀ ಬ್ರಿಟಿಷ್ ಆಡಳಿತ ಯಾವತ್ತೂ ನಿಷೇಧಿಸಲಿಲ್ಲ!

ಇದು "ವಂದೇ ಮಾತರಂ" ಮತ್ತು "ಆನಂದ ಮಠ"ಗಳ ನಿಜಸ್ವರೂಪ. ನಮ್ಮನ್ನು ಸುಲಿಗೆ ಮಾಡಿದ ವಸಾಹತುಶಾಹಿಗಳನ್ನೇ ರಕ್ಷಕರೆಂದು ಘೋಷಿಸುವ, ನಮ್ಮ ಸಹವಾಸಿಗಳನ್ನು ಶತ್ರುಗಳೆಂದು ಬೋಧಿಸುವ "ವಂದೇ ಮಾತರಂ" ರಾಷ್ಟ್ರಭಕ್ತಿ ಗೀತೆ ಹೇಗಾಗುತ್ತದೆ? ಅದು ಈ ದೇಶವನ್ನು ಮತ್ತೊಮ್ಮೆ ನವವಸಾಹತು ಶೋಷಣೆಗೆ ತೆರೆದಿಟ್ಟು ದೇಶವಾಸಿಗಳ ನಡುವೆ ದ್ವೇಷ ಬಿತ್ತಬಯಸುವ ಹಿಂದೂತ್ವವಾದಿಗಳ ಗೀತೆಯೇ ಹೊರತು ನಮ್ಮೆಲ್ಲರ ಸ್ವಾತಂತ್ರ್ಯದ ಆಶಯವನ್ನು ಉದ್ದೀಪಿಸುವ ಗೀತೆಯಲ್ಲ. ಆದ್ದರಿಂದ ಇದನ್ನು ಮುಸ್ಲಿಮರು ಮಾತ್ರವಲ್ಲ ನಿಜವಾದ ದೇಶಭಕ್ತರೆಲ್ಲರೂ ವಿರೋಧಿಸಬೇಕು.

ಈ ವಿಷಯದ ಬಗ್ಗೆ ಹೆಚ್ಚಿನ ಓದಿಗಾಗಿ EPW ಪತ್ರಿಕೆಯಲ್ಲಿ ಪ್ರಕಟವಾದ ಪ್ರಖ್ಯಾತ ಚಿಂತಕಿ ತನಿಕ ಸರ್ಕಾರ್‌ರವರ "Birth Of Godess" ಲೇಖನವನ್ನು ಓದಿರಿ. ಇದು ಅಂತರ್ಜಾಲದಲ್ಲಿ ಈ ವಿಳಾಸದಲ್ಲಿ ಸಿಗುತ್ತದೆ: http://epw.in/epw/uploads/articles/7338.pdf □

ಗುಟುಕು!

ಇಂಥ ಹಾಡ ಹಾಡಬೇಕು
ಮರಳಿ ಮರಳಿ ಗುನುಗಬೇಕು
ಇಂಥ ಕಾರ್ಯ ಮಾಡಬೇಕು
ಹೊರಳಿ ಹೊರಳಿ ನೋಡಬೇಕು.

○ ಅಲ್ಲಮ ಪ್ರಭು ಬೆಟ್ಟದೂರು

ಝೂನ್ ಗಜಲ್‌ಗಳು



ಗಜಲ್-೧

ಮೇಲೇರುವ ಸೂರ್ಯನಿಗೆ ಈಜಗ ನಮಸ್ಕರಿಸುತ್ತದೆ
ಅಧಿಕಾರದ ಗದ್ದುಗೇರಿದವನನು ಈ ಜಗ ಸತ್ಕರಿಸುತ್ತದೆ
ಬಂದಿರುವೆವು ಈ ನೆಲಕೆ ಸಮಾನತೆಯಲಿ ಬಾಳಲು
ಅಸಮಾನತೆ ಬಾಳು ಹಂಚಲು ಈಜಗ ಚೀತ್ಕರಿಸುತ್ತದೆ
ಜ್ಞಾನವೆಂಬುದು ಒಬ್ಬರ ಕೈಯೊಳಗಿನ ವಸ್ತು ತಾನಲ್ಲ
ಯುಗಗಳಿಂದ ಅಕ್ಷರ ಬಚ್ಚಿಡಲು ಅಕ್ಷರದೆದೆ ಗರ್ಜಿಸುತ್ತದೆ
ಜಾರಿ ಬಿದ್ದವನನು ಮೇಲೆತ್ತಿ ಸಂತೈಸಬೇಕು ಈಜಗ
ತಳದವರನು ತುಳಿದರೆ ದಲಿತ ವರ್ಗ ಸಂಘರ್ಷಿಸುತ್ತದೆ
ಹೃದಯದಾಳಕ್ಕಿಂತ ಘನವಾದುದ್ದು ಸಾಗರದಾಳವಲ್ಲವಲ್ಲ
ಪ್ರೇಮದಾಳದಿ ಮುಳುಗಲು ನಾವು ಜಗ ಪ್ರಕಾಶಿಸುತ್ತದೆ.



ಗಜಲ್-೨

ಇದೇನು? ಒಳಹೊರಗೆ ಹೊಗೆಯಾಡುತ್ತಿದೆಯಲ್ಲ
ಮನದಂಗಳದಿ ದ್ವೇಷದ ಕಿಡಿ ಧಗೆಯಾಡುತ್ತಿದೆಯಲ್ಲ
ಬರಿಮೈ ತಣ್ಣಗೆ ಮುಟ್ಟಿದರೆ, ಮನದಲಿ ಬಿಸಿಹಗೆ
ಬುಸುಗುಡುವ ನಾಗರಹೆಡೆ ಹಗೆಯಾಡುತ್ತಿದೆಯಲ್ಲ
ಪಾತ್ರ, ಸನ್ನಿವೇಶ ಸೃಷ್ಠಿ ಕಲ್ಪನೆ ಎಂದುಕೊಂಡೆವು
ಜೀವನರಂಗದಿ ಜೀವಂತ ಅವು ನಗೆಯಾಡುತ್ತಿವೆಯಲ್ಲ
ನಮ್ಮನು ಹಿಂಬಾಲಿಸುವ ನಮ್ಮಯ ಕರಿನೆರಳು
ಉರುಳು ಕುತ್ತಿಗೆಗೆ ಬಿಗಿದು ಜಗಿದಾಡುತ್ತಿದೆಯಲ್ಲ
ಕಳೆದು ಹೋದ ಕಾಲವದು ಮುಂದೆಂದೂ ಕಾಣದೆಂದರೂ
ವರ್ತಮಾನದಿ ಭೂತಕುಣಿದು ನೆಗೆದಾಡುತ್ತಿದೆಯಲ್ಲ

○ ಜಂಬಣ್ಣ ಅಮರಚಿಂತ

ಪ್ರಜಾಪ್ರಭುತ್ವದ ಪ್ರಭಾ(ಹಾ)ವಳಿ

ಎಸ್. ಬಿ. ಜೋಗುರ

'ರಾಷ್ಟ್ರದ ಏಳ್ಗೆ ಮತ್ತು ಭದ್ರತೆಗಾಗಿ ಅಧಿಕಾರ ಹಂಚಿಕೆಯಾಗುವುದೂ, ಆಳುವ ರಾಜ ಇಲ್ಲವೇ ವ್ಯಕ್ತಿ ಚುನಾಯಿತನಾಗುವುದೂ ಅತ್ಯವಶ್ಯಕ"

–ಮೆಕಿಯಾವೆಲ್ಲಿ

ರುಸ್ಸೋ ನಂತಹ ದಾರ್ಶನಿಕರು ಪ್ರತಿಯೊಬ್ಬ ವ್ಯಕ್ತಿ ಬೆಳೆಯುತ್ತ ಹೋದಂತೆ ಸಂಕೋಲೆಗಳಿಗೆ ಸಿಲುಕುವ ಬಗ್ಗೆ ಅತ್ಯಂತ ಮಾರ್ಮಿಕವಾಗಿ ಮಾತನಾಡಿರುವದಿದೆ. ಇನ್ನೊಂದು ಬದಿಯಲ್ಲಿ ಕಾರ್ಲ್‌ಮಾರ್ಕ್ಸ್ ರಂಥಾ ಸಮತಾವಾದಿಗಳು ಜಗತ್ತಿನ ಕಾರ್ಮಿಕರಿಗೆ 'ನೀವು ಒಂದಾಗಿ ನಿಮ್ಮ ಬಂಧನವನ್ನು ಹೊರತು ಪಡಿಸಿ ಬೇರೇನನ್ನೂ ಕಳೆದುಕೊಳ್ಳಲಾರಿರಿ' ಎಂದು ಕರೆಕೊಟ್ಟಿರುವದಿದೆ. ಮನುಷ್ಯ ಸಾವಿರಾರು ವರ್ಷಗಳ ಕಾಲ ಆಯ್ಕೆ–ತಿರಸ್ಕರಾರಗಳ ಗೊಡವೆಯಿಲ್ಲದೇ ಯಾವುದೋ ಒಂದು ಪ್ರಭುತ್ವ, ಪಟ್ಟಭದ್ರ ಹಿತಾಸಕ್ತಿಗೆ ಅಧೀನನಾಗಿ ಬದುಕಿರುವ ಬಗ್ಗೆ ಚಾರಿತ್ರಿಕ ಆಧಾರಗಳಿವೆ. 19ನೇ ಶತಮಾನದ ಹೊಸ್ತಿಲಲ್ಲಿ ನಿಂತು ತುಸು ಹಿಂದೆ ಇಣುಕಿದರೆ ವಿಶ್ವದ ಯಾವ ರಾಷ್ಟ್ರವೂ ಈ ಪ್ರಜಾಪ್ರಭುತ್ವ ಎನ್ನುವ ವ್ಯವಸ್ಥೆಯ ಸಹವಾಸದಲ್ಲಿರಲಿಲ್ಲ. ಇದ್ದದ್ದೆಲ್ಲಾ ರಾಜಪ್ರಭುತ್ವ, ದೈವ ಪ್ರಭುತ್ವ, ಫ್ಯಾಸಿಸಂ ನಂತಹ ವ್ಯವಸ್ಥೆಗಳು ಮಾತ್ರ ಆದರೆ ಇಂದು ಸುಮಾರು 119 ರಾಷ್ಟ್ರಗಳಲ್ಲಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯಿದೆ ಎಂದರೆ ನಂಬಲೇಬೇಕು. ವಿಶ್ವದ ಬಹುತೇಕ ರಾಷ್ಟ್ರಗಳಿಗೆ ಇಂದು ಪ್ರಜಾಪ್ರಭುತ್ವ ಎನ್ನುವದು ಒಂದು ಮೌಲ್ಯ: ಇದು ಮಾತ್ರ ಬದುಕುಳಿಯಬಹುದಾದ ಒಂದು ರಾಜಕೀಯ ಸತ್ವ, ಶಕ್ತಿ. ರಾಜಕೀಯ, ಸಾಮಾಜಿಕ ವಿಕಸನದಲ್ಲಿ ಸರ್ವಾಧಿಕಾರಿ ದೊರೆಗಳ ಮತ್ತು ಪ್ರಜಾಪ್ರಭುತ್ವದ ಟಕ್ಕಾಟಿಕ್ಕಿ ಆದಾಗ ಗೆಲುವು ಪ್ರಜಾಪ್ರಭುತ್ವದ್ದೇ ಆಗಿತ್ತು ಎನ್ನುವುದು ಈಗ ಇತಿಹಾಸ.

ಗ್ರೀಕ್ ದಾರ್ಶನಿಕರು ಹೇಳುವ ಹಾಗೆ ಪ್ರಜಾಪ್ರಭುತ್ವ ಎನ್ನುವುದು 'ಜನತೆಯ ಆಳ್ವಿಕೆ, ಅಧಿಕಾರ' 20ನೇ ಶತಮಾನದ ಆದಿಭಾಗದಿಂದ ಶುರುವಾಗಿ ಸಧ್ಯದವರೆಗೆ ಎಲ್ಲ ವಲಯಗಳಲ್ಲಿ ಅಧಿಕಾರ ಎನ್ನುವುದು ಜನತೆಯ ಕಡೆಗೆ ವಾಲುವದನ್ನು ನಾವು ಈ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಗಮನಿಸುತ್ತೇವೆ. ಇದನ್ನು ಫರೀದ್ ಜಕಾರಿಯಾ ತಮ್ಮ ಪುಸ್ತಕವಾದ ದ ಫ್ಯುಚರ್ ಆಫ್ ಫ್ರೀಡಮ್' ಎನ್ನುವದರಲ್ಲಿ 'ಡೆಮಾಕ್ರೈಟೈಜೇಶನ್' ಎಂದು ಕರೆದಿರುವರು. ಮುಂದುವರೆದು ಅವರು 'ಈ ಪ್ರಕ್ರಿಯೆಯಲ್ಲಿ ರಾಜಕೀಯ ಮೀರಿದ ಒಂದು ಸತ್ತೆ ಸ್ಥಾಪಿತವಾಗುತ್ತದೆ. ಜಡವಾಗಿರುವ ಏಣಿಶ್ರೇಣಿಗಳು ಮುರಿದು ಬೀಳುತ್ತವೆ, ಮುಚ್ಚಿದ ಬಾಗಿಲುಗಳು ತಟ್ಟನೇ ಕದ ತೆರೆದುಕೊಳ್ಳುತ್ತವೆ, ಮುಖ್ಯವಾಗಿ ಜನಸಮೂಹದ ಒತ್ತಡ ಸಾಮಾಜಿಕ ಬದಲಾವಣೆಯ ಸಂಗತಿಯಾಗಿ ನಿರ್ಣಾಯಕ ಪಾತ್ರ ಎಸಗುತ್ತದೆ' ಎಂದು ಭವಿಷ್ಯ ನುಡಿದಿರುವದು ಹುಸಿ ಹೋಗಿಲ್ಲ ಎನ್ನುವದೂ ಹೌದು.

ಇಂದು ನಾವು ಮಾತನಾಡುವ ಜಾಗತೀಕರಣ ಎನ್ನುವ ಪರಿಕಲ್ಪನೆಯ ಹಿನ್ನೆಲೆಯಲ್ಲಿ ವಿಶ್ವದ ಆರ್ಥಿಕ ವಿದ್ಯಮಾನಗಳನ್ನು ಗಮನಿಸಿದರೆ ಅದು ಕೂಡಾ ಖಂಡಿತವಾಗಿಯೂ ಪ್ರಜಾಸತ್ತಾತ್ಮಕವಾಗಿದೆ. ಜನತೆಯ ಅನುಕೂಲಕ್ಕೆ ತಕ್ಕ ಹಾಗೆ ಮಾರುಕಟ್ಟೆಯ ಕಲ್ಪನೆಗಳು ವಿಸ್ತೃತವಾಗುತ್ತಿವೆ ಎಂದರೆ ಏನರ್ಥ..? ಕೇವಲ ಆರ್ಥಿಕತೆ ಮಾತ್ರವಲ್ಲ ಸಾಂಸ್ಕೃತಿಕ ಆಯಾಮಗಳು ಕೂಡಾ ಪ್ರಜಾಪ್ರಭುತ್ವದ ವ್ಯಾಪ್ತಿಗೆ ಒಳಪಡುತ್ತಿವೆ. ಒಂದು ಮೇಲ್ ಸ್ತರದ ಸಂಸ್ಕೃತಿ ಗೂಡು ಬಿಟ್ಟು ಹೊರ ಬಾರದ ದಿನಗಳು ದೂರ ಸರಿದಿವೆ. ಇಂದು ಜನಪ್ರಿಯ ಸಂಸ್ಕೃತಿ ಎನ್ನುವುದು ಎಲ್ಲರ ಬದುಕಿನ ಭಾಗವಾಗಿದೆ. ಈ ಬಗೆಯ ಜನಪರ ಸಂಸ್ಕೃತಿ ಜನಸಾಮಾನ್ಯನ ಗೊಡವೆಯಾಗಿದೆ. ಆ ದಿಶೆಯಲ್ಲಿ ನಮ್ಮ ಮನೆಯಲ್ಲಿರುವ ದೂರದರ್ಶನದ ಚಾನೆಲ್ಗಳನ್ನು ಒಂದು ಬಾರಿ ನೆನಪಿಸಿಕೊಂಡರೆ ಸಾಕು. ನಮ್ಮ ಮೈ ಮನಗಳ ಮೇಲೆ ನಡೆಯುವ ಬಲತ್ಕಾರ ಎಂಥಹದು ಎನ್ನುವದು ವಿಧಿತವಾಗದೇ ಇರದು.

ಇಂದು ನಾವು ಮಾತನಾಡುವ ಜಾಗತೀಕರಣ ಎನ್ನುವ ಪರಿಕಲ್ಪನೆಯ ಹಿನ್ನೆಲೆಯಲ್ಲಿ ವಿಶ್ವದ ಆರ್ಥಿಕ ವಿದ್ಯಮಾನಗಳನ್ನು ಗಮನಿಸಿದರೆ ಅದು ಕೂಡಾ ಖಂಡಿತವಾಗಿಯೂ ಪ್ರಜಾಸತ್ತಾತ್ಮಕವಾಗಿದೆ. ಜನತೆಯ ಅನುಕೂಲಕ್ಕೆ ತಕ್ಕ ಹಾಗೆ ಮಾರುಕಟ್ಟೆಯ ಕಲ್ಪನೆಗಳು ವಿಸ್ತೃತವಾಗುತ್ತಿವೆ ಎಂದರೆ ಏನರ್ಥ..? ಕೇವಲ ಆರ್ಥಿಕತೆ ಮಾತ್ರವಲ್ಲ ಸಾಂಸ್ಕೃತಿಕ ಆಯಾಮಗಳು ಕೂಡಾ ಪ್ರಜಾಪ್ರಭುತ್ವದ ವ್ಯಾಪ್ತಿಗೆ ಒಳಪಡುತ್ತಿವೆ. ಒಂದು ಮೇಲ್ ಸ್ತರದ ಸಂಸ್ಕೃತಿ ಗೂಡು ಬಿಟ್ಟು ಹೊರ ಬಾರದ ದಿನಗಳು ದೂರ ಸರಿದಿವೆ. ಇಂದು ಜನಪ್ರಿಯ ಸಂಸ್ಕೃತಿ ಎನ್ನುವುದು ಎಲ್ಲರ ಬದುಕಿನ ಭಾಗವಾಗಿದೆ. ಈ ಬಗೆಯ ಜನಪರ ಸಂಸ್ಕೃತಿ ಜನಸಾಮಾನ್ಯನ ಗೊಡವೆಯಾಗಿದೆ.

1920 ಕ್ಕಿಂತ ಮುಂಚೆ ಪರಿಸ್ಥಿತಿ ಹೀಗಿರಲಿಲ್ಲ. ಈ ಮಾಧ್ಯಮಗಳು ಕೆಲವು ಸ್ಥಾಪಿತ ಹಿತಾಸಕ್ತಿಗಳ ಗುತ್ತಿಗೆಯಾಗಿ ವ್ಯವಹರಿಸುತ್ತಿದ್ದವು. ಪಟ್ಟಭದ್ರರ ಮರ್ಜಿ ಕಾಯಲು ಅಂದು ಮಾಧ್ಯಮಗಳು ದುಡಿಯುತ್ತಿದ್ದವು. ಈಗ ಹಾಗಿಲ್ಲ ಪ್ರತಿಯೊಬ್ಬ ಈ ಮಾಧ್ಯಮದ ವಿಷಯವಾಗಿ ಅನಭಿಷಕ್ತ ದೊರೆಯ ಹಾಗೆ ವರ್ತಿಸುವಲ್ಲಿ ಈ ಡೆಮಾಕ್ರೆಟಿಕ್ ಸೆಟ್ ಆಪ್ ಪಾತ್ರ ಮುಖ್ಯವಾಗಿದೆ.

ಅದೊಂದು ಒತ್ತಡ ಎನಿಸದ ಹಾಗೆ ನಮ್ಮ ಮೇಲೆ ಹೇರಲ್ಪಡುವದೇ ಈ ಡೆಮಾಕ್ರೆಟಿಕ್ ಸೆಟ್ ಅಪ್ ನ ವೈಶಿಷ್ಟ್ಯ. ಇಲ್ಲಿ ಸಂಸ್ಕೃತಿ ಎನ್ನುವ ಪದ ಕೂಡಾ ಬದಲಾವಣೆ ಹೊಂದುತ್ತಿದೆ. ಅದ್ದು ಇಂದು ಎಲ್ಲ ಜನಸಮುದಾಯಗಳಿಗೂ ಸಾಮೂಹಿಕವಾಗಿ ಅನ್ವಯವಾಗುವ ಒಂದು ಜೀವನ ಶೈಲಿಯಾಗುತ್ತಿದೆ.

ಅಮೆರಿಕೆಯಂಥಾ ರಾಷ್ಟ್ರಗಳ ಪ್ರಗತಿಯ ಹಿಂದೆ ತಂತ್ರಜ್ಞಾನವನ್ನು ನೋಡುವ ಮುನ್ನ ಅಲ್ಲಿರುವ ಸಂಸ್ಕೃತಿ ಮತ್ತು ರಾಜಕೀಯಗಳೆರಡೂ ಪ್ರಜಾಪ್ರಭುತ್ವ ವ್ಯವಸ್ಥೆಯ ಪ್ರಭಾವಳಿಯಲ್ಲಿ ಸಿಲಿಕಿರುವ ಬಗ್ಗೆ ನಾವು ಗಮನಿಸಬೇಕಾಗುತ್ತದೆ. ಹಾಗೆಯೇ 1990ರ ದಶಕದ ನಂತರ ಸಮೂಹ ಮಾಧ್ಯಮಗಳು ತಮ್ಮ ಕೇಂದ್ರಿಕೃತ ವೃತ್ತ ಇಲ್ಲವೇ ಪರೀಧೀಯನ್ನು ಬಿಟ್ಟು ಹೊರಬಂದದ್ದು, ಸರ್ವವ್ಯಾಪಕವಾಗಿ ಪ್ರತಿಯೊಬ್ಬ ಪ್ರಜೆಯ ಕೈಗೆ ನಿಲುಕುವಂತಾಗಿದ್ದು, ವಿಕೇಂದ್ರೀಕರಣದ ಹಿನ್ನೆಲೆಯಲ್ಲಿ ಅವು ಕಾರ್ಯನಿರ್ವಹಿಸಲು ಆರಂಭಿಸಿರುವದು ಈ ಪ್ರಜಾಪ್ರಭುತ್ವದ ವ್ಯವಸ್ಥೆಯ ಪರಿಣಾಮವೇ ಹೌದು.

1920 ಕ್ಕಿಂತ ಮುಂಚೆ ಪರಿಸ್ಥಿತಿ ಹೀಗಿರಲಿಲ್ಲ. ಈ ಮಾಧ್ಯಮಗಳು ಕೆಲವು ಸ್ಥಾಪಿತ ಹಿತಾಸಕ್ತಿಗಳ ಗುತ್ತಿಗೆಯಾಗಿ ವ್ಯವಹರಿಸುತ್ತಿದ್ದವು. ಪಟ್ಟಭದ್ರರ ಮರ್ಜಿ ಕಾಯಲು ಅಂದು ಮಾಧ್ಯಮಗಳು ದುಡಿಯುತ್ತಿದ್ದವು. ಈಗ ಹಾಗಿಲ್ಲ ಪ್ರತಿಯೊಬ್ಬ ಈ ಮಾಧ್ಯಮದ ವಿಷಯವಾಗಿ ಅನಭಿಷಕ್ತ ದೊರೆಯ ಹಾಗೆ ವರ್ತಿಸುವಲ್ಲಿ ಈ ಡೆಮಾಕ್ರೆಟಿಕ್ ಸೆಟ್ ಆಪ್ ಪಾತ್ರ ಮುಖ್ಯವಾಗಿದೆ. ಥಾಮಸ್ ಫ್ರೈಡ್ ಮನ್ ಎನ್ನುವ ಅಂಕಣಕಾರ ಹೇಳುವಂತೆ ಈಗಿನ ಸಂದರ್ಭದಲ್ಲಿ 'everyone is connected but no one is in control' ಎನ್ನುವ ಮಾತು ಸತ್ಯವಾಗಿದೆ. ಜ್ಞಾನ ಎನ್ನುವುದು ಈಗ ಯಾರೊಬ್ಬನ ಖಾಸಗಿ ಸ್ವತ್ತಾಗಿ ಉಳಿದಿಲ್ಲ ಅದಕ್ಕೂ ಈ ಪ್ರಜಾಸತ್ತಾತ್ಮಕ ವ್ಯವಸ್ಥೆಯೇ ಕಾರಣ. ಸಾವಿರಾರು ವರ್ಷಗಳ ಕಾಲ ಯಾವ ತಪ್ಪನ್ನೂ ಮಾಡದೇ ವಿಶ್ವದ ಅನೇಕ ಜನ ಸಮುದಾಯಗಳು ಎಲ್ಲ ಸವಲತ್ತುಗಳಿಂದ ವಂಚಿತವಾಗಿದ್ದವು. ಈ ಬಗೆಯ ವಂಚನೆಯ ಜಾಲದ ಜಗಿ ಸಾಯುವಲ್ಲಿ ಈ ಪ್ರಜಾಪ್ರಭುತ್ವದ ಪಾತ್ರವಿದೆ.

ಎಲ್ಲ ವ್ಯವಸ್ಥೆಯಲ್ಲಿಯೂ ಎರಡು ಮುಖಗಳಿರುವಂತೆ ಇಲ್ಲಿಯೂ ಕಪ್ಪು ಮುಖ ಎನ್ನುವದಿದೆ. ವಿಜ್ಞಾನ, ತಂತ್ರಜ್ಞಾನ, ಆರ್ಥಿಕತೆ, ಉತ್ಪಾದನೆ, ಮಾರುಕಟ್ಟೆ, ಸಂಸ್ಕೃತಿ ಇವೆಲ್ಲವೂ ಜನ ಕೇಂದ್ರಿತವಾಗುತ್ತಿರುವಂತೆಯೇ ಕೆಲ ಅಪವರ್ತನೆಗಳೂ ಕೂಡಾ ಸರ್ವವ್ಯಾಪಕವಾಗಿ ಬೆಳೆಯುತ್ತಿವೆ ಅವುಗಳಲ್ಲಿ ಈಗ ಇಡೀ ವಿಶ್ವವನ್ನು ವ್ಯಾಪಕವಾಗಿ ಬಾದಿಸುತ್ತಿರುವ ಭಯೋತ್ಪಾದನೆಯೂ ಒಂದು. ಹಿಂಸೆ ಎನ್ನುವದು ಮಿಕ್ಕ ಎಲ್ಲ ಸಂಗತಿಗಳ ಹಾಗೆ ಪ್ರಜಾಸತ್ತಾತ್ಮಕವಾಗಿ ಹಂಚಿಕೆಯಾಗುತ್ತಿರುವುದು ತುಸು ವಿಷಾದದ ಸಂಗತಿಯೇ ಹೌದು. ಸಾಮಾಜಿಕ ಅನಿಷ್ಟಗಳು ಸಾರ್ವತ್ರಿಕವಾಗಿ ಹಂಚಿಕೆಯಾಗಿರುವದರ ಹಿಂದೆಯೂ ಈ ಪ್ರಜಾಪ್ರಭುತ್ವ ವ್ಯವಸ್ಥೆ ಇದ್ದಂತಹ ಅನುಭವವಾಗತ್ತದೆ. ಮೌಲ್ಯಾಧಾರಿತ ತತ್ವವೆನ್ನುವಂತೆ ಗ್ರಾಂಥಿಕವಾಗಿ ವಿಶ್ಲೇಷಿಸಲಾಗುವ ಈ ಪರಿಕಲ್ಪನೆ ವಾಸ್ತವದಲ್ಲಿ ಅಂದು ಪ್ಲೇಟೋ ಈ ವ್ಯವಸ್ಥೆಯನ್ನು ಕುರಿತು ಮಾತನಾಡಿದಂತಿದೆ.

ಈ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಕೊಡಮಾಡುವ ಕೆಲ ಸಿನಿಕ ಹಕ್ಕುಗಳು, ಅವುಗಳ ಬೆನ್ನಿಗೆ ಬಿದ್ದು ಬಡಿದಾಡುವ ಇಲ್ಲವೇ ಚಡಪಡಿಸುವ ಸನ್ನಿವೇಶಕ್ಕಿಂತಲೂ ಮಿಗಿಲಾದುದು ಇಲ್ಲಿ ಏನೂ ಇದ್ದಂತೆ ಎನಿಸುವದಿಲ್ಲ. 'ಆದರ್ಶ ನಿಜವಾದುದು ಆದರೆ ವಾಸ್ತವವಲ್ಲ' ಎನ್ನುವ ಹೇಳಿಕೆಯಂತೆ ಸದ್ಯದ ಡೆಮಾಕ್ರಟಿಕ್ ಸೆಟ್ ಅಪ್ ಇದೆ. ಅಂದ ಮಾತ್ರಕ್ಕೆ ಇಡೀ ವ್ಯವಸ್ಥೆಯನ್ನೇ ದೂಷಿಸಿ ಮಾತನಾಡುವುದು ಸರಿಯಲ್ಲ. ಅದೂ ಅಲ್ಲದೇ ಸವಾಧಿಕಾರದ ಗಡಸುತನ, ಚೂಪುತನಗಳ ಬದಿಯಲ್ಲಿ ನಿಂತು ನೋಡಿದಾಗ ಎಷ್ಟೇ ಕೆಟ್ಟು ಹೋದ ಸ್ಥಿತಿಯಲ್ಲಿಯೂ ಡೆಮಾಕ್ರಸಿ ಬಹುಜನರ ಬೇಡಿಕೆಯಾಗುತ್ತದೆ.

ಇನ್ನು ಈ ಬಹುಜನರು ಯಾವುದರ ಬಗ್ಗೆಯೂ ಗಂಭೀರವಾಗಿ ಆಲೋಚಿಸದೇ ಬದುಕುವ ಅತ್ಯಂತ ಯತಾರ್ಥವಾದ ದಿನಚರಿಯನ್ನು ರೂಢಿಸಿ ಕೊಂಡ ಜನಸಾಮಾನ್ಯರು. ಇವರ ಮಧ್ಯೆ ಯಾವದೇ ಪ್ರಚಲಿತ ವಿದ್ಯಮಾನಗಳನ್ನು ಹರವಿದರೂ ಅದು ಇವರ ಬದುಕಿನ ದಿನಚರಿಯನ್ನು ಬದಲಿಸುಷ್ಟು ಸಶಕ್ತವಾಗಿರುವದಿಲ್ಲ. ಇನ್ನು ವಿಚಾರಗಳನ್ನು ಕೊಂಚವಾದರೂ ಕದಲಿಸುವುದು ದೂರದ ಮಾತು. ಜೊತೆಗಿರುವ ಇವರಂಥಾ ಮಂದಿಯ ಮಾತನ್ನೇ 'ನೀವು ಅಂದಂಗೆ ..ನೀವು ಅಂದಂಗೆ' ಎಂದು ಸೋ .. ಎನ್ನುವ ಈ ಜನರ ಮಧ್ಯೆ ಪ್ರಜಾಪ್ರಭುತ್ವ, ರಾಜ ಪ್ರಭುತ್ವದ ಶೈಲಿಯಲ್ಲಿಯೇ ಶ್ರೀ ಸಾಮಾನ್ಯನ ಗಮನಕ್ಕೆ ಬಾರದಷ್ಟು ಕದ್ದು ಹೆಜ್ಜೆಯನ್ನೂರುತಾ ಮುನ್ನಡೆದಿದೆ.

ಇವರೋ ಎಲ್ಲ ಉಸಾಬರಿಗಳನ್ನು ಮೀರಿ, ಎಲ್ಲ ಸಂದರ್ಭಗಳಲ್ಲೂ ಮುಗಮ್ಮಾಗಿ ಗಾಂಧೀಜಿಯವರ ಮೂರು ಮಂಗಗಳಾದವರು. ಇಂಥಪ್ಪ ಜನಗಳ ಮಧ್ಯೆ ಪ್ರಜಾತಾಂತ್ರಿಕ ವ್ಯವಸ್ಥೆ ಕೇವಲ ಒಂದು ಆದರ್ಶ ವಿಷಯವಸ್ತು ಆಗಿ, ಯಾವದೋ ಒಂದು ಪುಸ್ತಕದ ಪಠ್ಯವಾಗಿ ನಿಲ್ಲುವಷ್ಟು ತ್ರಾಣವನ್ನು ಮಾತ್ರ ಪಡೆಯುತ್ತದೆ. ಜನರಿಂದ, ಜನರಿಗಾಗಿ ಎನ್ನುವ ಮಾತು ಕೇಳಲು ಅತ್ಯಂತ ಅಪ್ಯಾಯಮಾನವೆನಿಸುತ್ತದೆ. ವಾಸ್ತವದಲ್ಲಿ ಅದನ್ನು ನೋಡುವ ನಸೀಬು ನಮ್ಮ ಕಣ್ಣುಗಳಿಗೆ ಇರುವದಿಲ್ಲ.

ಪ್ರಜಾಪ್ರಭುತ್ವ ಎನ್ನುವದು ಮತಿಗೇಡಿಗಳ ಮೂರ್ತರೂಪ ಎನ್ನುವ ಗ್ರೀಕ್‌ದಾರ್ಶನಿಕರ ಮಾತನೊಮ್ಮೆ ಹೀಗೇ ಕಣ್ಣು ಮುಚ್ಚಿ ಮೆಲಕು ಹಾಕಿದರೆ 'ಹೌದೌದು' ಎನ್ನುವ ನಿಮ್ಮ ಅಂತರ್ಧ್ವನಿಯನ್ನು ಅಲ್ಲಗಳೆಯಲಾದೀತೇ..? ಸದ್ಯದ ಸಂದರ್ಭದಲ್ಲಿ ಇರುವ ಎಲ್ಲ ವ್ಯವಸ್ಥೆಗಳಲ್ಲಿಯೂ ಹಳವಂಡಗಳಿವೆ. ಆಯ್ಕೆ ಮಾಡಿ. ಕಳ್ಳನೋ.. ಇಲ್ಲವೇ ಸುಳ್ಳನೋ.. ಇವರಿಬ್ಬರಿಲ್ಲಿಯೇ ನೀವು ಒಬ್ಬನನ್ನು ಮನಸಾರೆಯಾಗಲೀ, ಮೀರಿಯಾಗಲೀ ಒಪ್ಪಿಕೊಳ್ಳಲೇ ಬೇಕು. ಇದು ಪ್ರಸ್ತುತ ಸಂದರ್ಭದ ದುರಂತ ಮತ್ತು ವಿಚಿತ್ರ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ಸಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಕೆಸರಿನ ಕಮಲ ಮುದುಡುತ್ತಿರುವುದೇಕೆ?

ನಾ ದಿವಾಕರ

ಭಾರತದ ರಾಜಕಾರಣದಲ್ಲಿ 1970ರ ದಶಕ ಗಮನಾರ್ಹವಾದದ್ದು. ಮೂರು ದಶಕಗಳ ಸ್ವಾತಂತ್ರ್ಯದ ರುಚಿಯನ್ನು ಸವಿದು, ಅನೇಕ ಎಡರುತೊಡರುಗಳನ್ನು ಎದುರಿಸಿ, ಒಂದು ನಿರ್ದಿಷ್ಟ ನೆಲೆ ಕಂಡುಕೊಳ್ಳುವ ನಿಟ್ಟಿನಲ್ಲಿ ಹಲವಾರು ರೀತಿಯ ಪ್ರಯೋಗಗಳನ್ನು ಮಾಡುತ್ತಾ ಮುನ್ನಡೆದಿದ್ದ ದೇಶಕ್ಕೆ ಪ್ರಮುಖ ಸವಾಲುಗಳು ಎದುರಾದದ್ದು ಈ ದಶಕದಲ್ಲೇ. ಔದ್ಯಮಿಕ ಬಂಡವಾಳವಾದದ ನೆಲೆಯಲ್ಲೇ ಸಮಾಜವಾದೀ ನೀತಿಗಳನ್ನು ಅನುಸರಿಸುವ ದ್ವಂದ್ವ ಮಾರ್ಗದಲ್ಲಿ ನಡೆಯುತ್ತಿದ್ದ ರಾಜಕೀಯ-ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗೆ ತನ್ನದೇ ಆದ ಪ್ರಜೆಗಳಿಂದ ಪ್ರತಿರೋಧ ಎದುರಾದದ್ದೂ ಈ ದಶಕದಲ್ಲೇ. ಪ್ರಜೆಗಳ ಈ ಪ್ರತಿರೋಧ ಹಲವಾರು ರೂಪಗಳಲ್ಲಿ ಪ್ರಕಟಗೊಂಡಿದ್ದೂ ಉಂಟು. ಬಂಡವಾಳ ವ್ಯವಸ್ಥೆಯ ಪರಿಧಿಯಲ್ಲೇ ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಮಾರ್ಗ, ಬಂಡವಾಳವಾದದ ಚೌಕಟ್ಟಿನಲ್ಲಿ ಸಮಾಜವಾದವನ್ನು ಸಾಕಾರಗೊಳಿಸುವ ಮಾರ್ಗ, ಇಡೀ ವ್ಯವಸ್ಥೆಯನ್ನು ಬುಡಮೇಲು ಮಾಡಿ ಹೊಸ ಸಮತಾವಾದದ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸುವ ಮಾರ್ಗ ಇವು ಪ್ರಮುಖ ಹೋರಾಟಗಳ ಧ್ಯೇಯಗಳಾದರೆ ಮತ್ತೊಂದೆಡೆ ಬಂಡವಾಳ ವ್ಯವಸ್ಥೆಯನ್ನು ಮತ್ತಷ್ಟು ಪುಷ್ಟೀಕರಿಸುವ ನಿಟ್ಟಿನಲ್ಲಿ ದೇಶದ ಸಂವಿಧಾನ ಮತ್ತು ಪ್ರಜಾಸತ್ತಾತ್ಮಕ ಸ್ವರೂಪವನ್ನೇ ಬದಲಾಯಿಸಿ ಧರ್ಮದ ನೆಲೆಗಟ್ಟಿನಲ್ಲಿ ರಾಷ್ಟ್ರನಿರ್ಮಾಣ ಮಾಡುವ ಹೋರಾಟವೂ ರೂಪುಗೊಂಡಿತ್ತು.

1970ರ ದಶಕದಲ್ಲಿ ದೇಶಾದ್ಯಂತ ಉಲ್ಬಣಿಸಿದ ಜನಪರ ಚಳುವಳಿಗಳು ಮತ್ತು ತೀವ್ರಗಾಮಿ ಹೋರಾಟಗಳನ್ನು ಪ್ರಜಾತಾಂತ್ರಿಕ ದೃಷ್ಟಿಕೋನದಿಂದ ಪರಾಮರ್ಶಿಸಿ, ನಿವಾರಿಸುವ ಬದಲು ಭಾರತದ ರಾಜಕೀಯ ವ್ಯವಸ್ಥೆಯು ದಮನಕಾರಿ ಪ್ರವೃತ್ತಿಯನ್ನು ಅನುಸರಿಸಿದ್ದು ಈ ದಶಕದ ರಾಜಕಾರಣದ ವೈಶಿಷ್ಟ್ಯ. ಚಾರಿತ್ರಿಕವಾಗಿ ನೋಡಿದಾಗಲೂ ಯಾವುದೇ ಬಂಡವಾಳ ಪ್ರೇರಿತ ಊಳಿಗಮಾನ್ಯ ವ್ಯವಸ್ಥೆ ತನ್ನ ರಕ್ಷಣೆಗಾಗಿ ಒಂದು ಚೌಕಟ್ಟನ್ನು ರೂಪಿಸಿ ಕೊಂಡಿರುವುದನ್ನು ಗಮನಿಸಬಹುದು. ರಾಷ್ಟ್ರದ ಐಕ್ಯತೆ, ಸಮಗ್ರತೆ, ರಾಜಕೀಯ ಸ್ಥಿರತೆ ಮತ್ತು ಅಭ್ಯುದಯದ ಹೆಸರಿನಲ್ಲಿ ಆಳ್ವಿಕರು ವ್ಯವಸ್ಥೆಯ ಸುತ್ತಲೂ ನಿರ್ಮಿಸಿಕೊಳ್ಳುವ ರಕ್ಷಣೆಯ ಬೇಲಿ, ದೇಶದ ಪ್ರಜೆಗಳನ್ನು ಅನ್ಯರ ಆಕ್ರಮಣದಿಂದ ರಕ್ಷಿಸುವಂತೆಯೇ ಅದೇ ಪ್ರಜೆಗಳನ್ನು ದಮನಿಸಲೂ ಪ್ರಯೋಗಿಸಲ್ಪಡುತ್ತದೆ ಎಂದು ಭಾರತೀಯ ಜನತೆಯ ಗ್ರಹೀತಕ್ಕೆ ಬಂದಿದ್ದು 1975ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ.



ಈ ಸಂದರ್ಭದಲ್ಲಿ ದೇಶದ ಪ್ರಜಾಸತ್ತಾತ್ಮಕ ಚಳುವಳಿಗಳಿಗ ಪ್ರಜಾಸತ್ತೆಯ ರಕ್ಷಣೆಯೊಂದೇ ಪರಮ ಧ್ಯೇಯವಾಗಿದ್ದು, ವ್ಯವಸ್ಥೆಯ ಮೂಲ ಸ್ವರೂಪವನ್ನು ಲೆಕ್ಕಿಸದೆ ಪ್ರಜಾತಂತ್ರವನ್ನು ಉಳಿಸಲು ಹೋರಾಡುವುದು ಅನಿವಾರ್ಯವಾಗಿತ್ತು. ಹಾಗಾಗಿ ಜೆಪಿ ಅವರ ಸಂಪೂರ್ಣ ಕ್ರಾಂತಿಯೂ ಸಹ ತನ್ನ ಸಮಾಜವಾದಿ ಬೇರುಗಳನ್ನು ಸಡಿಲಿಸಿ, ಸಂಸದೀಯ ಪ್ರಜಾಸತ್ತೆಯನ್ನು ಸಮರ್ಥಿಸುವ ಎಲ್ಲ ರೀತಿಯ ರಾಜಕೀಯ ಗುಂಪುಗಳನ್ನೂ ಅಪ್ಪಿಕೊಂಡಿತ್ತು. ಸಂಪೂರ್ಣ ಕ್ರಾಂತಿಯ ಸಂದರ್ಭದಲ್ಲಿ ಯಾವುದೇ ಒಂದು ನಿರ್ದಿಷ್ಟ ಸಿದ್ಧಾಂತವಾಗಲೀ, ಮೂಲಭೂತ ಪರಿವರ್ತನೆಯ ಧ್ಯೇಯವಾಗಲೀ ಮುಂಚೂಣಿಯಲ್ಲಿರಲಿಲ್ಲ. ಒಂದು ಸಿದ್ಧ ರೂಪದ ರಾಜಕೀಯ ವ್ಯವಸ್ಥೆಯ ಚೌಕಟ್ಟಿನೊಳಗೇ ಕೆಲವು ಮಾರ್ಪಾಡುಗಳನ್ನು ಮಾಡುವ ಮೂಲಕ ದೇಶದ ಪ್ರಜಾಸತ್ತೆಯನ್ನು ರಕ್ಷಿಸುವ ಏಕಮೇವ ಧ್ಯೇಯದೊಂದಿಗೆ ಚಳುವಳಿ ರೂಪುಗೊಂಡಿತ್ತು. ಹಾಗಾಗಿಯೇ ಇಂದಿರಾಗಾಂಧಿ ಸರ್ಕಾರ ಹೇರಿದ್ದ ಜನತಂತ್ರವಿರೋಧಿ ತುರ್ತುಪರಿಸ್ಥಿತಿಯ ಮೂಲಭೂತ ಲಕ್ಷಣಗಳನ್ನಾಗಲೀ, ಸಾಮಾಜಿಕ-ಆರ್ಥಿಕ ಹಿನ್ನೆಲೆಯನ್ನಾಗಲೀ ಗಂಭೀರವಾಗಿ ಪರಿಗಣಿಸುವ ಪ್ರಯತ್ನಗಳೂ ಆಗ ನಡೆಯಲಿಲ್ಲ. ಜಾಗತಿಕ ಬಂಡವಾಳ ವಾದದ ಪ್ರೇರಣೆಯಿಂದ ಜಗತ್ತಿನಾದ್ಯಂತ ನಡೆಯುತ್ತಿದ್ದ ಪ್ರಕ್ರಿಯೆಗಳ ಛಾಯೆ ತುರ್ತು ಪರಿಸ್ಥಿತಿಯ ರೂಪದಲ್ಲಿ ಭಾರತದಲ್ಲೂ ವ್ಯಕ್ತವಾಗಿದ್ದು ಗಣನೆಗೆ ಬರಲೂ ಇಲ್ಲ.

ಹಾಗಾಗಿ ಜೆಪಿಯವರ ಸಂಪೂರ್ಣ ಕ್ರಾಂತಿಯ ಮೆರವಣಿಗೆ ಒಂದು ಆಯಸ್ಕಾಂತದಂತೆ ರಸ್ತೆ ಮಾರ್ಗದ ಇಕ್ಕೆಲಗಳಲ್ಲಿದ್ದ ಎಲ್ಲ ರೀತಿಯ ಗಿಡಗಂಟಿಗಳನ್ನೂ ಆಕರ್ಷಿಸುತ್ತಾ ಮುಂದುವರೆದಿತ್ತು. ಇವುಗಳಲ್ಲಿ ಹೂವಿನ ಬಳ್ಳಿಗಳಿದ್ದಂತೆಯೇ ಮುಳ್ಳಿನ ಗಂಟುಗಳೂ ಇದ್ದುದು ಬಾಹ್ಯ ನೋಟಕ್ಕೆ ತಿಳಿಯದೆ ಹೋಗಿತ್ತು. ಅಥವಾ ತಿಳಿಯುವ ವೇಳೆಗೆ ಪರಿಸ್ಥಿತಿ ಕೈಮೀರಿತ್ತು. ಪ್ರಜಾಸತ್ತೆಯನ್ನು ರಕ್ಷಿಸಲು ಹೊರಟ ಶಿಸ್ತಿನ ಪಡೆಯಲ್ಲಿ ಪ್ರಜಾಸತ್ತೆಯನ್ನೇ ಒಪ್ಪದ ಶಕ್ತಿಗಳೂ ಸೇರಿಕೊಂಡಿದ್ದು ಬಂಡವಾಳವಾದದ ಅಪೇಕ್ಷೆಗೆ ಪೂರಕವಾಗಿತ್ತು. ಆದ್ದರಿಂದಲೇ ಈ ರಾಜಕೀಯ ಮಂಥನ ಕ್ರಿಯೆಯಲ್ಲಿ ತನ್ನದೇ ಆದ ಪಾತ್ರವಹಿಸಿದ್ದ ಜಾಗತಿಕ ಬಂಡವಾಳವು ಸಂಪೂರ್ಣ ಕ್ರಾಂತಿಯನ್ನು ಕವಲು ದಾರಿಯಲ್ಲಿ ನಡೆಸಿ, ದುರಂತಮಯ ದಿಗಂತ ತಲುಪಿಸಿತ್ತು. ಈ ದಿಗಂತದ ಅಂಚಿನಲ್ಲಿ ಇಡೀ ಕ್ರಾಂತಿಯ ಪರಿಕಲ್ಪನೆಯೇ ಛಿದ್ರವಾದರೂ, ಬಂಡವಾಳ ವ್ಯವಸ್ಥೆಗೆ ಅಗತ್ಯವಾಗಿದ್ದ

ಭಾರತೀಯ ಜನತಾ ಪಕ್ಷ ೧೯೮೦ರಲ್ಲಿ ಒಂದು ಸಂಸದೀಯ ರಾಜಕೀಯ ಪಕ್ಷವಾಗಿ ರೂಪುಗೊಂಡಿದ್ದರೂ ಭಾರತದ ರಾಜಕಾರಣದಲ್ಲಿ ಹೊಸದಾಗಿ ಉಗಮಿಸಿದ ರಾಜಕೀಯ ಶಕ್ತಿಯಾಗಿರಲಿಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಪಣತೊಟ್ಟು ಹೋರಾಡಿದ ಹಿಂದು ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘಗಳ ರಾಜಕೀಯ ಪ್ರತಿನಿಧಿಯಾಗಿದ್ದ ಜನಸಂಘವೇ ಭಾಜಪ ಎಂಬ ಹೆಸರಿನಲ್ಲಿ ಹೊಸ ಅವತಾರ ತಾಳಿತ್ತು. ಇದೇ ಅವಧಿಯಲ್ಲಿ ತುರ್ತುಪರಿಸ್ಥಿತಿಯ ಕರಾಳ ನೆನಪು ಭಾರತದ ನಾಗರಿಕ ಸಮಾಜವನ್ನು ಕಾಡುತ್ತಿದ್ದಂತೆಯೇ ಜಾಗತಿಕ ಬಂಡವಾಳ-ಔದ್ಯಮಿಕ ಹಿತಾಸಕ್ತಿಗಳ ಕಬಂಧ ಬಾಹುಗಳೂ ಆವರಿಸುತ್ತಿದ್ದವು. ಭಾರತೀಯ ಜನತೆ ಒಂದು ಪರ್ಯಾಯ ರಾಜಕೀಯ ವ್ಯವಸ್ಥೆಗಾಗಿ ಹಪಹಪಿಸುತ್ತಿತ್ತು.

ಹಾಗು ಔದ್ಯಮಿಕ ಕ್ಷೇತ್ರಕ್ಕೆ ಅತ್ಯವಶ್ಯವಾಗಿದ್ದ ರಾಜಕೀಯ ಪಕ್ಷವೂ ಉದಯಿಸಿತ್ತು. ಮೂರು ದಶಕಗಳ ಗಣತಂತ್ರ ವ್ಯವಸ್ಥೆಯು ಕವಲು ಹಾದಿಯಲ್ಲಿ ಕ್ರಮಿಸುತ್ತಿದ್ದ ಸಂದರ್ಭದಲ್ಲಿ ಮಡುಗಟ್ಟಿದ್ದ ಕೆಸರಿನಲ್ಲಿ ಅರಳಿದ ಕಮಲವೇ ಭಾರತೀಯ ಜನತಾ ಪಕ್ಷದ ಹೆಸರಿನಲ್ಲಿ ರಾಜಕೀಯ ಪಕ್ಷವಾಗಿ ರೂಪುಗೊಂಡಿತ್ತು.

ಭಾಜಪದ ಉಗಮದ ಹಿನ್ನೆಲೆ

ಭಾರತೀಯ ಜನತಾ ಪಕ್ಷ 1982ರಲ್ಲಿ ಒಂದು ಸಂಸದೀಯ ರಾಜಕೀಯ ಪಕ್ಷವಾಗಿ ರೂಪುಗೊಂಡಿದ್ದರೂ ಭಾರತದ ರಾಜಕಾರಣದಲ್ಲಿ ಹೊಸದಾಗಿ ಉಗಮಿಸಿದ ರಾಜಕೀಯ ಶಕ್ತಿಯಾಗಿರಲಿಲ್ಲ. ಸ್ವಾತಂತ್ರ್ಯ ಪೂರ್ವದಿಂದಲೂ ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಪಣ ತೊಟ್ಟು ಹೋರಾಡಿದ ಹಿಂದು ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಘಗಳ ರಾಜಕೀಯ ಪ್ರತಿನಿಧಿಯಾಗಿದ್ದ ಜನಸಂಘವೇ ಭಾಜಪ ಎಂಬ ಹೆಸರಿನಲ್ಲಿ ಹೊಸ ಅವತಾರ ತಾಳಿತ್ತು. ಇದೇ ಅವಧಿಯಲ್ಲಿ ತುರ್ತುಪರಿಸ್ಥಿತಿಯ ಕರಾಳ ನೆನಪು ಭಾರತದ ನಾಗರಿಕ ಸಮಾಜವನ್ನು ಕಾಡುತ್ತಿದ್ದಂತೆಯೇ ಜಾಗತಿಕ ಬಂಡವಾಳ ಮತ್ತು ಔದ್ಯಮಿಕ ಹಿತಾಸಕ್ತಿಗಳ ಕಬಂಧ ಬಾಹುಗಳೂ ಆವರಿಸುತ್ತಿದ್ದವು. ಭಾರತೀಯ ಜನತೆ ಒಂದು ಪರ್ಯಾಯ ರಾಜಕೀಯ ವ್ಯವಸ್ಥೆಗಾಗಿ ಹಪಹಪಿಸುತ್ತಿತ್ತು. ಪಂಜಾಬ್, ಕಾಶ್ಮೀರ, ಈಶಾನ್ಯ ರಾಜ್ಯಗಳು ಅಸ್ಮಿತೆಯ ಹೋರಾಟಗಳಲ್ಲಿ ತೊಡಗಿದ್ದರೆ, ಬಿಹಾರ, ಆಂಧ್ರಪ್ರದೇಶ, ಬಂಗಾಲಗಳಲ್ಲಿ ವ್ಯವಸ್ಥೆಯ ವಿರುದ್ಧ ಹೋರಾಟಗಳು ರೂಪುಗೊಳ್ಳುತ್ತಿದ್ದವು. ದಲಿತ ಚಳುವಳಿ, ಮಹಿಳಾ ಚಳುವಳಿಗಳ ಹಿನ್ನೆಲೆಯಲ್ಲೇ ಜಾತೀಯ ಅಸ್ಮಿತೆಗಳ ಹೋರಾಟಗಳೂ ವರ್ಧಿಸುತ್ತಿದ್ದವು.

ಆದರೆ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಈ ಹೋರಾಟಗಳಿಗೆ ಸ್ಪಂದಿಸುವ ಮಾನವೀಯ ಕಾಳಜಿಯಾಗಲೀ, ನೈತಿಕ ಕಳಕಳಿಯಾಗಲೀ ಇರಲಿಲ್ಲವೆಂಬುದೂ ಅಷ್ಟೇ ಸತ್ಯ. ವಸಾಹತು ಆಳ್ವಿಕೆಯ ಅನೇಕ ಲಕ್ಷಣಗಳನ್ನು ಉಳಿಸಿಕೊಂಡೇ ಪ್ರಜಾಸತ್ತೆಯ ಮುಖವಾಡ ಧರಿಸಿದ್ದ ಭಾರತದ ರಾಜಕೀಯ ವ್ಯವಸ್ಥೆಯನ್ನು ಪರೋಕ್ಷವಾಗಿ ಬಂಡವಾಳವಾದದ ಸಮರ್ಥಕರೇ ನಿಯಂತ್ರಿಸುತ್ತಿದ್ದುದು ನೆಹರೂ ಕಾಲದಿಂದಲೂ ಸ್ಪಷ್ಟವಾಗಿತ್ತು. ತುರ್ತುಪರಿಸ್ಥಿತಿಯ ನಂತರ ಈ ಪ್ರವೃತ್ತಿ ಇನ್ನಷ್ಟು ಸ್ಪಷ್ಟವಾಗಿತ್ತು. ಆದರೆ ಆಳ್ವಿಕರ ದ್ವಂದ್ವ ನೀತಿಗಳನ್ನು ಮೌನವಾಗಿ ಸಹಿಸುವ ಪ್ರವೃತ್ತಿ ಜನರಲ್ಲಿ ಮಾಯವಾಗಿತ್ತು. 70ರ ದಶಕದ ಹೋರಾಟಗಳು, ತುರ್ತುಪರಿಸ್ಥಿತಿ ಮತ್ತು ಸಂಪೂರ್ಣ ಕ್ರಾಂತಿಯ ಕೊಡುಗೆ ಎಂದರೆ ಇದೇ ಎಂದೂ ಹೇಳಬಹುದು. ಹಾಗಾಗಿ ಜಾಗತಿಕ ಬಂಡವಾಳ ವ್ಯವಸ್ಥೆಗೆ ಭಾರತದಂತಹ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ತನ್ನ ಅಸ್ತಿತ್ವ ಹಾಗೂ ಅಧಿಪತ್ಯವನ್ನು ಉಳಿಸಿಕೊಳ್ಳಲು ಒಂದು ಪರ್ಯಾಯ ರಾಜಕೀಯ ಶಕ್ತಿಯ ಅವಶ್ಯಕತೆ ಇತ್ತು. ಸಂಸದೀಯ ಪ್ರಜಾತಂತ್ರದ ಚೌಕಟ್ಟಿನಲ್ಲೇ ಬಂಡವಾಳವಾದವನ್ನು ಪೋಷಿಸಿ, ಜನಸಾಮಾನ್ಯರಲ್ಲಿ ನೆಲೆಸಿರಬಹುದಾದ ಐಕಮತ್ಯವನ್ನು ಭಂಗಗೊಳಿಸುವ ಮೂಲಕ ಶಾಶ್ವತವಾದ ಸದೃಢ ಪ್ರಭುತ್ವವನ್ನು ರೂಪಿಸುವುದು ಸಾಮ್ರಾಜ್ಯಶಾಹಿಗಳಿಗೆ, ಭಾರತೀಯ ಬಂಡವಳಿಗರಿಗೆ ಮತ್ತು ಮತೀಯವಾದಿ ಬಲಪಂಥೀಯರಿಗೆ ಅವಶ್ಯವಾಗಿತ್ತು. ಭಾರತದ ರಾಜಕಾರಣದಲ್ಲಿ ಈ ಸ್ಥಾನವನ್ನು ತುಂಬಲು ಭಾಜಪ ಸಿದ್ಧವಾಗಿತ್ತು.



ತನ್ನ ಬಲಪಂಥೀಯ ಧೋರಣೆಗಳನ್ನು ಮರೆಮಾಚಿ, ಗಾಂಧಿ ಸಮಾಜವಾದ ಮತ್ತು ಪ್ರಜಾತಂತ್ರದ ಸೋಗು ಹಾಕಿಕೊಂಡು ಭಾರತೀಯ ಪ್ರಜಾಸತ್ತೆಯಲ್ಲಿ ಶಾಶ್ವತ ಸ್ಥಾನ ಬಯಸಿದ ಭಾಜಪಕ್ಕೆ ಉದಾರವಾದಿ ಮುಖವಾಡದ ಅಟಲ್ ಬಿಹಾರಿ ವಾಜಪೇಯಿ ನಾಯಕರಾಗುವುದು ಅನಿವಾರ್ಯವಾಯಿತು. ತನ್ನ ಪ್ರಾರಂಭಿಕ ಹಂತದಲ್ಲಿ ಭಾಜಪಕ್ಕೆ ಚುನಾವಣೆಗಳಿಗಿಂತಲೂ ಸಮಾಜದ ವಿಭಿನ್ನ ವರ್ಗಗಳನ್ನು ಆಕರ್ಷಿಸುವುದು ಹೆಚ್ಚು ಅಪೇಕ್ಷಣೀಯವಾಗಿದ್ದರಿಂದ, ಸಂಘಪರಿವಾರದ ಕಾರ್ಯಕರ್ತರ ಮೂಲಕವೇ ತನ್ನ ರಾಜಕೀಯ ಪ್ರಭಾವವನ್ನು ಹೆಚ್ಚಿಸಿಕೊಳ್ಳತೊಡಗಿತ್ತು. 1980ರ ಉತ್ತರಾರ್ಧದಲ್ಲಿ ಎಡಪಂಥೀಯ ಚಳುವಳಿ ಹಾಗೂ ದಲಿತ ಚಳುವಳಿಗಳು ತಮ್ಮ ಕಾವು ಕಳೆದುಕೊಂಡಿದ್ದರಿಂದ ಸಮಾಜದ ವಿಭಿನ್ನ ಸಮುದಾಯಗಳಿಗೆ ಸ್ಪಂದಿಸುವುದು ಭಾಜಪಕ್ಕೆ ಸುಲಭವಾಗಿತ್ತು. ಆದಾಗ್ಯೂ ಭಾಜಪದ ಪ್ರಮುಖ ಗುರಿ ವಂಚಿತ ಜನಸಮುದಾಯಗಳಾಗಿರದೆ, ತಮ್ಮ ಅಸ್ತಿತ್ವ ಹಾಗೂ ಅಸ್ಮಿತೆಗಾಗಿ ಹಾತೊರೆಯುತ್ತಿದ್ದ ಊಳಿಗಮಾನ್ಯ ಶಕ್ತಿಗಳು, ಬಂಡವಳಿಗರು, ಉದ್ಯಮಿಗಳು ಹಾಗೂ ಶ್ರೀಮಂತ ರೈತ ಸಮುದಾಯಗಳ ಮೇಲೆ ಭಾಜಪದ ಗಮನ ಕೇಂದ್ರೀಕೃತವಾಗಿತ್ತು.

1970ರ ದಶಕದಲ್ಲಿ ದೇಶಾದ್ಯಂತ ಉಲ್ಬಣಿಸಿದ ಜನಪರ ಚಳುವಳಿಗಳು– ತೀವ್ರಗಾಮಿ ಹೋರಾಟಗಳನ್ನು ಪ್ರಜಾತಾಂತ್ರಿಕ ದೃಷ್ಟಿಕೋನದಿಂದ ಪರಾಮರ್ಶಿಸಿ, ನಿವಾರಿಸುವ ಬದಲು ಭಾರತದ ರಾಜಕೀಯ ವ್ಯವಸ್ಥೆಯು ದಮನಕಾರಿ ಪ್ರವೃತ್ತಿಯನ್ನು ಅನುಸರಿಸಿದ್ದು ಈ ದಶಕದ ರಾಜಕಾರಣದ ವೈಶಿಷ್ಟ್ಯ. ಚಾರಿತ್ರಿಕವಾಗಿ ನೋಡಿದಾಗಲೂ ಯಾವುದೇ ಬಂಡವಾಳ ಪ್ರೇರಿತ ಊಳಿಗಮಾನ್ಯ ವ್ಯವಸ್ಥೆ ತನ್ನ ರಕ್ಷಣೆಗಾಗಿ ಒಂದು ಚೌಕಟ್ಟನ್ನು ರೂಪಿಸಿಕೊಂಡಿರುವುದನ್ನು ಗಮನಿಸಬಹುದು.

ನಗರ ಪ್ರದೇಶದ ಶ್ರೀಮಂತ–ಮಧ್ಯಮ ವರ್ಗದ ಜನತೆಯೊಂದಿಗೇ ಗ್ರಾಮೀಣ ಭಾರತದ ದುಡಿಯುವ ವರ್ಗಗಳನ್ನು ಮತ್ತು ನಿಮ್ನ ಜಾತಿ ಸಮುದಾಯಗಳನ್ನು ತನ್ನ ಹಿಂದುತ್ವ ಸಿದ್ಧಾಂತದಿಂದ ಆಕರ್ಷಿಸಲು ಅಯೋಧ್ಯ ರಾಮಮಂದಿರ, ಬಾಬ್ರಿ ಮಸೀದಿ ಹಾಗೂ ವಿ.ಪಿ.ಸಿಂಗ್ ಸರ್ಕಾರದ ಮಂಡಲ್ ವರದಿಯ ಅನುಷ್ಠಾನ ಪೂರಕವಾಗಿತ್ತು. ದೇಶದ ದುಡಿಯುವ ವರ್ಗಗಳಲ್ಲಿನ ಹಾಗೂ ಶ್ರಮಜೀವಿಗಳಲ್ಲಿನ ಐಕ್ಯತೆಯನ್ನು ಭಂಗಗೊಳಿಸಿ ಔದ್ಯಮಿಕ ಕ್ಷೇತ್ರದ ಶ್ರೀಮಂತ ವರ್ಗಗಳಿಗೆ ತಮ್ಮ ಬಂಡವಾಳ ನೀತಿಯನ್ನು ಸುಲಭವಾಗಿ ಜಾರಿಗೊಳಿಸಲು ಕಾಂಗ್ರೆಸ್ಸಿಗಿಂತಲೂ ಭಾಜಪ ಒಂದು ಹೆಜ್ಜೆ ಮುಂದಿದ್ದುದು, ಜಾಗತಿಕ ಬಂಡವಾಳ ವ್ಯವಸ್ಥೆಗೆ ಪುಷ್ಟಿ ನೀಡಿತ್ತು. ಇದೇ ಸಂದರ್ಭದಲ್ಲೇ ಭಾರತೀಯ ಆರ್ಥಿಕತೆಯನ್ನು ಪ್ರವೇಶಿಸಿದ ಜಾಗತೀಕರಣ ಪ್ರಕ್ರಿಯೆಗೂ ಒಂದು ಬಲಪಂಥೀಯ ರಾಜಕಾರಣದ ಅವಶ್ಯಕತೆ ಹೆಚ್ಚಾಗಿತ್ತು. ಸಾಮಾಜಿಕ ನ್ಯಾಯ, ಸಮಾಜವಾದ, ಸೆಕ್ಯುಲರಿಸಂ, ಅಲಿಪ್ತ ರಾಷ್ಟ್ರ ನೀತಿ, ಸಾಮ್ರಾಜ್ಯಶಾಹಿ ವಿರೋಧಿ ನಿಲುವು ಇವೆಲ್ಲವೂ ಜಾಗತೀಕರಣ ಪ್ರಕ್ರಿಯೆಗೆ ಕಂಟಕಪ್ರಾಯವಾಗಿದ್ದವು. ಕಾಂಗ್ರೆಸ್ ಮತ್ತಿತರ ಪಕ್ಷಗಳು ಈ ನೀತಿಗಳ ಬಲವಾದ ಸಮರ್ಥಕರಲ್ಲದಿದ್ದರೂ, ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ಈ ನೀತಿಗಳನ್ನು ಅನುಸರಿಸಲು ಯತ್ನಿಸುತ್ತಿದ್ದರು.

ಆದರೆ ಭಾಜಪದ ಪ್ರವೇಶದಿಂದ ಈ ಎಲ್ಲ ನೀತಿಗಳೂ ಸಾರ್ವಜನಿಕ ಚರ್ಚೆಗೊಳಗಾದುದೇ ಅಲ್ಲದೆ ಪ್ರಶ್ನಾರ್ಹವೂ ಆದವು. ಬಾಬ್ರಿ ಮಸೀದಿ ವಿವಾದ, ಮಂಡಲ್ ವಿರೋಧಿ ಆಂದೋಲನ, ಮುಕ್ತ ಆರ್ಥಿಕತೆಯ ಪ್ರತಿಪಾ



ದನೆ, ಅಮೆರಿಕ ಪರವಾದ ವಿದೇಶಿ ನೀತಿ, ಮೀಸಲಾತಿಗೆ ವಿರೋಧ ಹೀಗೆ ಹಲವು ರೀತಿಗಳಲ್ಲಿ ಭಾಜಪ ತನ್ನ ರಾಜಕೀಯ ಪ್ರಣಾಳಿಕೆಯನ್ನು ಅನಾವರಣಗೊಳಿಸಿತ್ತು. ಭಾರತೀಯ ಸಂವಿಧಾನವನ್ನೇ ಪರಾಮರ್ಶಿಸಿ, ಪುನರ್‌ರಚಿಸುವ ಕೈಂಕರ್ಯಕ್ಕೂ ಸಂಘಪರಿವಾರದ ಧರ್ಮ ಸಂಸದ್ ಮುಂದಾಗಿದ್ದುದನ್ನು ಈ ದೃಷ್ಟಿಯಿಂದಲೇ ನೋಡಬೇಕಾಗುತ್ತದೆ. ವಿದೇಶಿ ಬಂಡವಾಳ ಮತ್ತು ಜಾಗತಿಕ ಹಣಕಾಸು ಬಂಡವಾಳ ಭಾರತೀಯ ಆರ್ಥಿಕತೆಯಲ್ಲಿ ಮುಕ್ತ ಪ್ರವೇಶ ಪಡೆಯಲು ಭಾಜಪದ ಈ ನಿಲುವು ಪೂರಕವಾಗಿತ್ತು. 1989ರ ಅಡ್ವಾನಿ ಸಾರಥ್ಯದ ರಥಯಾತ್ರೆಯಿಂದ 1992ರ ಬಾಬ್ರಿ ಮಸೀದಿಯ ಧ್ವಂಸದ ಘಟನೆಯ ನಡುವೆ ದೇಶದಲ್ಲುಂಟಾದ ಮತೀಯ ಸಂಘರ್ಷಗಳು, ಜಾತಿ ಸಂಘರ್ಷಗಳು, ಸಾಮಾಜಿಕ ಕ್ಷೋಭೆ ಮತ್ತು ಆರ್ಥಿಕ ಹಿನ್ನಡೆ ಇವೆಲ್ಲವೂ ಜಾಗತೀಕರಣದ ಪ್ರವೇಶದ ಮೆಟ್ಟಿಲುಗಳಾಗಿ ಪರಿಣಮಿಸಿದವು.

ಈ ಸನ್ನಿವೇಶದಲ್ಲಿ ಉದ್ಭವಿಸಿದ ಸ್ಪರ್ಧಾತ್ಮಕ ರಾಜಕೀಯದಲ್ಲಿ ಭಾಜಪದ ಮುನ್ನಡೆಯನ್ನು ತಡೆಗಟ್ಟಲು ನರಸಿಂಹರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಭಾರತವನ್ನು ಮುಕ್ತ ಮಾರುಕಟ್ಟೆಯ ರಾಷ್ಟ್ರವೆಂದು ಘೋಷಿಸಿ, ಗ್ಯಾಟ್ ಒಪ್ಪಂದಕ್ಕೆ ತುಟಿಪಿಟಕ್ ಎನ್ನದೆ ಸಹಿ ಮಾಡಿ, ಬಂಡವಾಳವಾದ ಜಾಗತೀಕರಣ ಪ್ರಕ್ರಿಯೆಗೆ ಕೆಂಪುಗಂಬಳಿ ಹಾಸಿ ಸ್ವಾಗತಿಸಿತ್ತು. 1986-91ರ ನಡುವಿನ ರಾಜಕೀಯ ಬೆಳವಣಿಗೆಗಳಿಂದ ದೇಶದ ಆರ್ಥಿಕ ಪರಿಸ್ಥಿತಿ ಹೀನಾಯ ಹಂತಕ್ಕೆ ತಲುಪಿದ್ದನ್ನು ಈ ಹಿನ್ನೆಲೆಯಲ್ಲೇ ನೋಡಬೇಕಾಗುತ್ತದೆ.

ಹಿಂದುತ್ವದ ಮುನ್ನಡೆ

ಬಾಬ್ರಿ ಮಸೀದಿಯ ಧ್ವಂಸ ಕೇವಲ ಭಾರತದ ಸಾಮಾಜಿಕ ಸೌಹಾರ್ದತೆಯನ್ನಷ್ಟೇ ಕದಡಲಿಲ್ಲ. ಬದಲಾಗಿ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯ ಬುನಾದಿಯನ್ನೇ ಅಲುಗಾಡಿಸಿತ್ತು. ಸಾಮಾಜಿಕ ಸೌಹಾರ್ದತೆ-ಸಾಮಾನ್ಯ ಜನತೆಯ ನಡುವಿನ ಭ್ರಾತೃತ್ವವನ್ನು ನಾಶಮಾಡುವ ಮೂಲಕ ತನ್ನ ಮತೀಯ ರಾಜಕಾರಣವನ್ನು ಪೋಷಿಸಿ, ಅಂತಿಮವಾಗಿ ಬಂಡವಾಳ ವಾದವನ್ನು ಪುಷ್ಟೀಕರಿಸುವ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವ ಸಂಘಪರಿವಾರದ ಏಳು ದಶಕಗಳ ಕನಸನ್ನು ಸಾಕಾರಗೊಳಿಸಲು ಡಿಸೆಂಬರ್ 6 1992ರಂದು ಗುದ್ದಲಿ ಪೂಜೆ ಮಾಡಲಾಗಿತ್ತೆಂದು ಹೇಳಬಹುದು.

ಬಾಬ್ರಿ ಮಸೀದಿಯ ಧ್ವಂಸ ಕೇವಲ ಭಾರತದ ಸಾಮಾಜಿಕ ಸೌಹಾರ್ದತೆಯನ್ನಷ್ಟೇ ಕದಡಲಿಲ್ಲ. ಬದಲಾಗಿ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯ ಬುನಾದಿಯನ್ನೇ ಅಲುಗಾಡಿಸಿತ್ತು. ಸಾಮಾಜಿಕ ಸೌಹಾರ್ದತೆ ಮತ್ತು ಸಾಮಾನ್ಯ ಜನತೆಯ ನಡುವಿನ ಭ್ರಾತೃತ್ವವನ್ನು ನಾಶಮಾಡುವ ಮೂಲಕ ತನ್ನ ಮತೀಯ ರಾಜಕಾರಣವನ್ನು ಪೋಷಿಸಿ, ಅಂತಿಮವಾಗಿ ಬಂಡವಾಳವಾದವನ್ನು ಪುಷ್ಟೀಕರಿಸುವ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವ ಸಂಘಪರಿವಾರದ ಏಳು ದಶಕಗಳ ಕನಸನ್ನು ಸಾಕಾರಗೊಳಿಸಲು ಡಿಸೆಂಬರ್ 6 1992ರಂದು ಗುದ್ದಲಿ ಪೂಜೆ ಮಾಡಲಾಗಿತ್ತೆಂದು ಹೇಳಬಹುದು. ರಾಮಮಂದಿರದ ನಿರ್ಮಾಣ ಭಾಜಪದ ಕನಸಾಗಿರಲಿಲ್ಲ ಆದರೆ ಮಂದಿರಕ್ಕಾಗಿ ಸಂಗ್ರಹಿಸಿದ ಇಟ್ಟಿಗೆಗಳು, ಹಿಂದೂ ರಾಷ್ಟ್ರ ನಿರ್ಮಾಣದ ನೆಪದಲ್ಲಿ ದೇಶದ ಶ್ರಮಿಕ ವರ್ಗಗಳ ಹಾಗೂ ಶೋಷಿತ ಜನಸಮುದಾಯಗಳ ಹಿತಾಸಕ್ತಿಗಳನ್ನು ಶಾಶ್ವತವಾಗಿ ಸಮಾಧಿಮಾಡುವ ಅಡಿಗಲ್ಲುಗಳಾಗಿ ಪರಿಣಮಿಸಿದ್ದವು.

ಜಾಗತೀಕರಣದ ಪೂಜಾರಿಗಳಾಗಿದ್ದ ಕೈಗಾರಿಕೋದ್ಯಮಿಗಳು ಮತ್ತು ಕಾರ್ಪೋರೇಟ್ ಶಕ್ತಿಗಳು, ದೇಶದ ಕೃಷಿ ವ್ಯವಸ್ಥೆಯನ್ನು ತಮ್ಮ ಮುಷ್ಟಿಯಲ್ಲಿರಿಸಿಕೊಂಡಿರುವ ಶ್ರೀಮಂತ ರೈತರು, ಐದು ದಶಕದ ಸ್ವತಂತ್ರ ಆಳ್ವಿಕೆಯಲ್ಲಿ ತಮ್ಮ ಆಶೋತ್ತರಗಳು ಈಡೇರಲಿಲ್ಲವೆಂಬ ಜಿಗುಪ್ಸೆ ಮತ್ತು ಆಕ್ರೋಶ ಹೊಂದಿದ್ದ ಮಧ್ಯಮವರ್ಗಗಳು, ಸಾಮಾಜಿಕ ನ್ಯಾಯಕ್ಕಾಗಿ ಹಾತೊರೆಯುತ್ತಿದ್ದ ಶೋಷಿತ ಸಮುದಾಯಗಳು ಮತ್ತು ಎಲ್ಲಕ್ಕಿಂತಲೂ ಮುಖ್ಯವಾಗಿ ಭಾರತೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ತಮ್ಮ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಿರುವ ಭಾವನೆಯಿಂದ ಕುತ್ಸಿತರಾಗಿದ್ದ ನಗರ ಪ್ರದೇಶದ ಮೇಲ್ ಮಧ್ಯಮವರ್ಗಗಳು, ಈ ಎಲ್ಲ ಸಮುದಾಯಗಳನ್ನೂ ತನ್ನ ಹಿಂದುತ್ವದ ಪರಿಧಿಯಲ್ಲಿ ಸೆಳೆದುಕೊಂಡು, ರಾಮರಾಜ್ಯ(?) ಸ್ಥಾಪಿಸುವ ಭಾಜಪದ ಪ್ರಣಾಳಿಕೆಯ ಹಿನ್ನೆಲೆಯಲ್ಲೇ ಹಿಂದುತ್ವವಾದಿ ಪಕ್ಷದ ಏಳು ಬೀಳುಗಳನ್ನೂ ವಿಶ್ಲೇಷಿಸಬೇಕಾಗುತ್ತದೆ.

1991-96ರ ನಡುವೆ ದೇಶದಲ್ಲಿ ಉಂಟಾದ ಸಾಮಾಜಿಕ ಕ್ಷೋಭೆ ಮತ್ತು ಆರ್ಥಿಕ ಸಮಸ್ಯೆಗಳು ಒಂದು ಪರ್ಯಾಯ ರಾಜಕೀಯ ಪಕ್ಷದ ಉದಯಕ್ಕೆ ಪೂರಕವಾಗಿದ್ದರೂ, ಕಾಂಗ್ರೆಸ್ ಮತ್ತು ಭಾಜಪಗಳನ್ನು ಮೀರಿ ನಿಲ್ಲುವಂತಹ ಒಂದು ವೇದಿಕೆ ಸೃಷ್ಟಿಯಾಗದಿದ್ದುದು ಭಾರತೀಯ ಪ್ರಜಾಸತ್ತೆಯ ವಿಡಂಬನೆ. ತೃತೀಯ ರಂಗದ ಹೆಸರಿನಲ್ಲಿ ದೇಶವನ್ನು ಆಳಲು ಮುಂದಾದ ವಿವಿಧ ಪಕ್ಷಗಳು ಕೇವಲ ಉಳ್ಳವರ ಹಿತಾಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದುದು ಜನತೆಯ ಗ್ರಹೀತಕ್ಕೆ ನಿಲುಕದ ಸಂಗತಿಯೇನೂ ಆಗಿರಲಿಲ್ಲ. ಉತ್ತರ ಭಾರತದ ಹಲವು ರಾಜ್ಯಗಳಲ್ಲಿ ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಹುಟ್ಟಿಕೊಂಡ ಜಾತಿವಾದಿ ಪಕ್ಷಗಳು ತಮ್ಮ ಸಾಮುದಾಯಿಕ ದೃಷ್ಟಿಕೋನಗಳನ್ನು ಮೀರಿ ಯೋಚಿಸದಿದ್ದುದು ಭಾಜಪದ ಬೆಳವಣಿಗೆಗೆ ಪೂರಕವಾಗಿತ್ತು. ಮಂಡಲ್ ವಿರೋಧಿ ಶಕ್ತಿಗಳಿಗೆ ಬೆಂಬಲ ನೀಡುವ ಮೂಲಕ ಮೇಲ್ಜಾತಿಗಳನ್ನು ಒಲಿಸಿಕೊಂಡ ಭಾಜಪ, ತನ್ನ ಅಲ್ಪಸಂಖ್ಯಾತ ವಿರೋಧಿ ನೀತಿಯ ಮೂಲಕ ದಲಿತ ಸಮುದಾಯಗಳನ್ನೂ ಒಲಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿತ್ತು. ತನ್ನ ಈ ನೀತಿಯಿಂದಲೇ ಹಿಂದಿವಲಯ ಎಂದೇ ಹೇಳಲಾಗುವ ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಭಾಜಪ ಭದ್ರ ನೆಲೆ ಕಂಡುಕೊಂಡಿತ್ತು.

1998ರ ಚುನಾವಣೆಗಳಲ್ಲಿ ಯಾವುದೇ ಪಕ್ಷ ಬಹುಮತ ಗಳಿಸದೆ ಅತಂತ್ರ ಪರಿಸ್ಥಿತಿ ಉಂಟಾದಾಗ ಜಾಗತೀಕರಣ ಪರವಾದ, ಕಾಂಗ್ರೆಸ್ ವಿರೋಧಿ ಪಕ್ಷಗಳನ್ನು ಒಗ್ಗೂಡಿಸುವಲ್ಲಿ ಭಾಜಪ ಯಶಸ್ವಿಯಾಗಿತ್ತು. ಆದರೆ ತನ್ನ ಹಿಂದುತ್ವವಾದಿ ಸಿದ್ಧಾಂತವನ್ನು ಬದಿಗೊತ್ತಿ, ಖೋಟಾ ಸೆಕ್ಯುಲರಿಸಂ ಎಂದು ತಾನೇ ಹೀಗಳೆಯುತ್ತಿದ್ದ ಕಾಂಗ್ರೆಸ್‌ನ ಸೆಕ್ಯುಲರ್ ನೀತಿಗಳನ್ನೇ ಅನುಸರಿಸುವುದೂ ಅನಿವಾರ್ಯವಾಗಿತ್ತು. ಜಾಗತೀಕರಣ ಪ್ರಕ್ರಿಯೆಯನ್ನು ಪೋಷಿಸಿ, ಮೇಲ್ ಮಧ್ಯಮ ವರ್ಗಗಳು ಹಾಗು ಶ್ರೀಮಂತ ವರ್ಗಗಳನ್ನು ಪ್ರತಿನಿಧಿಸುವ ಜಾತಿವಾದಿ ಪ್ರಾದೇಶಿಕ ಪಕ್ಷಗಳನ್ನು ತುಷ್ಟೀಕರಿಸಿ, ಅಲ್ಪಸಂಖ್ಯಾತರಲ್ಲಿ ವಿಶ್ವಾಸ ಮೂಡಿಸುವ ನಿಟ್ಟಿನಲ್ಲಿ ಸೆಕ್ಯುಲರ್ ಮಂತ್ರವನ್ನು ಜಪಿಸಿ, ಸಂಘಪರಿವಾರದ ಮೂಲಕ ತನ್ನ ಹಿಂದುತ್ವ ಸಿದ್ಧಾಂತವನ್ನು ದೇಶದ ಮೂಲೆಮೂಲೆಗಳಲ್ಲೂ ಹರಡಿ, ತಮ್ಮ ಹಿಂದೂ ರಾಷ್ಟ್ರ ಪರಿಕಲ್ಪನೆಯನ್ನು ಸಾಕಾರಗೊಳಿಸಲು 1998ರ ಭಾಜಪ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ವಾಜಪೇಯಿಯವರ

ಉದಾರವಾದಿ ಮುಖವಾಡವೂ ಅಗತ್ಯವಾಗಿತ್ತು.

ಈ ಸಂದರ್ಭದಲ್ಲಿ ತನ್ನ ಹಿಂದುತ್ವವಾದಿ ಕಾರ್ಯಸೂಚಿಯನ್ನು ತಾತ್ಕಾಲಿಕವಾಗಿ ಕೈಬಿಡುವ ಭಾಜಪದ ನಾಟಕ ಮತ್ತು ರಾಮಮಂದಿರ ನಿರ್ಮಾಣಕ್ಕೂ ತಿಲಾಂಜಲಿ ನೀಡುವ ಹುಸಿ ಆಶ್ವಾಸನೆ ಜಾಗತಿಕ ಬಂಡವಾಳದೊಡನೆ ಮೈತ್ರಿ ಸಾಧಿಸಲು ಹೂಡಿದ ಕುತಂತ್ರವಾಗಿತ್ತು. ಭಾರತೀಯ ಸಮಾಜದ ಬಹುಮುಖೀ ಸಂಸ್ಕೃತಿಯನ್ನು ಬುಡಮೇಲು ಮಾಡುವ ತನ್ನ ಕಾರ್ಯಸೂಚಿಗೆ ಭಾಜಪವನ್ನು ರಾಜಕೀಯ ಬತ್ತಳಿಕೆಯ ಅಸ್ತ್ರವನ್ನಾಗಿ ಪ್ರಯೋಗಿಸುವ ಸಂಘಪರಿವಾರದ ಹುನ್ನಾರಕ್ಕೆ ತಡೆಗೋಡೆಯಾಗಿ ಪರಿಣಮಿಸಿದ್ದು ಭಾಜಪದ ಈ ದ್ವಂದ್ವ ರಾಜಕಾರಣವೇ. ತನ್ನ ಸ್ವದೇಶೀ ನೀತಿಯ ಮೂಲಕವೇ ಹಿಂದೂ ರಾಷ್ಟ್ರದ ನಿರ್ಮಾಣಕ್ಕೆ ಬದ್ಧವಾಗಿದ್ದ ಸಂಘಪರಿವಾರಕ್ಕೂ, ಜಾಗತಿಕ ಬಂಡವಾಳದೊಡನೆ ಮೈತ್ರಿ ಸಾಧಿಸುವ ಮೂಲಕ ಹಿಂದುತ್ವವನ್ನು ಬಲಪಡಿಸುವ ಭಾಜಪದ ನೀತಿಗೂ ಹೆಚ್ಚಿನ ವ್ಯತ್ಯಾಸವೇನೂ ಇರಲಿಲ್ಲ.

ಸ್ಥಳೀಯ ಊಳಿಗಮಾನ್ಯ ಮತ್ತು ಕಾರ್ಪೋರೇಟ್ ವ್ಯವಸ್ಥೆಯನ್ನು ಬಲಪಡಿಸುವ ಮೂಲಕ ಪಾರಂಪರಿಕ ಭಾರತೀಯ ಸಮಾಜದ ಚೌಕಟ್ಟನ್ನು ರಕ್ಷಿಸುವುದು ಪರಿವಾರದ ಧ್ಯೇಯವಾಗಿತ್ತು. ಆದರೆ ರಾಜಕೀಯವಾಗಿ ಎಲ್ಲ ಸಮುದಾಯಗಳನ್ನೂ ಒಳಗೊಳ್ಳುವಂತಹ ಅನಿವಾರ್ಯತೆಗೆ ಸಿಲುಕಿದ್ದ ಭಾಜಪ ಒಂದೆಡೆ ಮಂಡಲ್ ವಿರೋಧಿ ಬಣಗಳನ್ನು ಸಂತುಷ್ಟಿಗೊಳಿಸಲು ಕಮಂಡಲವನ್ನು ಬಳಸಿ ಮತ್ತೊಂದೆಡೆ ತನ್ನ ಅಲ್ಪಸಂಖ್ಯಾತ ವಿರೋಧಿ ನೀತಿಯ ಬಲವರ್ಧನೆಗೆ ದಲಿತ ಸಮುದಾಯಗಳನ್ನು ಅಪ್ಪಿಕೊಳ್ಳಲು ಮುಂದಾಗಿದ್ದು ವಾಜಪೇಯಿಯವರ ಆಳ್ವಿಕೆಯಲ್ಲಿ ಸ್ಪಷ್ಟವಾಗಿತ್ತು. ಹಿಂದುತ್ವ ಆಳ್ವಿಕೆ ಗಟ್ಟಿಯಾಗಿ ಬೇರೂರಲು ಜಾಗತಿಕ ಬಂಡವಾಳ, ಮತೀಯತೆ ಮತ್ತು ಜಾತಿ ರಾಜಕಾರಣ ಸಮಾನಾಂತರತ್ರಿಕೋನದಂತಾಗಿತ್ತು. ಈ ನಿಟ್ಟಿನಲ್ಲಿ ಭಾಜಪ ಮತ್ತು ಸಂಘಪರಿವಾರ ಬಹುತೇಕ ಯಶಸ್ಸು ಕಂಡದ್ದನ್ನೂ ಗುಜರಾತ್‌ನಲ್ಲಿ ಸ್ಪಷ್ಟವಾಗಿ ಕಾಣಬಹುದಿತ್ತು.

ಏತನ್ಮಧ್ಯೆ ಸಂಭವಿಸಿದ ಅನೇಕ ಭಯೋತ್ಪಾದಕ ಕೃತ್ಯಗಳು, ಅಕ್ಷರಧಾಮ, ದೆಹಲಿ ಸಂಸತ್ ಮೇಲಿನ ಆಕ್ರಮಣ, ಮುಂಬೈ ಸ್ಫೋಟ ಮುಂತಾದವು, ಸಂಘಪರಿವಾರದ ಮತೀಯ ರಾಜಕಾರಣಕ್ಕೆ ಪುಷ್ಟಿ ನೀಡುವಂತಿದ್ದವು. 2001ರಲ್ಲಿ ಅಮೆರಿಕದಲ್ಲಿ ನಡೆದ ಭಯೋತ್ಪಾದಕ ದಾಳಿಯ ನಂತರ ಜಾಗತಿಕ ಮಟ್ಟದಲ್ಲಿ ಇಸ್ಲಾಮಿ ಭಯೋತ್ಪಾದನೆಯ ಹುಯಿಲೆಬ್ಬಿಸಿದ್ದು ಭಾರತದಲ್ಲೂ ಪ್ರಭಾವ ಬೀರಿದ್ದು, ಭಯೋತ್ಪಾದಕ ದಾಳಿಗಳನ್ನು ತನ್ನ ರಾಜಕೀಯ ದಾಳವನ್ನಾಗಿ ಪ್ರಯೋಗಿಸುವಲ್ಲಿ ಭಾಜಪ ಯಶಸ್ವಿಯಾಗಿತ್ತು. ಹಿಂದುತ್ವ ಸಿದ್ಧಾಂತ ಕೊಂಚ ಹಿನ್ನಡೆ ಕಂಡರೂ ಭಾರತೀಯ ರಾಷ್ಟ್ರೀಯತೆಯ ಭಾವನೆಗಳು ಸಂಘಪರಿವಾರದ ಚಟುವಟಿಕೆಗಳಿಗೆ ಪೂರಕವಾಗಿದ್ದವು. ಈ ಬೆಳವಣಿಗೆಯ ಪರಾಕಾಷ್ಠೆ 2002 ಗುಜರಾತ್ ಹತ್ಯಾಕಾಂಡದಲ್ಲಿ ವ್ಯಕ್ತವಾಗಿತ್ತು. ಉದಾರವಾದಿ ಹಣೆಪಟ್ಟಿ ಹೊತ್ತಿದ್ದ ವಾಜಪೇಯಿ ಸಹ ನರೇಂದ್ರ ಮೋದಿಯನ್ನು ಸಮರ್ಥಿಸಿದ್ದೇ ಅಲ್ಲದೆ ಇಡೀ ಪ್ರಕರಣವನ್ನು ಅಪಭ್ರಂಶವೆಂದು ಪರಿಗಣಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ವಾರಣಾಸಿ, ಅಕ್ಷರಧಾಮ, ಸಂಸತ್ ಭವನ ಮತ್ತು ಗೋಧ್ರಾ ಪ್ರಕರಣಗಳ ಹಿನ್ನೆಲೆ ಏನೇ ಇದ್ದರೂ ಈ ಘಟನೆಗಳನ್ನು ತನ್ನ ಹಿಂದುತ್ವವಾದಿ ರಾಜಕಾರಣದ ಅಸ್ತ್ರಗಳನ್ನಾಗಿ ಬಳಸಲು ಸಂಘಪರಿವಾರ ಹವಣಿಸಿದ್ದನ್ನು ಅಲ್ಲಗಳೆಯಲಾಗುವುದಿಲ್ಲ. ಆರು ವರ್ಷಗಳ ಎನ್‌ಡಿಎ ಆಳ್ವಿಕೆಯಲ್ಲಿ ಒಂದೆಡೆ ಜಾಗತೀಕರಣ ಮತ್ತೊಂದೆಡೆ ಕೇಸರೀಕರಣ ಪ್ರಕ್ರಿಯೆಗಳಿಂದ ನಲುಗಿ ಹೋಗಿದ್ದ ಭಾರತೀಯ ಜನತೆಗೆ ಪ್ರಕಾಶಿಸುತ್ತಿರುವ ಭಾರತದ ವಿರಾಟ್ ದರ್ಶನವಾದದ್ದು ಮಾತ್ರ ಸತ್ಯ. ಈ ಘಟನೆಗಳಿಂದ ರಾಜಕೀಯ ಲಾಭ ಗಳಿಸಲೆತ್ನಿಸಿದ್ದ ಭಾಜಪಕ್ಕೆ ಇದೇ ಘಟನೆಗಳೇ ಮುಳುವಾದದ್ದು 2004ರ ಲೋಕಸಭಾ ಚುನಾವಣೆಗಳಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿತ್ತು. ಭಾಜಪದ ನಿಧಾನ ಗತಿಯ ಅವನತಿ ಆರಂಭವಾದದ್ದೂ ಈ ಸಂದರ್ಭದಲ್ಲೇ.

1998ರಲ್ಲಿ ಅಧಿಕಾರ ಗ್ರಹಣ ಮಾಡಿದ ಸಂದರ್ಭದಲ್ಲಿ ಶಾಶ್ವತವಾಗಿ ದೇಶದ ಆಡಳಿತ ಚುಕ್ಕಾಣಿ ಹಿಡಿಯುವ ಕನಸು ಕಂಡಿದ್ದ ಭಾಜಪ, ತನ್ನ ಪಿತೃ ಸಂಘಟನೆ ಆರೆಸ್ಸೆಸ್‌ನ ಅಪೇಕ್ಷೆಯಂತೆ ಹಿಂದೂ ರಾಷ್ಟ್ರವನ್ನು ಸಾಕಾರಗೊಳಿಸಲು ಸಂವಿಧಾನವನ್ನೇ ಪರಾಮರ್ಶಿಸಲು ಹೊರಟಿದ್ದು ಗುಟ್ಟಿನ ವಿಷಯವೇನಲ್ಲ. ಅಂಬೇಡ್ಕರ್ ಪರಿನಿರ್ವಾಣದ ದಿನದಂತೇ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಮೂಲಕ ಈ ದೇಶದ ಸಂವಿಧಾನಕ್ಕೆ ಮಸಿಬಳಿದಿದ್ದ ಹಿಂದುತ್ವವಾದಿ ಶಕ್ತಿಗಳು ಜಾಗತಿಕ ಸಾಮಾಜಿಕ ವಿದ್ಯಮಾನವಾದ ಭಯೋತ್ಪಾದನೆಯನ್ನು ಧಾರ್ಮಿಕ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಮೂಲಕ, ತನ್ನ ಮತೀಯ ರಾಜಕಾರಣವನ್ನು ಬೆಳೆಸಲು ಪ್ರಯತ್ನಿಸಿದ್ದನ್ನೂ ವಾಜಪೇಯಿಯವರ ಆಳ್ವಿಕೆಯಲ್ಲಿ ಕಾಣಬಹುದಿತ್ತು. ಈ ಪ್ರಕ್ರಿಯೆಯಲ್ಲಿ ಸಂಘಪರಿವಾರ ದಲಿತ ಮತ್ತು ಹಿಂದುಳಿದ ವರ್ಗಗಳನ್ನೂ ತನ್ನ ತೆಕ್ಕೆಯೊಳಕ್ಕೆ ಸೆಳೆದುಕೊಳ್ಳುವಲ್ಲೂ ಯಶಸ್ವಿಯಾಗಿತ್ತು.

ರಾಜಕೀಯ ಅವನತಿ

1998ರಲ್ಲಿ ಅಧಿಕಾರ ಗ್ರಹಣ ಮಾಡಿದ ಸಂದರ್ಭದಲ್ಲಿ ಶಾಶ್ವತವಾಗಿ ದೇಶದ ಆಡಳಿತ ಚುಕ್ಕಾಣಿ ಹಿಡಿಯುವ ಕನಸು ಕಂಡಿದ್ದ ಭಾಜಪ, ತನ್ನ ಪಿತೃ ಸಂಘಟನೆ ಆರೆಸ್ಸೆಸ್‌ನ ಅಪೇಕ್ಷೆಯಂತೆ ಹಿಂದೂ ರಾಷ್ಟ್ರವನ್ನು ಸಾಕಾರಗೊಳಿಸಲು ಸಂವಿಧಾನವನ್ನೇ ಪರಾಮರ್ಶಿಸಲು ಹೊರಟಿದ್ದು ಗುಟ್ಟಿನ ವಿಷಯವೇನಲ್ಲ. ಅಂಬೇಡ್ಕರ್ ಪರಿನಿರ್ವಾಣದ ದಿನದಂತೇ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡುವ ಮೂಲಕ ಈ ದೇಶದ ಸಂವಿಧಾನಕ್ಕೆ ಮಸಿಬಳಿದಿದ್ದ ಹಿಂದುತ್ವವಾದಿ ಶಕ್ತಿಗಳು ಜಾಗತಿಕ ಸಾಮಾಜಿಕ ವಿದ್ಯಮಾನವಾದ ಭಯೋತ್ಪಾದನೆಯನ್ನು ಧಾರ್ಮಿಕ ಚೌಕಟ್ಟಿನಲ್ಲಿ ವಿಶ್ಲೇಷಿಸುವ ಮೂಲಕ, ತನ್ನ ಮತೀಯ ರಾಜಕಾರಣವನ್ನು ಬೆಳೆಸಲು ಪ್ರಯತ್ನಿಸಿದ್ದನ್ನೂ ವಾಜಪೇಯಿಯವರ ಆಳ್ವಿಕೆಯಲ್ಲಿ ಕಾಣಬಹುದಿತ್ತು. ಈ ಪ್ರಕ್ರಿಯೆಯಲ್ಲಿ ಸಂಘಪರಿವಾರ ದಲಿತ ಮತ್ತು ಹಿಂದುಳಿದ ವರ್ಗಗಳನ್ನೂ ತನ್ನ ತೆಕ್ಕೆಯೊಳಕ್ಕೆ ಸೆಳೆದುಕೊಳ್ಳುವಲ್ಲೂ ಯಶಸ್ವಿಯಾಗಿತ್ತು. ಭಾಜಪದ ಮಿತ್ರ ಪಕ್ಷಗಳಾಗಿದ್ದ ಸೆಕ್ಯುಲರ್ (?) ತೆಲುಗು ದೇಶಂ, ಸಂಯುಕ್ತ ಜನತಾದಳ, ಡಿಎಂಕೆ, ಅಕಾಲಿದಳ, ಬಿಎಸ್‌ಪಿ, ಬಿಜು ಜನತಾದಳ ಮುಂತಾದ ಶಕ್ತಿಗಳ ಹಿಂದಿದ್ದ ಜನಸಮೂಹವನ್ನು ರಾಜಕೀಯ ಅನಿವಾರ್ಯತೆಗಳ ಮೂಕ ಪ್ರೇಕ್ಷಕರನ್ನಾಗಿ ಮಾಡಿದ್ದೂ ಭಾಜಪಕ್ಕೆ ವರದಾನವಾಗಿತ್ತು.

ಆದರೆ 2004ರ ನಂತರದ ರಾಜಕಾರಣ ದೇಶದ ರಾಜಕೀಯ ದಿಕ್ಕನ್ನೇ ಬದಲಾಯಿಸಿತ್ತು. ವಾಜಪೇಯಿ ನೇತೃತ್ವದ ಎನ್‌ಡಿಎ ಆಳ್ವಿಕೆಯಲ್ಲಿ ದೇಶದ ಜನಸಾಮಾನ್ಯರು, ದುಡಿಯುವ ವರ್ಗಗಳು, ಶ್ರಮಜೀವಿಗಳು, ಕೃಷಿಕರು ಮತ್ತು ಸಣ್ಣ ಉದ್ದಿಮೆದಾರರು ಜಾಗತೀಕರಣದ ಕರಾಳ ಮುಖವನ್ನು ಪ್ರತ್ಯಕ್ಷವಾಗಿ ಕಂಡಿದ್ದೇ ಅಲ್ಲದೆ,

ಇದೆಂಥ ಕಳ್ಳ–ಮಳ್ಳರ ಕೂಟ!

ಕೇಸರೀಕರಣದ ಎಲ್ಲಾ ಆಯಾಮಗಳನ್ನೂ [illegible]ತ್ತು. ಆರ್ಥಿಕ ವಲಯದಲ್ಲಿ ಜಾಗತೀಕರಣ ಪ್ರಕ್ರಿಯೆ ತಳ ಮಟ್ಟದ ಸಮುದಾಯಗಳನ್ನು ವಿನಾಶದ ಅಂಚಿಗೆ ದೂಡುತ್ತಿರುವಂತೆಯೇ, ಸಾಂಸ್ಕೃತಿಕ ವಲಯದಲ್ಲಿ ಹರಡಿದ್ದ ಕೇಸರೀಕರಣ ಪ್ರಕ್ರಿಯೆ ಭಾರತೀಯ ಬಹುಮುಖೀ ಸಂಸ್ಕೃತಿಗೇ ಸಂಚಕಾರ ತಂದಿತ್ತು. ಗುಜರಾತ್ ಹತ್ಯಾಕಾಂಡವನ್ನು ಒಂದು ತಾತ್ವಿಕ ಪ್ರಯೋಗದಂತೆ ಪರಿಗಣಿಸಿದ ಸಂಘಪರಿವಾರ, ಇದೇ ಪ್ರಯೋಗವನ್ನು ದೇಶಾದ್ಯಂದ ನಡೆಸುವ ಹುನ್ನಾರ ಹೂಡಿದ್ದು, ಕರ್ನಾಟಕದ ಬಾಬಾ ಬುಡನ್‌ಗಿರಿಯಲ್ಲೂ ವ್ಯಕ್ತವಾಗಿದ್ದನ್ನು ಇಲ್ಲಿ ಗಮನಿಸಬಹುದು. ಒರಿಸ್ಸಾದ ಗ್ರಾಹಂ ಸ್ಟೇನ್ಸ್ ಹತ್ಯೆ ಕ್ರೈಸ್ತ ಸಮುದಾಯದ ವಿರುದ್ಧ ಹೋರಾಟದ ಮೊದಲ ಮೆಟ್ಟಿಲಾಗಿತ್ತು.

ಇದೇ ಸಂದರ್ಭದಲ್ಲಿ ಜಾಗತೀಕರಣ ಮತ್ತು ನವ ಉದಾರವಾದಿ ನೀತಿಯ ಪರಿಣಾಮವಾಗಿ ದಲಿತ ಸಮುದಾಯಗಳು ಮೀಸಲಾತಿಯಿಂದ ವಂಚಿತರಾಗುತ್ತಿದ್ದರು. ಐದು ವರ್ಷಗಳ ಕಾಲ ಕೇಂದ್ರ ಮಂತ್ರಿಮಂಡಲದಲ್ಲಿ ಕೃಷಿ ಮಂತ್ರಿಯಿಲ್ಲದೆಯೇ ಆಳ್ವಿಕೆ ನಡೆಸಿದ ವಾಜಪೇಯಿ, ಸಾರ್ವಜನಿಕ ಉದ್ದಿಮೆಗಳ ಬಂಡವಾಳ ಹಿಂತೆಗೆತಕ್ಕಾಗಿಯೇ ಪ್ರತ್ಯೇಕ ಮಂತ್ರಿಗಳನ್ನು ನೇಮಿಸಿದ್ದುದು ದೇಶದ ದುಡಿಯುವ ಜನತೆಗೆ, ರೈತ ಸಮುದಾಯಗಳಿಗೆ ಮತ್ತು ಸಣ್ಣ ಉದ್ದಿಮೆದಾರರಿಗೆ ಎಚ್ಚರಿಕೆಯ ಗಂಟೆಯಾಗಿತ್ತು. ಎನ್‌ಡಿಎ ಸರ್ಕಾರದ ಆರ್ಥಿಕ ನೀತಿಗಳ ಪರಿಣಾಮವಾಗಿ ರೈತರ ಆತ್ಮಹತ್ಯೆ ಪ್ರಕರಣಗಳು ಉಲ್ಬಣಗೊಂಡವು, ಕೈಮಗ್ಗದ ಕಾರ್ಮಿಕರು ಮತ್ತು ನೇಕಾರರು ಆತ್ಮಹತ್ಯೆಗೆ ಶರಣಾಗುವುದು ಸಾಮಾನ್ಯ ಸಂಗತಿಯಾಗಿತ್ತು. ವಿದೇಶಿ ಬಂಡವಾಳದ ಹರಿವು ಹೆಚ್ಚಾಗುತ್ತಿದ್ದಂತೆಯೇ ದೇಶದ ಆರ್ಥಿಕತೆ ಜಾಗತಿಕ ಮಾರುಕಟ್ಟೆಯನ್ನೇ ಹೆಚ್ಚು ಅವಲಂಬಿಸಿ, ಭಾರತ ಪರಾವಲಂಬಿಯಾಗುವ ಎಲ್ಲ ಸೂಚನೆಗಳೂ 2004ರ ಹೊತ್ತಿಗೆ ಗೋಚರಿಸುತ್ತಿದ್ದವು. ಈ ಸನ್ನಿವೇಶದಲ್ಲಿ 2004ರ ಚುನಾವಣೆಯಲ್ಲಿ ಸೋಲನುಭವಿಸಿದ ಭಾಜಪ ಪುನಃ ಚೇತರಿಸಿಕೊಳ್ಳದಿರುವುದು ಗಮನಿಸಬೇಕಾದ ಸಂಗತಿ.

ರಥಯಾತ್ರೆಯ ಸಂದರ್ಭದಲ್ಲಿ ಹಿಂದೂ ರಾಷ್ಟ್ರದ ಸ್ಥಾಪನೆಯ ತನ್ನ ಕಲ್ಪನೆಯನ್ನು ಸಾಕಾರಗೊಳಿಸಲು ಸಂಘ ಪರಿವಾರ-ಭಾಜಪಕ್ಕೆ ಮೂರು ಪ್ರಧಾನ ಅಂಶಗಳು ಅಡಿಪಾಯವಾಗಿದ್ದವು. ಮೊದಲನೆಯದು ಬಂಡವಾಳ ವ್ಯವಸ್ಥೆಯನ್ನು ಪುಷ್ಟೀಕರಿಸಿ ಭಾರತೀಯ ಆರ್ಥಿಕತೆಯನ್ನು ಜಾಗತಿಕ ಬಂಡವಾಳದಲ್ಲಿ ಸಮ್ಮಿಲನಗೊಳಿಸುವ ನವ ಉದಾರವಾದಿ ಸೂತ್ರ, ಎರಡನೆಯದು ಜಾಗತಿಕ ಬಂಡವಾಳದ ಪ್ರಗತಿಗೆ ತೊಡರಾಗಬಹುದಾಗಿದ್ದ ಎಲ್ಲಾ ರೀತಿಯ ಪ್ರಜಾಸತ್ತಾತ್ಮಕ ಧೋರಣೆಗಳನ್ನು ಮತ್ತು ಈ ನಿಟ್ಟಿನಲ್ಲಿ ಪ್ರತಿರೋಧ ಒಡ್ಡಬಹುದಾದ ಎಲ್ಲಾ ಪ್ರಜಾತಾಂತ್ರಿಕ ಜನಾಂದೋಲನಗಳನ್ನು ದಮನಿಸುವ ಹಿಂದುತ್ವವಾದಿ ಸಿದ್ಧಾಂತ ಮತ್ತು ಮೂರನೆಯದಾಗಿ ವಸಾಹತು ಕಾಲದಿಂದಲೂ ಈ ದೇಶದ ಸಂಪನ್ಮೂಲಗಳನ್ನು ಮತ್ತು ನೈಸರ್ಗಿಕ ಸಂಪತ್ತನ್ನು ತಮ್ಮ ಖಾಯಂ ಆಸ್ತಿಯೆಂದು ಪರಿಗಣಿಸಿರುವ ಕಾರ್ಪೋರೇಟ್ ಉದ್ಯಮಿಗಳು ಹಾಗೂ ಶ್ರೀಮಂತ ವರ್ಗಗಳನ್ನು ಸಂತುಷ್ಟಿಗೊಳಿಸುವ ಆರ್ಥಿಕ ನೀತಿ. ಎನ್‌ಡಿಎ ಆಳ್ವಿಕೆಯ ಆರು ವರ್ಷಗಳಲ್ಲಿ ಈ ಮೂರು ತಂತ್ರಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಿದ್ದೇ 2004ರ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಮುಳುವಾಗಿತ್ತು. ಹೈದರಾಬಾದನ್ನು, ಬೆಂಗಳೂರನ್ನು ಸಿಂಗಾಪೂರ್ ಮಾಡುವ ಕನಸು ಹೊತ್ತಿದ್ದ ಮುಖ್ಯಮಂತ್ರಿಗಳು ಮಣ್ಣುಮುಕ್ಕಬೇಕಾಗಿದ್ದು, ಭಾಜಪಕ್ಕೆ ಮಾತ್ರವಲ್ಲ, ಕಾಂಗ್ರೆಸ್ ಪಕ್ಷಕ್ಕೂ ಎಚ್ಚರಿಕೆಯ ಗಂಟೆಯಾಗಿತ್ತು.

2004ರ ಚುನಾವಣೆಗಳಲ್ಲಿ ತನ್ನ ರಾಜಕೀಯ ಪುನರ್ಜನ್ಮ ಪಡೆದ ಕಾಂಗ್ರೆಸ್ ಪಕ್ಷಕ್ಕೂ ಭಾಜಪಕ್ಕೂ ಇರುವ ಮೂಲಭೂತ ವ್ಯತ್ಯಾಸವೆಂದರೆ ಸೆಕ್ಯುಲರ್ ತತ್ವಗಳನ್ನು ಪಾಲಿಸುವುದರಲ್ಲಿ ಮಾತ್ರ. ಮೂಲಭೂತವಾಗಿ ಕಾಂಗ್ರೆಸ್ ಸೆಕ್ಯುಲರ್ ಪಕ್ಷವೆಂದು ಹೇಳಲಾಗುವುದಿಲ್ಲವಾದರೂ, ಭಾರತದ ಬಹುಸಂಖ್ಯಾತರ ಅಭಿಪ್ರಾಯದಲ್ಲಿ ಒಪ್ಪಿತವಾಗಿರುವ ಧರ್ಮನಿರಪೇಕ್ಷತೆಯ ಭಾವನೆ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಗಳನ್ನು ಮೇಲ್ನೋಟಕ್ಕಾದರೂ ಪ್ರದರ್ಶಿಸುವ ತಂತ್ರಗಾರಿಕೆಯನ್ನು ಕಾಂಗ್ರೆಸ್ ಅಳವಡಿಸಿಕೊಂಡಿದೆ. ಹಾಗಾಗಿಯೇ ಮೇಲೆ ಉಲ್ಲೇಖಿಸಲಾದ ಮೂರು ಪ್ರಧಾನ ಅಂಶಗಳನ್ನು ಕಾಂಗ್ರೆಸ್ ತನ್ನದೇ ಆದ ಶೈಲಿಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಭಾಜಪದ ಹಿನ್ನಡೆಗೂ ಕಾರಣವಾಗಿದ್ದನ್ನು 2004ರ ಚುನಾವಣೆಗಳು ಸ್ಪಷ್ಟಪಡಿಸಿದ್ದವು. 2004-2009ರ ಐದು ವರ್ಷಗಳ ಆಳ್ವಿಕೆಯಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದನ್ನು ನಿರೂಪಿಸಿದ್ದು, ಭಾಜಪ ತೆರವು ಮಾಡಿದ ಸ್ಥಾನವನ್ನು ಆಕ್ರಮಿಸಿಕೊಳ್ಳುವುದರಲ್ಲಿ ಸಾಫಲ್ಯವನ್ನು ತೋರಿದೆ.

ಹಿಂದೂ ರಾಷ್ಟ್ರದ ಸೈದ್ಧಾಂತಿಕ ತಳಹದಿಯ ಮೇಲೆ, ಸಂಘಪರಿವಾರದ ಪೋಷಣೆಯಲ್ಲೇ ಬೆಳೆದ ಭಾಜಪಕ್ಕೆ ಅಯೋಧ್ಯಾ ಕಾಂಡದವರೆಗೂ ಸೈದ್ಧಾಂತಿಕ ಹಿನ್ನೆಲೆಯೇ ಪ್ರಧಾನವಾಗಿತ್ತು. ಭಾರತೀಯ ಬಹುಮುಖೀ ಸಂಸ್ಕೃತಿಯನ್ನೇ ಪ್ರಶ್ನಿಸಿ ತನ್ನದೇ ಆದ ರಾಷ್ಟ್ರ ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಾಗಿದ ಅದ್ವಾನಿಯವರ ರಥಯಾತ್ರೆ ಕೇವಲ ಮತೀಯ ಸಂಘರ್ಷದ ಸಂಕೇತವಾಗಿರಲಿಲ್ಲ. ಬದಲಾಗಿ ಗೋಲ್ವಾಲ್‌ಕರ್, ಸಾವರ್ಕರ್ ಮುಂತಾದ ಸಂಘ ನಿಷ್ಠರು ಭಾವಿಸಿದ್ದ ಧರ್ಮಾಧಾರಿತ ರಾಷ್ಟ್ರದ ಸ್ಥಾಪನೆಯೇ ಸಂಘಪರಿವಾರದ ಉಸಿರಾಗಿತ್ತು.

ಸೈದ್ಧಾಂತಿಕ ಅವನತಿ

ಹಿಂದೂ ರಾಷ್ಟ್ರದ ಸೈದ್ಧಾಂತಿಕ ತಳಹದಿಯ ಮೇಲೆ, ಸಂಘಪರಿವಾರದ ಪೋಷಣೆಯಲ್ಲೇ ಬೆಳೆದ ಭಾಜಪಕ್ಕೆ ಅಯೋಧ್ಯಾ ಕಾಂಡದವರೆಗೂ ಸೈದ್ಧಾಂತಿಕ ಹಿನ್ನೆಲೆಯೇ ಪ್ರಧಾನವಾಗಿತ್ತು. ಭಾರತೀಯ ಬಹುಮುಖೀ ಸಂಸ್ಕೃತಿಯನ್ನೇ ಪ್ರಶ್ನಿಸಿ ತನ್ನದೇ ಆದ ರಾಷ್ಟ್ರ ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಾಗಿದ ಅದ್ವಾನಿಯವರ ರಥಯಾತ್ರೆ ಕೇವಲ ಮತೀಯ ಸಂಘರ್ಷದ ಸಂಕೇತವಾಗಿರಲಿಲ್ಲ. ಬದಲಾಗಿ ಗೋಲ್ವಾಲ್‌ಕರ್, ಸಾವರ್ಕರ್, ದೀನ್ ದಯಾಳ್ ಉಪಾಧ್ಯಾಯ ಮುಂತಾದ ಸಂಘನಿಷ್ಠರು ಭಾವಿಸಿದ್ದ ಧರ್ಮಾಧಾರಿತ ರಾಷ್ಟ್ರದ ಸ್ಥಾಪನೆಯೇ ಸಂಘಪರಿವಾರದ ಉಸಿರಾಗಿತ್ತು. ಈ ಹಂತದಲ್ಲಿ ಭಾಜಪ ಒಂದು ರಾಜಕೀಯ ಅಸ್ತ್ರವಾಗಿತ್ತು. ಆದರೆ ಭಾರತದ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ತನ್ನ ಫ್ಯಾಸಿಸ್ಟ್ ಧೋರಣೆಯನ್ನು ಏಕಾಏಕಿ ಅನುಷ್ಠಾನಗೊಳಿಸಲಾಗದ ಸಂಘಪರಿವಾರ ಕ್ರಮೇಣ ರಾಜಕೀಯ ಅಧಿಕಾರದತ್ತ ತನ್ನ ಗಮನ ಹರಿಸಿದ್ದು 1996ರ ಚುನಾವಣೆಗಳಲ್ಲೇ ಸ್ಪಷ್ಟವಾಗಿತ್ತು. 13 ದಿನಗಳ ಕಾಲ ಪ್ರಧಾನಿಗಳಾಗಿದ್ದ ವಾಜಪೇಯಿ ತಮ್ಮ ಸರ್ಕಾರದ ಉಳಿವಿಗೆ ನಡೆಸಿದ ಅನೇಕ ಕಸರತ್ತುಗಳು ಸಂಘಪರಿವಾರದಿಂದ ಅಂಗೀಕೃತವಾಗಿದ್ದುದು ಸರ್ವವಿಧಿತ.

1977ರಲ್ಲೇ ಅಧಿಕಾರದ ರುಚಿ ಕಂಡಿದ್ದ ಭಾಜಪ ನಾಯಕರಿಗೆ ರಾಜಕೀಯ ಅಧಿಕಾರದ ಮೋಹ ಅನಪೇಕ್ಷಿತವೇನೂ ಆಗಿರಲಿಲ್ಲ. 1991-96ರ ಕಾಂಗ್ರೆಸ್ ಆಳ್ವಿಕೆಯಿಂದ ಬೇಸತ್ತಿದ್ದ ಜನತೆಗೆ ಒಂದು ಪರ್ಯಾಯ ರಾಜಕೀಯವೂ ಅಗತ್ಯವಾಗಿತ್ತು. ಆದರೆ ತನ್ನ ಸ್ವಂತ ಬಲದ ಮೇಲೆ ಸರ್ಕಾರ ರಚಿಸುವ ಬಹುಮತ ಹೊಂದದಿದ್ದ ಭಾಜಪಕ್ಕೆ ತನ್ನ ಮೂಲಭೂತ ಸಿದ್ಧಾಂತವನ್ನು ಬದಿಗೊತ್ತಿ, ಅನ್ಯ ಪಕ್ಷಗಳೊಡನೆ ಮೈತ್ರಿ ಸಾಧಿಸಿ, ಸೆಕ್ಯುಲರ್ ಮುಖವಾಡ ಧರಿಸುವುದು ಅನಿವಾರ್ಯವಾಗಿತ್ತು. ಈ ಪ್ರಕ್ರಿಯೆಗೆ ಪೂರ್ಣ ಸಹಮತ ಇಲ್ಲದಿದ್ದರೂ, ಸಂಘಪರಿವಾರವು ತನ್ನ ಭವಿಷ್ಯದ ಯೋಜನೆಗಳಿಗೆ ಭಾಜಪದ ಆಳ್ವಿಕೆಯ ಅವಧಿಯನ್ನು ಸದುಪಯೋಗಪಡಿಸಿಕೊಳ್ಳುವ ತಂತ್ರ ಹೂಡಿ, ಉದಾರವಾದಿ ಹಣೆಪಟ್ಟಿ ಹೊತ್ತ ವಾಜಪೇಯಿಯನ್ನು ಪ್ರಧಾನಿಯನ್ನಾಗಿ ಬೆಂಬಲಿಸಿತು. ಆದರೆ ವಾಜಪೇಯಿಯವರ ಉದಾರವಾದಿ ಮುಖವಾಡ ಕಳಚಿ ಬೀಳಲು ಹೆಚ್ಚು ಸಮಯ ಬೇಕಾಗಲಿಲ್ಲ. 1998-2004ರ ಅವಧಿಯಲ್ಲಿ ಎನ್‌ಡಿಎ ಸರ್ಕಾರ ಅನುಸರಿಸಿದ ಕೇಸರೀಕರಣ ನೀತಿಗಳು ಮತ್ತು ಜಾರಿಗೊಳಿಸಿದ ಸಂಘಪರಿವಾರದ ಸೂತ್ರಗಳು ಭಾಜಪದ ಸೈದ್ಧಾಂತಿಕ ನಿಲುವನ್ನು ಸ್ಪಷ್ಟಪಡಿಸಿತ್ತು.

2004ರ ಸೋಲು ಭಾಜಪ ಮತ್ತು ಸಂಘಪರಿವಾರದ ಮೂಲ ತಳಹದಿಯನ್ನೇ ಅಲುಗಾಡಿಸಿತು. ವಾಜಪೇಯಿಯವರ ವರ್ಚಸ್ಸಿನಿಂದಲೇ ಗೆಲುವ ಸಾಧಿಸುವ ಭಾಜಪದ ಕನಸು, ಇಸ್ಲಾಮಿಕ್ ಭಯೋತ್ಪಾದನೆ ಮತ್ತು ಅಣ್ವಸ್ತ್ರ ಪರೀಕ್ಷೆಯ ಹಿನ್ನೆಲೆಯಲ್ಲಿ ಗೆಲುವು ಸಾಧಿಸುವ ಸಂಘಪರಿ

ವಾರದ ಆಕಾಂಕ್ಷೆಗಳು ಭಾರತೀಯ ಜನತೆಯ ಪಾಲಿಗೆ ಪ್ರಿಯವಾಗಿರಲಿಲ್ಲ. ಧರ್ಮದ ಹೆಸರಿನಲ್ಲಿ ಸಮುದಾಯಗಳ ನಡುವೆ ಸಂಘರ್ಷ ಸೃಷ್ಟಿಸಿ ತಮ್ಮ ಮತೀಯ ರಾಜಕಾರಣವನ್ನು ಬೆಳೆಸಿಕೊಳ್ಳುವ ಹಿಂದುತ್ವವಾದಿಗಳ ಯೋಜನೆ ಕ್ರಮೇಣ ತನ್ನ ಮೊನಚು ಕಳೆದುಕೊಳ್ಳಲಾರಂಭಿಸಿತು. ಅಕ್ಷರಧಾಮ ಮತ್ತು ವಾರಣಾಸಿ ಘಟನೆಗಳ ನಂತರ ಹಿಂದೂ–ಮುಸ್ಲಿಂ ಸಮುದಾಯಗಳು ತೋರಿದ ಸಹೃದಯತೆ ಮತ್ತು ಭ್ರಾತೃತ್ವ ಸಂಘಪರಿವಾರದ ಸಿದ್ಧಾಂತದ ನಿರಾಕರಣೆಯಾಗಿ ಪರಿಣಮಿಸಿದ್ದವು.

ಈ ಹಂತದಲ್ಲಿ ಭಾಜಪದಲ್ಲಿ ಸ್ಪಷ್ಟವಾಗಿ ಎರಡು ಬಣಗಳು ಹುಟ್ಟಿಕೊಂಡವು. ಮೃದುಹಿಂದುತ್ವ ನೀತಿಯನ್ನು ಪ್ರತಿಪಾದಿಸುವ ಬಣಕ್ಕೆ ಪ್ರಧಾನಿ ಪಟ್ಟದ ಆಕಾಂಕ್ಷಿಯಾಗಿದ್ದ ಅದ್ವಾನಿ ಪ್ರತ್ಯಕ್ಷವಾಗಿಯೇ ಕುಮ್ಮಕ್ಕು ನೀಡತೊಡಗಿದ್ದು, ಸಂಘಪರಿವಾರದ ಪಾಳೆಯದಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಿತ್ತು. ಏತನ್ಮಧ್ಯೆ ಭಾಜಪದ ಮಿತ್ರ ಪಕ್ಷಗಳು ಕ್ರಮೇಣ ದೂರಸರಿದು, ಕಾಂಗ್ರೆಸ್ ಪರವಾಗಿ ಅಥವಾ ತೃತೀಯ ರಂಗದ ಪರವಾಗಿ ಚಲಿಸಿದ್ದವು. ತನ್ನ ಕುಸಿಯುತ್ತಿರುವ ರಾಜಕೀಯ ಬುನಾದಿಯನ್ನು ರಕ್ಷಿಸಲು ಭಾಜಪದ ನಾಯಕತ್ವಕ್ಕೆ ಮನಃ ಹಿಂದುತ್ವದಿಂದ ದೂರ ಸರಿಯಬೇಕಾದ ಪ್ರಮೇಯವೂ ಎದುರಾಗಿತ್ತು. ಈ ಸಂದರ್ಭದಲ್ಲೇ ಅದ್ವಾನಿ ಜಿನ್ನಾ ಅವರನ್ನು ಶ್ಲಾಘಿಸಿ ಆರೆಸ್ಸೆಸ್ ಕೆಂಗಣ್ಣಿಗೆ ಗುರಿಯಾಗಿದ್ದರು.

2004ರ ಚುನಾವಣೆಗಳ ನಂತರ ಭಾಜಪ ಉಪಯೋಗಿಸಿದ ಸೋನಿಯಾ ಗಾಂಧಿಯ ವಿದೇಶಿ ಅಸ್ಮಿತೆ, ಭಯೋತ್ಪಾದನೆ, ಪಾಕ್ ವಿರೋಧಿ ತಂತ್ರ ಮುಂತಾದ ತಂತ್ರಗಳೆಲ್ಲವೂ ವಿಫಲವಾದವು. ಇತ್ತ ಹಿಂದೂ ರಾಷ್ಟ್ರವನ್ನು ಸಾಕಾರಗೊಳಿಸಲು ಭಾಜಪ ಅಪೇಕ್ಷಿಸಿದ್ದ ಜಾಗತಿಕ ಬಂಡವಾಳದ ಬೆಂಬಲವೂ ಕ್ರಮೇಣ ಕಾಂಗ್ರೆಸ್‌ನತ್ತ ಹೊರಳಿತ್ತು. ಏಕೆಂದರೆ ಮೂಲ ಭೂತವಾಗಿ ವಾಜಪೇಯಿ ಸರ್ಕಾರದ ಆರ್ಥಿಕ ನಿಲುವುಗಳು ಕಾಂಗ್ರೆಸ್ ಪಕ್ಷದ ನೀತಿಯ ಅನುಕರಣೆಯೇ ಆಗಿತ್ತು.

ಗುಜರಾತ್, ಮಧ್ಯಪ್ರದೇಶ, ಛತ್ತಿಸ್‌ಗಡ್ ಮತ್ತು ಕೊಂಚ ಮಟ್ಟಿಗೆ ರಾಜಸ್ಥಾನವನ್ನು ಹೊರತು ಪಡಿಸಿದರೆ ಭಾಜಪದ ರಾಜಕೀಯ ಸ್ಥಿರತೆ ಕುಸಿಯಲಾರಂಭಿಸಿತ್ತು. ಗುಜರಾತ್‌ನಲ್ಲಿ ನರೇಂದ್ರ ಮೋದಿ ಸೃಷ್ಟಿಸಿದ್ದ ಮತೀಯ ಭಾವನೆಗಳು ಮತ್ತು ಮೋದಿಯ ಸ್ವಜಾತಿ ಬೆಂಬಲ ನೆರವಾಗಿದ್ದರೆ, ಮಧ್ಯಪ್ರದೇಶ ಹಾಗು ಛತ್ತಿಸ್‌ಘಡದಲ್ಲಿ ಪ್ರಬಲ ವಿರೋಧ ಪಕ್ಷಗಳು ಇಲ್ಲದಿದ್ದುದು ಭಾಜಪಕ್ಕೆ ನೆರವಾಗಿತ್ತು. ಆದರೆ 2009ರ ಲೋಕಸಭಾ ಚುನಾವಣೆಗಳ ವೇಳೆಗೆ ಈ ರಾಜ್ಯಗಳಲ್ಲೂ ಭಾಜಪದ ಪ್ರಾಬಲ್ಯ ಕುಸಿಯುತ್ತಿರುವುದು ಸ್ಪಷ್ಟವಾಗಿತ್ತು. ಜಿನ್ನಾ ಪ್ರಕರಣದಿಂದ ಹೊರಬಂದು ಪುನಃ ಸಂಘಪರಿವಾರಕ್ಕೆ ಪ್ರಿಯರಾಗಿದ್ದ ಅದ್ವಾನಿ ಮತ್ತೊಮ್ಮೆ ಪ್ರಧಾನಿ ಪಟ್ಟದ ಆಕಾಂಕ್ಷಿಯಾಗಿ ನವೆಂಬರ್ 26ರ ಮುಂಬೈ ದಾಳಿ ಮತ್ತು ದೆಹಲಿ, ಅಹಮದಾಬಾದ್, ಬೆಂಗಳೂರು, ಹೈದರಾಬಾದ್ ಮುಂತಾದ ನಗರಗಳಲ್ಲಿ ನಡೆದ ಬಾಂಬ್ ಸ್ಫೋಟಗಳನ್ನೇ ಪ್ರಧಾನ ವಸ್ತುವನ್ನಾಗಿ ಪರಿಗಣಿಸಿ ಚುನಾವಣೆಯ ಕಣಕ್ಕೆ ಧುಮುಕಿದ್ದರು. ಆದರೆ 2009ರ ಫಲಿತಾಂಶಗಳು ಭಾಜಪ–ಸಂಘಪರಿವಾರದ ನಿರೀಕ್ಷೆಯನ್ನು ಹುಸಿಗೊಳಿಸಿದ್ದವು.

ಭಾರತೀಯ ಜನತೆಗೆ ಅವಶ್ಯವಾಗಿದ್ದ ಉದ್ಯೋಗ, ಆದಾಯ, ಸಾಮಾಜಿಕ ಸುಭದ್ರತೆ, ಸಾಮಾಜಿಕ ಘನತೆ ಮತ್ತು ಶಾಂತಿಯ ಜೀವನ ಭಾಜಪದ ಪ್ರಣಾಳಿಕೆಯಲ್ಲಿ

1998ರಲ್ಲಿ ವಾಜಪೇಯಿ ಅನುಸರಿಸಿದ, ಬಂಡವಾಳ –ಹಿಂದುತ್ವದ ಮೈತ್ರಿಯ ರಾಜಕಾರಣವನ್ನೇ ಕರ್ನಾಟಕದಲ್ಲೂ ಭಾಜಪ ನೇರವಾಗಿ ಅಳವಡಿಸಿದ್ದು ಮಂಗಳೂರು, ಕರಾವಳಿ, ಮೈಸೂರಿನಲ್ಲಿ ನಡೆದ ಕೋಮುಗಲಭೆಗಳು, ಕ್ರೈಸ್ತರ ಮೇಲಿನ ಹಲ್ಲೆಗಳು ನಿರೂಪಿಸಿವೆ. ಒಂದೆಡೆ ಬಳ್ಳಾರಿ ಗಣಿ ಉದ್ಯಮದ ಬಂಡವಾಳದ ಮೂಲಕ ಶಾಸಕರನ್ನು ಕೊಳ್ಳುವ ಪರಂಪರೆಯನ್ನು ಪ್ರಾರಂಭಿಸಿದ ರಾಜ್ಯ ಸರ್ಕಾರ ಮತ್ತೊಂದೆಡೆ ಸಂಘಪರಿವಾರದ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ, ಗೋಹತ್ಯೆ ನಿಷೇದದ ಚಿಂತನೆ, ಬಾಬಾಬುಡನ್‌ಗಿರಿಯಲ್ಲಿ ನಡೆಯುತ್ತಿರುವ ನಿರ್ಮಾಣ ಕಾರ್ಯ, ಶಿಕ್ಷಣ ಕ್ಷೇತ್ರದ ಕೇಸರೀಕರಣ ಮತ್ತು ಸರ್ಕಾರದ ಶಿಕ್ಷಣ ನೀತಿಯಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಹಸ್ತಕ್ಷೇಪ ಸಂಘಪರಿವಾರದ ಪ್ರಾಬಲ್ಯವನ್ನು ಸಾಬೀತುಮಾಡುತ್ತದೆ.

ಕಾಣದಿದ್ದುದು ಪಕ್ಷಕ್ಕೇ ಮುಳುವಾಗಿತ್ತು. ಮಿತ್ರ ಪಕ್ಷಗಳ ಬೆಂಬಲವಿಲ್ಲದೆ ಬಹುತೇಕ ರಾಜ್ಯಗಳಲ್ಲಿ ಧೂಳಿಪಟವಾದ ಭಾಜಪಕ್ಕೆ ಸಮಾಧಾನಕರ ಫಲಿತಾಂಶ ಒದಗಿದ್ದು ಕರ್ನಾಟಕದಲ್ಲಿ ಮಾತ್ರ. ಗುಜರಾತ್, ಮಧ್ಯಪ್ರದೇಶಗಳಲ್ಲಿ ಪಕ್ಷದ ವರ್ಚಸ್ಸು ಕ್ಷೀಣಿಸಿದ್ದರೆ, ರಾಜಸ್ಥಾನದಲ್ಲಿ ಸೋಲನುಭವಿಸಬೇಕಾಯಿತು. ಆದರೆ 2008ರ ವಿಧಾನಸಭಾ ಚುನಾವಣೆಗಳಲ್ಲಿ ಪ್ರಪ್ರಥಮ ಬಾರಿಗೆ ದಕ್ಷಿಣ ಭಾರತದಲ್ಲಿ ಅಧಿಕಾರ ಗ್ರಹಣ ಮಾಡಿದ್ದ ಭಾಜಪ 2009 ಚುನಾವಣೆಯಲ್ಲೂ ಉತ್ತಮ ಸಾಧನೆ ಮುಂದುವರೆಸಿತ್ತು. ಭಾಜಪದ ಈ ಸಾಧನೆಗೆ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ದೌರ್ಬಲ್ಯದಷ್ಟೇ, ಕಾರ್ಪೋರೇಟ್ ಬಂಡವಾಳದ ಪ್ರಾಬಲ್ಯವೂ ಕಾರಣವಾಗಿದ್ದನ್ನು ಗಮನಿಸಬೇಕು. ಆಪರೇಷನ್ ಕಮಲ ಎಂಬ ಹೊಸ ಪಕ್ಷಾಂತರ ಸೂತ್ರದ ಮೂಲಕ ಚುನಾಯಿತ ಪ್ರತಿನಿಧಿಗಳನ್ನು ಮಾರುಕಟ್ಟೆಯ ಸರಕುಗಳಂತೆ ಕೊಂಡುಕೊಳ್ಳುವ ಪರಂಪರೆಗೆ ನಾಂದಿ ಹಾಡಿದ ಬಂಡವಳಿಗರು ಭಾಜಪದ ಬೆನ್ನೆಲುಬಾಗಿದ್ದುದು ಪಕ್ಷದ ಅಪ್ರತಿಮ ಸಾಧನೆಗೆ ಕಾರಣವಾಗಿತ್ತು.

1998ರಲ್ಲಿ ವಾಜಪೇಯಿ ಅನುಸರಿಸಿದ, ಬಂಡವಾಳ –ಹಿಂದುತ್ವದ ಮೈತ್ರಿಯ ರಾಜಕಾರಣವನ್ನೇ ಕರ್ನಾಟಕದಲ್ಲೂ ಭಾಜಪ ನೇರವಾಗಿ ಅಳವಡಿಸಿದ್ದು ಮಂಗಳೂರು, ಕರಾವಳಿ, ಮೈಸೂರಿನಲ್ಲಿ ನಡೆದ ಕೋಮುಗಲಭೆಗಳು, ಕ್ರೈಸ್ತರ ಮೇಲಿನ ಹಲ್ಲೆಗಳು ನಿರೂಪಿಸಿವೆ. ಒಂದೆಡೆ ಬಳ್ಳಾರಿ ಗಣಿ ಉದ್ಯಮದ ಬಂಡವಾಳದ ಮೂಲಕ ಶಾಸಕರನ್ನು ಕೊಳ್ಳುವ ಪರಂಪರೆಯನ್ನು ಪ್ರಾರಂಭಿಸಿದ ರಾಜ್ಯ ಸರ್ಕಾರ ಮತ್ತೊಂದೆಡೆ ಸಂಘಪರಿವಾರದ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುತ್ತಿರುವುದು ಸ್ಪಷ್ಟವಾಗುತ್ತಿದೆ. ಶಾಲೆಗಳಲ್ಲಿ ಭಗವದ್ಗೀತೆ ಕಂಠಪಾಠ, ಗೋಹತ್ಯೆ ನಿಷೇದದ ಚಿಂತನೆ, ಬಾಬಾಬುಡನ್‌ಗಿರಿಯಲ್ಲಿ ನಡೆಯುತ್ತಿರುವ ನಿರ್ಮಾಣ ಕಾರ್ಯ, ಶಿಕ್ಷಣ ಕ್ಷೇತ್ರದ ಕೇಸರೀಕರಣ ಮತ್ತು ಸರ್ಕಾರದ ಶಿಕ್ಷಣ ನೀತಿಯಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಹಸ್ತಕ್ಷೇಪ ಸಂಘಪರಿವಾರದ ಪ್ರಾಬಲ್ಯವನ್ನು ಸಾಬೀತುಮಾಡುತ್ತದೆ.

ಆದರೆ ಇಡೀ ಆಡಳಿತ ಯಂತ್ರವನ್ನು ತಾತ್ವಿಕವಾಗಿ ಸಂಘಪರಿವಾರಕ್ಕೆ ಒಪ್ಪಿಸಿ, ರಾಜ್ಯದ ಆರ್ಥಿಕ ನಿರ್ವಹಣೆಯನ್ನು ಕಾರ್ಪೋರೇಟ್ ಉದ್ಯಮಿಗಳಿಗೆ ಒಪ್ಪಿಸಿದ ರಾಜ್ಯ ಭಾಜಪ ಸರ್ಕಾರಕ್ಕೆ ಇತ್ತೀಚೆಗೆ ನಡೆದ 14 ದಿನಗಳ ರಾಜಕೀಯ ಪ್ರಹಸನ ವಾಜಪೇಯಿ ಎದುರಿಸಿದ ಪರಿಸ್ಥಿತಿಯನ್ನೇ ನೆನಪಿಸುತ್ತದೆ. ಜಾಗತಿಕ ಕಾರ್ಪೋರೇಟ್ ಬಂಡವಾಳ ಮತ್ತು ಪ್ಯಾಸಿಸ್ಟ್ ಹಿಂದುತ್ವವಾದಿಗಳ ಎರಡು ಅಲಗಿನ ಕತ್ತಿಯ ಮೇಲೆ ನಡೆಯುತ್ತಿರುವ ಭಾಜಪ ಸರ್ಕಾರಕ್ಕೆ ಬಂಡವಾಳದ ಪ್ರಾಬಲ್ಯ ಅನಿವಾರ್ಯವಾಗಿ ಗಣಿಧಣಿಗಳ ಪ್ರಹಸನ ಅಗತ್ಯವಾಗಿತ್ತು. ಅಧಿಕಾರ ಉಳಿಸಿಕೊಳ್ಳಲು ಬಂಡವಾಳಕ್ಕೆ ಶರಣಾಗಿರುವ ಭಾಜಪ ಮತ್ತೊಮ್ಮೆ ಸಂಘಪರಿವಾರದ ಮುಷ್ಟಿಯಲ್ಲಿ ಸಿಲುಕಿರುವುದು ಪಕ್ಷದ ಅವನತಿಗೆ ನಾಂದಿ ಹಾಡಿದಂತಾಗಿದೆ. ಈಗಾಗಲೇ ರಚಿತವಾಗಿರುವ ಸಮನ್ವಯ ಸಮಿತಿಯಲ್ಲಿ ಸಂಘಪರಿವಾರದಷ್ಟೇ ಪ್ರಾಬಲ್ಯವನ್ನು ಕಾರ್ಪೋರೇಟ್ ಬಂಡವಾಳವೂ ಸಾಧಿಸಿರುವುದು ಮುಂಬರುವ ದಿನಗಳಲ್ಲಿ ಭಾಜಪಕ್ಕೆ ಮುಳ್ಳಿನ ಹಾದಿಯನ್ನು ಸೃಷ್ಟಿಸಿದೆ. ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾಜಪದ ರಾಷ್ಟ್ರೀಯ ನಾಯಕತ್ವದ ಬಗ್ಗೆ ತನ್ನದೇ ಅಭಿಪ್ರಾಯವನ್ನು ಹೇರುತ್ತಿರುವಾಗಲೇ, ಕರ್ನಾಟಕಕ್ಕೂ ಭೇಟಿ ನೀಡಿ ತನ್ನ ಪ್ರಭಾವವನ್ನು ವಿಸ್ತರಿಸುವ ಪ್ರಯತ್ನ ಮಾಡುತ್ತಿರುವುದು ಭಾಜಪಕ್ಕೆ ಮುನ್ಸೂಚನೆಯಾಗಬೇಕಾಗಿದೆ.

ದಕ್ಷಿಣ ಭಾರತದಲ್ಲಿ ಪ್ರಥಮ ಬಾರಿಗೆ ಅಧಿಕಾರ ಗಳಿಸಿದ ಗುಂಗಿನಲ್ಲಿ ತನ್ನ ಸೈದ್ಧಾಂತಿಕ ತಳಹದಿ ಮತ್ತು ರಾಜಕೀಯ ತತ್ವಗಳನ್ನು ಗಾಳಿಗೆ ತೂರಿರುವ ಭಾಜಪ ನಿಧಾನವಾಗಿ ಅವನತಿಯತ್ತ ಸಾಗುತ್ತಿರುವುದು ಸ್ಪಷ್ಟವಾಗುತ್ತಿದೆ. ತಮ್ಮ ಹಣಬಲದಿಂದ ಮತದಾರರನ್ನು, ಶಾಸಕರನ್ನು, ಸಂಸದರನ್ನು ಕೊಂಡುಕೊಳ್ಳುತ್ತಿದ್ದ ಗಣಿ ಧಣಿಗಳು ಈಗ ಒಂದು ರಾಷ್ಟ್ರೀಯ ಪಕ್ಷವನ್ನೇ ಆವಾಹನೆ ಮಾಡಿಕೊಂಡಿದ್ದಾರೆ. ಭಾರತೀಯ ಬಹುಸಂಸ್ಕೃತಿಯ ಸಮಾಜದಲ್ಲಿ ಒಂದು ನಿರ್ದಿಷ್ಟ ಮಾನವೀಯ ತತ್ವ ಸಿದ್ಧಾಂತಗಳ ಅವಶ್ಯಕತೆಯನ್ನು ಕಾಂಗ್ರೆಸ್ ಪಕ್ಷವಾಗಲೀ, ಭಾಜಪವಾಗಲೀ ಗ್ರಹಿಸದಿರುವುದು ಭಾರತದ ರಾಜಕಾರಣದ ವಿಪರ್ಯಾಸವೆಂದೇ ಹೇಳಬಹುದು.

ತಮ್ಮ ಭದ್ರ ಕೋಟೆಯಲ್ಲೇ ವಿಘಟಿತವಾಗಿ ಕ್ಷೀಣಿಸುತ್ತಿರುವ ಎಡಪಕ್ಷಗಳು, ಛಿದ್ರವಾಗಿರುವ ಪ್ರಜಾಸತ್ತಾತ್ಮಕ ದಲಿತ ಚಳುವಳಿಗಳು, ನಾಯಕತ್ವದ ಕೊರತೆ ಎದುರಿಸುತ್ತಲೇ ಸಾಮಾಜಿಕ ಅಭದ್ರತೆಯಿಂದ ನಲುಗುತ್ತಿರುವ ಅಲ್ಪಸಂಖ್ಯಾತ ಸಮುದಾಯಗಳು ಒಂದು ಪರ್ಯಾಯ ರಾಜಕೀಯ ವೇದಿಕೆಗಾಗಿ ಹಪಹಪಿಸುತ್ತಿರುವ ಈ ಸಂದರ್ಭದಲ್ಲಿ, ಭಾಜಪ ರಾಜಕೀಯ ಅವನತಿಯತ್ತ ಸಾಗುತ್ತಿರುವುದು ಪ್ರಜಾತಂತ್ರದ ದೃಷ್ಟಿಯಿಂದ ಸ್ವಾಗತಾರ್ಹವೇ. ಆದರೆ ಪರ್ಯಾಯ ರಾಜಕಾರಣಕ್ಕೆ ಬುನಾದಿ ಹಾಕುವವರಾರು ಎಂಬುದೇ ಮೂರ್ತ ಪ್ರಶ್ನೆ ! □

ಹಿಂದುಳಿದ ವರ್ಗಗಳ ಜನಗಣತಿ
ಸಂವಿಧಾನ ಬಾಹಿರವಲ್ಲ

ದಾಸನೂರು ಕೂಸಣ್ಣ

ಭಾರತದ ಸಾಮಾಜಿಕತೆಯ ಆತ್ಮದಂತಿರುವ ಜಾತಿ- ಪಂಗಡಗಳ ಪ್ರಸ್ತುತತೆ ಮತ್ತು ಇವುಗಳ ಅನಿವಾರ್ಯತೆ ಕುರಿತಾದ ಚರ್ಚೆ, ಸಂವಾದ, ಪ್ರತಿ ಟೀಕೆ ಹಾಗೂ ಮರು ವ್ಯಾಖ್ಯಾನಗಳು ಜರುಗದ ಘಳಿಗೆಯೊಂದನ್ನು ಇಲ್ಲಿ ಗುರುತಿಸಲು ಅಸಾಧ್ಯ. ಹಾಗೆಯೇ ಧರ್ಮಾಚರಣೆಗಳ ವಿಚಾರದಲ್ಲಿಯೂ ಇಂತಹ ಘಟನಾವಳಿಗಳ ಮಹಾಪೂರಗಳಿವೆ. ಜಾತಿ ಶ್ರೇಷ್ಠತೆಗಳನ್ನು ಪ್ರತಿಪಾದಿಸುವ ಪ್ರತಿಯೊಂದು ಸಮಾಜವೂ ಮಿತ್ಯರೂಪದ ಹುಟ್ಟಿನ ಲೀಲೆಗಳನ್ನು ತಮ್ಮ-ತಮ್ಮ ಮೂಗಿನ ನೇರಕ್ಕೆ ಅಭಿವ್ಯಕ್ತಿಸುತ್ತಾ ಬರುತ್ತಿವೆ. ಈ ಶ್ರೇಷ್ಠತೆಗಳ ಮೂಲಕವೆ ಕೆಲವೊಂದು ಜಾತಿಗಳು ತಮ್ಮ ಸಮೃದ್ಧ ಜೀವನಕ್ಕೆ ಅಗತ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೊಂಡಿರುವ ಮಾರ್ಗೋಪಾಯಗಳನ್ನು ಮುಕ್ತವನ್ನಾಗಿರಿಸಿ ಕೊಂಡಿವೆ. ಈ ಸಾಮಾಜಿಕ ಕ್ರಿಯೆಗೆ ತದ್ವಿರುದ್ಧವಾಗಿ ಬಹುಸಂಖ್ಯಾ ತರೆನಿಸಿಕೊಂಡಿರುವ ಬಹುತೇಕ ಶೋಷಿತ ಸಮುದಾಯಗಳಿಗೆ ತಮ್ಮ ಸ್ವಾಭಾವಿಕ ಸಾಮಾಜಿಕ ವ್ಯವಹಾರಗಳನ್ನು ನಿರ್ಭೀತಿಯಿಂದ ನಿರ್ವಹಿಸಿಕೊಳ್ಳುವ ಶಕ್ತಿ ಸಾಮರ್ಥ್ಯಗಳೆಲ್ಲವನ್ನೂ ಕಳೆದುಕೊಂಡಿವೆ. ಈ ವಿದ್ಯಾಮಾನಗಳು ನಿಧಾನವಾಗಿ ಪರಿವರ್ತನೆಗಳಿಗೆ ಒಳಗಾಗುತ್ತಾ ಬರತೊಡಗಿದವು. ಅದರಲ್ಲೂ ಮಧ್ಯಕಾಲೀನ ಸಾಮಾಜಿಕ ನಡವಳಿಕೆಗಳಲ್ಲಿ ಇವರು ತಮಗಾಗಿದ್ದ ತಾರತಮ್ಯ ಸಾಮಾಜಿಕ ಅನ್ಯಾಯಗಳನ್ನು ತಮ್ಮ ಧಾರ್ಮಿಕ-ಸಾಂಸ್ಕೃತಿಕ ಅಭಿವ್ಯಕ್ತಿ ಸಂವೇದನೆಗಳ ಮೂಲಕ ಸಾದರಪಡಿಸಲು ಮುಂದಾದರು. ಆದರೆ, ಈ ಪರವರ್ತನೆಗಳೆಲ್ಲವೂ ಕರ್ಮಠ ಜಾತಿಯ ಚೌಕಟ್ಟಿನೊಳಗೆ ಬಂಧಿಗಳಾಗಿ, ಹಳೆಯ ಮೆರಗಿಗೆ ಹೊಸ ಮೆರಗಿನಂತೆ ಸೇರ್ಪಡೆಗೊಂಡಿವೆ.

ಬ್ರಿಟಿಷ್ ಭಾರತದೊಳಗೆ ಹಿಂದುಳಿದ ಮತ್ತು ತಳ ಸಮುದಾಯಗಳ ಜಾತಿ/ಪಂಗಡಗಳೆಲ್ಲವೂ ತಮಗಾಗುತ್ತಿದ್ದ ನಿರಂತರ ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರಜಾಪ್ರಭುತ್ವ ಮಾದರಿಯಲ್ಲಿ ಅಲ್ಲಲ್ಲಿ ಸಣ್ಣದಾಗಿ ಪ್ರತಿಭಟಿಸಲು ಆರಂಭಿಸಿದವು. ಈ ಚಳವಳಿ ಆರಂಭದಲ್ಲಿ ನೇರವಾಗಿ ಬ್ರಾಹ್ಮಣ ವಿರೋಧಿ ಸ್ವರೂಪ ಹೊಂದಿದ್ದರೂ, ನಿಧಾನವಾಗಿ ಇದು 'ಸಾಮಾಜಿಕ ನ್ಯಾಯ' ಆಗ್ರಹ ರೂಪಾಂತರವಾಯಿತು. ಆವಾಗ, ಸಾಮಾಜಿಕವಾಗಿ ಬಿಗಿ ಉಸಿರಿಡಿದು ಬದುಕುತ್ತಿದ್ದ ಬಹುತೇಕ ಸಮುದಾಯಗಳು ರಾಷ್ಟ್ರೀಯ ಸಂಪತ್ತಿನ ಕ್ರೋಢೀಕರಣಕ್ಕೆ ತಮ್ಮ ಕೊಡುಗೆ ಹಾಗೂ ಅದರ ಹಂಚಿಕೆಯಲ್ಲಾಗುತ್ತಿರುವ ತಾರತಮ್ಯತೆಗಳನ್ನು ಸೂಕ್ಷ್ಮವಾಗಿ ಜಾಹೀರುಗೊಳಿಸತೊಡಗಿದ್ದವು. ಈ ಕಾಲಘಟ್ಟದಲ್ಲಿ ವಿದೇಶಿ ಮಾನವ ಶಾಸ್ತ್ರಜ್ಞರು ಅತಿ ಮನೋಜ್ಞವಾಗಿ ಇಲ್ಲಿನ ಸಾಮಾಜಿಕತೆಯೊಳಗಿರುವ ಜಾತಿ-ಪಂಗಡಗಳ ನಡುವೆ ಇರುವ ಸಾಮಾಜಿಕ ಭೇದಭಾವಗಳ ಸ್ವರೂಪ ಮತ್ತು ಇತರ ಸಾಂಸ್ಕೃತಿಕ ಭಿನ್ನತೆಗಳ ಕುರಿತು ವಿಶೇಷ ಅಧ್ಯಯನಗಳನ್ನು ಕೈಗೊಂಡರು.

ಈ ಅಧ್ಯಯನಕಾರರೆಲ್ಲರೂ ಜಾತಿ-ಪಂಗಡಗಳ ಮೇಲಿನ ವಿಶ್ಲೇಷಣೆ ಕೈಗೊಳ್ಳಲು ಅಂದಿನ ಜನಗಣತಿಗಳನ್ನೇ ಹೆಚ್ಚು ಹೆಚ್ಚಾಗಿ ಆಧಾರವನ್ನಾಗಿಸಿಕೊಂಡರು. 1881–1921ರ ತನಕ ನಡೆದಿದ್ದ ಬಹುತೇಕ ಜನಗಣತಿಗಳೆಲ್ಲವೂ ಜಾತಿ-ಪಂಗಡಗಳ ನಡುವಿನ ವಿಭಜನೆ/ಶ್ರೇಣೀಕೃತತೆಯನ್ನು ಸಾದರಪಡಿಸಲು 'ಬ್ರಾಹ್ಮಣ ಸಮಾಜ' ಹೊಂದಿರುವ ಸಾಮಾಜಿಕ ಸ್ಥಾನ-ಮಾನಗಳ ಮುಖೇನ ತುಲನೆ ಮಾಡಿ ಬ್ರಾಹ್ಮಣೇತರರು ಹೊಂದಿರುವ ಸ್ಥಾನಮಾನಗಳನ್ನು ಸಾದರ ಪಡಿಸಿತ್ತು. ಅದರಲ್ಲೂ 1931ರ ಜನಗಣತಿ ವಿಭಿನ್ನ ಶೈಲಿಯಲ್ಲಿ ವಸ್ತುನಿಷ್ಠವಾಗಿ ಪ್ರಾದೇಶಿಕ/ಪ್ರಾಂತವಾರು ಜಾತಿಪಂಗಡಗಳಿಗೆ ಸಂಬಂಧಿಸಿದ ಸಾಮಾಜಿಕ,

ಬ್ರಿಟಿಷ್ ಭಾರತದೊಳಗೆ ಹಿಂದುಳಿದ ಮತ್ತು ತಳ ಸಮುದಾಯಗಳ ಜಾತಿ/ಪಂಗಡಗಳೆಲ್ಲವೂ ತಮಗಾಗುತ್ತಿದ್ದ ನಿರಂತರ ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರಜಾಪ್ರಭುತ್ವ ಮಾದರಿಯಲ್ಲಿ ಅಲ್ಲಲ್ಲಿ ಸಣ್ಣದಾಗಿ ಪ್ರತಿಭಟಿಸಲು ಆರಂಭಿಸಿದವು. ಈ ಚಳವಳಿ ಆರಂಭದಲ್ಲಿ ನೇರವಾಗಿ ಬ್ರಾಹ್ಮಣ ವಿರೋಧಿ ಸ್ವರೂಪ ಹೊಂದಿದ್ದರೂ, ನಿಧಾನವಾಗಿ ಇದು 'ಸಾಮಾಜಿಕ ನ್ಯಾಯ' ಆಗ್ರಹ ರೂಪಾಂತರವಾಯಿತು. ಆವಾಗ, ಸಾಮಾಜಿಕವಾಗಿ ಬಿಗಿ ಉಸಿರಿಡಿದು ಬದುಕುತ್ತಿದ್ದ ಬಹುತೇಕ ಸಮುದಾಯಗಳು ರಾಷ್ಟ್ರೀಯ ಸಂಪತ್ತಿನ ಕ್ರೋಢೀಕರಣಕ್ಕೆ ತಮ್ಮ ಕೊಡುಗೆ ಹಾಗೂ ಅದರ ಹಂಚಿಕೆಯಲ್ಲಾಗುತ್ತಿರುವ ತಾರತಮ್ಯತೆಗಳನ್ನು ಸೂಕ್ಷ್ಮವಾಗಿ ಜಾಹೀರುಗೊಳಿಸ ತೊಡಗಿದ್ದವು. ವಿಶೇಷ ಅಧ್ಯಯನಗಳನ್ನು ಕೈಗೊಂಡರು.

ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಸುಸ್ಪಷ್ಟವಾಗಿ ದಾಖಲಿಸಿತ್ತು. ಆವಾಗ ಆಗೋಚರವಾಗಿದ್ದ ಅದೆಷ್ಟೋ ಜಾತಿಗಳ ಉಪಜಾತಿಗಳು, ಉಪಜಾತಿಗಳ ಮರಿ ಜಾತಿಗಳು; ಪಂಗಡ/ಬುಡಕಟ್ಟಿನೊಳಗಿದ್ದ ಸಣ್ಣ-ಪುಟ್ಟ ಪಿಂಗಡಿಗಳೆಲ್ಲವೂ ಬೆಳಕಿಗೆ ಬಂದವು. ಆ ಮೂಲಕ ಶ್ರೇಣಿಕೃತ ಸಾಮಾಜಿಕತೆಯೊಳಗಿರುವ ಬಹುವರ್ಣಮಯ ಜೀವನ ವಿಧಾನಗಳೆಲ್ಲವೂ ತೆರೆದುಕೊಳ್ಳಲಾರಂಭಿಸಿದವು.

ಈ ಸಂದರ್ಭದಲ್ಲಿ ಬ್ರಾಹ್ಮಣ ಸಮಾಜ ದೇಶಾದ್ಯಂತ ಏಕ ಪ್ರಧಾನ ಸಾಮಾಜಿಕ ಗುಂಪಾಗಿ ಕಂಡಿದ್ದರೂ, ಅದು ವಿವಿಧ ಪ್ರಾದೇಶಿಕ ಮಟ್ಟಗಳಲ್ಲಿ ಇತರ ಬಹುಸಂಖ್ಯಾತ ಶೋಷಿತ ಸಮುದಾಯಗಳ ಜನಸಂಖ್ಯೆ ಮುಂದೆ ಅಲ್ಪಸಂಖ್ಯಾತರಾದರು. ಹಾಗೆಯೇ ಕೆಲವೊಂದು ಉನ್ನತ ಸ್ಥಿತಿವಂತ ಜಾತಿಗಳು ದೇಶದ ಸಂಪತ್ತಿನ ಮೇಲೆ ಹೊಂದಿದ್ದ ನೇರ ಹಿಡಿತಗಳೂ ಹೊರಬಂದವು. ಆದರೆ, ಇವರಿಗೆ ಭಿನ್ನರಾಗಿ ಉಳುಮೆಗಾರರು, ಕೃಷಿ ಕಾರ್ಮಿಕರು, ಕುಶಲಕರ್ಮಿಗಳು, ಅನ್ಯೆರ್ಮಲ್ಯ ವೃತ್ತಿ ನಿರ್ವಾಹಕರು, ಪಂಚಮರು, ಆದಿಮಾ ಅಲೆಮಾರಿಗಳು ಹಾಗೂ ವಿವಿಧ ಸಾಮಾಜಿಕ ಬುಡಕಟ್ಟುಗಳು ಗಣನೀಯ ಸಂಖ್ಯೆಯಲ್ಲಿರುವುದು ಪ್ರಖರವಾಗಿ ಬೆಳಕಿಗೆ ಬಂದವು. ಈ ಮೂಲಕ ಹೊರ ಜಗತ್ತಿಗೆ ಭಾರತೀಯ ಸಮಾಜದೊಳಗಿರುವ ಬಹು ಸಂಸ್ಕೃತಿಯ ಸಾಮಾಜಿಕ ಗುಂಪುಗಳ ಮಾದರಿ ಚಿತ್ರಣ ಎದ್ದು ಕಾಣತೊಡಗಿತ್ತು. ಇದು ಇಲ್ಲಿನ 'ವಸುದೈವಕ ಕುಟುಂಬಂ' ವ್ಯಾಖ್ಯಾನಕ್ಕೆ ವಿರೋಧಾಭಾಷವೆಂಬಂತೆ ಕಾಣತೊಡಗಿತ್ತು.

ಹಾಗೆಯೇ ಬಹುಸಂಖ್ಯಾತರು ರಾಷ್ಟ್ರೀಯ ಸಂಪತ್ತಿನ ಅನುಭೋಗ ಕ್ರಿಯೆಗಳಲ್ಲಿ ಹೊಂದಿದ್ದ ನೇರ ಸಂಬಂಧಿಗಳು ಸ್ಪಷ್ಟವಾಗಿ ಬಹಿರಂಗ ವಾಗತೊಡಗಿದವು. ಈ ಜನಗಣತಿಗಳ ವಿಶ್ಲೇಷಣೆಗಳನ್ನು ಪರಿಣಾಮಕಾರಿಯಾಗಿ ಡಾ.ಬಿ.ಆರ್.ಅಂಬೇಡ್ಕರ್ ಮತ್ತಿತರು ಯಶಸ್ವಿಯಾಗಿ ಬಳಸಿಕೊಂಡು ನಿಮ್ನ ವರ್ಗಗಳ ಅಂದಿನ ಸಾಮಾಜಿಕ ಸಬಲೀಕರಣಕ್ಕೆ ಉತ್ತೇಜಿಸಿದರು. ಈ ಹಿಂದೆಯೂ ಜನಗಣತಿಗಳ ಮೂಲಕ ಜಾತಿ–ಪಂಗಡಗಳ ವಿವರಗಳು ಹೊರಬಂದಿದ್ದಾಗಲೂ ಅನೇಕ ಬೀದಿ ಕಾಳಗ, ರಗಳೆಗಳೂ ದಾಖಲಾಗಿವೆ. ಈ ಸಾಮಾಜಿಕ ಸಮಸ್ಯೆ 2001ರ ಜನಗಣತಿಯಲ್ಲಿಯೂ ಕಾಣಿಸಿಕೊಂಡು, ಬರಲಿರುವ 2011ರ ಜನಗಣತಿಯಲ್ಲಿಯೂ ತಲೆದೂರಲಿದೆ. ನೈಜಾರ್ಥದಲ್ಲಿ ಜಾತಿ–ಪಂಗಡಗಳ ವ್ಯವಹಾರಗಳು ಇಲ್ಲಿನ ಸಾಮಾಜಿಕತೆಯಲ್ಲಿ ಕಟು ವಾಸ್ತವದಂತಿದೆ. 1931ರ ವೇಳೆಗಾಗಲೆ, ಜಾತಿ ಹೆಸರಿನಲ್ಲಿ ರಾಷ್ಟ್ರ ಸಂಪತ್ತಿನ ಮೇಲೆ ಹಿಡಿತ ಹೊಂದಿದ್ದವರೆಲ್ಲರೂ ಜಾತಿ ಆಧಾರಿತ ಜನಗಣತಿ ವಿರುದ್ಧ ಸದಿಲ್ಲದೆ ಪ್ರತಿಧ್ವನಿಸುತಾ ಮುನ್ನೆಡೆದರು. ಆವಾಗ ಅನೇಕರು ಬ್ರಿಟಿಷರ ಮನವಲಿಸುವಲ್ಲಿ ಯಶಸ್ವಿಯಾದರು.

ಇಂತಹ ಶಕ್ತಿಕೂಟಗಳೆಲ್ಲವೂ ಜಾತಿ ಆಧಾರಿತ ಜನಗಣತಿಗೆ ದೊಡ್ಡ ತಲೆನೋವಾಗಿ ಬಿಟ್ಟರು. ಹೀಗೆ ನಿರಂತರವಾಗಿ ಜನಗಣತಿಗಳಾದರೆ ಅವರ ಸಾಮಾಜಿಕ ಬಣ್ಣಗಳೆಲ್ಲವೂ ಬಯಲಾಗುವುದೆಂಬ ಭಯದಿಂದ ಅಂತಿಮವಾಗಿ ಅದಕ್ಕೆ ಇತಿಶ್ರೀಯಾಡಿಬಿಟ್ಟರು. ತಳಸಮುದಾಯಗಳ ನೈಜ ಸಾಮಾಜಿಕ ಚಿತ್ರಣಗಳು ಅವರಿಗೆ ಕಾಣತೊಡಗಿದರೆ, ಅವಲ್ಲಿ ಪರಿವರ್ತನೆಯಾಗಿ ಉನ್ನತ ವರ್ಗಗಳ ಪಾರಂಪರಿಕ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಬರುವುದೆಂಬ ಭೀತಿ ಇವರಲ್ಲಿ ಹೆಚ್ಚಾಯಿತು. ಧರ್ಮ ನಿರಪೇಕ್ಷತೆ ಹೆಸರಿನಲ್ಲಿ ಸಂವಿಧಾನ

ದೇಶಾದ್ಯಂತ 1977ರಲ್ಲಿ ಬೀಸಿದ ಹೊಸ ರಾಜಕೀಯ ಪರಿವರ್ತನಾ ಗಾಳಿಯಿಂದಾಗಿ ಕೇಂದ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ರಚನೆಯಾಯಿತು. ಈ ಸರ್ಕಾರ, ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸರ ಕನಸಿನ ಕೂಸಿನಂತಿದ್ದ ಪ್ರೊ.ಎಲ್.ಜಿ.ಹಾವನೂರ್ ಆಯೋಗದ ಶಿಫಾರಸ್ಸುಗಳಿಗೆ ಮಾರು ಹೋಗಿ ಬಿ.ಪಿ.ಮಂಡಲರ ನೇತೃತ್ವದಲ್ಲಿ ಎರಡನೆ ಹಿಂದುಳಿದ ಆಯೋಗವನ್ನು ರಚಿಸಿತ್ತು. ಈ ಆಯೋಗ ಸಹ ಸಮುದಾಯಗಳ ಸಾಮಾಜಿಕ ತಾರತಮ್ಯತೆಗಳನ್ನೇ ಮಾನದಂಡವನ್ನಾಗಿಸಿಕೊಂಡಿತ್ತು. ಇದು ಕಾಕ ಕಾಳೇಕರ್‌ಗಿಂತ ಒಂದು ಹೆಜ್ಜೆ ಮುಂದಿಟ್ಟು ಭಿನ್ನ ಶೈಲಿಯಲ್ಲಿ ರಾಜ್ಯಾವಾರು ಅಧ್ಯಯನ ಆರಂಭಿಸಿ ಹಿಂದುಳಿದವರೊಳಗೆ ಅತಿ ಮತ್ತು ಅತ್ಯಂತ ಹಿಂದುಳಿದವರನ್ನು ಗುರುತಿಸಿತ್ತು.

ಎಲ್ಲಾ ಬಗೆಯ ತಾರತಮ್ಯತೆಗಳನ್ನು ನಿಷೇಧಿಸಿದೆ. ಆದರೆ, ಇವರೆಲ್ಲರೂ ಜಾತಿ–ಧರ್ಮಗಳ ನಡುವೆ ಕಪಟ ಮಾನಸಿಕ ಸುಗಂಧ ಸುರಿದು ತಮ್ಮ ಚಾಣುಕ್ಯ ನೀತಿ ಪ್ರದರ್ಶನ ಮಾಡಿದರು. ಇಂದಿಗೂ ವಾಡಿಕೆಯಲ್ಲಿ ವ್ಯಕ್ತಿಯೊಬನ ಘನತೆ–ಆತನ ಸಾಮಾಜಿಕ ಸ್ಥಾನ–ಮಾನ ನಿಗಧಿಪಡಿಸುವಾಗ ಜಾತಿಯನ್ನೇ ಮಾನದಂಡವನ್ನಾಗಿಸಿಕೊಳ್ಳುವುದೇ ಜಾಸ್ತಿ. ವಾಸ್ತವಿಕತೆ ಹೀಗಿರುವಾಗ ಜಾತಿಯನ್ನಾಧರಿಸಿ ವ್ಯಕ್ತಿ–ವ್ಯಕ್ತಿ ಸಮುದಾಯಗಳ ಸಾಮಾಜಿಕ ಹಿನ್ನೆಲೆ ಗುರುತಿಸುವುದರಿಂದ ಆಗುವ ಪ್ರಮಾದಗಳೇನು?

ಸಂವಿಧಾನ ಅಧಿಕೃತವಾಗಿ ಯಾವುದೇ ಜಾತಿ–ಧರ್ಮಗಳಿಗೆ ಮನ್ನಣೆ ನೀಡಿಲ್ಲ. ಅದರ ಬದಲು ಇದು ಸಾಮಾಜಿಕವಾಗಿ ಯಾವ ಜಾತಿ ಪಂಗಡಗಳು ನಿರಂತರವಾದ ಶೋಷಣೆಗಳನ್ನು ಅನುಭವಿಸುತ್ತಾ ಬಂದಿವೆಯೋ ಅಂತಹವುಗಳ ಸಬಲೀಕರಣಕ್ಕೆ ಅಸ್ತು ನೀಡಿದೆ. ಅಥವಾ ಜಾತಿ ಆಧಾರಿತ ಜನಗಣತಿಯಿಂದ ಸಾಮಾಜಿಕ ಸಂಘರ್ಷ ಸೃಷ್ಟಿಯಾಗುವುದೆಂದು ತೀರ್ಮಾನಿಸಿ ಅಂತಹ ಪ್ರಕ್ರಿಯೆಬೇಡವೆಂದು ಸಾರಿಲ್ಲ. ಆದುದರಿಂದ, 1953ರಲ್ಲಿ ನೆಹರು ನೇತೃತ್ವದ ಸರ್ಕಾರ ಸಂವಿಧಾನದ 340ನೇ ವಿಧಿ ಅನ್ವಯ ಮೊದಲ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗವನ್ನು ಕಾಕ ಕಾಳೇಕರ್ ನೇತೃತ್ವದಲ್ಲಿ ನೇಮಿಸಿತು. ಈ ಆಯೋಗವು ದೇಶಾದ್ಯಂತ 2399 ಹಿಂದುಳಿದ ವರ್ಗಗಳಿವೆ ಎಂದು ಹೇಳಿದೆ. ಇವುಗಳೊಂದಿಗೆ 837 ವರ್ಗಗಳು ಅತ್ಯಂತ ಹಿಂದುಳಿದವರೆಂದು(Most Backwards) ತನ್ನ ಸಮೀಕ್ಷೆಯಲ್ಲಿ ಸೂಚಿಸಿತ್ತು. ಅದು 1961ರಿಂದಲೇ ಜಾತಿ, ಪಂಗಡ, ವರ್ಗ ಆಧಾರಿತ ಜನಗಣತಿ ಆರಂಭಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಆದರೆ ಕುಟಿಲ ಜಾತಿವಾದಿಗಳೆಲ್ಲರೂ ಇಂತಹ ಶಿಫಾರಸ್ಸುಗಳನ್ನು ಜೀರ್ಣಿಸಿಕೊಳ್ಳದಂತಹ ಸ್ಥಿತಿಗೆ ತಲುಪಿದ್ದರು. ಕೊನೆಗೆ ಇಂತಹ ಕರ್ಮಠ ಜಾತಿವಾದಿಪಡೆಗಳೆಲ್ಲವೂ ನೆಹರು ಮನೋಧರ್ಮಕ್ಕೆ ಲಗ್ಗೆ ಹಾಕಿ ಕಾಕ ಕಾಳೇಕರ್ ಆಯೋಗದ ಶಿಫಾರಸ್ಸು ಜಾರಿಗೆ ಆಗದಂತೆ ತಡೆದು ಅದಕ್ಕೆ ಸಂಸತ್ತಿನ ಕತ್ತಲೊಳಗೆ ಚಿರನಿದ್ರೆಗೆ ಅನುವು ಮಾಡಿದರು.

ದೇಶಾದ್ಯಂತ 1977ರಲ್ಲಿ ಬೀಸಿದ ಹೊಸ ರಾಜಕೀಯ ಪರಿವರ್ತನಾ ಗಾಳಿಯಿಂದಾಗಿ ಕೇಂದ್ರದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ರಚನೆಯಾಯಿತು. ಈ ಸರ್ಕಾರ, ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸರ ಕನಸಿನ ಕೂಸಿನಂತಿದ್ದ ಪ್ರೊ.ಎಲ್.ಜಿ. ಹಾವನೂರ್ ಆಯೋಗದ ಶಿಫಾರಸ್ಸುಗಳಿಗೆ ಮಾರು ಹೋಗಿ ಬಿ.ಪಿ.ಮಂಡಲರ ನೇತೃತ್ವದಲ್ಲಿ ಎರಡನೆ ಹಿಂದುಳಿದ ಆಯೋಗವನ್ನು ರಚಿಸಿತ್ತು. ಈ ಆಯೋಗ ಸಹ ಸಮುದಾಯಗಳ ಸಾಮಾಜಿಕ ತಾರತಮ್ಯತೆಗಳನ್ನೇ ಮಾನದಂಡವನ್ನಾಗಿಸಿಕೊಂಡಿತ್ತು. ಇದು ಕಾಕ ಕಾಳೆಕರ್‌ಗಿಂತ ಒಂದು ಹೆಜ್ಜೆ ಮುಂದಿಟ್ಟು ಭಿನ್ನ ಶೈಲಿಯಲ್ಲಿ ರಾಜ್ಯಾವಾರು ಅಧ್ಯಯನ ಆರಂಭಿಸಿ ಹಿಂದುಳಿದವರೊಳಗೆ ಅತಿ ಮತ್ತು ಅತ್ಯಂತ ಹಿಂದುಳಿದವರನ್ನು ಗುರುತಿಸಿತ್ತು. ಈ ಆಯ್ಕೆ ಮಾಡುವಾಗ ಧರ್ಮವಾರು ಸಾಮಾಜಿಕ ತಾರತಮ್ಯತೆಗಳಿರುವುದನ್ನು ಗುರುತಿಸಿತ್ತು. ಈ ನಿರ್ಧಾರಗಳ ಮೇರೆಗ ಧಾರ್ಮಿಕ ಅಲ್ಪಸಂಖ್ಯಾತರನ್ನು ಈ ಗವಾಕ್ಷಿಯಡಿ ಪರಿಶೀಲಿಸಿತು. ಆದುದರಿಂದಲೇ ದೇಶಾದ್ಯಂತ ಆವಾಗ ಅತಿ ಹಿಂದುಳಿದವರ ಜನಸಂಖ್ಯೆ ಶೇ.52ರಷ್ಟು ಮತ್ತು ಶೇ.25.5ರಷ್ಟು ಮುಂದುವರಿದವರೆಂದು ವರ್ಗೀಕರಿಸಿತ್ತು. ಈ ಆಯೋಗವು ಸಹ OBCಗಳನ್ನು ಗುರುತಿಸಲು ಪ್ರಾತಿನಿಧಿಕ ಸಮೀಕ್ಷೆಗಳ ಮುಖಾಂತರ ಅವರ ಸ್ಥಾನಮಾನಗಳನ್ನು ಖಚಿತಪಡಿಸಿಕೊಂಡಿತ್ತು.

1951ರ ತರುವಾಯ ಭಾರತ ಸರ್ಕಾರ ಪರಿಶಿಷ್ಟ ಜಾತಿ ಪಂಗಡಗಳ ಜನಗಣತಿ ಸಂಬಂಧವಾಗಿ ಇದೊಂದು ರಾಜ್ಯಾಂಗ ಆದೇಶವೆಂದು ತೀರ್ಮಾನಿಸಿ ಸಮಗ್ರ ಸಮೀಕ್ಷೆಗೆ ಒಳಪಡಿಸಿತ್ತು. ಆದರೆ ಹಿಂದುಳಿದ ವರ್ಗಗಳ ಹಾಗೂ ಇತರ ಜಾತಿಗಳ ಸಮೀಕ್ಷೆ ವಿಚಾರದಲ್ಲಿ ಮಾತ್ರ ಎಡಬಿಡಂಗಿ ನೀತಿ ಪ್ರದರ್ಶನ ಮಾಡುತ್ತಾ ಬಂದಿದೆ. ಪರಿಶಿಷ್ಟರ ಜನಗಣತಿಯ ಸಹ ಈ ಸಮುದಾಯಗಳ ಪ್ರಜ್ಞಾವಂತರು ತಮ್ಮದೆಯಾದ ಟೀಕೆ–ಟಿಪ್ಪಣಿಗಳನ್ನು ದಾಖಲಿಸುತ್ತಿದ್ದಾರೆ. ಇವರೆಲ್ಲರೂ ತಮ್ಮ ಸಮುದಾಯಗಳನ್ನು ಕೆಳಮಟ್ಟದಲ್ಲಿ ಸಮೀಕ್ಷೆ ಮಾಡಲಾಗಿದೆ ಎಂಬ ಕೂಗನ್ನು ಸಾಮಾನ್ಯವಾಗಿ ಇತ್ತೀಚಿಗೆ ಸಾದರಪಡಿಸುತ್ತಿದ್ದಾರೆ. ಭಾರತ ಸರ್ಕಾರ ಕಾಕ ಕಾಳೇಕರ್ ಆಯೋಗದ ಶಿಫಾರಸ್ಸಿನಂತೆ 1961ರಲ್ಲೇ ಹಿಂದುಳಿದ ವರ್ಗಗಳನ್ನು ಸಾಮಾನ್ಯ ಜನಗಣತಿಗೆ ಒಳಪಡಿಸಿದ್ದರೆ, ಬಹುಶಃ ಈ ವರ್ಗಗಳ ಬಗ್ಗೆ ವ್ಯಕ್ತವಾಗುತ್ತಾ ಬಂದಿರುವ ಟೀಕೆಗಳೆಲ್ಲವೂ ಸದ್ದಡಗುತ್ತಿದ್ದವು. ಅಲ್ಲಿಂದ ಇಲ್ಲಿಯನತನಕ ವೈಜ್ಞಾನಿಕವಾಗಿ ಪ್ರತಿಯೊಂದು ಕುಟುಂಬದ/ಸಮುದಾಯಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಇತರ ಮಾಹಿತಿಗಳೆಲ್ಲವೂ ಜನತೆಯ ಮುಂದಿದ್ದರೆ ಸರ್ಕಾರದ ಉದ್ದೇಶಿತ ಸಾಮಾಜಿಕನ್ಯಾಯ ಪರಿಕಲ್ಪನೆಗಳೆಲ್ಲವೂ ಇದರ ಟೀಕಾರರಿಗೂ ಅರ್ಥವಾಗುತ್ತಿತ್ತು.

ಬಹುಶಃ ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರತಿಷ್ಠಿತ ಉನ್ನತ ವ್ಯಾಸಂಗ ಸಂಸ್ಥೆಗಳಲ್ಲಿ 'ಮೀಸಲಾತಿ' ಅಳವಡಿಸಬೇಕೆಂದು ಮುಂದಾದಾಗ ದೇಶಾದ್ಯಂತ ಹಿಂಸಾತ್ಮಕ ಕೃತ್ಯ

(29ನೇ ಪುಟಕ್ಕೆ)

ಜನತೆಯ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವ ಮಾಧ್ಯಮಗಳು

ನರಸಿಂಹ ಗುಂಜಹಳ್ಳಿ

> **ಜಾಗತಿಕರಣದ ಪ್ರಭಾವದಿಂದ ಮಾಧ್ಯಮ ಕ್ಷೇತ್ರವು ಒಂದು ದೊಡ್ಡ ಉದ್ಯಮವಾಗಿ ಪರಿವರ್ತಿಸಿ ಬಿಟ್ಟಿದೆ. ಉದ್ಯಮಿದಾರರಿಗೆ ಲಾಭವೇ ಮುಖ್ಯ ಗುರಿಯಾಗಿದೆ ಆದುದರಿಂದ ಇಂದು ಮಾಧ್ಯಮಗಳಲ್ಲಿ: ಸಾಮನ್ಯ ಜನರ ಸಮಸ್ಯೆಗಳಿಗಿಂತ ಜಾಹಿರಾತುಗಳೇ ಜಾಸ್ತಿ ಇರುತ್ತವೆ ಮಾಧ್ಯಮಗಳಿಗೆ ಲಾಭವೇ ಮುಖ್ಯ ಗುರಿಯಾಗಿರುವುದರಿಂದ - ಅವುಗಳು ಮಾರುಕಟ್ಟೆ ಪರ ಮನೋಭಾವ ಇರುವುದರಿಂದ ಸಮಾಜದ ಜಾಗೃತಿ ಬಗ್ಗೆ, ಸಮಾಜಿಕ ಕಳ-ಕಳಿ ಬಗ್ಗೆ ಬಹಳ ಕಡಿಮೆ. ಮಾಧ್ಯಮಗಳು ಕೆಲವೊಮ್ಮೆ ಉತ್ಪ್ರೇಕ್ಷೆ ಸುದ್ದಿಗಳನ್ನು ವರದಿ ಮಾಡಿ ಜನರರನ್ನು ಗೊಂದಲವನ್ನು ಸೃಷ್ಟಿ ಮಾಡುತ್ತವೆ. ಇತ್ತೀಚಿಗೆ ಹೊಸಪೇಟೆಯಲ್ಲಿ ತುಂಗಭದ್ರ ಡ್ಯಾಂ ಕಟ್ಟೆ ಹೊಡೆದು ಹೋಗೆಯೇ ಇಲ್ಲ, ಆದರೆ ಮಾಧ್ಯಮಗಳು ತುಂಗಭದ್ರ ಡ್ಯಾಂ ಹೊಡೆದು ಹೋಗಿದೆ ಎಂಬ ವರದಿ ಜನರನ್ನು ಭಯ-ಭೀತಿಯರನ್ನಾಗಿ ಮಾಡಿದವು.**

ಪ್ರಜಾಪ್ರಭುತ್ವದ ನಾಲ್ಕನೇಯ ಸ್ತಂಭವಾದ ಮಾಧ್ಯಮಗಳನ್ನು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಒಂದು ನಿರ್ಣಯಕವಾದ ಕ್ಷೇತ್ರ ವೆಂದು ಪರಿಗಣಿಸಲಾಗುತ್ತಿದೆ ಈ ಮಾಧ್ಯಮ ಕ್ಷೇತ್ರದಲ್ಲಿ ಶೋಷಿತ ಜನಾಂಗದವರು ಬಹಳ ವಿರಳವಾಗಿದ್ದಾರೆ. ಆದುದರಿಂದ ಶೋಷಿತರರಿಗೆ ಅನ್ಯಾಯವಾದ, ಸರಕಾರಿ ಅಭಿವೃದ್ಧಿಗಳು ಸರಿಯಾಗಿ ಸಿಗದೇ ಇದ್ದಾಗ ಶೋಷಿತರ ಮೇಲೆ ಬಲಾಡ್ಯರು ದೌರ್ಜನ್ಯ ನಡೆಸಿ ದಾಗ ಮಾಧ್ಯಮಗಳು ಅವುಗಳನ್ನು ವರದಿ ಮಾಡುವುದಿಲ್ಲ. ವರದಿ ಮಾಡಿದರೂ ಕೂಡ ಬಹಳ ಸಮಿರ್ಪಕವಾಗಿ ವರದಿ ಮಾಡುವುದಿಲ್ಲ ಮತ್ತು ಮಾಧ್ಯಮಗಳು ಶಿವರಾತ್ರಿ, ದಸರ, ದೀಪಾವಳಿ, ಗಣೇಶ ಹಬ್ಬ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳನ್ನು ಮೌಢ್ಯ ಕಂದಚಾರ ಗಳ ಬಗ್ಗೆ ಘಂಟೆಗಟ್ಟಲೆ ವರದಿ ಮಾಡುವ ಮಾಧ್ಯಮಗಳು ಶೋಷಿ ತರ ಮೇಲೆ ದೌರ್ಜನ್ಯ ನಡೆದಾಗ ಅವುಗಳನ್ನು ವರದಿ ಮಾಡುವು ದಿಲ್ಲ ಹಾಗು ಆ ದೌರ್ಜನ್ಯಗಳನ್ನು ಹೇಗೆ ತಡೆಗಟ್ಟಬೇಕು ಎನ್ನುವ ವಿಚಾರವನ್ನು ವಿಷಯವನ್ನು ಮಾಧ್ಯಮಗಳು ಚರ್ಚೆ ಮಾಡುವುದಿಲ್ಲ. ಇದಕ್ಕೆಲ್ಲಾ ಮುಖ್ಯವಾದ ಕಾರಣ ಮಾಧ್ಯಮ ಕ್ಷೇತ್ರದಲ್ಲಿ ಸಮಾಜಿಕ-ಆರ್ಥಿಕ-ರಾಜಕೀಯವಾಗಿ ಹಿಂದುಳಿದ ಶೋಷಿತ ಜನರು ಬಹಳ ಜಾಸ್ತಿ ಇಲ್ಲದೇ ಇರುವುದು ಹಾಗು ಮಾಧ್ಯಮ ಕ್ಷೇತ್ರದಲ್ಲಿ ಪೂರ್ವಗ್ರಹದಿಂದ ಕೂಡಿರುವವರು ಅಧಿಕವಾಗಿರುವುದು.

ಜಾಗತಿಕರಣದ ಪ್ರಭಾವದಿಂದ ಮಾಧ್ಯಮ ಕ್ಷೇತ್ರವು ಒಂದು ದೊಡ್ಡ ಉದ್ಯಮವಾಗಿ ಪರಿವರ್ತಿಸಿಬಿಟ್ಟಿದೆ. ಉದ್ಯಮಿದಾರರಿಗೆ ಲಾಭವೇ ಮುಖ್ಯ ಗುರಿಯಾಗಿದೆ ಆದುದರಿಂದ ಇಂದು ಮಾಧ್ಯಮಗಳಲ್ಲಿ: ಸಾಮನ್ಯ ಜನರ ಸಮಸ್ಯೆಗಳಿಗಿಂತ ಜಾಹಿರಾತುಗಳೇ ಜಾಸ್ತಿ ಇರುತ್ತವೆ ಮಾಧ್ಯಮಗಳಿಗೆ ಲಾಭವೇ ಮುಖ್ಯ ಗುರಿಯಾಗಿರುವುದ ರಿಂದ ಹಾಗು ಅವುಗಳು ಮಾರುಕಟ್ಟೆ ಪರ ಮನೋಭಾವ ಇರುವು ದರಿಂದ ಸಮಾಜದ ಜಾಗೃತಿ ಬಗ್ಗೆ, ಸಮಾಜಿಕ ಕಳ-ಕಳಿ ಬಗ್ಗೆ ಬಹಳ ಕಡಿಮೆ. ಮಾಧ್ಯಮಗಳು ಕೆಲವೊಮ್ಮೆ ಉತ್ಪ್ರೇಕ್ಷೆ ಸುದ್ದಿಗಳನ್ನು ವರದಿ ಮಾಡಿ ಜನರನ್ನು ಗೊಂದಲವನ್ನು ಸೃಷ್ಟಿಮಾಡುತ್ತವೆ. ಇತ್ತಿಚಿಗೆ ಹೊಸಪೇಟೆಯಲ್ಲಿ ತುಂಗಭದ್ರ ಡ್ಯಾಂ ಕಟ್ಟೆ ಹೊಡೆದು ಹೋಗೆಯೇ ಇಲ್ಲ, ಆದರೆ ಮಾಧ್ಯಮಗಳು ತುಂಗಭದ್ರ ಡ್ಯಾಂ ಹೊಡೆದು ಹೋಗಿದೆ ಎಂಬ ವರದಿ ಜನರನ್ನು ಭಯ-ಭೀತಿಯರನ್ನಾಗಿ ಮಾಡಿದವು.

ಹಾಗು ಅದೇ ರೀತಿ ಇತ್ತಿಚಿಗೆ ಹಂಪಿಯಲ್ಲಿ ಕುಸಿದ ಮನೆಯನ್ನು ನೋಡಿ ಇದನ್ನು ಭೂಕಂಪ ಎಂದು ತಿಳಿದು ಮರುದಿನ ಮಾಧ್ಯಮಗಳು ಹಂಪಿಯಲ್ಲಿ ಭೂಕಂಪವಾಗಿದೆ ಎಂದು ವರದಿ ಮಾಡಿ ಜನರನ್ನು ಭಯಭೀತಿಯನ್ನರಾಗಿ ಮಾಡಿದರು. ಒಟ್ಟಾರೆ ಇಂದು ಮಾಧ್ಯಮಗಳು ವಸ್ತುನಿಷ್ಠ ವರದಿಯನ್ನು ಮಾಡದೇ ಜನ ರನ್ನು ಗೊಂದಲಕ್ಕೆ ಸಿಲುಕುವಂತೆ ಭಯಭೀತರಾಗುವಂತೆ ವರದಿ ಮಾಡುತ್ತವೆ ಹಾಗು ಮಾಧ್ಯಮಗಳು ಸಮಾಜದಲ್ಲಿ ನಡೆಯುತ್ತಿರುವ ಮೋಸ, ಅನ್ಯಾಯ, ದೌರ್ಜನ್ಯಗಳ ಬಗ್ಗೆ, ಇನ್ನಿತರ ಜನಪರ ವಿಷ ಯಗಳನ್ನು ವರದಿ ಮಾಡುವುದಿಲ್ಲ. ಇದಕ್ಕೆ ಮುಖ್ಯಕಾರಣ ಇಂದು ಮಾಧ್ಯಮಗಳು ರಾಜಕೀಯ ನಾಯಕರ ಕೈಗೊಂಬೆಯಾಗಿರುವುದು ಇಲ್ಲವೇ ಮಾಧ್ಯಮಗಳ ಮಾಲಿಕರು ರಾಜಕೀಯ ನಾಯಕರೆ ಆಗಿರು ವುದೇ



ಕಾರಣವಾಗಿದೆ.

ಇತ್ತಿಚೆಗೆ ಕರ್ನಾಟಕದಲ್ಲಿ ಸುಮಾರು ಹದಿನಾಲ್ಕು ಜಿಲ್ಲೆಗಳಲ್ಲಿ ಹಿಂದೆಂದೂ ಕಾಣದಷ್ಟು ಮಳೆಯಾಗಿ ಅದರಲ್ಲಿ ರಾಯ ಚೂರು ಕೊಪ್ಪಳ, ಗುಲಬರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ 169 ಸಾವು. 14600 ಹಳ್ಳಿಗಳು ಪ್ರವಾಹಕ್ಕೆ ಸಿಲುಕಿ 2 ಲಕ್ಷಕ್ಕೂ ಅಧಿಕ ಮನೆಗಳು ಹಾಳಾಗಿವೆ. 3.66 ಲಕ್ಷ ಜನ ಬೀದಿಪಾಲಾಗಿದ್ದಾರೆ. ಒಟ್ಟಾರೆ ಈ ಪ್ರಕೃತಿ ವಿಕೋಪದಿಂದ ಕರ್ನಾಟಕದಲ್ಲಿ 1000 ಕೋಟಿ ಹಾನಿಯಾಗಿದೆ, ಬೆಳೆಗಿದೆ ಎಂದು ಅಂದಾಜಿಸಲಾಗಿದೆ.

ಮಾಧ್ಯಮಗಳು ಕರ್ನಾಟಕ, ಆಂಧ್ರ ಪ್ರದೇಶ ಇನ್ನಿತರ ಕಡೆ ಆದ ವಿಕೋಪಗಳನ್ನು ಯತವತ್ ವರದಿ ಮಾಡಿ ಕೈತೊಳೆದುಕೊಂಡಿತು ಹೊರೆತು ಯಾವ ಮಾಧ್ಯಮಗಳು ಕೂಡ ಈ ಪ್ರಕೃತಿ ವಿಕೋಪ ಯಾಕೆ ಆಗುತ್ತಿದೆ ಇದನ್ನು ಹೇಗೆ ತಡೆಗಟ್ಟಬೇಕು ಎನ್ನುವ ವಿಚಾರವನ್ನು ಹಾಗು ಈ ಪ್ರಕೃತಿ ವಿಕೋಪ ಜಾಗತಿಕ ತಾಪಮಾನದಿಂದ ಆಗುತ್ತಿದೆ ಎನ್ನುವ ವಿಚಾರವನ್ನು ಹಾಗು ಈ ಜಾಗತಿಕ ತಾಪಮಾನವನ್ನು ಸೃಷ್ಟಿಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ, ಆ ಕಂಪನಿಗಳ ಮಾಲಿಕರಾದ ಬಂಡವಾಳಶಾಹಿಗಳ ಬಗ್ಗೆ ಬರೆಯಲಿಲ್ಲ ಹಾಗು ಪ್ರಕೃತಿ ವಿಕೋಪ ಬಗ್ಗೆ, ಜಾಗತಿಕ ತಾಪಮಾನ ಬಗ್ಗೆ ವಿಶ್ಲೇಷಣೆ ಮಾಡಲಿಲ್ಲ. ಏಕೆಂದರೆ ಇಂದು ಮಾಧ್ಯಮಗಳು ಬಂಡವಾಳಶಾಹಿಗಳ, ರಾಜಕಾರಣಿಗಳ ಕಪಿಮುಷ್ಠಿಯಲ್ಲಿರುವುದು ಕಾರಣವಾಗಿದೆ.

ಇತ್ತಿಚೆಗೆ ಪ್ರವಾಹ ಹೆಚ್ಚಾಗಿ ತುಂಗಭದ್ರ ನದಿ ನೀರು ರಾಯಚೂರು ಪಕ್ಕ ಮಂತ್ರಾಲಯ ದೇವಸ್ಥಾನದ ಸುತ್ತ ಮುತ್ತ ನೀರು ಬಂದಿರುವುದರಿಂದ ದೇವಸ್ಥಾನಕ್ಕೆ ತೆರಳಿದ ಭಕ್ತರು ತಾವು ತಂಗಿದ್ದ ಮೂರನೇಯ- ನಾಲ್ಕನೇಯ ಅಂತಸ್ತಿನ ಲಡ್ಜ್‌ಗಳಲ್ಲಿ ಮೂರು ದಿನಗಳಿಂದ ಊಟ-ನೀರು ಇಲ್ಲದೇ ಸಾವು-ಬದುಕಿನ ಮಧ್ಯ ಹೋರಾಟ ಮಾಡುತ್ತಿದ್ದಾರೆ ಸರಕಾರ ಆ ಸಾಮನ್ಯ ಸಾವಿರಾರು ಜನರನ್ನು ರಕ್ಷಣೆ ಮಾಡದೇ ಕೇವಲ ಮಂತ್ರಾಲಯ ಮಠದ ರಾಯರನ್ನು ಸ್ವಾಮಿಜಿಯನ್ನು ಮಾತ್ರ ಪ್ರಭುತ್ವವು ಹೆಲಿಕ್ಯಾಪ್ಟರ್ ಮೂಲಕ ಅವರನ್ನು ರಕ್ಷಿಸಿ ಉಳಿದ ಸಾವಿರಾರು ಜನರನ್ನು ಅದೇ ಪ್ರವಾಹದಲ್ಲಿ ಬಿಟ್ಟಿತು. ಕೊನೆಗೆ ಮೂರು ದಿನಗಳ ನಂತರ ಅದೇ ಮಂತ್ರಾಲಯದಲ್ಲಿ 12 ಜನ ಪ್ರಾಣ ಕಳೆದುಕೊಂಡರು.

ಈ ವಿಷಯವನ್ನು ಯಾವ ಮಾಧ್ಯಮ ಕೂಡ ಸರಕಾರಕ್ಕೆ ಛೀಮಾರಿ ಹಾಕಲಿಲ್ಲ. ಹಾಗು ಸರಕಾರ ಮಂತ್ರಾಲಯದಲ್ಲಿ 12 ಜನ ಸತ್ತ ನಂತರ ಅವರಿಗೆ ಪರಿಹಾರ ಕೊಡುವ ಬದಲು ಹಾಗು ಉತ್ತರ ಕರ್ನಾಟಕದ ಪ್ರವಾಹಕ್ಕೆ ಸಿಲುಕಿರುವ ಹಳ್ಳಿಗಳಿಗೆ ಕುಡಿಯಲು ನೀರು ಇಲ್ಲದೇ ಹೊಟ್ಟೆಗೆ ಊಟವಿಲ್ಲದೆ ಕಣ್ಣಿಗೆ ನಿದ್ದೆಯಿಲ್ಲದೇ ಜನರು ಪರದಾಡುತ್ತಿದ್ದರೆ ಸರಕಾರ ಇವರ ರಕ್ಷಣೆ ಮಾಡುವ ಬದಲು, ಜನರ ಸಮಸ್ಯೆಗಳನ್ನು ಪರಿಹಾರ ಮಾಡುವ ಬದಲು ಹಳ್ಳಿಗಳಲ್ಲಿ ನಾಶವಾದ ಮನೆಗಳನ್ನು ಕಟ್ಟಿಕೊಡುವ ಬದಲು, ಜನರಿಗೆ ತೊಡಲು ಬಟ್ಟೆ ಕೊಡುವ ಬದಲು ಸರಕಾರ ಬಹಳ ಚೆನ್ನಾಗಿರುವ ನಾಶವಾಗದೇ ಹಾಗೇ ಇರುವ ಮಂತ್ರಾಲಯ ದೇವಸ್ಥಾನಕ್ಕೆ 10 ಕೋಟಿ ರೂ. ಕೊಟ್ಟರು.

ಈ ರೀತಿಯ ವಿಷಯವನ್ನು ಸಾಮನ್ಯ ಜನರ ಹಣವನ್ನು ಎಲ್ಲಾ ಜಾತಿಯ ವಿಭಿನ್ನ ಧರ್ಮದ ಜನರ ಹಣವನ್ನು ಒಂದು ನಿರ್ದಿಷ್ಠ ಧರ್ಮಕ್ಕೆ ಸೇರಿದ ದೇವಸ್ಥಾನಕ್ಕೆ ಹಣ ಕೊಟ್ಟಿರುವುದನ್ನು ಯಾವ ಮಾಧ್ಯಮವು ಕೂಡ ಇದನ್ನು ವಿಶ್ಲೇಷಣೆ ಮಾಡಲಿಲ್ಲ. ಏಕೆಂದರೆ ಇದಕ್ಕೆ ಕೂಡ ಬಹಳ ಮುಖ್ಯವಾದ ಕಾರಣ ಮಾಧ್ಯಮಗಳು ಸರಕಾರಿ ಜಾಹಿ ರಾತುಗಳಿಗೆ ಆಸೆ ಪಡೆಯುವುದು ಹಾಗು ಒಟ್ಟಾರೆ ಮಾಧ್ಯಮ ಕ್ಷೇತ್ರವು ರಾಜಕೀಯ ನಾಯಕರ ಕೈಗೊಂಬೆಯಾಗಿರುವುದು ಹಾಗು ಪ್ರವಾಹ ವಿಕೋಪದಿಂದ ರಾಯಚೂರು ಪಕ್ಕ ಗುಂಜಹಳ್ಳಿ ತಲಮಾರಿ ಇನ್ನಿತರ ಗ್ರಾಮಗಳು ನೀರಿನಲ್ಲಿ ಮುಳುಗಿದಾಗ ಅಲ್ಲಿನ ಯಾವ ಜನನಾಯಕರು ಕೂಡ ಅವರ ಕಷ್ಟಗಳಿಗೆ ಸ್ಪಂದಿಸಲಿಲ್ಲ. ಮೂರು-ನಾಲ್ಕು ದಿನಗಳ ನಂತರ ಅಲ್ಲಿಗೆ ಹೋದ ತಹಸಿಲ್ದಾರ ಪೊಲೀಸ್ ಇನ್ಸ್‌ಪೆಕ್ಟರು ಶಾಸಕ, ರಾಯಪ್ಪ ನಾಯಕನ ಮೇಲೆ ಹಲ್ಲೆ ಮಾಡಲು ಪ್ರಯತ್ನಿಸದರು ಹಾಗು ಸರಕಾರಿ ವಾಹನಗಳಿಗೆ ಬೆಂಕಿಯಿಟ್ಟರು. ಈ ವಿಷಯಗಳನ್ನು ಮಾಧ್ಯಮಗಳ ಯತವತ್‌ಯಾಗಿ ವರದಿ ಮಾಡಿದವು ಹೊರೆತು ಅಧಿಕಾರಿಗಳ, ಶಾಸಕರಗಳ ಬಗ್ಗೆ ಒಂದು ವಿಷಯವನ್ನು ಅಂದರೆ ಅಲ್ಲಿನ ಜನ ಪ್ರತಿನಿಧಿಗಳು ಜನರ ಕಷ್ಟ-ಸುಖದ ಬಗ್ಗೆ ಸ್ಪಂದಿಸದೇ ಇರುವ ಬಗ್ಗೆ ವಿಶ್ಲೇಷಣೆ ಮಾಡಲಿಲ್ಲ. ಇದಕ್ಕೆಲ್ಲ ಕೂಡ ಮಾಧ್ಯಮ ಕ್ಷೇತ್ರವು ಭ್ರಷ್ಟಚಾರಗೊಂಡಿರುವುದು ಹಾಗು ಮಾಧ್ಯಮ ಕ್ಷೇತ್ರವು ಸಮಾಜ ಜಾಗೃತಿ ಬಗ್ಗೆ ಸಮಾಜದ ಕಳ-ಕಳಿ ಬಗ್ಗೆ ಕಡಿಮೆ ಇರುವುದು ಕಾಣರವಾಗಿದೆ.

1991ರಿಂದ ಜಾಗತಿಕರಣ ಪ್ರಭಾವದಿಂದ ಮಾಧ್ಯಮಗಳು ಸುದ್ದಿಯಿಂದ ಮನ ರಂಜೆಯ ಕಡೆಗೆ ಗಮನಕೊಟ್ಟವು. ಗ್ರಾಮಗಳಿಂದ ನಗರಗಳ ಕಡೆಗೆ ನಡೆದವು. ಕೊಳ್ಳಬಾರ ಸಂಸ್ಕೃತಿ, ವಿಲಾಸಿ ಜೀವನ ಶೈಲಿಗಳಿಗೆ ಮಾಧ್ಯಮಗಳಲ್ಲಿ ಪ್ರಾಮುಖ್ಯತೆ ಕೊಡುತ್ತ ಹಳ್ಳಿಗಳಿನ ಜನರ ಬಡತನ, ಬರಗಾಲ, ರೈತರ ಆತ್ಮಹತ್ಯೆ, ಜಾತಿ ದೌರ್ಜನ್ಯ ದಲಿತರ ಬಹಿಷ್ಕಾರಗಳು, ಕ್ಷಾಮ, ಅತಿವೃಷ್ಠಿ, ಅನಾವೃಷ್ಠಿ, ನೆರೆ ಹಾವಳಿ, ಹಳ್ಳಿಗಳ ಸಮಸ್ಯೆಗಳು ಮಾಧ್ಯಮಗಳಲ್ಲಿ ಮಾಯವಾದವು ಒಟ್ಟಾರೆ ಸಮಾಜದ ಅನ್ನ ತಿನ್ನುವ ಮಾಧ್ಯಮಗಳು ಆರೋಗ್ಯಕರವಾದ ಸಮಾಜ ನಿರ್ಮಾಣ ಮಾಡುವಲ್ಲಿ ವಿಫಲವಾಗಿವೆ. ಇಂದು ಮಾಧ್ಯಮ ಕ್ಷೇತ್ರವು ನವ ಉದಾರವಾದಿ ಆರ್ಥಿಕ ಚಿಂತನೆಗಳಿಂದ ಹೊರಬರಬೇಕು. ಹಾಗು ಮಾಧ್ಯಮ ಕ್ಷೇತ್ರದಲ್ಲಿ ರಾಜಕೀಯವಾಗಿ-ಆರ್ಥಿಕ-ಸಮಾಜಿಕವಾಗಿ ಶೋಷಿತರಾಗಿರುವವ ಜನ ಹೆಚ್ಚಾಗಿ ಮಾಧ್ಯಮಗಳಲ್ಲಿ ತೊಡಗಿಸಿಕೊಳ್ಳಿ. ಹಾಗು ಮಾಧ್ಯಮಗಳು ವಸ್ತುನಿಷ್ಠತೆ, ಪ್ರಾಮಾಣಿಕತೆಯಿಂದ ವರದಿ ಮಾಡಬೇಕು.

ಮಾಧ್ಯಮಗಳು ಸ್ವತಂತ್ರ್ಯ ಸಂಗ್ರಾಮ ಕರ್ನಾಟಕ ಏಕೀಕರಣ ಚಳವಳಿ ಹಾಗು 1970ರ ದಶಕದಲ್ಲಿ ಪ್ರಗತಿ ಪರ ಚಳುವಳಿಗಳಲ್ಲಿ ಭಾಗವಹಿಸಿ ಜನರಲ್ಲಿ ಜಾಗೃತಿ ಮೂಡಿಸಿವೆ ಹಾಗು ಬಹಳಷ್ಟು ವಿಷಯಗಳ ಬಗ್ಗೆ ಸಾರ್ವಜನಿಕ ಅಭಿಪ್ರಾಯ ಮೂಡಿಸಿವೆ. ಆದರೆ ಇಂದು ಪತ್ರಿಕೆಗಳು, ದೂರದರ್ಶನ ರೇಡಿಯೋಗಳು ಸೇವಾ ಮನೋಭಾವನೆ ಬಿಟ್ಟುಬಿಟ್ಟಿವೆ. ಇಂದು ಮಾಧ್ಯಮಗಳು ವೃತ್ತಿ ಧರ್ಮವನ್ನು ಕಳೆದುಕೊಂಡಿವೆ. ಇಂದು ಎಲ್ಲಾ ಪತ್ರಿಕೆಗಳಲ್ಲಿ ಸೃಜನಶೀಲ ಬರವಣಿಗೆಗಳು ಕಾಣುತ್ತಿಲ್ಲ.

ಇಂದು ಮಾಧ್ಯಮಗಳಲ್ಲಿ ಹಿಂಸೆಯನ್ನು ವೈಭವೀಕರಣ ಮಾಡುವುದು(ಕ್ರೈಂ ಡೈರಿ-ಕ್ರೈಂ ಸ್ಟೋರಿ)ಅಂದಾಚಾರ ಮೌಢ್ಯಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡದೇ ಯಥಾವತ್ ಹಾಗೆ ವರದಿ ಮಾಡುವುದು(ಹೀಗೂ ಉಂಟೆ) ಹಾಗು ಅಶ್ಲೀಲತೆಯನ್ನು ತೋರಿಸುವುದು ದೂರದರ್ಶನದಲ್ಲಿ ಕುಣಿಯೋಣ ಬಾರೋ, ಹಾಕು ಹೆಜ್ಜೆಹಾಕು, ಸಚ್ ಕಾ ಸಾಮ್ನಾ, ಇನ್ನಿತರ ಧಾರಾವಾಹಿ ಶೋಗಳಲ್ಲಿ ಕಾರ್ಯಕ್ರಮದ ನಿರೂಪಕರು ಹಾಗು ಶೀರ್ಷಿಕೆಗಾರರು ತುಂಡು ಬಟ್ಟೆಗಳನ್ನು ಧರಿಸುತ್ತಾ ಭಾರತೀಯ ಸಂಸ್ಕೃತಿಯನ್ನು ನಾಶ ಮಾಡುತ್ತಾರೆ ಏಕೆಂದರೆ ಜನರ ಸಂಸ್ಕೃತಿ ಬದಲಾಗುವಲ್ಲಿ ಮಾಧ್ಯಮಗಳ ಪಾತ್ರ ಬಹಳ ಇದೆ.

ಈಗಿನ ಪತ್ರಕರ್ತರಿಗೆ ಸಮಾಜಿಕ ಮತ್ತು ಸೈದ್ಧಾಂತಿಕ ಬದ್ಧತೆಗಳಿಲ್ಲ ಪತ್ರಿಕೋದ್ಯಮವೆಂದರೆ ಒಂದು ಜವಾಬ್ದಾರಿಯುತ, ಕಳಕಳಿಯ ವೃತ್ತಿ ಎಂಬುದನ್ನು ಮರೆಯುತ್ತಿದ್ದಾರೆ. ಆದುದರಿಂದ ಈಗ ಪತ್ರಿಕೋದ್ಯಮದಲ್ಲಿ ಯಾವುದೇ ನೈತಿಕತೆ ಉಳಿದಿಲ್ಲ ಅದು ಬರಿ ವ್ಯಾಪಕವಾಗಿದೆ ಇಂದು ಪತ್ರಕರ್ತರು ನಗರ ಕೇಂದ್ರಿಕೃತವಾಗಿರುತ್ತಾರೆ. ಪತ್ರಿಕಾಗೋಷ್ಠಿ, ಕಾರ್ಯಕ್ರಮಗಳನ್ನಷ್ಟೆ ವರದಿ ಮಾಡುತ್ತಾರೆ ಅವುಗಳನ್ನು ವಿಶ್ಲೇಷಣೆ, ವಿಮರ್ಶೆ ಅಧ್ಯಯನ ಮಾಡದೇ ಬರೆಯುತ್ತಾರೆ. ಕೇವಲ ರಾಜಕೀಯ ಸಿನಿಮಾ ಶ್ರೀಮಂತರ ಬಗ್ಗೆ ಮಾತ್ರ ಬರೆಯುತ್ತಾರೆ.

ಇಂದು ಯಾವ ಮಾಧ್ಯಮಗಳು ಕೂಡ ಕೆಳವರ್ಗದ ಜನರ ತಮ್ಮ ಬದುಕಿನಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಯಾರು ಬರೆಯುತ್ತಿಲ್ಲ ಇಂದು ಮಾಧ್ಯಮಗಳು ರೈತರ ಆತ್ಮಾಹತ್ಯ ಮತ್ತು ವಲಸೆಗಳ ಬಗ್ಗೆ ಹಾಗು ಬಡ ಜನರು ಎದುರಿಸುತ್ತಿರುವ ಬಿಕ್ಕಟ್ಟನ್ನು ಹಾಗು ಕೃಷಿ ಬಿಕ್ಕಟ್ಟು ಇತ್ಯಾದಿ ವಿಷಯಗಳ ಬಗ್ಗೆ ಮಾಧ್ಯಮಗಳು ವರದಿ ಮಾಡಲಿಲ್ಲ ಹಾಗು ಅವುಗಳ ಬಗ್ಗೆ ಅಧ್ಯಯನ ಮಾಡಲಿಲ್ಲ. ಇಂದು ದೇಶದಲ್ಲಿ ಪ್ರಭುತ್ವ ಜನರಿಗೆ ಮೋಸ ಮಾಡಿದಂತೆ ಮಾಧ್ಯಮಗಳು ಕೂಡ ಕೆಳವರ್ಗದ ಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅಧ್ಯಯನ ಮಾಡಿ ವರದಿ ಬರೆಯದೇ ದ್ರೋಹ ಮಾಡಿವೆ.

ಮಾಧ್ಯಮಗಳು ಬಡಜನರಿಗೆ ಮೋಸ ಮಾಡುತ್ತಿರುವ ಉದಾಹರಣೆ ನೋಡಿ ದೇಶದಲ್ಲಿ ಯಾವುದೇ ಜನಪರ ಸಂಘಟನೆಗಳು ಪತ್ರಿಕಾಗೋಷ್ಠಿ ಕರೆದರೆ ಕೇವಲ 10 ರಿಂದ 15ಜನ ಪತ್ರಕರ್ತರು ಹಾಜರಾಗುತ್ತಾರೆ. ಶೋಷಿತ ಜನ ಪ್ರಭುತ್ವ ವಿರುದ್ಧ ಪ್ರತಿಭಟನೆ ಮಾಡಿದರೆ ಮಾಧ್ಯಮಗಳು ಅದನ್ನು ಒಂದು ಫೋಟೋವನ್ನು ಹಾಗು ಎರಡು ಕಾಲಂಗಳು ಸುದ್ದಿ ಮಾಡುತ್ತಾರೆ ಹಾಗು ರೈತರು ಆತ್ಮಹತ್ಯ ಮಾಡಿಕೊಂಡರೆ ಪತ್ರಿಕೆಗಳು ಏಳು ಅಥವ ಎಂಟು ಪುಟದಲ್ಲಿ ಎರಡು ಸಾಲು ಬರೆಯುತಾರೆ. ಆದರೆ ಶ್ರೀಮಂತರ, ಬಲಾಡ್ಯರ, ಬಂಡವಾಳಶಾಹಿಗಳ ಕಾರ್ಯ ಕ್ರಮಗಳನ್ನು ಮಾಧ್ಯಮದವರು ಯಾವ ರೀತಿ ವರದಿ ಮಾಡುತ್ತಾರೆ

[illegible]ದನ್ನು ಈ ಕೆಳಗಿನ ಉದಾಹರಣೆ [illegible] ನೋಡಿ, 2007ರ ಲ್ಯಾಕ್ಮೆ ಇಂಡಿಯಾ ಫ್ಯಾಷನ್ ವೀಕ್ ಕಾರ್ಯಕ್ರಮಕ್ಕೆ ಜನರಿಗಿಂತ ಪತ್ರಕರ್ತರೆ ಹೆಚ್ಚಾಗಿ ಇದ್ದರಂತೆ, ಈ ಪತ್ರಕರ್ತರು ಆ ಕಾರ್ಯಕ್ರಮದ ವರದಿಯನ್ನು ಪತ್ರಿಕೆಗಳಲ್ಲಿ 4 ಲಕ್ಷ ಪದಗಳುಳ್ಳ ವರದಿಗಳನ್ನು ಸಾವಿರ ನಿಮಿಷಗಳ ದೂರದರ್ಶನ ಸಮಯನ್ನು ಹಾಗು ಹತ್ತು ಸಾವಿರ ರೋಲ್‌ಗಳಷ್ಟು ಛಾಯಚಿತ್ರಗಳನ್ನು ತೆಗೆದಿದ್ದಾರೆ.

ಇದು ಎಲ್ಲಿ ಎಂದರೆ ಶೇ.0.2ರಷ್ಟು ಜನರು ಮಾತ್ರ ಫ್ಯಾಷನ್ ಬಟ್ಟೆಗಳನ್ನು ತೊಡುವ, ಧರಿಸುವ ಭಾರತ ದೇಶದಲ್ಲಿ, ಆದರೆ ಮಾಧ್ಯಮಗಳು ಇಂದು ದೇಶದಲ್ಲಿ ಕೋಟ್ಯಾಂತರ ಜನರಿಗೆ ತೊಡುವ ಬಟ್ಟೆಯಿಲ್ಲ, ಒಂದು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದಾರೆ. ಇವುರಗಳ ಬಗ್ಗೆ ಅಧ್ಯಯನ ಮಾಡದೇ ವರದಿ ಮಾಡದೇ ಇರುವುದು ಮಾಧ್ಯಮದ ದ್ರೋಹ ಎಂದು ಕರೆಯಬಹುದು.

1991ರಿಂದ ಜಾಗತಿಕರಣ ಪ್ರಭಾವದಿಂದ ಮಾಧ್ಯಮಗಳು ಸುದ್ದಿಯಿಂದ ಮನರಂಜೆಯ ಕಡೆಗೆ ಗಮನಕೊಟ್ಟವು. ಗ್ರಾಮಗಳಿಂದ ನಗರಗಳ ಕಡೆಗೆ ನಡೆದವು. ಕೊಳ್ಳಬಾರ ಸಂಸ್ಕೃತಿ, ವಿಲಾಸಿ ಜೀವನ ಶೈಲಿಗಳಿಗೆ ಮಾಧ್ಯಮಗಳಲ್ಲಿ ಪ್ರಾಮುಖ್ಯತೆ ಕೊಡುತ್ತ ಹಳ್ಳಿಗಳಿನ ಜನರ ಬಡತನ, ಬರಗಾಲ, ರೈತರ ಆತ್ಮಹತ್ಯೆ, ಜಾತಿ ದೌರ್ಜನ್ಯ ದಲಿತರ ಬಹಿಷ್ಕಾರಗಳು, ಕ್ಷಾಮ, ಅತಿವೃಷ್ಠಿ, ಅನಾವೃಷ್ಠಿ, ನೆರೆ ಹಾವಳಿ, ಹಳ್ಳಿಗಳ ಸಮಸ್ಯೆಗಳು ಮಾಧ್ಯಮಗಳಲ್ಲಿ ಮಾಯವಾದವು ಒಟ್ಟಾರೆ ಸಮಾಜದ ಅನ್ನ ತಿನ್ನುವ ಮಾಧ್ಯಮಗಳು ಆರೋಗ್ಯಕರವಾದ ಸಮಾಜ ನಿರ್ಮಾಣ ಮಾಡುವಲ್ಲಿ ವಿಫಲವಾಗಿವೆ.

ಇಂದು ಮಾಧ್ಯಮ ಕ್ಷೇತ್ರವು ನವ ಉದಾರವಾದಿ ಆರ್ಥಿಕ ಚಿಂತನೆಗಳಿಂದ ಹೊರಬರಬೇಕು. ಹಾಗು ಮಾಧ್ಯಮ ಕ್ಷೇತ್ರದಲ್ಲಿ ರಾಜಕೀಯವಾಗಿ-ಆರ್ಥಿಕ-ಸಮಾಜಿಕವಾಗಿ ಶೋಷಿತರಾಗಿರುವವ ಜನ ಹೆಚ್ಚಾಗಿ ಮಾಧ್ಯಮಗಳಲ್ಲಿ ತೊಡಗಿಸಿಕೊಳ್ಳಿ, ಹಾಗು ಮಾಧ್ಯಮಗಳು ವಸ್ತುನಿಷ್ಠತೆ, ಪ್ರಾಮಾಣಿಕತೆಯಿಂದ ವರದಿ ಮಾಡಬೇಕು. ಸಮಾಜದಲ್ಲಿ ನಡೆಯುವ ಪ್ರಕೃತಿ ವಿಕೋಪ, ಜಾತಿ ದೌರ್ಜನ್ಯ, ಭ್ರಷ್ಟಚಾರ, ಅನ್ಯಾಯ, ದೌರ್ಜನ್ಯ, ಮೋಸ, ಅಸಮಾನತೆ, ಶೋಷಣೆ. ಇನ್ನಿತರ ವಿಷಯಗಳ ಬಗ್ಗೆ ವಿಶ್ಲೇಷಣೆ ಅಧ್ಯಯನ, ವಿಮರ್ಶೆ, ಮಾಡಿ ವರದಿ ಮಾಡಬೇಕು.

ಇದರಿಂದ ಜನರಿಗೆ ತಿಳಿವಳಿಕೆ ಉಂಟಾಗಿ ಒಂದು ಆರೋಗ್ಯಕರ ಸಮಾಜ ನಿರ್ಮಾಣ ಮಾಡಬಹುದು ಪ್ರಜಾಪ್ರಭುತ್ವದಲ್ಲಿ ನ್ಯಾಯಾಂಗ, ಶಾಸಕಾಂಗ ಕಾರ್ಯಾಂಗ, ವಿಫಲವಾದಗ ಮಾಧ್ಯಮಗಳು ಜನರಿಗೆ ನ್ಯಾಯ ಒದಗಿಸುವ ಕಾರ್ಯಮಾಡಬೇಕು.

ಪ್ರಜಾಪ್ರಭುತ್ವದಲ್ಲಿ ಆಳುವವರು ಜನರಿಗೆ ಬಾಯಿ ಕಟ್ಟಿಹಾಕಿದರೆ ಮಾಧ್ಯಮಗಳು ಜನರ ಪರವಾಗಿ ಧ್ವನಿ ಎತ್ತಬೇಕು. ಮಾಧ್ಯಮಗಳು ಸಾರ್ವಜನಿಕ ಹಿತಸಕ್ತಿಯನ್ನು ಕಡೆಗಣಿಸಬಾರದು, ಜನರ ಹಿತವನ್ನು ಕಾಪಡಬೇಕು. ಜನರಲ್ಲಿ ಭೀತಿ, ಗೊಂದಲ ಸೃಷ್ಟಿಸಬಾರದು. ಜನರಿಗೆ ಅರಿವು ಮೂಡಿಸಬೇಕು. ಜನಪರ ನಿಲುವು ತಾಳಬೇಕು. ಈ ಮೇಲಿನ ಎಲ್ಲಾ ಕಾರ್ಯಗಳು ಮಾಧ್ಯಮಗಳು ಮಾಡಿದಾಗ ಮಾತ್ರ ನಾವು ಬಲಿಷ್ಠವಾದ ಪ್ರಜಾಪ್ರಭುತ್ವ ಸ್ಥಾಪನೆ ಮಾಡಲು ಬಹಳ ಸುಲಭವಾಗುತ್ತದೆ ಒಂದು ವೇಳೆ ಹಾಗೇ ಮಾಡದೇ ಇದ್ದರೆ ಭಾರತದ ಪ್ರಜಾ ಪ್ರಭುತ್ವದ ಅಡಿಪಾಯಕ್ಕೆ ದಕ್ಕೆ ಆಗುತ್ತದೆ. □

ನೋವು



ಕರುಳ ಬಳ್ಳಿಯೊಡನೆಯೇ
ಬೆನ್ನಟ್ಟಿದ ಸಂಗಾತಿ
ಕಳಚಲೇಕೆ ದುರ್ಗತಿಯಲಿ; ನಡೆ
ನನ್ನೊಡನೆ ಕಾಡು
ಮೇಡುಗಳಲ್ಲಿ ಸ್ವಚ್ಛಂದ
ಗಾಳಿಯಲಿ !

ಯಾರನ್ನು ಬಿಟ್ಟೀಯೆ ?
ಗರ್ಭದ ಕೂಸಲ್ಲವೇ ಹೆತ್ತವಳ
ಕೊನರಲ್ಲವೇ ?
ಅಂತರಂಗದಲಡಗಿ
ನರನಾಡಿಗಳಲಿ ಹರಿದು
ಬೆತ್ತಲಾಗಿಸಿರುವೆ
ಆತ್ಮಸಾಕ್ಷಿಯನು
ನಡೆ ನನ್ನೊಡನೆ !

ಎಂದೋ ಕಾಲಗರ್ಭದಲಿ
ದೊರೆವ ಅನನ್ಯ
ಕ್ಷಣಗಳ ಹಿಂದೆ ಸುಪ್ತವಾದ
ನಿನ್ನುಸಿರು ನನ್ನ
ನಿಟ್ಟುಸಿರು ; ಎದೆ ಬಡಿತದ
ಹಿಂದೆ ನಿನ್ನ ಕಲರವ
ಉಸಿರಿರುವವರೆಗೂ !

ಒಡಹುಟ್ಟಿದವರು ತೊರೆದರೂ
ತೊರೆಯಲಾರೆ ನೀ
ಸಂಗ ; ಪೂರ್ವ ಜನ್ಮದ
ನಂಟೇ ಭವಿಷ್ಯತ್ತಿನ
ಗಂಟೇ ? ಅರ್ಥವಾಗದು
ನಿನ್ನಂತರಂಗ !

ಸವೆದಿಹುದು ಅರೆ ಜೀವ
ನಿನ್ನೊಡನಾಟದಲಿ
ನುಂಗಿ ನಿನ್ನನು ಮುನ್ನಡೆವೆ
ನೀ ನನ್ನ
ನುಂಗುವವರೆಗೂ !
ಕಾದಿರುವೆಯಾ ನನಗಾಗಿ ?

○ ನಾ. ದಿವಾಕರ

ಹಿಂದುಳಿದ ವರ್ಗಗಳ ಜನಗಣತಿ

ಸಂವಿಧಾನ ಬಾಹಿರವಲ್ಲ

(25ನೇ ಪುಟದಿಂದ)

ಗಳು ಭುಗಿಲೆದ್ದವು. ಆವಾಗ ಸರ್ಕಾರ ಪ್ರಕಟಿಸಿದ OBC ಪ್ರಜಾಸಂಖ್ಯೆಯ ಬಗ್ಗೆ ದಶದಿಕ್ಕುಗಳಿಂದ ಆಕ್ಷೇಪಣೆಗಳು ಹೊರಬಂದವು. ಇವುಗಳ ಬೆನ್ನ ಹಿಂದೆಯೇ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದೊಮ್ಮೆಗಳು ದಾಖಲಾದವು. ಒಂದು ಹಂತದಲ್ಲಿ ಸುಪ್ರೀಂಕೋರ್ಟ್ ಸಹ ಹಿಂದುಳಿದ ವರ್ಗಗಳ ಬಗ್ಗೆ ಸರ್ಕಾರ ಸಲ್ಲಿಸಿದ ಅಂಕಿ-ಅಂಶಗಳ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಆವಾಗ ನ್ಯಾಯಾಲಯವು ಕೊನೆಗೆ ದೇಶದಲ್ಲೇ ಹಿಂದುಳಿದವರೆಷ್ಟು? ಅವರ ಸ್ಥಿತಿ-ಗತಿಗಳೇನು? ಎಂಬ ಮೂಲಭೂತ ಪ್ರಶ್ನೆಗಳಿಗೆ ಉತ್ತರ ಬಯಸಿತ್ತು. ಆದರೆ, ಸರ್ಕಾರ ತನ್ನ ಅಧೀನ ಸಮೀಕ್ಷಾ ಸಂಸ್ಥೆಗಳ ಬಳಿಯಿದ್ದ ಅಂಕಿ-ಅಂಶಗಳನ್ನು ನ್ಯಾಯಾಲಯಕ್ಕೆ ನೀಡಿತು.

ಅವುಗಳೆಂದರೆ, ರಾಷ್ಟ್ರೀಯ ಅಂದಾಜು ಸಮೀಕ್ಷೆ ಸಂಘಟನೆ(NSSO) ಎಂದಿನಂತೆ 1999-00ರಲ್ಲಿ ದೇಶಾದ್ಯಂತ ಪ್ರಾತಿನಿಧಿಕ ಸಮೀಕ್ಷೆ ಆಯೋಜಿಸಿತ್ತು. ಇದು ಧಾರ್ಮಿಕ ಅಲ್ಪಸಂಖ್ಯಾತರನ್ನು ಹೊರತುಪಡಿಸಿ ಹಿಂದೂ ಧರ್ಮೀಯರಲ್ಲಿ ಶೇ.36ರಷ್ಟು ಇತರೆ ಹಿಂದೂ ವರ್ಗದವರಿದ್ದಾರೆಂದು ಅಭಿಮತಿಸಿತು. ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆ (1998-99) ಸಹ ಶೇ. 33.5ರಷ್ಟು ಇತರೆ ಹಿಂದುಳಿದವರಿದ್ದಾರೆಂದು ಸಾದರಪಡಿಸಿದೆ. ಇವೆರಡೂ ಸಮೀಕ್ಷೆಗಳು ಮುಂದುವರಿದ ವರ್ಗಗಳು ಅನುಕ್ರಮವಾಗಿ ಶೇ.35.7 ಮತ್ತು 38.5ರಷ್ಟಿದ್ದಾರೆಂದು ಹೇಳಿದೆ. ಸಾಮಾನ್ಯವಾಗಿ ತಲೆ ಎಣಿಕೆ ಸಮೀಕ್ಷೆ ಕೈಗೊಳ್ಳುವಾಗ ಒಟ್ಟು ಜನಸಂಖ್ಯೆಯ ಒಂದು ನಿರ್ದಿಷ್ಟ ಪ್ರಮಾಣವನ್ನು ತನಿಖೆಗೆ ಒಳಪಡಿಸಲಾಗುತ್ತದೆ.

ತನಿಖೆಗೆ ಒಳಪಡುವ ಅಥವಾ ಆಯ್ದ ಪ್ರದೇಶಗಳಲ್ಲಿ ಕೇವಲ ಮುಂದುವರಿದವರೆ ಸಿಕ್ಕಿದರೆ ಅವರ ಬಗೆಗಿನ ಮಾಹಿತಿಗಳು ಸರ್ವೇ ಸಾಮಾನ್ಯವಾಗಿ ನಿಚ್ಚಳ ಪ್ರಮಾಣದಲ್ಲಿ ಹೊರಬರುತ್ತವೆ. ಅಥವಾ ಹಿಂದುಳಿದವರೆ ಸಿಕ್ಕಿದರೆ ಇವರದೆ ವಿಪರೀತವಾಗಿ ಗೋಚರಿಸುತ್ತವೆ. ಆದರೆ ಜನಗಣತಿ ವಿಚಾರದಲ್ಲಿ ಇಂತಹ ವೈರುಧ್ಯಗಳನ್ನು ಕಾಣಲು ಸಾಧ್ಯವಿಲ್ಲ. ಏಕೆಂದರೆ, ಇದನ್ನು ಕೈಗೊಳ್ಳುವ ಮುನ್ನ ಸಮಗ್ರ ಜನಸಂಖ್ಯೆಯನ್ನು ತನಿಖೆಗೆ ಒಳಪಡಿಸಲು ಒಂದು ವೈಜ್ಞಾನಿಕವಾಗಿ ಸಿದ್ಧಪಡಿಸಿದ ಪ್ರಶ್ನಾವಳಿಗಳ ಮೂಲಕ ಮಾಹಿತಿ ಸಂಗ್ರಹಿಸಲಾಗುತ್ತದೆ. ಈ ಫಲತಾಂಶಗಳು ಭಿನ್ನ-ಭಿನ್ನ ಆಯಾಮಗಳ ಅಂಕಿ-ಅಂಶಗಳನ್ನು ಒದಗಿಸುತ್ತದೆ. ಇನ್ನೊಂದೆಡೆ, ಪ್ರತಿಯೊಂದು ಜಾತಿ/ವರ್ಗಗಳು ಉತ್ಪ್ರೇಕ್ಷಿತ ಅಂಕಿ-ಅಂಶಗಳನ್ನು ಸಮಾಜಕ್ಕೆ ನೀಡಿ ಗೊಂದಲ ನಿರ್ಮಿಸುವ ಕಾರ್ಯಗಳಿಗೆ ಕಡಿವಾಣ ಬೀಳುವುದು.

ವಾಡಿಕೆಯಂತೆ 2001ರ ಜನಗಣತಿಯಲ್ಲಿಯೂ ಧರ್ಮವಾರು ಮಾಹಿತಿ ನೀಡಲಾಗಿದೆ. ಇದರೊಳಗೆ ಎಲ್ಲಾ ಧರ್ಮೀಯರಲ್ಲಿರುವ ಕೃಷಿ ಕಾರ್ಮಿಕರನ್ನು ಸಹ ಗುರುತಿಸಿದೆ. ಈ ಪ್ರಕಾರವಾಗಿ ಬೌದ್ಧ ಧರ್ಮದಲ್ಲಿಯೂ ಕೃಷಿ ಕಾರ್ಮಿಕರಿದ್ದಾರೆ. ಆದರೆ, ಈ ಪ್ರಮಾಣವು ಕಳೆದ ಜನಗಣತಿಗಿಂತ ಈ ಸಾಲಿನಲ್ಲಿ ಕೃಷಿ ಕಾರ್ಮಿಕರ ಸಂಖ್ಯೆ ಹೆಚ್ಚಿದೆ. ದಿಢೀರನೆ ಶೇ.39ರಷ್ಟು ಕೃಷಿ ಕಾರ್ಮಿಕರು ಇರುವುದು ಕಂಡು ಬಂದಿದೆ. ಈ ಹೆಚ್ಚಳಕ್ಕೆ ನೇರ ಕಾರಣವನ್ನು ಮತಾಂತರದತ್ತ ಬೊಟ್ಟು ಮಾಡುತ್ತದೆ. ಕಳೆದ ದಶಕದಲ್ಲಿ ಹೆಚ್ಚಿನ ಪರಿಶಿಷ್ಟರು/ವಿರಳ ಪ್ರಮಾಣದಲ್ಲಿ ಹಿಂದುಳಿದವರು ಬೌದ್ಧ ಧರ್ಮಕ್ಕೆ ಮತಾಂತರವಾದ ಕಾರಣ ಈ ಅಂಶ ಬೆಳಕಿಗೆ ಬಂದಿದೆ. ಯಾವುದೇ ರಾಷ್ಟ್ರೀಯ ಹಿಂದುಳಿದ ಆಯೋಗಗಳ ಅಥವಾ ರಾಜ್ಯಗಳ ಹಿಂದುಳಿದ ವರ್ಗಗಳ ತನಿಖಾ ಆಯೋಗಗಳ ಅಂದಾಜು ಮಾಹಿತಿಗಳನ್ನು ಮನಃಸಾಕ್ಷಿಯಿಂದ ದೇಶದ ಜನತೆ ವಿರೋಧಿಸದೆ ಸ್ವೀಕರಿಸುವ ಉದಾಹರಣೆಗಳಿಲ್ಲ. ಜನಗಣತಿ ಮೂಲಕ ಯಾವುದಾದರೊಂದು ಸಮಗ್ರ ಸಮೀಕ್ಷೆ ನಡೆಯಲ್ಪಟ್ಟರೆ, ಆ ಮೂಲಕ ಒಂದು ನಿಖರವಾದ ಅಂಕಿ-ಅಂಶಗಳ ಮಹಾಪೂರವೇ ಹೊರಬೀಳುತ್ತಿರುತ್ತವೆ. ಇಂತಹ ಫಲಿತಾಂಶಗಳ ಆಧಾರದ ಮೇರೆಗೆ ಸರ್ಕಾರಗಳು ಕಡಿಮೆ ಪ್ರಮಾಣದ ವಿರೋಧವನ್ನು ಕಟ್ಟಿಕೊಂಡು ಹೆಚ್ಚಿನ ಸಾಮಾಜಿಕ ನ್ಯಾಯ ನೀಡುವುದಕ್ಕೆ ಅವಕಾಶವಿರುತ್ತದೆ.

> **ಒಂದು ನೈಜ ಸಾಮಾಜಿಕ ಅಂಕಿ-ಅಂಶಗಳನ್ನಾಧರಿಸಿ ಕೇಂದ್ರ-ರಾಜ್ಯ-ಸ್ಥಳೀಯ ಸರ್ಕಾರಗಳು ಹೂಡುವ ಸಾಮಾಜಿಕ ವೆಚ್ಚಕ್ಕೆ ಭಾರಿ ಮನ್ನಣೆ ಬರುತ್ತಿತ್ತು.**

2008ರಲ್ಲಿ ತಮಿಳುನಾಡಿನ ರಾಜಕೀಯ ಪಕ್ಷವೊಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದೊಮ್ಮೆ ದಾಖಲಿಸಿ ಜಾತಿ/ವರ್ಗ ಆಧಾರಿತ ಸಮಗ್ರ ಜನಗಣತಿ ಕೈಗೆತ್ತಿಕೊಳ್ಳಲು ಕೇಂದ್ರ ಸಕಾರಕ್ಕೆ ನಿರ್ದೇಶನ ನೀಡಬೇಕೆಂದು ವಿನಂತಿಸಿತ್ತು. ಈ ಘನ ನ್ಯಾಯಾಲಯವು ಇಂತಹ ಜನಗಣತಿಯಿಂದ ಜಾತಿ-ಜಾತಿಗಳ ನಡುವಿನ ಸಂಘರ್ಷಕ್ಕೆ ದಾರಿಯಾಗುವುದೆಂದು ಅಭಿಮತಿಸಿ ಅದನ್ನು ತಿರಸ್ಕರಿಸಿತ್ತು. ಆದರೆ, ಇದೆ ಘನ ನ್ಯಾಯಾಲಯವು ಅನೇಕ ಗುರುತರವಾದ ಜಾತಿ/ವರ್ಗ/ಧರ್ಮಗಳ ಬಗ್ಗೆ ತೀರ್ಪು ನೀಡುವಾಗ ಹಿಂದಿನ ಹಲವಾರು ಜನಗಣತಿಗಳಲ್ಲಿ ವ್ಯಕ್ತವಾಗಿರುವ ಅಂಶಗಳ ಮೇರೆಗೆ ಐತಿಹಾಸಿಕ ತೀರ್ಪು ನೀಡಿದೆ ಕಳೆದೆರಡು ದಶಕಗಳಿಂದ ರಾಷ್ಟ್ರೀಯ ಮಾನವಶಾಸ್ತ್ರ ಮಾಪನ ಸಂಸ್ಥೆ (ASIO) ದೇಶಾದ್ಯಂತ ಜಾತಿ/ಪಂಗಡ, ವರ್ಗ ಹಾಗೂ ಧರ್ಮಗಳೊಳಗೆ ಸಂಭವಿಸಿರುವ ಸಾಮಾಜಿಕ ಹಾಗೂ ಇತರ ಪರಿವರ್ತನೆಗಳ ಬಗ್ಗೆ ಅಧ್ಯಯನ ನಡೆಸಿದೆ.

ಅದು ದೇಶಾದ್ಯಂತ 5400ಕೂ ಮಿಗಿಲಾದಷ್ಟು ಜಾತಿಗಳಿವೆ ಎಂದು ಹೇಳಿದೆ. ಅನೇಕ ಸಂದರ್ಭಗಳಲ್ಲಿ ಬಹುತೇಕ ನ್ಯಾಯಾಲಯಗಳು ಜಾತಿ ಪ್ರಮಾಣ ಪತ್ರಗಳು ದುರುಪಯೋಗದ ತನಿಖಾ ವಿಚಾರಣೆಗಳಲ್ಲಿ ಜನಗಣತಿ ಮಾಹಿತಿಗಳೊಂದಿಗೆ ಈ ಪೂರಕ ಅಧ್ಯಯನಗಳ ಮಾಹಿತಿಗಳನ್ನು ಮಾನ್ಯ ಮಾಡಿ ಮಹತ್ವದ ತೀರ್ಪುಗಳನ್ನು ಪ್ರಕಟಿಸಿವೆ.

ನಿಜಕ್ಕೂ ಜಾತಿ-ಜಾತಿಗಳ ನಡುವೆ ಸಂಘರ್ಷವಿರುವುದು ಮಾಹಿತಿಗಳ ಕೊರತೆ ಮತ್ತು ಅಲಭ್ಯತೆಗಳಿಂದಾಗಿ. ಒಂದು ವೇಳೆ ಕೇಂದ್ರ ಸರ್ಕಾರ 1961ರಿಂದಲೇ ಜಾತಿ/ವರ್ಗ ಆಧಾರಿತ ಜನಗಣತಿ ನಡೆಸಿ, ಪ್ರತಿಯೊಂದು ಸಮುದಾಯಗಳ ಸಮಗ್ರ ಚಿತ್ರಣಗಳನ್ನು ಜಾಹೀರುಗೊಳಿಸಿದ್ದರೆ, ಸಾಮಾಜಿಕ ನ್ಯಾಯದ ಬಗ್ಗೆ ಸೀಮಿತ ವಲಯದ ಜನರಲ್ಲಿರುವ ತಪ್ಪು ಕಲ್ಪನೆಗಳಿಗೆ ತಕ್ಕ ಉತ್ತರ ಸಿಗುತ್ತಿತ್ತು. ದೇಶವಿಂದು ವೈಜ್ಞಾನಿಕವಾಗಿ ಅಷ್ಟೇ ವೇಗದಲ್ಲಿ ಮುನ್ನಡೆಯುತ್ತಿದೆ. ಅದರ ಫಲಗಳಿಂದ ಅನೇಕ ಕ್ಲಿಷ್ಟಕರವಾದಂತಹ ಸಾಮಾಜಿಕ ಅಂಕಿ-ಅಂಶಗಳನ್ನು ಕ್ರೋಢೀಕರಿಸುವುದಕ್ಕೆ ತೊಂದರೆಗಳು ಬರುವುದಿಲ್ಲ. ಕೇಂದ್ರ ಸರ್ಕಾರ 1951ರಲ್ಲಿ ಕಣ್ಣು ಮುಚ್ಚಿ ಅದರ ಕಿವಿ ಹಿಂಡುತ್ತಿದ್ದವರ ಸಂತಾನಗಳ ಚಾಡಿಗಳಿಗೆ ತಲೆದೂಗದೆ ನಿರ್ಮಲ ಮನಸ್ಸಿನಿಂದ ಪ್ರತಿಯೊಂದು ಸಮುದಾಯಗಳಿಗೆ ಸಂಬಂಧಿಸಿದ ಸಾಮಾಜಿಕ ಅಂಕಿ-ಅಂಶಗಳನ್ನು ಕ್ರೋಢಿಕರಿಸಿ ಸರ್ಕಾರದ ಬಳಿ ಇಟ್ಟುಕೊಳ್ಳುವುದು ಅವರ ನೈತಿಕ ಹೊಣೆಗಾರಿಕೆ ಎಂದು ಭಾವಿಸಿದ್ದರೆ, ಸಂವಿಧಾನದ ಮೂಲ ಆಶಯಗಳೆಲ್ಲವೂ ವೇಗಗತಿಯಲ್ಲಿ ಜಾರಿಗೊಳ್ಳುತ್ತಿದ್ದವು.

ಒಂದು ನೈಜ ಸಾಮಾಜಿಕ ಅಂಕಿ-ಅಂಶಗಳನ್ನಾಧರಿಸಿ ಕೇಂದ್ರ-ರಾಜ್ಯ-ಸ್ಥಳೀಯ ಸರ್ಕಾರಗಳು ಹೂಡುವ ಸಾಮಾಜಿಕ ವೆಚ್ಚಕ್ಕೆ (Social Expenditure) ಭಾರಿ ಮನ್ನಣೆ ಬರುತ್ತಿತ್ತು. ಕರ್ನಾಟಕ ರಾಜ್ಯ ಸರ್ಕಾರ ದೇಶಕ್ಕೆ ಮಾದರಿ ಎನ್ನುವಂತೆ ಹಿಂದುಳಿದ ವರ್ಗಗಳ ಸಬಲೀಕರಣಕ್ಕೆ ಒತ್ತಾಸೆಯಾಗಿ ಅಹರ್ನಿಶಿ ದುಡಿಯುತ್ತಾ ಬಂದಿದೆ. ಈ ಹಿಂದೆ, ಕೇಂದ್ರ ಸರ್ಕಾರವು ಇವರ ಬೃಹತ್ ಜನಗಣತಿಗಾಗಿ ಕೋಟಿಗಟ್ಟಲೆ ಹಣ ನೀಡಿದ್ದರೂ ಪ್ರಸ್ತುತದಲ್ಲಿ ರಾಜ್ಯ ಸರ್ಕಾರದಿಂದ ನಿರುತ್ಸಾಹದ ಪ್ರೋತ್ಸಾಹವಿದೆ. ಇಂತಹ ರಗಳೆಗಳಿಗೆ ತೆರೆ ಎಳೆಯಲು ಕೇಂದ್ರ ಸರ್ಕಾರವೆ ಮುನ್ನಾಗಬೇಕಿದೆ.

ಕೇಂದ್ರ ಸರ್ಕಾರ ಅಂದಿನಿಂದಲೂ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ಜನಗಣತಿ ಮೂಲಕ ಪ್ರದರ್ಶನ ಮಾಡಿದ್ದರೆ ಜಾತಿ ಹೆಸರಿನಲ್ಲಿ ಅಧಃಪತನವಾದವರಾರು; ಅದರಿಂದ ಲಾಭಗಳಿಸಿದವರು ಯಾರೆಂದು ಬಹಿರಂಗವಾಗುತ್ತಿತ್ತು. ಮುಂದೆ ಜರುಗಲಿರುವ 2011ರ ಜನಗಣತಿ ಬಗ್ಗೆಯೂ ಹಿಂದುಳಿದ ವರ್ಗಗಳ ಜನರು ಈಗಾಗಲೇ ಭ್ರಮನಿರಸನ ವ್ಯಕ್ತಪಡಿಸಲಾರಂಭಿಸಿದ್ದಾರೆ. ಕೇಂದ್ರ ಸರ್ಕಾರ 'ರಾಷ್ಟ್ರೀಯ ಗುರುತಿನ ಚೀಟಿ ಅಭಿಯಾನ'ದಂತಹ ಮಹತ್ವದ ಕಾರ್ಯಕ್ರಮ ಕೈಗೊಂಡಿರುವ ಜನಪರ ಸರ್ಕಾರಕ್ಕೆ ಬರಲಿರುವ ಜನಗಣತಿಯಲ್ಲಿ ಹಿಂದುಳಿದವರನ್ನು ಗಣತಿಗೆ ಪರಿಗಣಿಸಿದರೆ ಸಂವಿಧಾನಬಾಹಿರವಾಗುವುದಿಲ್ಲ. ಆದುದರಿಂದ ಕೇಂದ್ರ ಸರ್ಕಾರ ಬಹುದಿನಗಳ ಇವರ ಬೇಡಿಕೆಗಳನ್ನು ಈಡೇರಿಸುವುದೇ ಎಂಬುದನ್ನು ಕಾದುನೋಡಬೇಕಷ್ಟೆ? □

ಮತ್ತೆ ನಮ್ಮ ನಡುವೆ ಕುವೆಂಪು ಮತ್ತು ಒಕ್ಕಲಿಗರ ಆತ್ಮಹತ್ಯೆಗೆ ಆಹ್ವಾನ

ಹಿ.ಶಿ. ರಾಮಚಂದ್ರೇಗೌಡ

-ನಡುವೆ-

ಯಾರಾದರೂ ಮತ್ತೆ ಮತ್ತೆ ನಮ್ಮ ನಡುವೆ, ಮಧ್ಯೆ ಅಥವ ಜೊತೆಗೆ ಬರುವುದು ಯಾವಾಗ?

ಸತ್ತವರನ್ನು ತಿಥಿ ಮಾಡಿ ದೂರ ಕಳಿಸುತ್ತೇವೆ. ಹೆಚ್ಚಿನ ಭಯ ಇರುವವರು ಪ್ರತಿವರ್ಷವೂ ತಿಥಿ ಮಾಡಿ ಸತ್ತವರ ಆಕ್ರೋಶ ಅಥವ ಋಣದಿಂದ ಪಾರಾಗಲು ಪುರಾಣ ಪಾರಾಯಣ ಮಾಡಿಸುತ್ತಿರುತ್ತಾರೆ. ಬ್ರಾಹ್ಮಣರು ಭೂ ಸುರರಾದುದರಿಂದ ಇಲ್ಲಿಂದ ದಾಟಿದ ಮೇಲೆ ಮೇಲೋಕದಲ್ಲಿ ಅದೇ ಸುರಸ್ಥಾನವನ್ನು ಪಡೆಯುತ್ತಾರೆ. ಅವರು ದೇವರುಗಳ ಥರ ನಿರಂತರ ಜನ ಪೀಡಕರು. ದೇವರುಗಳಿಗೆ, ತಮ್ಮ ಸ್ವಂತ ಕೆಲಸಕ್ಕಿಂತ ಭೂ ಲೋಕದ ಜನರನ್ನು ಪೀಡಿಸುವುದು ತಾನೆ ಪ್ರಧಾನ ಉದ್ಯೋಗ! ಶೂದ್ರರು ಸತ್ತರೆ ಅವರು ಜರ್‍ನೆ ಬೇರೆ ಲೋಕಕ್ಕೆ ಹೋಗುವುದಿಲ್ಲ. ಇಲ್ಲಿಯೆ ಯಾವಯಾವುದೋ ರೂಪದಲ್ಲಿ ನಮ್ಮ ಈ ಹೊತ್ತಿನ ಪುಡಾರಿಗಳ ಹಾಗೆ ತರಲೆ-ತಕರಾರು ಮಾಡುತ್ತಲೆ ಇರುತ್ತಾರೆ. ಶೂದ್ರರಿಗೆ ಭೂಮಿಯನ್ನು ಬಿಟ್ಟು ಹೋಗಲು ಇಷ್ಟವಿಲ್ಲ. ಅವರು ನೆಲದ ಮಕ್ಕಳು ಹಾಗೂ ಸಣ್ಣ ಪುಟ್ಟ ಆಸೆಯುಳ್ಳವರು ಸೊಸೆ ತಾನು ಇರುವಾಗ ಸರಿಯಾಗಿ ಎಲೆ ಅಡಿಕೆ ಕಡ್ಡಿ ಪುಡಿಯನ್ನು ಜಗಿಯಲು ಅವಕಾಶ ಕೊಡಲಿಲ್ಲ ಎನ್ನುವ ಕಾರಣಕ್ಕೆ ಅತ್ತೆ ದೆವ್ವವಾಗಿ ಬಂದು ಸೊಸೆಯನ್ನು ಪೀಡಿಸಿದ ಉದಾಹರಣೆ ಇದೆ. ಆ ಸೊಸೆ ವಿದ್ಯಾವತಿಯಗಿದ್ದು ಎಲೆ ಅಡಿಕೆ ಕಡ್ಡಿ ಪುಡಿ ಜಗಿಯುವ ಬಗ್ಗೆ ಅಸಹ್ಯ ಭಾವನೆ ಹೊಂದಿದ್ದಳಂತೆ ಇಡೀ ಬುಡಕಟ್ಟು ಹಾಗೂ ಕೃಷಿಕ ಸಮಾಜ ಸತ್ತವರ ಬಗ್ಗೆ ಹೆದರಿದಷ್ಟು ಬದುಕಿದವರ ಬಗ್ಗೆ ಕಾಳಜಿ ವಹಿಸಿದಂತಿಲ್ಲ. ಇವರ ಬಹುತೇಕ ದೇವರುಗಳು ಸತ್ತ ಹಿರಿಯರ ಭೂತಗಳೋ, ಪ್ರೇತಗಳೋ ಆಗಿವೆ. ಅಂಥ ಸತ್ತ ಹಿರಿಯರು ಮಧ್ಯೆ ಬರುವುದನ್ನು ತಡೆಯುವುದೇ ಆಚಾರಣೆಗಳಲ್ಲಿ ತುಂಬಿ ಹೋಗಿದೆ.

ಸತ್ತವರು ಬದುಕಿರುವವರ ಮಧ್ಯೆ ಬದುಕಾಗಿ ಬರಬಹುದಾದ ಸನ್ನಿವೇಶಗಳೂ ಜನಪದರಲ್ಲಿ ಇವೆ. ಮಲಮಗಳು ಹಿಂಸೆ ಪಡುವಾಗ ಆಕೆಯ ಸತ್ತ ತಾಯಿ ಹಣ್ಣಿನ ಮರವಾಗಿ, ಹಾಲು ಕೊಡುವ ಹಸುವಾಗಿ ಬಂದು ತನ್ನ ಮಗಳನ್ನು ಸಾಕುವುದಿದೆ. ದ್ರಾವಿಡ ಸಂಸ್ಕೃತಿಯಲ್ಲಿ ಸತ್ತವರನ್ನು ಹೂಳುವ ಪದ್ಧತಿ ಇದೆ. ಆ ಸತ್ತವರು ದೆವ್ವವಾಗಿ ಬರಬಹುದು. ಹಾಗೆ ಬರದಿರಲೆಂದು ಸತ್ತವರ ಸಮಾಧಿ ಮೇಲೆ ಫಲ ನೀಡುವ ಮರದ ಸಸಿಯೊಂದನ್ನು ನೆಡುತ್ತಾರೆ. ಸತ್ತವ-ಶಕ್ತಿ ಶಾಲಿಯಾಗಿದ್ದರೆ ಆ ಸಸಿ ಹುಲುಸಾಗಿ ಬೆಳೆದು ಸಮೃದ್ಧ ಫಲ ಕೊಡುತ್ತದೆ. ಸತ್ತ ಹಿರೀಕ ಆ ಮೂಲಕ ತನ್ನ ಪೀಳಿಗೆಯ ಸೌಖ್ಯವನ್ನು ನೋಡಿಕೊಳ್ಳುತ್ತಾನೆ. ತಲೆಮಾರನ್ನು ಪುನರ್ ಸೃಷ್ಟಿಕೊಂಡು ಬದುಕಬೇಕೆಂಬ ಫಲವತ್ತತೆ ಸಂಸ್ಕೃತಿಯ ಆಶಯ ಇದು. ಮಣ್ಣಿನಲ್ಲೆ ಹುಟ್ಟಿ ಮಣ್ಣಿನೊಡನೆ ಬೆಳೆದು ಅದರ ಫಲಗಳಾದ ಮರಗಿಡ, ಪ್ರಾಣಿ-ಪಕ್ಷಿ, ನೆಲ-ನೀರು, ಕ್ರಿಮಿಕೀಟ ಇವೆಲ್ಲ ಸಹ ವರ್ತಿಗಳು ಎಂದು ತಿಳಿದ ನೆಲ ಸಂಸ್ಕೃತಿಯ ಮನೋಧರ್ಮ ಇದು. ವಲಸಿಗರು ಮಾತ್ರ ಸದಾ ಬೇರೆ ಬೇರೆ ರೀತಿಯ ಭೀತಿಗಳಿಂದ ಕೂಡಿ ಅದರ ನಿವಾರಣೆಗೆ ನಾನಾ ರೀತಿಯ ಶಾಸ್ತ್ರ, ಶಕುನ ಪೂಜೆ, ಪರಿಹಾರ...ಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ನ್ಯಾಯ ಗೊತ್ತಿದ್ದವನಿಗೆ ಭಯ ಇರುವುದಿಲ್ಲ. ಅದು ಸಾಮಾಜಿಕ ಅಥವ ನೈಸರ್ಗಿಕ ನ್ಯಾಯ ಆಗಿರಬಹುದು.

ಹೀಗೆ ಮಧ್ಯೆ ಬರುವವರಲ್ಲಿ ನ್ಯಾಯಿಕರು ಮತ್ತು ಪೀಡಕರು ಎಂಬ ಎರಡು ವಿಧಗಳುಂಟು. ನ್ಯಾಯಿಕ ವರ್ಗದಲ್ಲಿ ಸಮಾಜದ ಮಧ್ಯೆ ಬೇರೆ ಬೇರೆ ರೀತಿ-ರಿವಾಜುಗಳಲ್ಲಿ ಕಾಣಿಸಿಕೊಳ್ಳುವವರೆಂದರೆ "ನಾಯಕರು". ಇವರನ್ನು ನೀವು ದೇವರು ಎಂದು ಕರೆದಿರಬಹುದು

ನ್ಯಾಯಿಕ ವರ್ಗದಲ್ಲಿ ಸಮಾಜದ ಮಧ್ಯೆ ಬೇರೆ ಬೇರೆ ರೀತಿ-ರಿವಾಜುಗಳಲ್ಲಿ ಕಾಣಿಸಿ ಕೊಳ್ಳುವವರೆಂದರೆ "ನಾಯಕರು". ಇವರನ್ನು ನೀವು ದೇವರು ಎಂದು ಕರೆದಿರ ಬಹುದು ಅಥವ ಒಂದೊಂದು ಸಮುದಾಯದ ಜನನಾಯಕ ಎಂದು ಕರೆದಿರ ಬಹುದು. ಇವರಲ್ಲಿಯೂ ಎರಡು ವರ್ಗ ಉಂಟು. ನಿರ್ದಿಷ್ಟ ಸಮುದಾಯದ ಹಿತಬಯಸಿ ನಾಯಕರಾದವರು ಮತ್ತು ಸರ್ವತ್ರ ಜನ ಹಿತ ಬಯಸಿ ನಾಯಕರಾದವರು ಮೊದಲ ಗುಂಪಿನ ನಾಯಕರು ಪ್ರಾಥಮಿಕ ಸಮಾಜದಲ್ಲಿ ಧಾರಾಳವಾಗಿ ಕಾಣಿಸಿಕೊಳ್ಳುತ್ತಾರೆ. ಅವರನ್ನು ಆ ಜನ ತಮ್ಮ ಸಾಂಸ್ಕೃತಿಕ ನಾಯಕ ಎಂದು ಕರೆಯುತ್ತದೆ. ಎರಡನೆಯ ವರ್ಗದ ನಾಯಕರು ಒಂದು ನಿರ್ದಿಷ್ಟ ಸಮುದಾಯದೊಳಗೆ ಹುಟ್ಟಿ ಬೆಳೆದರೂ ಆ ಸಮುದಾಯದ ಮಿತಿಗಳನ್ನು ದಾಟಿ ಅನ್ಯ ಸಮುದಾಯಗಳ ಹಿತವನ್ನು ಬಯಸುತ್ತಾರೆ.

ಅಥವ ಒಂದೊಂದು ಸಮುದಾಯದ ಜನನಾಯಕ ಎಂದು ಕರೆದಿರಬಹುದು. ಇವರಲ್ಲಿಯೂ ಎರಡು ವರ್ಗ ಉಂಟು. ನಿರ್ದಿಷ್ಟ ಸಮುದ್ಾಯದ ಹಿತಬಯಸಿ ನಾಯಕರಾದವರು ಮತ್ತು ಸರ್ವತ್ರ ಜನ ಹಿತ ಬಯಸಿ ನಾಯಕರಾದವರು ಮೊದಲ ಗುಂಪಿನ ನಾಯಕರು ಪ್ರಾಥಮಿಕ ಸಮಾಜದಲ್ಲಿ ಧಾರಾಳವಾಗಿ ಕಾಣಿಸಿಕೊಳ್ಳುತ್ತಾರೆ. ಅವರನ್ನು ಆ ಜನ ತಮ್ಮ ಸಾಂಸ್ಕೃತಿಕ ನಾಯಕ ಎಂದು ಕರೆಯುತ್ತದೆ. ಎರಡನೆಯ ವರ್ಗದ ನಾಯಕರು ಒಂದು ನಿರ್ದಿಷ್ಟ ಸಮುದಾಯದೊಳಗೆ ಹುಟ್ಟಿ ಬೆಳೆದರೂ ಆ ಸಮುದಾಯದ ಮಿತಿಗಳನ್ನು ದಾಟಿ ಅನ್ಯ ಸಮುದಾಯಗಳ ಹಿತವನ್ನು ಬಯಸುತ್ತಾರೆ. ಇವರ ದೃಷ್ಟಿ ಧೋರಣೆಯನ್ನು ಮಾನವೀಯ ಚಿಂತನೆ ಎಂದು ಕರೆಯುತ್ತಾರೆ. ಈ ನಾಯಕರು ದೊಡ್ಡದಾಗಿ ಬೆಳೆದಂತೆಲ್ಲ ವಿಶ್ವಮಟ್ಟದ ನಾಯಕರಾಗುತ್ತಾರೆ. ಕವಿ ಮತ್ತು ವಿಶ್ವಕವಿ-ಇವರಿಗಿರುವ ಅಂತರದಿಂದ ಮೇಲಿನ ಪರಿಕಲ್ಪನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು.

ಹಾಗಾದರೆ ಹೀಗೆ ಸಮಾನವರ ನಡುವೆ ಬರುಲು/ಬರುವ ಸಂದರ್ಭ ಯಾವುದು?

1. ಸಮಾನವಾಗಿ ಮಾತನಾಡುವ ಸ್ನೇಹ, ಪ್ರೀತಿ, ವಿಶ್ವಾಸ, ಸಮಭಾವ ಇದ್ದಾಗ: ಕಾಲಾತೀತ, ವರ್ಗಾತೀತ ಮತ್ತು ಜಾತ್ಯಾತೀತವಾಗಿ-

2. ನಮ್ಮ ಅಪರಾಧವನ್ನು ಎತ್ತಿ ತೋರಿಸುವ ಸನ್ನಿವೇಷ ಸೃಷ್ಟಿಯಾದಾಗ; ಸಮಕಾಲೀನ ಸಮಾಜ ಸ್ಪಂದನ, ವಿಶ್ವಾಸ, ನಿರಂತರತೆ...ಯನ್ನು ಕಳಕೊಂಡಿದ್ದ ಸನ್ನಿವೇಶದಲ್ಲಿ-

3. ನಮ್ಮನ್ನು ವಿಘಟಿಸಬೇಕು ಎಂಬ ಸನ್ನಿವೇಷ ಸೃಷ್ಟಿಯಾಗಿದ್ದಾಗ: ಸಂಸ್ಕೃತಿ ಎಂಬುದು ಹಿಂದೆ ಸರಿದು ನಾನಾ ರೀತಿಯ ಸಾಮಾಜಿಕ ವಿಕೃತಿಗಳು ಹುಟ್ಟಿಕೊಂಡಾಗ-

ಮಧ್ಯೆ ಪ್ರವೇಶಿಸುವ ಸಂದರ್ಭ ಮುಖ್ಯವಾಗಿ ಮೌಲ್ಯ ಛೇದ ಮತ್ತು ಮೌಲ್ಯ ಪುನರ್ ನಿರ್ಮಾಣದ ನಿರ್ಣಾಯಕ ಘಟ್ಟವಾಗಿರುತ್ತದೆ. ಇದನ್ನು ಯುಗಾಂತರ ಎಂದು ಕರೆಯಬಹುದು. ಈ ಯುಗ ಅಥವ ಶತಮಾನಾಂತರ ನಾವು ನಿರ್ಮಿಸಿಕೊಂಡ ವರ್ಷ, ಶತಮಾನ ಅಥವ ಯುಗದ ಅಳತೆಯ ಮೇಲೆ ನಿಂತಿರುವುದಿಲ್ಲ. ಅದು ತನಗೆ ತಾನೇ ಸಂಭವಿಸುವ ಸಾಮಾಜಿಕ ಪರಿವರ್ತನೆ ಅಥವ ಆಘಾತ. ನೈತಿಕವಾಗಿ ಈ ಅವಸ್ಥಾಂತರ ಮೂರು ಯುಗಗಳ ಕ್ರಮದಲ್ಲಿ ಜರುಗಬಹುದು.

1. ಕನಿಷ್ಠತೆಯಿಂದ ಶ್ರೇಷ್ಠತೆಗೆ ಮತ್ತು ತಿರುಗಾ ಮುರುಗ

2. ವ್ಯಕ್ತಿತ್ವರಾಹಿತ್ಯದಿಂದ ವ್ಯಕ್ತಿತ್ವ ಮಹತ್ವಕ್ಕೆ ಮತ್ತು ತಿರುಗಾ ಮುರುಗ

3. ಜನಪದದಿಂದ ಜನಪಥಕ್ಕೆ ಮತ್ತು ತಿರುಗಾ ಮುರುಗ

ಈ ಪ್ರಕ್ರಿಯೆಯನ್ನು ಮೌರ್ಯರಾಜ್ಯಸ್ಥಾಪನೆ ಮತ್ತು ಗುಪ್ತ ಸಾಮ್ರಾಜ್ಯ ಸ್ಥಾಪನೆಯ ನಡುವಿನ ಸ್ಥಿತಿಯಿಂದ ಸ್ಪಷ್ಟಪಡಿಸಿಕೊಳ್ಳಬಹುದು. ಮೌರ್ಯರು ಕೆಳವರ್ಗದ ಜನ. ಅವರು ಪ್ರಭುತ್ವವನ್ನು ಪಡೆದರು. ಆಗ ಸಮಾಜಿಕ ಬೆಳವಣಿಗೆ ಮತ್ತು ಸಂಸ್ಕೃತಿ ಸೃಷ್ಟಿ ಏರು ಮುಖವಾಗಿದ್ದವು. ಬೌದ್ಧ ಧರ್ಮವನ್ನು ಸ್ವೀಕರಿಸುವುದರ ಮೂಲಕ ಆ ರಾಜರು ತಮ್ಮ ಆಡಳಿತ-ಅಭಿವೃದ್ಧಿಯ ನೆಲೆ ಯಾವುದು ಎಂಬುದನ್ನು ಸೂಚಿಸಿದರು. ಇವರ ನಂತರ ಬಂದ

> **ಬ್ರಾಹ್ಮಣನಾಗಬೇಕಾದರೆ ಸಾಮಾನ್ಯ ಹುಟ್ಟಿಗಿಂತ ಭಿನ್ನವಾದ ಹುಟ್ಟು ಪಡೆಯಬೇಕು. ಬ್ರಾಹ್ಮಣ್ಯ ನೆಲೆ ಸಂಸ್ಕೃತಿಗಿಂತ ಆರೋಪಿತ ಸಂಸ್ಕೃತಿ ಆಗಿರುವುದರಿಂದ ಅದಕ್ಕೆ ಪ್ರತ್ಯೇಕ ಹುಟ್ಟಿನ ಅವಶ್ಯಕತೆ ಇದೆ. ಬರೀ ಸಾಮಾನ್ಯ ಹುಟ್ಟು ಎಂದರೆ ಇತರೆಲ್ಲರಂತೆ ಎರಡನೆಯ ಹುಟ್ಟು ಅಸಮಾನ್ಯ. ಯಾಕೆ ಅಸಮಾನ್ಯವೆಂದರೆ ಬ್ರಾಹ್ಮಣ ಭೂಮಿಯ ಮೇಲೆ ಶ್ರೇಷ್ಟ. ಅವನು ಭೂಸುರ ಹಾಗೆ ಹೇಳಿಕೊಂಡು ಗುಣೀಕರಿಸಿಕೊಂಡರೆ ಮಾತ್ರ ಬೇರೆಯವರು ಅವನಿಗೆ ಗೌರವ ಕೊಡುತ್ತಾರೆ, ಎತ್ತರದಲ್ಲಿ ನಿಲ್ಲಿಸುತ್ತಾರೆ. ಪವಿತ್ರನೆಂದು ಗಣಿಸುತ್ತಾರೆ. ಆತ ಆ ಮೂಲಕ ಪವಿತ್ರ ಕೆಲಸ ಮಾಡಲು ಹಾಗೂ ನಡೆಸಿಕೊಡಲು ಅರ್ಹನಾಗುತ್ತಾನೆ.**

ಗುಪ್ತರು ಭಾರತದ ಈ ಬಗೆಯ ಚಲನೆಯನ್ನು ಸಾಗಿಸಲಿಲ್ಲ. ಪುರೋಹಿತ ಸಂಸ್ಕೃತಿ ಪರವಾಗಿದ್ದ ಅವರು ಅಶೋಕ ಚಕ್ರವರ್ತಿಯ ಪೀಳಿಗೆಯ ಬಿಂದುಸಾರ ಎಂಬ ರಾಜನನ್ನು ಅವನ ಮಂತ್ರಿಯಾಗಿದ್ದ ಪುಷ್ಯಮಿತ್ರ ಪುರೋಹಿತವಾದಿ ಕೊಂದು ಗುಪ್ತ ಸಾಮ್ರಾಜ್ಯದ ಆರಂಭಕ್ಕೆ ಕಾರಣನಾದ. ಗುಪ್ತರ ಸಾಮ್ರಾಜ್ಯ ಭಾರತದ ಚರಿತ್ರೆಯಲ್ಲಿ ಸುವರ್ಣ ಯುಗ ಎಂದು ಕರೆಯುತ್ತಾರೆ. ಆ ಕಾಲದಲ್ಲಿ ದೇಶ 'ಸುಭಿಕ್ಷ'ವಾಗಿತ್ತಂತೆ ಎಂದರೆ ಭಿಕ್ಷೆ ಸುಲಭವಾಗಿ ಸಿಗುತ್ತಿತ್ತು ಎಂದು ಅರ್ಥ. ಹಾಗಿದ್ದಲ್ಲಿ ಈ ಭಿಕ್ಷುಕರು ಯಾರು? ಇವರೆ ಘನತೆವೆತ್ತ ಪುರೋಹಿತರು. ಇವರಿಗೆ ಸುಭಿಕ್ಷೆ ಸಿಕ್ಕಿದರೆ ದೇಶ ಸುಭಿಕ್ಷವಾಗಿದ್ದಂತೆ ಎಂದು ಅವರ ಶಾಸ್ತ್ರದಲ್ಲಿ ಬರೆದುಕೊಂಡಿದ್ದಾರೆ.

-ಯೋಗ್ಯತೆ-

ಒಂದು ಸಮುದಾಯ ಬದಲಾಗುವುದಕ್ಕೆ ಮೊದಲು ಅದು ಹೇಗೆ ಮತ್ತು ಏಕೆ ಒಂದು ಸಮುದಾಯವಾಗಿರುತ್ತದೆ ಎಂಬುದನ್ನು ತಿಳಿದುಕೊಂಡ ಮೇಲೆಯೆ ನಾವು ಸಾಮಾಜಿಕ ಬದಲಾವಣೆ ಸಾಧ್ಯತೆಯ ವಿವಿಧ ಮುಖಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಪ್ರತಿಯೊಂದು ಸಮುದಾಯವೂ ಆರಂಭಗೊಳ್ಳುವುದು ಅಸ್ತಿತ್ವಕ್ಕಾಗಿ. ಒಂದು ಸಮುದಾಯ ಎಂದರೆ ಒಂದು ಅಸ್ತಿತ್ವ. ಹಾಗಿದ್ದಲ್ಲಿ ಈ ಅಸ್ತಿತ್ವದ ನೆಲೆಗಳು ಯಾವುವು? ಅವು ಹೀಗಿವೆ:

ಗರ್ಭ/ಹುಟ್ಟು-ಪರಿವರ್ತನೆ-ನಿರ್ಣಯ-ನಿರ್ಗಮನ/ಅಗರ್ಭ

ಒಂದು ಸಮಾಜ ಈ ನೆಲೆಗಳಿಗೆ ಕೊಟ್ಟು ಕೊಂಡಿರುವ ಹೆಸರುಗಳಿಂದ ಹೇಳುವುದಾದರೆ-

ನಾಮಕರಣ-->ಯೌವನ-->ನಿಶ್ಚಿತಾರ್ಥ-->ಸಾವು

ಹುಟ್ಟು--------->ಕೂಡು----->ಸಾಯಿ

ಇವು ಒಂದು ಸಮಾಜದ ಯೋಗ್ಯತೆಯನ್ನು ನಿರ್ಣಯಿಸುವವು ಮತ್ತು ಬೇರೆಯವರಿಗೆ ತಿಳಿಸಿಕೊಡುವವು. ಹುಟ್ಟು ನೈಸರ್ಗಿಕ, ಜಾತಿಯ, ಧರ್ಮದ, ಪಂಗಡದ ಅಥವ ಪಂಥದ ಹುಟ್ಟು ಸಾಮಾಜಿಕ ನಿರ್ಣಯ. ಬ್ರಾಹ್ಮಣರ ಒಂದು ಉದಾಹರಣೆಯನ್ನು ತೆಗೆದುಕೊಳ್ಳಿ. ಇವರಲ್ಲಿ ಪರಿವರ್ತನೆಗೆ 'ದ್ವಿಜ' ಎಂದು ಕರೆದು ಅದನ್ನು ಗುಟ್ಟಾಗಿ ಆಚರಿಸುತ್ತಾರೆ. ಆ ಸಂದರ್ಭದಲ್ಲಿ ನಿರ್ದಿಷ್ಟ ಉಪದೇಶ ಇರುತ್ತದೆ. ಈ ಉಪದೇಶ ಅವನ ಮುಂದಿನ ನಡವಳಿಕೆಯ ಮಾರ್ಗದರ್ಶಿಯಾಗಿರುತ್ತದೆ. ಈ ನಡವಳಿಕೆಯನ್ನೇ ನಾವು ಸಂಸ್ಕೃತಿ ಎಂದು ಕರೆಯುತ್ತೇವೆ. ಆ ಕಾರಣಕ್ಕೆ ಸಂಸ್ಕೃತಿ ಸಂಗತ, ಪಂಥ ಅಥವ ಜಾತಿಯನ್ನು ಅನುಸರಿಸಿ ಭಿನ್ನವಾಗಿರುತ್ತದೆ. ಬ್ರಾಹ್ಮಣ ಜಾತಿಯಲ್ಲಿ ಪರಿವರ್ತನೆ ನೆಲೆಯನ್ನು 'ದ್ವಿಜ' ಎಂದು ಏಕೆ ಕರೆಯುತ್ತಾರೆ? ದ್ವಿಜ ಎಂದರೆ ಎರಡು ಸಾರಿ ಹುಟ್ಟಿದವನು. ಹೆಣ್ಣಿನಲ್ಲಿ ಹುಟ್ಟಿದ್ದು ಒಂದು. ಆ ಕಾರಣಕ್ಕೆ ಅವನು ಮನುಷ್ಯ, ಆದರೆ ಬ್ರಾಹ್ಮಣ ಅಲ್ಲ.

ಬ್ರಾಹ್ಮಣನಾಗಬೇಕಾದರೆ ಸಾಮಾನ್ಯ ಹುಟ್ಟಿಗಿಂತ ಭಿನ್ನವಾದ ಹುಟ್ಟು ಪಡೆಯಬೇಕು. ಬ್ರಾಹ್ಮಣ್ಯ ನೆಲೆ ಸಂಸ್ಕೃತಿಗಿಂತ ಆರೋಪಿತ ಸಂಸ್ಕೃತಿ ಆಗಿರುವುದರಿಂದ ಅದಕ್ಕೆ ಪ್ರತ್ಯೇಕ ಹುಟ್ಟಿನ ಅವಶ್ಯಕತೆ ಇದೆ. ಬರೀ ಸಾಮಾನ್ಯ ಹುಟ್ಟು ಎಂದರೆ ಇತರೆಲ್ಲರಂತೆ ಎರಡನೆಯ ಹುಟ್ಟು ಅಸಮಾನ್ಯ. ಯಾಕೆ ಅಸಮಾನ್ಯವೆಂದರೆ ಬ್ರಾಹ್ಮಣ ಭೂಮಿಯ ಮೇಲೆ ಶ್ರೇಷ್ಟ. ಅವನು ಭೂಸುರ ಹಾಗೆ ಹೇಳಿಕೊಂಡು ಗುಣೀಕರಿಸಿಕೊಂಡರೆ ಮಾತ್ರ ಬೇರೆಯವರು ಅವನಿಗೆ ಗೌರವಕೊಡುತ್ತಾರೆ, ಎತ್ತರದಲ್ಲಿ ನಿಲ್ಲಿಸುತ್ತಾರೆ. ಪವಿತ್ರನೆಂದು ಗಣಿಸುತ್ತಾರೆ. ಆತ ಆ ಮೂಲಕ ಪವಿತ್ರ ಕೆಲಸ ಮಾಡಲು ಹಾಗೂ ನಡೆಸಿ ಕೊಡಲು ಅರ್ಹನಾಗುತ್ತಾನೆ. ಗಲೀಜು ಮಾಡುವವರು ಮತ್ತು ಗಲೀಜು ಬದುಕುವವರು ಸಮಯಾನುಸಾರ ಅವನಿಂದ ಪಾವಿತ್ರ್ಯ ಮಾಡಿಸಿಕೊಳ್ಳಬೇಕು. ಇತರರು ಪವಿತ್ರ ಕೆಲಸ ಮಾಡುವಾಗ ಅವರನ್ನು ಕರೆಸಿ ತಮ್ಮ ಪಾಪವನ್ನೂ, ಗಲೀಜನ್ನೂ ತೊಳೆಸಿಕೊಳ್ಳಬೇಕು. ಆದ್ದರಿಂದ 'ದ್ವಿಜ' ಪವಿತ್ರ ಮತ್ತು 'ಇತರ' ಗಲೀಜು.

ಬ್ರಾಹ್ಮಣರ ದೃಷ್ಟಿಯಿಂದ ಇದೊಂದು ಸೋಪಜ್ಞ ಆರ್ಥಿಕವ್ಯೂಹ. ಬದುಕಲು ಯಾವುದೇ ಸಮುದಾಯಕ್ಕೆ ಒಂದು ಆರ್ಥಿಕ ಅವಲಂಬನೆ ಬೇಕು ಒಕ್ಕಲಿಗ ಒಕ್ಕಲುತನ, ಕುರುಬ ಕುರಿಸಾಗಣೆ, ದಲಿತ ಸೇವೆ, ಅಗಸ ಮಡಿ, ಬೆಸ್ತ, ಬೇಡ ಬೇಟೆ..... ಎಂಬ ಕಸುಬನ್ನು ತಮ್ಮ ತಮ್ಮ ಆರ್ಥಿಕ ವ್ಯವಸ್ಥೆಯನ್ನಾಗಿ ಮಾಡಿಕೊಂಡಿದ್ದಾರೆ. ಅದೇ ರೀತಿ ಬ್ರಾಹ್ಮಣ ಪೂಜೆಯ ಮೂಲಕ ಇತರರನ್ನು ಪವಿತ್ರ ಮಾಡುವ ಕಸುಬನ್ನು ತನ್ನ ಆರ್ಥಿಕ ವ್ಯವಸ್ಥೆ ಮಾಡಿಕೊಂಡಿದ್ದಾನೆ. ಕಸುಬಿನ ದೃಷ್ಟಿಯಿಂದ ಮೇಲಿನವರ್ಯಾರೂ ಭಿನ್ನರಲ್ಲ. ಪೂಜೆಗೆ ಪಾವಿತ್ರ್ಯದ ಸ್ಥಾನ ಇರುವುದರಿಂದ ಬ್ರಾಹ್ಮಣರು ಪೂಜ್ಯರಾಗಿದ್ದಾರೆ, ಇತರರು ಪಾಪಿಗಳಾಗಿದ್ದಾರೆ. ತಮ್ಮ ತಮ್ಮ ವೃತ್ತಿಗೆ ಗೌರವ ತಂದು ಕೊಳ್ಳುವ ಮೂಲಕ ಗೌರವಾರ್ಹರೂ ಕನಿಷ್ಠತೆ ತಂದು ಕೊಳ್ಳುವ ಮೂಲಕ ಪಾಪಿಗಳೂ ಆಗುತ್ತಾರೆ. ಇದು ಹಿಂದೂ ಸಮಾಜದ ಮೂಲ ಮಂತ್ರ.

ಇಂಥ ಪರಿಕಲ್ಪನೆಗಳನ್ನೆ ಸಾಮಾಜಿಕ ಮೌಲ್ಯಗಳು ಅಥವ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಇನ್ನೊಂದು ಅರ್ಥದಲ್ಲಿ ಇವು ಸಾಂಸ್ಕೃತಿಕ ಯೋಗ್ಯತೆಗಳು. ಈ ಸಾಂಸ್ಕೃತಿಕ ಯೋಗ್ಯತೆಗಳನ್ನು ಒಂದು ಸಮುದಾಯ ಹೊಂದಿದೆಯೆ? ಅವು ಅವರೇ ಸೃಷ್ಟಿಸಿಕೊಂಡ ಯೋಗ್ಯತೆಗಳ ಅಥವ ಅನ್ಯರ ಅನುಕರಣೆಗಳೆ ಎಂಬುದರ ಮೇಲೆ

[illegible] ಯೋಗ್ಯತೆ ಗೊತ್ತಾಗುತ್ತದೆ. [illegible] [illegible] ವೈಶ್ಯ ಮತ್ತು ಕ್ಷತ್ರಿಯರನ್ನು ಒಟ್ಟು ಉಳಿದವರಿಗೆ ಸಾಂಸ್ಕೃತಿಕ ಯೋಗ್ಯತೆ ಇಲ್ಲ. (ಈ ನಿಟ್ಟಿನಲ್ಲಿ ಒಕ್ಕಲಿಗರ ಸಾಂಸ್ಕೃತಿಕ ಯೋಗ್ಯತೆಯನ್ನು ತಿಳಿಯಬೇಕೆಂದರೆ:

ಕೃಷಿಕರಾಗಿ ಒಕ್ಕಲಿಗರು ಸಾಂಸ್ಕೃತಿಕ ಯೋಗ್ಯರು ಯಾಕೆಂದರೆ ಇದೊಂದು ಸ್ಥಿರ ಸಮಾಜ. ಜಾತಿಯಾಗಿ ಒಕ್ಕಲಿಗರು ಸಾಂಸ್ಕೃತಿಕ ಅಯೋಗ್ಯರು. ಯಾಕೆಂದರೆ ಇದು ವಿಧೇಯ ಮತ್ತು ಅಸ್ಥಿರ ಸಮಾಜ. ಇಲ್ಲಿ ಕುವೆಂಪು ಹುಟ್ಟುತ್ತಾರೆ!

ಕರ್ನಾಟಕದಲ್ಲಿ ಎರಡು ಮಹಾನ್ ಚಲನೆಗಳು ಸಂಭವಿಸಿವೆ

1 ಬಸವಣ್ಣ: ವಚನ ಚಳುವಳಿ

2 ಕುವೆಂಪು: ಶೂದ್ರ ಚಳುವಳಿ

ಈ ಎರಡೂ ಕಡೆ ಮೌಲ್ಯಭೇದ ಮತ್ತು ಮೌಲ್ಯ ಪುನರ್ ನಿರ್ಮಾಣ ನಡೆದಿದೆ. ನೇರವಾಗಿ:

i) ಕನಿಷ್ಠತೆಯಿಂದ ಶ್ರೇಷ್ಠತೆಗೆ.

ii) ವ್ಯಕ್ತಿತ್ವರಾಹಿತ್ಯದಿಂದ ವ್ಯಕ್ತಿತ್ವ ಮಹತ್ತಿಗೆ.

iii) ಜನಪದದಿಂದ ಜನಪಥಕ್ಕೆ

ಈ ಎರಡೂ ಕಡೆ ಚಲಿಸಿದವರು ಯಾರು?

1.1 ಮಾದಾರ ಚನ್ನಯ್ಯ, ಡೋಹರಕಕ್ಕಯ್ಯ, ಅಂಬಿಗರ ಚೌಡಯ್ಯ, ಅರಿವಿನ ಮಾರಿತಂದೆ, ಆಯ್ದಕ್ಕಿ ಮಾರಯ್ಯ, ಅನಾಮಿಕ ನಾಚಯ್ಯ, ಉಗ್ಗಡಿಸುವ ಬಿಟ್ಟಿ ದೇವಯ್ಯ, ಕೂಗಿನ ಮಾರಿತಂದೆ.

1.2 ಸೂಳೆ ಸಂಕವ್ವ, ಅಕ್ಕಮಹಾದೇವಿ, ಕಾಳವ್ವೆ, ಕೇತನದೇವಿ, ಗಂಗಮ್ಮ ಕಾಲಕಣ್ಣಿಯ ಕಾರುವ್ವೆ, ಗೂಗ್ಗವ್ವೆ, ರೇಕಮ್ಮ, ಲಕ್ಕಮ್ಮ, ವೀರಮ್ಮ ಕೊಟ್ಟಣದ ಸೋಮವ್ವ ಅಕ್ಕ ನಾಗಮ್ಮ

2.1 ಜಲದಾರ, ಶೂದ್ರ ತಪಸ್ವಿ, ಏಕಲವ್ಯ ರಾವಣ, ಕರಿಸಿದ್ದ ನೇಗಿಲ ಯೋಗಿ, ಶ್ರೀಸಾಮಾನ್ಯ, ಗೊಲ್ಲನ ಬನ್ನಹ, ಕುಳದ ಕಲಿ, ಕಿಟ್ಟಯ್ಯ ಬೆಕ್ಕ, ಇಲಿ ನಾಯಿಗುತ್ತಿ, ತಿತ-ಪಿಲಿಚಲು, ನಿರಂಕುಶ ಮತಿ

2.3 ಹಿರೆಹೂ, ಗೊಬ್ಬರ

2.2 ಮಂಥರೆ, ಸೀತೆ, ಊರ್ಮಿಳಾ, ಅನಲೆ)

-ಅನನ್ಯತೆ-

ಒಂದು ಸಮಾಜ ಏನೆಲ್ಲ ಯೋಗ್ಯತೆಗಳನೆಲ್ಲ ಹೊಂದಿದೆಯೊ ಅದರ ಮೇಲೆ ಆ ಸಮಾಜವನ್ನು ಗುರುತಿಸಲಾಗುತ್ತದೆ. ಆ ಗುರುತನ್ನು ಆ ಸಮಾಜದ ಅನನ್ಯತೆ ಎಂದು ಕರೆಯುತ್ತಾರೆ.

ಈ ಅನನ್ಯತೆ ಏನಾಗಿರುತ್ತದೆ ಎಂಬ ಪ್ರಶ್ನೆ ಬೇರೆ. ಒಂದು ಜನಾಂಗದ ಅನನ್ಯತೆ ಇನ್ನೊಂದು ಜನಾಂಗಕ್ಕೆ ಪಥ್ಯ ಆಗಬಹುದು ಅಥವ ಅಪಥ್ಯವಾಗಬಹದು. ಆ ಕಾರಣಕ್ಕೆ ಒಂದು ಅನನ್ಯತೆಯನ್ನು ಇಟ್ಟುಕೊಂಡ ಜನಾಂಗ ಆ ಅನನ್ಯತೆಯ ಗುಣಗಳನ್ನು ಬಿಟ್ಟುಕೊಡ ಬೇಕಿಲ್ಲ. ತನ್ನ ಅನನ್ಯತೆಯ ಗುಣಗಳನ್ನು ಇಟ್ಟುಕೊಂಡೂ ಇತರ ಜನಾಂಗಗಳ ಜೊತೆಗೆ ಹೇಗೆ ಸೌಹಾರ್ದಯುತವಾಗಿ ಬಾಳಬೇಕು ಎಂಬುದನ್ನು ಆ ಜನಾಂಗ ಕಲಿಯಬೇಕು. ಸೌಹಾರ್ದತೆಯಲ್ಲದೆ ದ್ವೇಷವನ್ನೇ ತಮ್ಮ ಅನನ್ಯತೆಯನ್ನಾಗಿಯೂ ಉಳಿಸಕೊಂಡು ಬದುಕಬಹುದು ಹಾಗೂ ಅದನ್ನೇ ತನ್ನ ಜನಾಂಗದ ಚಟುವಟಿಕೆಯನ್ನಾಗಿ ಮಾಡಿಕೊಳ್ಳಬಹುದು. ನಮಗೆಲ್ಲ ಕಾಣುವ ಹಾಗೆ ಮೂಲಭೂತವಾದಿ ಬ್ರಹ್ಮಣರು ಮುಸ್ಲಿಮರನ್ನು ದ್ವೇಷಿಸುವುದನ್ನೇ ತಮ್ಮ ಸಮುದಾಯದ



ರಾಷ್ಟ್ರ ಕವಿ ಕುವೆಂಪು

ಚಟುವಟಿಕೆಯನ್ನಾಗಿ ಮಾಡಿಕೊಂಡಿದ್ದಾರೆ. ಒಂದು ಚಾರಿತ್ರಿಕ ಘಟ್ಟದಲ್ಲಿ ಮುಸ್ಲಿಮರೊಡನೆ ಅವರು ತಾಳಿದ ಮತ್ಸರ ಅವರ ಅನಂತ ಕಾಲದ ಐಡೆಂಟಿಟಿ ಮತ್ತು ಚಟುವಟಿಕೆ ಆಗಿ ಉಳಿಯಬೇಕೆ? ಯಹೂದಿಗಳ ಬಗ್ಗೆ ಹಿಟ್ಲರ್ ಇದೇ ಕೆಲಸ ಮಾಡಿ ನಾಶ ಹೊಂದಿದ.

ಒಂದು ಜನಾಂಗ, ಪಂಥ, ಪಂಗಡ ಅಥವ ಗುಂಪು ತನ್ನ ಗುರುತಿಗಾಗಿ ಇಟ್ಟುಕೊಂಡು ಅಂಶ ಯಾವುದಿರಬೇಕು? ಎಂಥದಿರಬೇಕು? ಅದು ಶುದ್ಧ, ಸುಸಂಸ್ಕೃತ, ಪವಿತ್ರ, ಪಾಪನ, ಪುಣ್ಯಾತ್ಮಕ, ಮಹತ್ವದ್ದು.... ಹೀಗೆಲ್ಲ ಇರಬೇಕೆ? ಮತ, ಧರ್ಮ ಮತ್ತು ಜಾತಿಗಳು ಈ

ಒಂದು ಸಮಾಜ ಏನೆಲ್ಲ ಯೋಗ್ಯತೆಗಳನೆಲ್ಲ ಹೊಂದಿದೆಯೊ ಅದರ ಮೇಲೆ ಆ ಸಮಾಜವನ್ನು ಗುರುತಿಸಲಾಗುತ್ತದೆ. ಆ ಗುರುತನ್ನು ಆ ಸಮಾಜದ ಅನನ್ಯತೆ ಎಂದು ಕರೆಯುತ್ತಾರೆ. ಈ ಅನನ್ಯತೆ ಏನಾಗಿರುತ್ತದೆ ಎಂಬ ಪ್ರಶ್ನೆ ಬೇರೆ. ಒಂದು ಜನಾಂಗದ ಅನನ್ಯತೆ ಇನ್ನೊಂದು ಜನಾಂಗಕ್ಕೆ ಪಥ್ಯ ಆಗಬಹುದು ಅಥವ ಅಪಥ್ಯವಾ ಗಬಹದು. ಆ ಕಾರಣಕ್ಕೆ ಒಂದು ಅನನ್ಯತೆಯನ್ನು ಇಟ್ಟುಕೊಂಡ ಜನಾಂಗ ಆ ಅನನ್ಯತೆಯ ಗುಣಗಳನ್ನು ಬಿಟ್ಟುಕೊಡ ಬೇಕಿಲ್ಲ. ತನ್ನ ಅನನ್ಯತೆಯ ಗುಣಗಳನ್ನು ಇಟ್ಟುಕೊಂಡೂ ಇತರ ಜನಾಂಗಗಳ ಜೊತೆಗೆ ಹೇಗೆ ಸೌಹಾರ್ದ ಯುತವಾಗಿ ಬಾಳಬೇಕು ಎಂಬುದನ್ನು ಆ ಜನಾಂಗ ಕಲಿಯಬೇಕು.

ರೀತಿಯ ಮೂಲಾಂಶದಿಂದ ತಮ್ಮ ಅನನ್ಯತೆಯನ್ನು ಪ್ರತಿಪಾದಿಸುತ್ತಾನೆ. ಈ ಅನನ್ಯತೆ ಒಂದು ತತ್ವ ಆಗಬಹುದು ಅಥವ ಅವರು ನಂಬಿದ ವಸ್ತುವಾಗಬಹುದು ಉದಾ: ಬ್ರಾಹ್ಮಣರು ಬ್ರಹ್ಮನ ಮುಖದಿಂದ ಬಂದವರು ಎಂಬ ತತ್ವ ಹೊಂದಿದ್ದಾರೆ. ಮೂಲದಲ್ಲಿ ಜನರು ಒಂದು ಕಡೆ ಸೇರಿ ಒಂದು ಸಮೂಹವನ್ನು ಕಟ್ಟಿಕೊಂಡಾಗ ಅವರಿಗೆ ಯಾವ ವ್ಯಕ್ತಿ, ವಸ್ತು, ಸಂದರ್ಭ ಅಥವ ತತ್ವ ಸಹಾಯಕವಾಯಿತೊ ಅದನ್ನೇ ಅವರ ಅನನ್ಯತೆಯ ಗುರುತು ಎಂದು ಇಟ್ಟುಕೊಂಡರು. ಉದಾ: ಮಹದೇವ ಕೋಳಿಗಳು ಎಂಬ ಜನಾಂಗದ ಮೂಲ ಐಡೆಂಟಿಟಿ ಕೋಳಿ. ಹೀಗೆ ಕೊಕ್ಕರೆ, ಎಮ್ಮೆ, ಆಮೆ, ಮೀನು, ಮೊಸಳೆ, ಮರ, ನರಿ, ಪ್ರಾಣಿಯೊಂದರ ಕೂಗು, ಭಾಗ.... ಇತ್ಯಾದಿ ಯಾವುದು ಬೇಕಾದರೂ ಆಗಿರಬಹುದು. ಒಂದು ಜನಾಂಗ ತಾವು ಎಲ್ಲರಿಗಿಂತ ಶ್ರೇಷ್ಠರು ಎಂದು ನಂಬಿಕೊಂಡರೆ ಇನ್ನೊಂದು ಜನಾಂಗ ಕನಿಷ್ಠರು ಎಂದು ನಂಬಿಕೊಂಡರೆ ಅದು ಅವರ ಗುರುತು, ಅಥವ ಅನನ್ಯತೆಯಾಗುತ್ತದೆ.

ಒಮ್ಮೆ ನನಗೆ ಒಂದು ಜಾತ್ರೆ ಮಹೋತ್ಸವದ ಆಹ್ವಾನ ಪತ್ರಿಕೆ ಬಂತು. ಅದು 'ನುಂಗಲಾರದಮ್ಮ'ನ ಉತ್ಸವ. ಈ ಹೆಸರು ಕೇಳಿಯೆ ನನಗೆ ಕುತೂಹಲ ಹಾಗೂ ಸಂತೋಷವಾಯಿತು. ಯಾವ ಪಂಗಡದ ದೇವತೆ ಈ ನುಂಗಲಾರದಮ್ಮ, ಯಾಕೆ, ಏನನ್ನು ಮತ್ತು ಯಾವಾಗ ನುಂಗಲಾಗಲಿಲ್ಲ. ಅಥವ ಇನ್ನೇನಾದರೂ ಹಿನ್ನೆಲೆ ಇದೆಯೆ. ಗ್ರಾಮೀಣ ಸಮಾಜದ ಅನೇಕ ಪಂಥಗಳ ದೇವರು ಧರ್ಮ ಮತ್ತು ಬದುಕಿನ ತಳವನ್ನು ಹುಡುಕುತ್ತಾ ಹೋದರೆ ನಮ್ಮ ಮಡಿ-ಮೈಲಿಗೆ, ಜೇಷ್ಠ-ಶ್ರೇಷ್ಠ ಎಂಬುವ ಡೋಂಗಿ ನಡವಳಿಕೆಗಳು ಎನಿಸುತ್ತದೆ. ಎಷ್ಟು ಸಮುದಾಯಗಳಿವೆಯೋ ಅದಕೆಲ್ಲ ಒಂದೊಂದು ಅನನ್ಯತೆ ಇರುತ್ತದೆ. ಅನನ್ಯತೆ ಇಲ್ಲದ ಸಮೂಹಗಳನ್ನು ಅಯೋಗ್ಯರ ಗುಂಪು ಎಂದು ಕರೆಯಬಹುದು.

ಈ ಅನನ್ಯತೆಯ ಆಧರದ ಮೇಲೆಯೆ ಸಂಸ್ಕೃತಿ ಹುಟ್ಟುತ್ತದೆ. ಒರೆದು ಅನನ್ಯತೆಯನ್ನು ಕುರಿತ ವಿವಿಧ ಚಟುವಟಿಕೆಗಳ ಸಮೂಹವನ್ನೆ ನಾವು ಸಂಸ್ಕೃತಿ ಎಂದು ಕರೆಯುವುದು. ಶ್ರೇಷ್ಠರು ಎಂಬ ನಂಬಿಕೆ ಮತ್ತು ಐಡೆಂಟಿಯ ಮೆಲೆ ಮೇಲು ಜಾತಿಯ ಜನ ಬದುಕುತ್ತಾರೆ. ಅವರಿಗಾಗಿ ಸದಾ ಸೇವ ಮಾಡುವ ಕೆಳಜಾತಿಗಳು ಇರಬೇಕು ಎಂದು ಅಪೇಕ್ಷಿಸುತ್ತಾರೆ. ಕನಿಷ್ಠರು ಎಂಬ ನಂಬಿಕೆ ಮತ್ತು ಆಚರಣೆಗೆ ಅನುಗುಣವಾಗಿ ಕೆಳಜಾತಿಯ ಜನ ಬದುಕುತ್ತಾರೆ. ಇವರು ಬಹಳ ಕಾಲ ಬದುಕಿದ್ದು ಸಂಸ್ಕೃತಿ ಪರಂಪರೆ ಆಗುತ್ತದೆ. ಯಾವುದೋ ಒಂದು, ಕೆಟ್ಟದ್ದೊ-ಒಳ್ಳೆಯದೊ ನಂಬಿದ್ದು ಸರಿ ಎನ್ನುವುದು ಸಮೂಹದ ಸ್ವಭಾವ. ನಾರಾಯಣ ನಿಂದನೆ ಅಲ್ಪಾಯುಷ್ಯಕ್ಕೆ ಕಾರಣ ಎಂದು ಯಾವ ಪುರೋಹಿತ ಹೇಳಿದನೋ ಕಾಣೆ ನಮ್ಮ ತಾಯಿ ಸಾಯುವವರೆಗೆ ಅದನ್ನು ಬಲವಾಗಿ ನಂಬಿದ್ದಳು. ನರಕಾಸುರ, ಬಕಾಸುರ, ಮಿಕಾಸುರರ ಬಗ್ಗೆ ಹೀಗೆ ಹೇಳಿದಿದ್ದಿರೆ ಅದನ್ನೇ ಆಕೆ ನಂಬುತ್ತಿದ್ದಳು.

ಇದರಿಂದ ಸಂಸ್ಕೃತಿಯಲ್ಲಿ ಶುದ್ದ-ಅಶುದ್ದ, ಶ್ರೇಷ್ಠ-ಕನಿಷ್ಠ, ಪವಿತ್ರ-ಅಪವಿತ್ರ ಎಂಬ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಒಪ್ಪಿಕೊಂಡದ್ದು ನಂಬಿಕೆ, ಒಪ್ಪದ್ದು ಅಪನಂಬಿಕೆ ಅನಸರಿಸಿದ್ದು ಧರ್ಮ, ಅನುಸರಣೆಯಿಂದ ಹೊರಗುಳಿದದ್ದು ಅಧರ್ಮ, ಶುದ್ಧ-ಅಶುದ್ಧ, ಶ್ರೇಷ್ಠ-ಕನಿಷ್ಠ ಪವಿತ್ರ-ಅಪವಿತ್ರ ಇವೆಲ್ಲ ಬರುವದು ಗೆದ್ದವರು ಸೋತವರನ್ನು

ಸೆರೆಯಲ್ಲಿ ಇಟ್ಟುಕೊಳ್ಳಲು. ಈ ಸೆರೆ ಜೈಲೇ ಆಗಿರಬೇಕಿಲ್ಲ ಗುಲಾಮರು ವಾಸಮಾಡುವ ಸ್ವಂತ ಮನೆ ಮತ್ತು ಊರು ಕೂಡ ಸೆರೆಮನೆಗಳಾಗಿರುತ್ತವೆ. ಎಚ್ಚರದಿಂದಿದ್ದವರಿಗೆ ಅದು ಗೊತ್ತಾಗುತ್ತದೆ. ಮೈಮನ ಮರೆತ ಗುಮಾಮರ ಸ್ವರ್ಗದಲ್ಲೆ ಇದ್ದೀವೆ ಎಂದು ತಿಳಿದು ಕೊಂಡಿರುತ್ತಾರೆ.

ಸಾಂಸ್ಕೃತಿಕ ಯೋಗ್ಯತೆ ಅಥವ ಅನನ್ಯತೆ (Identity) ಇಲ್ಲದ ಸಮುದಾಯವೊಂದು ಇರವುದಕ್ಕೆ ಸಾಧ್ಯವಿಲ್ಲ. ಹಾಗಿದ್ದಲ್ಲಿ ಅದು ತಾತ್ಕಾಲಿಕ ಸಮುದಾಯ. ಕುಡಕರ ಸಮುದಯಕ್ಕೂ, ಸೂಳೆಯರ ಸಮುದಾಯಕ್ಕೂ ಒಂದು ಅನನ್ಯತೆ ಇರುತ್ತದೆ. ಇದು ಎರಡು ತೆರನಾಗಿ ಕಾಣಿಸಿಕೊಳ್ಳುತ್ತದೆ. ಒಂದು, ತನ್ನನ್ನು ತಾನೇ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಮತ್ತು ವಿರೋಚಿತವಾಗಿ ಹೆಸರಿಸಿಕೊಳ್ಳುವುದು. ಬೇರೆ ಸಮುದಾಯದ ದೃಷ್ಟಿಯಿಂದ ತಾವು ಏನು ಎಂಬುದನ್ನು ತೋರಿಸಿಕೊಳ್ಳಲು. ನಮ್ಮ ಜಾತಿ ಸಮಾಜದಲ್ಲಿ ಬ್ರಾಹ್ಮಣ, ವೈಶ್ಯ, ಮತ್ತು ಕ್ಷತ್ರಿಯರಿಗೆ(?) ಹೇಳಿಕೊಳ್ಳುವ, ಹೆಸರಿಸಿಕೊಳ್ಳುವ ಗಟ್ಟಿಯಾದ ಅನನ್ಯತೆ ಇದೆ. ಶೂದ್ರ ಜನಾಂಗದಲ್ಲಿ ಕರ್ನಾಟಕದ ಮಟ್ಟಿಗೆ ವೀರಶೈವ ಮತ್ತು ಒಕ್ಕಲಿಗರು ವಿರೋಚಿತವಾಗಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಇವರ ಬಗ್ಗೆ ಅಪಸ್ವರದ ಮಾತು ಬಂದರೂ ಅವು ಬಹಿರಂಗದಲ್ಲಿ ಬರುವುದಿಲ್ಲ- ಆದರೆ ಕುರುಬ, ಅಗಸ, ನಾಯಿಂದ, ಕೊರಮ, ದಲಿತ, ಮುಂತಾದ ತಳ ಜನರು ಅನೇಕ ಸಂದರ್ಭಗಳಲ್ಲಿ ತಮ್ಮನ್ನು ದೃಡವಾಗಿ ಹೆಸರಿಸಿಕೊಳ್ಳುವುದಿಲ್ಲ.

ಸಾಂಸ್ಕೃತಿಕ ಯೋಗ್ಯತೆ ಅಥವ ಅನನ್ಯತೆ ಇಲ್ಲದ ಸಮುದಾಯವೊಂದು ಇರವುದಕ್ಕೆ ಸಾಧ್ಯವಿಲ್ಲ. ಹಾಗಿದ್ದಲ್ಲಿ ಅದು ತಾತ್ಕಾಲಿಕ ಸಮುದಾಯ. ಕುಡಕರ ಸಮುದಯಕ್ಕೂ, ಸೂಳೆಯರ ಸಮುದಾಯಕ್ಕೂ ಒಂದು ಅನನ್ಯತೆ ಇರುತ್ತದೆ. ಒಂದು, ತನ್ನನ್ನು ತಾನೇ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಮತ್ತು ವಿರೋಚಿತವಾಗಿ ಹೆಸರಿಸಿಕೊಳ್ಳುವುದು. ಬೇರೆ ಸಮುದಾಯದ ದೃಷ್ಟಿಯಿಂದ ತಾವು ಏನು ಎಂಬುದನ್ನು ತೋರಿಸಿಕೊಳ್ಳಲು. ನಮ್ಮ ಜಾತಿ ಸಮಾಜದಲ್ಲಿ ಬ್ರಾಹ್ಮಣ, ವೈಶ್ಯ, ಮತ್ತು ಕ್ಷತ್ರಿಯರಿಗೆ(?) ಹೇಳಿಕೊಳ್ಳುವ, ಹೆಸರಿಸಿಕೊಳ್ಳುವ ಗಟ್ಟಿಯಾದ ಅನನ್ಯತೆ ಇದೆ. ಶೂದ್ರ ಜನಾಂಗದಲ್ಲಿ ಕರ್ನಾಟಕದ ಮಟ್ಟಿಗೆ ವೀರಶೈವ ಮತ್ತು ಒಕ್ಕಲಿಗರು ವಿರೋಚಿತವಾಗಿ ತಮ್ಮನ್ನು ಗುರುತಿಸಿ ಕೊಳ್ಳುತ್ತಾರೆ.

ಕುರುಬರು ತಾವು ಗೌಡಸ್‌ಗಳೆಂದೂ, ನಾಯಿಂದರು ತಾವು ನಯನ ಕ್ಷತ್ರಿಯರೆಂದೂ, ಹೊಲೆಯರು ತಾವು ಹರಿಜನರೆಂದೂ, ಅಗಸರು ತಾವು ಗಂಗೆ ಮಕ್ಕಳು ಎಂದೂ ಹೇಳಿಕೊಳ್ಳುತ್ತಾರೆ. ಹೀಗೆ ಒಂದೇ ಪಂಗಡಕ್ಕೆ ಎರಡು ಹೆಸರು ಇದೆ ಎಂದರೆ ಅಷ್ಟರ ಮಟ್ಟಿಗೆ ಅದರ ಅನನ್ಯತೆ ಛಿದ್ರವಾಗಿದೆ ಎಂದು ಅರ್ಥ. ಕನ್ನಡದ ಗಾದೆಗಳ ಸಮೂಹವನ್ನು ಓದಿ, ಅಲ್ಲೆಲ್ಲ ಕೆಳ-ತಳ ಜನಾಂಗದ ಬಗ್ಗೆ ಟೀಕೆ-ಅವಹೇಳನದ ಮಾತುಗಳು ಧಾರಾಳ ಕಂಡು ಬರುತ್ತವೆ. ಮೇಲು ಜಾತಿಯವರನ್ನು ಕುರಿತ ನಿಂದನೆಗಳ ಸಂಖ್ಯೆ ಬಹಳ ಕಡಿಮೆ.

ಸಮುದಾಯವನ್ನು ಗುರುತಿಸುವ ಎರಡನೆಯ ರೀತಿಯೆಂದರೆ ಬೇರೆಯವರು ಆ ಸಮುದಾಯವನ್ನು ಹೇಗೆ ಕಂಡಿದ್ದಾರೆ, ಏನು ಹೇಳುತ್ತಾರೆ ಎಂಬುದಾಗಿದೆ. ಮೊನ್ನೆ ಪತ್ರಿಕೆಯೊಂದರಲ್ಲಿ ಕೊರಮರು ಕದಿಯುವ ಜನಾಂಗ ಎಂಬ ಮಾತು ಬಂದಾಗ ಇಡೀ ಕೊರಮ ಜನಾಂಗ ಪ್ರತಿಭಟಿಸಿತು. ನಾವು ಹುಡುಗರಾಗಿದ್ದಾಗ ಕೊರಮ ಜನಾಂಗ ಎಂದರೆ ಕದಿಯುವ ಜನಾಂಗ ಎಂದೆ ಹೇಳುತ್ತಿದ್ದರು. ಇವರು ಕಾಡಿನ ಮದ್ಯೆ ವಾಸಹೂಡುತ್ತಿದ್ದರು; ಇತರರು ಸಂಜೆ ಆರು ಗಂಟೆಯ ಮೇಲೆ ಇವರ ವಸತಿಯ ಸಮೀಪ ಸುಳಿಯುತ್ತಿರಲಿಲ್ಲ. ಆದರೆ ಹೆಸರು ಕೊರಮ(ಕಳ್ಳ) ಎಂದಿದ್ದರೂ ಎಲ್ಲ ಕೊರಮರೂ ಕದಿಯುತ್ತಿರಲಿಲ್ಲ. ಅವರ ಮುಖ್ಯ ಕಸುಬು ಬುಟ್ಟಿ ಹೆಣೆದು ಮಾರುವುದಾಗಿತ್ತು. ತಮ್ಮ ಕುಲ ಕಸುಬಿನ ಶಿಸ್ತನ್ನು ಉಳಿಸಿಕೊಳ್ಳುವ ಕಾರಣಕ್ಕೆ ಅಲ್ಲಲ್ಲಿ ಆಗ್ಗಾಗ ಕೆಲವರು ಮಾತ್ರ ಕದಿಯುತ್ತಿದ್ದರು. ಅವು ದರೋಡೆ ಗಳಾಗಿರಲಿಲ್ಲ. ಹಸಿದವನು ಮತ್ತು ಅನುಕೂಲ ಇಲ್ಲದವನು ಸ್ವಲ್ಪ ಕೈಮುಂದೆ ಚಾಚಿದ್ದನ್ನ ವಾಪಸ್ ತೆಗೆದುಕೊಳ್ಳುತ್ತಿದ್ದ.

ಗೌಡರ ಹಟ್ಟಿಯ ಒಂದು ಕತೆ ಹೀಗಿದೆ: ಗೌಡರ ಹಟ್ಟಿಯಲ್ಲಿ ನರಸ ಎಂಬ ವರ್ಷಕ್ಕೆ ಇಟ್ಟುಕೊಂಡ ಒಬ್ಬ ಆಳು ಇದ್ದ. ಅವನು ರಾತ್ರಿ ಮಲಗುವ ಹೊತ್ತಿಗೆ ಮಾಯವಾಗುತ್ತಿದ್ದ. ಒಂದು ದಿನ ರಾತ್ರಿ ಗೌಡರು ತಡವಾಗಿ ಊರಿಗೆ ಬರುತ್ತಿದ್ದರು. ಊರಿನ ಹತ್ತಿರ ಒಂದು ಹಳ್ಳ. ಅದನ್ನು ಗೌಡರು ದಾಟಬೇಕು. ಆಗ ತಕ್ಷಣ ಯಾರೋ ಕೈ ಹಿಡಿದು ಕೊಂಡದು ಗೊತ್ತಾಯಿತು. ಗೌಡರು ರೇಗಿ, ಲೇ ಮಗನೆ ನಿನ್ನನ್ನು ಹುಟ್ಟಿದ ದಿನ ಕಾಣಿಸಿಬಿಡುತ್ತೇನೆ. ಕೈಬಿಡುತ್ತೀಯೋ ಇಲ್ಲವೋ ಎಂದರು. ಈ ನದರು ಗಿದರು ನಿಮ್ಮೂರಿನಲ್ಲಿ ತೋರಿಸಿ ಇಲ್ಲಿ ನಮ್ಮ ಜಾಗದಲ್ಲಿ ಅವೆಲ್ಲ ನಡೆಯುವುದಿಲ್ಲ. ಕೈಯಲ್ಲಿ ಇರುವ ಚಿನ್ನದ ಕಪ್ಪ ಬಿಚ್ಚಿ ಕೊಟ್ಟು ಹೋಗು ಎಂದ. ಎಲಾ ಬಡ್ಡಿ ಮಗನೆ ಇದು ನನ್ನ ನೆಲ ಎನ್ನುತ್ತಿದ್ದಾನೆ ಎಂದವರೆ ಗೌಡರು ಬಿಚ್ಚಿಕೊ ಎಂದರು. ಆತ ಮುಂದೆ ಬಂದು ಕಪ್ಪ ಬಿಚ್ಚುತ್ತಿದ್ದಾನೆ. ಗೌಡರು ಗುರುತಿಸಿದರು ಲೋ ನರಸ ಇದೇನ್ಲ ಇದು ಲೌಡಿ ಮಗನೆ ಎಂದರು. ಆತ ಯಾರ್ರೀ ನರಸ. ಇಲ್ಲಿ ನರಸಗಿರಸ ಯಾರೂ ಇಲ್ಲ. ಏನೇನೊ ಹೇಳಬೇಡಿ ಸುಮ್ಮನ ಕಪ್ಪ ಬಿಚ್ಚಿ ಕೊಟ್ಟು ಗಮ್ಮನೆ ಹೋಗಿ ಎಂದ.

ಬೆಳಿಗ್ಗೆ ಎದ್ದು ನರಸ ಗೌಡರ ಮನೆಯ ಕೆಲಸಕ್ಕೆ ಹಾಜರ್. ಆಗಲೆ ಗೌಡರು ನಡದ ಸಂಗತಿಯನ್ನು ಗೌಡತಿಗೆ ತಿಳಿಸಿದ್ದರು. ನರಸ ಬೆಳಗಿನ ಕೆಲಸ ಮಾಡಿ ರೊಟ್ಟಿ ತನ್ನಲು ಬಂದ, ಅವನಿಗೆ ಗೌಡತಿಯನ್ನು ಕಂಡರೆ ಅಪಾರ ಗೌರವ. ಆಕೆ ಅವನ ಹಾಗೂ ಅವನ ಕುಟುಂಬಕ್ಕೆ ಕಷ್ಟ ಬಂದಾಗಲೆಲ್ಲ ನೆರವಾಗುತ್ತಿದ್ದವರು ಗೌಡತಿ ಕೇಳಿದರು ಏನೊ ನರಸ ಚನ್ನಾಗಿದ್ದಿಯಪ್ಪ ಅಂತ. ಊಂ ಅಂದ. ಇನ್ನೇನೋ ಬೇರೆ ಸಮಾಚಾರ ಎಂದಳು. ಮೆಲ್ಲನ ಜೋಬಿನಿಂದ ಗೌಡರ ಚಿನ್ನದ ಕಪ್ಪ ತೆಗೆಯುತ್ತ ತಗೊಳ್ಳಿ ಅಮ್ಮ, ಇದನ್ನು ನೆನ್ನೆ ದಿನ ಈಸ್ಕೋ ಬೇಕಾಯ್ತು. ಏನು ಮಾಡೋದು ಅಮ್ಮ, ನಮ್ಮ ಕುಲಕಸುಬು ಮಾಡದಿದ್ದರೆ ಕುಲದೇವತೆ ಸುಮ್ಮನೆ ಇರುತ್ತಾಳ.? ಅದೇನೊ ನನ್ನ ದುರಾದೃಷ್ಟ ಈ ಕುಳವೆ ಸಿಕ್ಕಿ ಬಿದ್ದರು. ಕೆಲಸ ಆತು, ದೇವರ ಕೆಲವೂ ಆತು, ಇನ್ನು ತಗಳ್ಳಿ ನಿಮ್ಮ ಗೌಡನ ಕಪ್ಪನ. ನನ್ನ ಮಾತ್ರ ನೀವು ಕ್ಷಮಿಸಬೇಕು ಅಂದನಂತೆ. ಹೀಗೆ ಕಾಡುತ್ತದೆ ಕುಲ, ಪಂಗಡ, ಪಂಥ ಹಾಗೂ ಜಾತಿಯ ಐಡೆಂಟಿಟಿ. ಈಗ ಕಳ್ಳತನ ಸಾರ್ವತ್ರಿಕ ಮತ್ತು ಗೌರವಾನಿತ್ವ ವೃತ್ತಿ ಆಗಿರುವುದರಿಂದ ನಿಯತ್ತಿನ ಮೂಲ ಕಳ್ಳರು ಮೂಲೆ ಸೇರಿದ್ದಾರೆ.

-ಪಿಂಡ-ದಂಡ-

ಅನನ್ಯತೆ ಎಂಬುದು ಒಂದು ಗುಂಪು, ಪಂಗಡ, ಪಂಥ ಅಥವ ಸಮೂಹದ ನಿಧಾರಾತ್ಮಕ ಗುಣ. ಅದು ಅವರ ಸಂಜಿಕೆ, ನಡವಳಿಕೆಯ ರೂಪದಲ್ಲಿ ಇರಬಹುದು ಅಥವ ಅವರ ದೇವರ ರೂಪದಲ್ಲಿ ಇರಬಹುದು. ತನ್ನ ಸಮುದಾಯದ ಅನನ್ಯತೆಯ ಗುಣವನ್ನು ಆ ಸಮುದಾಯ ತನ್ನ ನಿತ್ಯ ಜೀವನದ ನಾನಾ ನಡವಳಿಕೆ ಮತ್ತು ಆಚರಣೆಗಳಲ್ಲಿ ವ್ಯಕ್ತಪಡಿಸುತ್ತದೆ. ಹಾಗೆಯೇ ಬೇರೆ ಜನರು ಅವನ್ನು ತಮ್ಮ ಮಾತುಕತೆ ಅಥವ ಟೀಕೆಯ ಸಂದರ್ಭದಲ್ಲಿ ವ್ಯಕ್ತ ಮಾಡುತ್ತಾರೆ. ಉದಾ: ನೋಡಿ:

ಹಾರ್ವ ದುಡಿಯೋದು ಪಿಂಡಕ್ಕೆ
ಒಕ್ಕಲಿಗ ದುಡಿಯೋದು ದಂಡಕ್ಕೆ
ಹೊಲೆಯ ದುಡಿಯೋದು ಹೆಂಡಕ್ಕೆ

ಪಿಂಡ ಎಂದರೆ ಅನ್ನ. ಬ್ರಾಹ್ಮಣ ಪಿತೃಗಳಿಗೆ ಪಿಂಡ ಹಾಕುವುದನ್ನು ಒಂದು ಶ್ರದ್ಧೆ, ಮಾಡಿಕೊಂಡಿದ್ದಾನೆ. ಆ ಮೂಲಕ ತನ್ನ ಹಿರಿಯ ತಲೆಮಾರಿನ ಅನುಭವವನ್ನು ತನ್ನಲ್ಲಿ ಉಳಿಸಿಕೊಳ್ಳುತ್ತಾನೆ. ಇದರ ಅರ್ಥ ಆತ ತನ್ನ ಪೂರ್ವಿಕರು ಪ್ರತಿಪಾದಿಸಿದ ಧರ್ಮ- ಶಾಸ್ತ್ರಗಳನ್ನು ಮುಂದುವರಿಸಿಕೊಂಡು ಹೋಗುತ್ತಾನೆ. ಅದು ಅವನ ತತ್ವ ಚಿಂತನೆ, ಅವನ ಬದುಕಿಗಿರುವ ಭದ್ರತೆ. ಬ್ರಾಹ್ಮಣ ಬದುಕಿರುವುದೇ ಅನ್ನಕ್ಕೆ. ಆತ ಭೋಜನ ಪ್ರಿಯ. ರಾಜನ ಮನೆಯಲಿ ಭೋಜನವೆಂದರೆ ಯೋಜನವಾದರೂ ಹೋಗುತ್ತಾನೆ. ಅವನು ಅಪಾರ ವ್ರತ, ಪೂಜೆ, ಪುನಸ್ಕಾರ ಮಾಡಿರುವುದು ಪುಕ್ಕಳವಾದ ಅನ್ನಕ್ಕಾಗಿಯೆ ಎಂದು ಜನರು ಮಾತಾಡಿಕೊಳ್ಳುತ್ತಾರೆ. ಒಬ್ಬ ಪ್ರಜ್ಞಾವಂತ ಬ್ರಾಹ್ಮಣನನ್ನು ಈ ಬಗ್ಗೆ ಕೇಳಿದರೆ ನಕ್ಕು ಸುಮ್ಮನಾಗುತ್ತಾನೆ.

ಒಕ್ಕಲಿಗ ದುಡಿಯುವುದು ದಂಡಕ್ಕೆ ಎಂದರೆ ತೆರಿಗೆ ಕಡಲು ಎಂಬುದು ಒಂದು ವಾಖ್ಯಾನ. ತೆರಿಗೆ ಕೊಟ್ಟ ಅವನು ಹಾಳಾದ, ಬೆಳೆ ಬರಲಿ ಬರದಿರಲಿ ಆತ ತೆರಿಗೆ ಮಾತ್ರ ಕೊಡಬೇಕು. ರೈತ ತೆರಿಗೆ ಕೊಟ್ಟು ಬಡವಾದ ಎಂಬ ಮಾತು ಇದೆ. ಮತ್ತೊಂದು ಅರ್ಥ ಸುಗ್ಗಿಯಲ್ಲಿ ಒಕ್ಕಲಿಗನನ್ನು ಕೆಣಕಬ್ಯಾಡ ಹಬ್ಬದಲ್ಲಿ ಹೊಲೆಯನನ್ನು ಕೆಣಕ ಬ್ಯಾಡ ಎಂಬ ಗಾದೆ ಇದೆ. ಈ ಬಗ್ಗೆ ಅನೇಕರು ಅನೇಕ ಅರ್ಥಗಳನ್ನು ಕೊಡುತ್ತಾರೆ. ಸುಗ್ಗಿ ಬಂದಾಗ ಒಕ್ಕಲಿಗ ದಿಮಾಕು ಹೆಚ್ಚು, ಆಗ ಆತ ಇತರರ ಮೇಲೆ ಕೈಮಾಡುವುದು ಹೆಚ್ಚು. ಸಮಯ ಸಿಕ್ಕರೆ ಇತರ ಹೆಣ್ಣುಗಳ ಮೇಲೆ ಕೈ ಮಡಗುವುದೂ ಇತ್ತು, ಆಗ ರಂಪಾಟ ಆಗುವುದು ಸಾಮಾನ್ಯ. ಅಂಥ ಸಂದರ್ಭದಲ್ಲಿ ನ್ಯಾಯ ಸಭೆಗೆ ಆತ ದಂಡ ತೆರಬೇಕಾಗುತ್ತದೆ. ಹೀಗೆ ಅನಗತ್ಯ ಖರ್ಚಿಗೆ ಒಳಗಾಗ ಬೇಕಾಗುವ ಗುಣಗಳು ಒಕ್ಕಲಿಗನಲ್ಲಿ ಇವೆ ಎಂದು ಹೇಳುತ್ತಾರೆ!

ಹೊಲೆಯ ದುಡಿಯೋದು ಹೆಂಡಕ್ಕೆ ಮತ್ತು ಹಬ್ಬದಲ್ಲಿ ಹೊಲೆಯನನ್ನು ಕೆಣಕ ಬೇಡ ಎಂಬ ಗಾದೆಗಳನ್ನು

ಜನರು ಅನೇಕ ರೀತಿ ವ್ಯಾಖ್ಯಾನಿಸಿದ್ದಾರೆ. ಹಬ್ಬದಲ್ಲಿ ಹೊಲೆಯರಿಗೆ ಹಲವು ಮನೆಯ ಎಸರು-ಊಟ ಸಿಗುತ್ತದೆ. ಅದಕ್ಕೆ ಹೊಂದಿಕೆಯಾಗುವಂತೆ ಆತ ಕಳ್ಳು, ಹೆಂಡ, ಸಾರಾಯಿ ತೆಗೆದುಕೊಳ್ಳುತ್ತಾನೆ. ತಾನಲ್ಲದೆ ತನ್ನ ದೆಂಡಿರು ಮಕ್ಕಳಿಗೆಲ್ಲ ಅದರ ಮಜ ತೋರಿಸುತ್ತಾನೆ. ತಿಂಗಳು ಅಥವ ವರ್ಷವೆಲ್ಲ ಕೂಡಿಟ್ಟಿದ್ದನ್ನು ಒಂದು ಹೆಂಡಖಂಡದ ಷೋಕಿಗೆ ಖರ್ಚು ಮಾಡಿ ಬೆಳಗಿನ ಹೊತ್ತಿಗೆ ಬೆತ್ತಲೆಯಾಗುತ್ತಾನೆ ಎಂದು ಹೇಳುತ್ತಾರೆ, ಅವನ ಮೋಜಿನ ಸಂದರ್ಭದಲ್ಲಿ ಬೇರೆಯವರು ಕೆಣಕಿದರೆ ಕಷ್ಟ, ಅವನು ಲಾತು ಹಾಕಬಹುದು ಇಲ್ಲವೆ ಮುಖತುಂಬ ಬೈಗುಳ ಹಾಕಬಹುದು. ಯಾರಿಂದ ಯಾವೊತ್ತೂ ಎದುರು ಮಾತು ಕೇಳುವುದಿಲ್ಲವೋ ಅವನೇ ಮನಬಂದಂತೆ ಬೈದರೆ ಬೈಸಿಕೊಂಡವನ ಸ್ಥಿತಿ ಏನಾಗಬೇಕು; ಅದೂ ಬೈಸಿಕೊಂಡವನು ಮೇಲು ಜಾತಿಯವನಾಗಿದ್ದರೆ!

ಇಲ್ಲೆಲ್ಲ ಏನು ವ್ಯಕ್ತವಾಗುತ್ತದೆ ಎಂದರೆ ಒಂದೊಂದು ಜನ ವರ್ಗ, ಪಂಥ, ಪಂಗಡ ಮತ್ತು ಸಮೂಹಗಳಿಗೆ ಸಾಂಪ್ರದಾಯಿಕವಾಗಿ ಬಂದ ಕೆಲವು ನಿರ್ದಿಷ್ಟ ಸ್ವಭಾವಗಳು ಇರುತ್ತವೆ. ಈ ಸ್ವಭಾವಗಳ ಹಿಂದೆ ಆ ಜನವರ್ಗ ನಂಬಿದ ಮೌಲ್ಯಗಳು ಇರುತ್ತವೆ. ಅವು ಅವರನ್ನು ಪರಿಚಯಿಸುತ್ತವೆ ಮತ್ತು ಸ್ಪಷ್ಟ ಪಡಿಸುತ್ತವೆ. ಯಾವಾಗಾದರೂ ಒಬ್ಬ ಬ್ರಹ್ಮಣ ಯುವಕ ಇತರರಿಗೆ ನಿನ್ನ ಕಳ್ಳು ಬೋಟಿ ತೆಗೆಯುತ್ತೇನೆ ಎಂದು ಹೆದರಿಸಿದ್ದುಂಟಾ? ಅಥವ ಇದೆ ಬ್ರಾಹ್ಮಣ ಸಹಜವೆಂಬಂತೆ ಒಬ್ಬ ಬಡ ದಲಿತನಿಗೆ ಅವನು ಹಿರಿಯ ಎನ್ನುವ ಕಾರಣಕ್ಕೆ ಏನ್ ಸಾರ್ ಚನ್ನಾಗಿದ್ದಿರಾ ಎಂದು ಕೇಳುವುದುಂಟೆ!

ಇದು ಯಾಕೆ? ಈ ಸಮುದಾಯದ ಗುರುತು ಅಥವ ಅನನ್ಯತೆ ಎಂಬುದು ಆ ಸಮುದಾಯ ಹಾಗೂ ಅದರ ಸದಸ್ಯರು ತಮ್ಮ ಸಮುದಾಯದೊಳಗೆ ಮತ್ತು ಹೊರಗಿನ ಸಮುದಾಯಗಳು ಮತ್ತು ಸದಸ್ಯರೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ನಿರ್ಧರಿಸುತ್ತದೆ. ಈ ಅನನ್ಯತೆ ಒಂದು ಪ್ರಬಲ ಮೌಲ್ಯವೂ ಹೌದು ಬದುಕಿನ ನಿರ್ಧಾರವೂ ಹೌದು. ಈ ಅನನ್ಯತೆ ಎಂಬುದು ಬುಡಕಟ್ಟು, ಕೃಷಿಕ, ವೃತ್ತಿ ಹಾಗೂ ಜಾತಿ ಸಮುದಾಯದಲ್ಲಿ ಬೇರೆ ಬೇರೆ ಮೌಲ್ಯ ಮತ್ತು ನಿರ್ಧಾರಗಳಿಂದ ಕೂಡಿರುತ್ತದೆ. ಬಹುತೇಕವಾಗಿ ಬುಡಕಟ್ಟು, ಕೃಷಿ, ಮತ್ತು ವೃತ್ತಿ ಸಮುದಾಯಗಳ ಅನನ್ಯತೆ ಅವುಗಳ ರಕ್ಷಣೆ ಮತ್ತು ಅಗತ್ಯವಾದ ನೆಮ್ಮದಿಯ ಬದುಕನ್ನು ಅವಲಂಬಿಸಿದೆ. ಹೊರಗಿನ ಸಮುದಾಯಗಳನ್ನೂ ತಮ್ಮಂತೆಯೆ ಇರುವ ಸಮುದಾಯಗಳು ಎಂದು ಭಾವಿಸುತ್ತದೆ. ನಿಯಮಾನುಸಾರ ಕೊಳ್ಳು ಕೊಡುಗೆಯನ್ನೂ ಇರಿಸಿಕೊಳ್ಳುತ್ತದೆ. ಈ ಕೊಳ್ಳು ಕೊಡುಗೆಗಳು ನ್ಯಾಯ ಸಮ್ಮತವಾಗಿರುತ್ತದೆಯೆ ಹೊರತು ದೂರೀಕರಿಸುವವುಗಳು ಆಗಿರುವುದಿಲ್ಲ.

ಜಾತಿ ಸಮುದಾಯದ ಅನನ್ಯತೆ ಮೇಲಿನ ಸಮುದಾಯಗಳಂತೆ ಅಲ್ಲ. ಜಾತಿ ಮತ್ತು ಅದರ ಉಪಜಾತಿಗಳೆಂದರೆ ಅವು ಪರಸ್ಪರ ತಾರತಮ್ಯ ಮತ್ತು ಶೋಷಣೆ ಮಾಡುವ ಸಮುದಾಯಗಳಾಗಿವೆ. 2-7-2003ರ ಪತ್ರಿಕೆಯಲ್ಲಿ ಮೈಸೂರು ಜಿಲ್ಲೆಯ ಒಂದು ಹಳ್ಳಿಯ ಜನ ತಮ್ಮ ಮಕ್ಕಳಿಗೆ ಮದ್ಯಾಹ್ನ ಸರ್ಕಾರ ಕೊಡುವ ಬಿಸಿ ಊಟ ಬೇಡ ಎಂದಿದ್ದಾರೆ. ಕಾರಣ ಆ ಅಡಿಗೆಯನ್ನು ಮಾಡುವವರು ದಲಿತರೆಂಬ ಕೆಳ ಜಾತಿಗೆ ಸೇರಿದವರು ಎಂಬುದು. ಇತ್ತೀಚಿನ ಪ್ರಗತಿ ಪರರನ್ನು ಬಿಟ್ಟರೆ ನಮ್ಮ ದೇಶದಲ್ಲಿ ಬ್ರಾಹ್ಮಣರು ಇತರ ಯಾವ ಜಾತಿಯವರ ಮನೆಯಲ್ಲೂ ಊಟ ಮಾಡುವುದಿಲ್ಲ ಮತ್ತು ವೈವಾಹಿಕ ಸಂಬಂಧ ಇಟ್ಟುಕೊಂಡಿಲ್ಲ. ಅದೇ ರೀತಿ ವೈಶ್ಯರು ತಮ್ಮ ಕೆಳಗಿನವರ ಜೊತೆಗೆ, ಲಿಂಗಾಯಿತರು ತಮ್ಮ ಕೆಳಗಿನ ಜಾತಿಯವರ ಜೊತೆಗೆ, ಒಕ್ಕಲಿಗರು ತಮ್ಮ ಕೆಳಗಿನ ಜಾತಿಯವರ ಜೊತೆಗೆ, ಕುರುಬರು, ಅಗಸರು, ಪರಿವಾರದವರು, ನಾಯಕರು.. ತಮ್ಮ ಜಾತಿಯ ಕೆಳಗಿನವರ ಜೊತೆಗೆ ಇಂಥ ಸಂಬಂಧ ಇಟ್ಟು ಕೊಳ್ಳುವುದಿಲ್ಲ. ದಲಿತರ ಕೆಳಗೆ ಈ ದೇಶದಲ್ಲಿ ಯಾವ ಜನ ಸಮುದಾಯವೂ ಇಲ್ಲ. ಅವನು ಎಲ್ಲೂ ಶೋಷಕನ ಸ್ಥಾನದಲ್ಲಿ ಇಲ್ಲ.

ಜಾತಿ ಸಮುದಾಯದ ಅನನ್ಯತೆ ಮೇಲಿನ ಸಮುದಾಯಗಳಂತೆ ಅಲ್ಲ. ಜಾತಿ-ಅದರ ಉಪಜಾತಿಗಳೆಂದರೆ ಅವು ಪರಸ್ಪರ ತಾರತಮ್ಯ-ಶೋಷಣೆ ಮಾಡುವ ಸಮುದಾಯಗಳಾಗಿವೆ. 2-7-2003ರ ಪತ್ರಿಕೆಯಲ್ಲಿ ಮೈಸೂರು ಜಿಲ್ಲೆಯ ಒಂದು ಹಳ್ಳಿಯ ಜನ ತಮ್ಮ ಮಕ್ಕಳಿಗೆ ಮದ್ಯಾಹ್ನ ಸರ್ಕಾರ ಕೊಡುವ ಬಿಸಿ ಊಟ ಬೇಡ ಎಂದಿದ್ದಾರೆ. ಕಾರಣ ಆ ಅಡಿಗೆಯನ್ನು ಮಾಡುವವರು ದಲಿತರೆಂಬ ಕೆಳ ಜಾತಿಗೆ ಸೇರಿದವರು ಎಂಬುದು. ಇತ್ತೀಚಿನ ಪ್ರಗತಿಪರರನ್ನು ಬಿಟ್ಟರೆ ನಮ್ಮ ದೇಶದಲ್ಲಿ ಬ್ರಾಹ್ಮಣರು ಇತರ ಯಾವ ಜಾತಿಯವರ ಮನೆಯಲ್ಲೂ ಊಟ ಮಾಡುವುದಿಲ್ಲ - ವೈವಾಹಿಕ ಸಂಬಂಧ ಇಟ್ಟುಕೊಂಡಿಲ್ಲ. ಅದೇ ರೀತಿ ವೈಶ್ಯರು ತಮ್ಮ ಕೆಳಗಿನವರ ಜೊತೆಗೆ, ಲಿಂಗಾಯಿತರು ತಮ್ಮ ಕೆಳಗಿನ ಜಾತಿಯವರ ಜೊತೆಗೆ, ಒಕ್ಕಲಿಗರು ತಮ್ಮ ಕೆಳಗಿನ ಜಾತಿಯವರ ಜೊತೆಗೆ, ಕುರುಬರು, ಅಗಸರು ಇತ್ಯಾದಿ..

ಜಾತಿ ಸಮುದಾಯ ವ್ಯವಸ್ಥೆಯನ್ನು ನೋಡಿದಾಗ ಇದು ತನ್ನಷ್ಟಕ್ಕೆ ತನ್ನ ಹಿತಕ್ಕೆ ಬದುಕುವ ಸಮುದಾಯ ಅಲ್ಲ. ಪರರನ್ನು ದೂರವಿಟ್ಟು ಪ್ರೀತಿಸಿ, ಶೋಷಿಸಿ ಬದುಕುವ ಸಮುದಾಯ ಎಂಬುದು ಸ್ಪಷ್ಟವಾಗುತ್ತದೆ. ಅಂದರೆ ತಾನು ಮಾತ್ರ ಯೋಗ್ಯ (ಶ್ರೇಷ್ಠ) ಉಳಿದವರು ಕನಿಷ್ಠ ಎಂಬ ಭಾವನೆ, ನಡವಳಿಕೆ ಹಾಗೂ ಮೌಲ್ಯವನ್ನು ರೂಢಿಸಿಕೊಂಡಿದೆ ಎಂದಾಯಿತು.

-ಅಮಲು-

ಆದರೆ ಭಾರತದಲ್ಲಿ ಮೂರು ಬಗೆಯ ಸಮುದಾಯಗಳಿವೆ:

1. ವೃತ್ತಿ ಸಮುದಾಯಗಳು
2. ಧರ್ಮ ಸಮುದಾಯಗಳು
3. ಜಾತಿ ಸಮುದಾಯಗಳು

ಪಕ್ಕಾ ಜಾತಿ ಸಮುದಾಯಗಳೆಂದರೆ ಬ್ರಾಹ್ಮಣ, ವೈಶ್ಯ ಮತ್ತು ಅವುಗಳ ನೇರೆ ಗುಲಾಮತನದಲ್ಲಿರುವ ಉಪಸಮುದಾಯಗಳು.

ವೃತ್ತಿಯೊಳಕ್ಕೆ ಜಾತಿಯನ್ನು ತಂದು ಬೆರೆಸಿಕೊಂಡಿರುವ ಸಮುದಾಯಗಳೆಂದರೆ ಒಕ್ಕಲಿಗ, ಕುರುಬ ತಳ ಜನಾಂಗ, ಕಿರು ಜನಾಂಗ ಮತ್ತು ಪಂಚಮರು-ಈ ಎಲ್ಲರನ್ನು ಸೇರಿಸಿಕೊಂಡು ವೈದಿಕರು ಹಿಂದೂಗಳು ಎಂದು ಕರೆದಿದ್ದಾರೆ. ವೃತ್ತಿಯಲ್ಲಿ ಇವರೆಲ್ಲ ಸ್ವತಂತ್ರರು, ಜಾತಿಯಲ್ಲಿ ಮೇಲು ಜಾತಿಗೆ ಗುಲಾಮರು, ವೃತ್ತಿ ಮೂಲದಿಂದ ನೋಡಿದಾಗ ಇವರು ಸಾಂಸ್ಕೃತಿಕವಾಗಿ ಯೋಗ್ಯರು. ಜಾತಿ ಮೂಲದಿಂದ ನೋಡಿದಾಗ ಶುದ್ಧ ಅಯೋಗ್ಯರು.

ಧರ್ಮ ಸಮುದಾಯಗಳೆಂದು ಕರೆಯವುದು ಅನಂತರ ಭಾರತದಲ್ಲಿ ಪ್ರತ್ಯೇಕ ಧಾರ್ಮಿಕ ಸತ್ವ-ಸಿದ್ಧಾಂತಗಳಿಂದ ಕೂಡಿಕೊಂಡ ಸಮುದಾಯಗಳನ್ನು. ಉದಾ: ಮಹಮದೀಯರು, ಕ್ರಿಶ್ಚಿಯನ್ನರು, ಸಿಖ್ಖರು, ಪಾರ್ಸಿಗಳು, ವೀರಶೈವರು ಇತ್ಯಾದಿ..

ವೃತ್ತಿ ಗುಂಪುಗಳಿಗಿರುವ ಅನನ್ಯತೆ(ಸಾಂಸ್ಕೃತಿಕ ಯೋಗ್ಯತೆ)ಯನ್ನು ಗಮನಿಸಿ. ಅಲ್ಲಿ ತಮ್ಮನೂ ಗೌರವಿಸಿಕೊಂಡು ಇತರರನ್ನೂ ಗೌರವಿಸುವ ಮೌಲ್ಯಗಳಿವೆ. ಸಾಧನೆ ಮಾಡಿದರೆ ಆ ವೃತ್ತಿ ಸಮುದಾಯಗಳು ತಮ್ಮನ್ನು ದೊಡ್ಡದು ಮಾಡಿ ಹೇಳಿಕೊಳ್ಳುತ್ತವೆ. ಅದೇ ರೀತಿ ಇತರ ಸಮುದಾಯ ದೊಡ್ಡ ಸಾಧನೆ ಮಾಡಿದ್ದರೆ ಅದನ್ನೂ ದೊಡ್ಡದಾಗಿ ಹೊಗಳುತ್ತವೆ. ಆದರೆ ಜಾತಿ ಸಮುದಾಯ

ಹಾಗಲ್ಲ. ತಾನೂ ಏನೂ ಸಾಧನೆ ಮಾಡದಿದ್ದರೂ ಮೇಲು ಜಾತಿ ಎನ್ನುವ ಕಾರಣಕ್ಕೆ ತಾನು ಮೇಲು ಎಂದು ಕೊಳ್ಳುತ್ತದೆ. ಯಾಕೆಂದರೆ ಶ್ರೇಷ್ಠತೆ, ಪಾವಿತ್ರ್ಯತೆ, ಅರ್ಹತೆ ಮತ್ತು ಅಧಿಕಾರ ತನಗೆ ದತ್ತವಾಗಿ(ದೇವದತ್ತ)ವಾಗಿ ಬಂದದ್ದೆಂದು ಪ್ರತಿಪಾದಿಸುತ್ತದೆ. ತನಗಿಂತ ಕೆಳಜಾತಿಗಳು ಮಾಡಿದ ಸಾಧನೆ ಎಷ್ಟೇ ದೊಡ್ಡದಿದ್ದರೂ ಕೆಳಜಾತಿ ಮಾಡಿದ ಸಾಧನೆ ಎನ್ನುವ ಕಾರಣಕ್ಕೆ ಅದಕ್ಕೆ ಹೆಚ್ಚಿನ ಕಿಮ್ಮತ್ತು ನೀಡು ವುದಿಲ್ಲ. ಮೇಲು ಜಾತಿಯವರನ್ನು ಕೆಳಜಾತಿಗಳವರು ಬುದ್ಧಿ, ಸ್ವಾಮಿ, ಏನೋರೊ... ಎಂದೆಲ್ಲ ಗೌರವಿಸುವುದು ಕೆಳಜಾತಿಯ ಹಿರಿಯರನ್ನೂ ಮೇಲು ಜಾತಿಯ ಕಿರಿ ಯರು ರಾನ್ನ ಎಂದೊ, ಹೆಸರಿಡಿದು ಏಕವಚನದಲ್ಲಿ ಕರೆ ಯುವುದನ್ನು ಇದಕ್ಕೆ ಸಾಕ್ಷಿಯಾಗಿ ಹೇಳಬಹುದು.

ಬ್ರಿಟಿಷರು ಎರಡುನೂರು ವರ್ಷ ಭಾರತವನ್ನು ಆಳಿ ಬದಲಾವಣೆ ತಂದ ಮೇಲೂ, ಸ್ವಾತಂತ್ರ್ಯ ಬಂದು ಐವತ್ತೈದು ವರ್ಷಗಳು ಕಳೆದ ಮೇಲೂ ಶೂದ್ರ ಮಾಡಿದ ಸಾಧನೆಯನ್ನು ಮಹತ್ವದೆಂದು ಗಣಿಸಲಾಗಿಲ್ಲ. ಶೂದ್ರರ ಸಾಧನೆ ಏನಿದ್ದರೂ ಭೌತಿಕ ಸ್ವರೂಪದ್ದೆಂದು ಪರಿಗಣಿಸ ಲಾಗಿದೆ. ಸಾಂಸ್ಕೃತಿಕವಾಗಿ ಶೂದ್ರ ಏನನ್ನೂ ಸಾಧಿಸಿಲ್ಲ ಮತ್ತು ಸಾಧಿಸಲು ಸಾಧ್ಯವಿಲ್ಲ ಎಂದು ಈ ದೇಶದ ವೈದಿಕರು ದೃಢವಾಗಿ ನಂಬಿದ್ದಾರೆ ಹಾಗೂ ಅದನ್ನು ನಿರ್ಧಾರಾತ್ಮಕ ಮಾತುಗಳಲ್ಲಿ ಹೇಳುತ್ತಾರೆ.

ಇದಕ್ಕೆ ಸಾಕ್ಷಿ ಎಂಬಂತೆ ಶೂದ್ರ ಏನೇ ಹೊಸದನ್ನು ಶೋಧಿಸಿದರೂ, ಎಂಥ ಉನ್ನತ ಹುದ್ದೆಯನ್ನು ಏರಿದರೂ, ಎಂಥ ಮಹಾ ಬಂಗಲೆಯನ್ನು ಕಟ್ಟಿಸಿದರೂ, ಎಂಥ ಸಂತಾನವನ್ನು ಹುಟ್ಟಿಸಿದರೂ ಅದು ನೆಲೆ ನಿಲ್ಲಲು, ಅದನ್ನು ದೃಢೀಕರಿಸಲು ಮತ್ತು ಪವಿತ್ರೀಕರಿಸಲು ಪುರೋಹಿತನನ್ನೇ ಕರೆಸಿ ಆಶೀರ್ವಾದ ಪಡೆಯುತ್ತಿರುವುದನ್ನು ಸಮರ್ಥನೆಯಾಗಿ ಹೇಳುತ್ತಾರೆ. ಇದು ನಿಜ, ಅಪ್ಪಟ ಸತ್ಯ. ಮೀಸಲಾತಿ ಮೂಲಕ ಉದ್ಯೋಗ ಪಡೆದ ದಲಿತನನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ ಮೀಸಲಾತಿಗೆ ಆತನಿಗೆ ಅಂಬೇಡ್ಕರ್ ಬೇಕು.

ಪರೋಕ್ಷವಾಗಿ ಭಾರತದ ಬ್ರಿಟಿಷ್ ಆಡಳಿತ ಶೂದ್ರರಿಗೆ ಜ್ಞಾನ, ಸ್ಥಾನ, ಸವಲತ್ತುಗಳನ್ನು ಕೊಡುವ ಮೂಲಕ ಮೇಲು ಜಾತಿಯ ಜೊತೆಗೆ ಸಮಾನವಾಗಿ ಭಾಗವಹಿಸಬಹುದಾದ ಸಾಧ್ಯತೆಗಳನ್ನು ಸೃಷ್ಟಿ ಮಾಡಿಕೊಟ್ಟರು. ಬ್ರಿಟಿಷರು ಕೊಟ್ಟ ವೈಜ್ಞಾನಿಕ ಜ್ಞಾನವನ್ನು ಶೂದ್ರ ಮುಂಡೇಮಕ್ಕಳು ಆಧುನಿಕವಾಗಿ ದೊರೆತ ಆಧುನಿಕ ವಸ್ತುಗಳು ಎಂದು ತಿಳಿದು ಅನುಭವಿಸ ತೊಡಗಿದರೆ ಹೊರತು, ಅವು ಜಾತ್ಯಾತೀತ ಹಾಗೂ ವರ್ಗಾತೀತ ಅನುವುವ, ಅನುಭೋಗ ಮತ್ತು ಭಾಗವಹಿಸುವಿಕೆಯನ್ನು ಕೊಡತಕ್ಕಂಥವು ಎಂಬುದನ್ನು ಗ್ರಹಿಸಲಿಲ್ಲ. ಆ ವಸ್ತುಗಳನ್ನು ತಮ್ಮ ಕುಬ್ಜ ಜಾತಿ ತತ್ವದೊಳಕ್ಕೆ ಸೇರಿಸಿಕೊಂಡು ತಮ್ಮೊಂದಿಗೆ ಅವುಗಳ ವೈಚಾರಿಕ ವಿಸ್ತೃತತೆಯನ್ನು ಸೀಮಿತ ಮಾಡಿದರು.

ಹೊಸ ಮನೆ ಕಟ್ಟಿಸಿ ಗೃಹ ಪ್ರವೇಶ ಮಾಡಲು ಸತ್ಯನಾರಾಯಣ ಪೂಜೆ ಬೇಕು, ಹಾಗಿದ್ದಲ್ಲಿ ಮೀಸಲಾತಿಯೂ ಪವಿತ್ರವಲ್ಲ, ಮೀಸಲಾತಿಯನ್ನು ಕೊಟ್ಟ ಅಂಬೇಡ್ಕರ್ ಕೂಡ ಪವಿತ್ರವಲ್ಲ. ಒಬ್ಬ ಕೊಳಕು ಪುರೋಹಿತ ಅಂಬೇಡ್ಕರ್‌ಗಿಂತ ಮೇಲೆ ನಿಂತಂತಾಯಿತು. ಇದೇ ಮಾತನ್ನು ನೇರವಾಗಿ ಒಕ್ಕಲಿಗರಿಗೂ ಹೇಳಬೇಕು. ಶ್ರೀ ಕುವೆಂಪು ನಮ್ಮ ಜನಾಂಗದಿಂದ ಮೇಲೆ ಬಂದ ಮಹಾನ್ ವೈಚಾರಿಕ ಎನ್ನುತ್ತಲೆ ಅವರಿಗೆ ಅಪಚಾರ ಮಾಡಬಹುದಾದ ಎಲ್ಲ ಅವೈಚಾರಿಕ ಕೆಲಸಗಳನ್ನೂ ಮಾಡುತ್ತರೆ. ಜಾತಿಯವರಾಗಿ ವೈದಿಕ ಮೌಲ್ಯಗಳನ್ನು ಮೀರಿ ಕಿಂಚಿತ್ ಹೊರಗೆ ಬರುವ ಶಕ್ತಿ ಇವರಿಗಿಲ್ಲ. ಅಧಿಕಾರ, ಮಂತ್ರಿಗಿರಿ, ಮುಖ್ಯಮಂತ್ರಿ ಪದವಿ ಹಾಗೂ ಪ್ರಧಾನ ಮಂತ್ರಿ ಪದವಿಗೇ ಹೋಗಲಿ ವೈದಿಕರಿಗೆ ಗುಲಾಮರಾಗುವುದನ್ನು ಮಾತ್ರ ಮರೆತಿಲ್ಲ. ನಿಜವಾದ ಅರ್ಥದಲ್ಲಿ ಫೇಥ್ ಫುಲ್ ಡಾಗ್ಸ್, ಈಗ ತಮ್ಮದೇ ಮಠ ಮಾನ್ಯ ಮಾಡಿಕೊಂಡಿದ್ದಾರೆ. ಅಲ್ಲಿಯೂ ಸ್ವಾಮಿ ಇದೇ ನಿಷ್ಠೆ ಮುಂದುವರಿಸಿದ್ದಾರೆ. ಈ ದೇಶ ಎಂಥದೇ ಮುಟ್ಟದ ಆಧುನಿಕತೆಯನ್ನು ಪಡೆದರೂ ಅಮೆರಿಕವೇ ಭಾರತದೊಳಕ್ಕೆ ಇನ್‌ಸರ್ಟ್ ಆದರೂ ಈ ದೇಶದ ಜನ ಮಾತ್ರ ಸಾಂಸ್ಕೃತಿಕವಾಗಿ ವೈದಿಕರ ಫೇಥ್‌ಫುಲ್ ಡಾಗ್ಸ್ ಆಗಿಯೆ ಇರುತ್ತಾರೆ ಎಂಬುದರಲ್ಲಿ ಅನುಮಾನ ಬರುವ ಸಂದರ್ಭಗಳು ಕಾಣುತ್ತಿಲ್ಲ.

ಈಗ ಯಾರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕು. ಖಂಡಿತಾ ವೈದಿಕರನ್ನು ಅಲ್ಲ. ಶೂದ್ರರು ಅನಕ್ಷರಸ್ಥರು, ಮೂಢರು ಮುಠ್ಠಾಳರು ಆಗಿದ್ದಾಗ ವೈದಿಕರು ಅವರನ್ನು ಶೋಷಿಸಿದರು ಎಂದರೆ ವೈದಿಕರನ್ನು ನಿಂದಿಸಬಹುದು. ಈಗ ವೈದಿಕರಿಗೆ ಸಿಕ್ಕ ಎಲ್ಲ ಅನುಕೂಲಗಳೂ, ಜ್ಞಾನ ಮಾರ್ಗಗಳೂ ಶೂದ್ರರಿಗೆ ತೆರೆದಿವೆ. ಇಂಥ ಸಂದರ್ಭದಲ್ಲಿ ಶೂದ್ರರು ಈಗಲೂ ನಿಮ್ಮದನ್ನೇ ಚೀಪಿಕೊಂಡಿರುತ್ತವೆ ಎಂದರೆ ಅದಕ್ಕೆ ವೈದಿಕರೇನು ಮಾಡಬೇಕು. ವೈದಿಕರಿಂದ ಅವೈದಿಕರನ್ನು ಬಿಡುಗಡೆ ಮಾಡುವ ಅನೇಕ ಚಳುವಳಿಗಳು ಬಂದಿವೆ.

ಪರೋಕ್ಷವಾಗಿ ಭಾರತದ ಬ್ರಿಟಿಷ್ ಆಡಳಿತ ಶೂದ್ರರಿಗೆ ಜ್ಞಾನ, ಸ್ಥಾನ, ಸವಲತ್ತುಗಳನ್ನು ಕೊಡುವ ಮೂಲಕ ಮೇಲು ಜಾತಿಯ ಜೊತೆಗೆ ಸಮಾನವಾಗಿ ಭಾಗವಹಿಸಬಹುದಾದ ಸಾಧ್ಯತೆಗಳನ್ನು ಸೃಷ್ಟಿ ಮಾಡಿಕೊಟ್ಟರು. ಬ್ರಿಟಿಷರು ಕೊಟ್ಟ ವೈಜ್ಞಾನಿಕ ಜ್ಞಾನವನ್ನು ಶೂದ್ರ ಮುಂಡೇ ಮಕ್ಕಳು ಆಧುನಿಕವಾಗಿ ದೊರೆತ ಆಧುನಿಕ ವಸ್ತುಗಳು ಎಂದು ತಿಳಿದು ಅನುಭವಿಸ ತೊಡಗಿದರೆ ಹೊರತು, ಅವು ಜಾತ್ಯಾತೀತ ಹಾಗೂ ವರ್ಗಾತೀತ ಅನುವುವ, ಅನುಭೋಗ ಮತ್ತು ಭಾಗವಹಿಸುವಿಕೆಯನ್ನು ಕೊಡತಕ್ಕಂಥವು ಎಂಬುದನ್ನು ಗ್ರಹಿಸಲಿಲ್ಲ. ಆ ವಸ್ತುಗಳನ್ನು ತಮ್ಮ ಕುಬ್ಜ ಜಾತಿ ತತ್ವದೊಳಕ್ಕೆ ಸೇರಿಸಿಕೊಂಡು ತಮ್ಮೊಂದಿಗೆ ಅವುಗಳ ವೈಚಾರಿಕ ವಿಸ್ತೃತತೆಯನ್ನು ಸೀಮಿತ ಮಾಡಿದರು.

ಪಾಶ್ಚಾತ್ಯ ವೈಜ್ಞಾನಿಕ ಬೆಳಕಿನಲ್ಲಿ ಅಖಿಲ ಭಾರತ ಮತ್ತು ಕರ್ನಾಟಕ ಮಟ್ಟದಲ್ಲಿ ಅನೇಕ ವೈಚಾರಿಕ ಚಳುವಳಿಗಳು ನಡೆದವು. ಜೋತಿಬಾ ಫುಲೆ, ಪೆರಿಯಾರ್, ನಾರಾಯಣ ಗುರು, ಕುವೆಂಪು ಅಂಥದ ದಕ್ಷಿಣ ಭಾರತದಲ್ಲಿ ಜೋದಿಸಿದ ಕ್ರಿಯೆ ಸಾಮಾನ್ಯವಾದುದೇನೂ ಅಲ್ಲ. ಆದರೆ ಈ ಹೊತ್ತು ಮತೀಯವಾದಿ ಚಳುವಳಿಯ ಮುಂದೆ ಪ್ರಗತಿಪರರು ಎನ್ನುವವರನ್ನು ಪತ್ತೆಹಚ್ಚಬೇಕಾಗಿದೆ. ನಮ್ಮ ಈ ಜನ ಪ್ರಗತಿ ಪರ ಚಳುವಳಿಯ ಕ್ರಿಯೆಯನ್ನೂ ಒಂದು ಮೂರನೆ ದರ್ಜೆ ಸಿನೇಮಾದ ರೀತಿ ನೋಡಿ ಮರೆತು ಬಿಟ್ಟರೇನೊ ಎಂಬ ಅನುಮಾನ ಹುಟ್ಟುತ್ತಿದೆ.

'ಬೆಳಕು ಹರಿಯುವ ವರೆಗೂ ಮಾಡಿದರೂ ಬೇಳೆಕಾಳಿನ ಅದೀಕವಿಲ್ಲ' ಎಂಬ ನುಡಿಯೊಂದು ನಮ್ಮಲ್ಲಿದೆ. 'ಬೇಳೆಕಾಳಿನ' ಪ್ರಸ್ತಾಪ ಬರುವುದರಿಂದ ಈ ನುಡಿ ಮೇಲು ಜಾತಿಯವರ ನಿಷ್ಪ್ರಯೋಜಕ ಶ್ರಮವನ್ನೇ ಹೇಳುತ್ತಿದೆ. ಆತ ತನ್ನ ಸಂತಾನ ಅಪೇಕ್ಷೆಗಾಗಿ ಮಾಡಿದನೊ ಅಥವ ತನ್ನ ತಳಿಯನ್ನು ಶೂದ್ರದಲ್ಲಿ ಸ್ಥಾಪಿಸಲು ಶ್ರಮ ಪಟ್ಟನೋ ತಿಳಿಯದು. ಈ ಹೊತ್ತು ಶೂದ್ರನ ಮಧ್ಯೆ ಜಾಗೃತ ಪ್ರಜ್ಞೆ ಮೂಡಿಸಲು ಹೊರಡುವವನು ಮತ್ತೆ ಇದೇ ನುಡಿಯನ್ನು ಗೊಣಗಿಕೊಳ್ಳುತ್ತ ವಿರಮಿಸಬೇಕಾಗಿದೆ. □

ಸುಗಮ ಸಂಗೀತಕ್ಕೊಂದು ಪಠ್ಯ ಕೃತಿ

ಸುಗಮ ಸಂಗೀತ ಕನ್ನಡ ಕಾವ್ಯದ ಆಧುನಿಕ ಬೆಳವಣಿಗೆ ಕನ್ನಡಕ್ಕೆ ವಿಶಿಷ್ಟವಾದ ಈ ಸಂಗೀತ ಹೊಸ ಗನ್ನಡ ಕಾವ್ಯದ ಒಂದು ಭಾಗವಾಗಿಯೇ ಬೆಳೆದು ಬಂದಿದೆ. ಬಂಗಾಲಿಯಲ್ಲಿ ಬಂದ ರವೀಂದ್ರ ಸಂಗೀತ-ನಜುರುಲಿ ಸಂಗೀತ, ಉರ್ದುವಿನ ಗಝಲ್ ಸಂಗೀತಕ್ಕಿಂತ ವಿಶಾಲ ಹರವು, ವಸ್ತು ವೈವಿಧ್ಯ ಭಾವ ನಾವೀನ್ಯತೆಯಿರುವ ಕನ್ನಡದ ಈ ಕಾವ್ಯ ಸಂಗೀತ ಭಾರತೀಯ ಭಾಷೆಗಳಲ್ಲಿಯೆ ಅಪರೂಪವಾದದ್ದು.

ಆಧುನಿಕ ಕನ್ನಡ ಕಾವ್ಯ ಕಣ್ತೊಡೆಯುವುದರೊಂದಿಗೆ ಸೀತಾಮುಲ್ಕಿ, ಜಯವಂತಿದೇವಿ ಹಿರೇಬೆಟ್ಟು, ಬಾಳಪ್ಪ ಹುಕ್ಕೇರಿ, ಪಿ.ಕಾಳಿಂಗರಾಯ, ಮೈಸೂರು ಅನಂತಸ್ವಾಮಿ ಮೊದಲಾದ ಗಾಯಕರು ಈ ಕವಿತೆಗಳನ್ನು ಹಾಡಿ ಜನಪ್ರಿಯಗೊಳಿಸಿದರು.

ಈ ಹಾಡುಗಾರಿಕೆಯೊಂದಿಗೆ ಬಿ.ಎಂ.ಶ್ರೀ, ಪಂಜೆ ಮುಂಗೇಶರಾಯ, ಗೋವಿಂದಪೈ ಬೇಂದ್ರೆ, ಕಾವ್ಯಾನಂದ, ಕುವೆಂಪು, ಕೆ.ಎಸ್.ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗ ಮೊದಲಾದ ಕವಿಗಳ ರಚನೆಗಳು ಕನ್ನಡಿಗರ ಮನೆ-ಮನಗಳನ್ನು ಮುಟ್ಟಿದವು.

ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕಾವ್ಯ ಸಾಧಿಸಿದ ಪರಿಣಾಮ ಅದ್ಭುತವಾದುದು. ಚಾರಿತ್ರಿಕ ಸಂದರ್ಭಗಳನ್ನು ದಾಖಲಿಸುತ್ತಲೆ ಒಂದು ಅಪೂರ್ವ ಯುಗವಾಗಿ ಹೊರಹೊಮ್ಮಿದುದು ಕಾವ್ಯದ ಹಿರಿಮೆಯ ಆಗಿದೆ. ಗೇಯತೆ, ತನ್ಮಯತೆ, ಆರ್ಥಸ್ಫುಟತೆಯ ಕಾರಣಗಳಿಂದಾಗಿ ಇಂದಿನವರೆಗೂ ಅದು ಕ್ರಮಿಸಿದ ಹಾದಿ ಅನೂಹ್ಯವಾದುದು.

ಸುಗಮ ಸಂಗೀತಕ್ಕೂ ಭಾವಗೀತೆಗೂ ಅನ್ಯೋನ್ಯ ಸಂಬಂಧವಿದೆ. 'ಸಂಗೀತ' ಎಂದರೆ ಹಾಡುವ, ಕೇಳುವ ಒಂದು ಪರಂಪರೆ ಮಾತ್ರ ಎಂದು ನಂಬಿದವರಿಗೆ ಅದೊಂದು ಅರ್ಥಪೂರ್ಣ ಸಂವಾದವನ್ನು ಏರ್ಪಡಿಸುವ ಮಾಧ್ಯಮ ಎಂಬುದನ್ನು ಸುಗಮ ಸಂಗೀತ ಮನವರಿಕೆ ಮಾಡಿಕೊಟ್ಟಿದೆ.

'ಭಾವ'ದ ಅರ್ತಪೂರ್ಣತೆಯನ್ನು ಕೇಳುಗನಿಗೆ ತಲುಪಿಸುವ ಕಾರಣದಿಂದಲೇ ಇದು ವಿಶೇಷ ಮನ್ನಣೆಗೆ ಪಾತ್ರವಾಗಿದೆ. ಸುಗಮ ಸಂಗೀತ ಭಾವ, ನಾದದ ನಿಷ್ಠೆಯನ್ನು ಪ್ರಕಟಿಸುವ ಸಶಕ್ತ ಮಾಧ್ಯಮವಾಯಿತು.

ಆಧುನಿಕ ಕನ್ನಡ ಕಾವ್ಯದ ವೈವಿಧ್ಯಮಯವಾದ ವಸ್ತು ವಿಷಯವನ್ನು ಕೇಳುಗನಿಗೆ ತನ್ಮಯತೆಯಿಂದ ಮುಟ್ಟಿಸುವ ಕೆಲಸವನ್ನು ಶಕ್ತಿಯುತವಾಗಿ ಮಾಡಿದ ಗಂಭೀರ ಪ್ರಯತ್ನ ಎನ್ನಬೇಕು. ಕನ್ನಡ ಕಾವ್ಯವು ಆರಂಭದಿಂದಲೂ ಸಂಗೀತದೊಂದಿಗೆ ತನ್ನ ಸಾಹಚರ್ಯವನ್ನು ಉಳಿಸಿಕೊಂಡು ಬಂದಿದೆ.

ನವ್ಯ ಕಾವ್ಯದ ಹೊತ್ತಿಗೆ ಸುದೀರ್ಘ ಇತಿಹಾಸವು ಮುರಿದು ಕಾವ್ಯ ಬೇರೆ, ಸಂಗೀತ ಬೇರೆ ಎಂಬ ಹಠ ಮಾರಿ ವಾದವೊಂದು ತಲೆಯೆತ್ತಿತು. ನವ್ಯೋತ್ತರ ಭಾವ ಗೀತೆಗಳು ಮತ್ತೆ ಈ ಪರಂಪರೆಯನ್ನು ಮುಂದುವರಿಸಿದವು.

ಸುಗಮ ಸಂಗೀತ ಪದ್ಧತಿ, ಪರಂಪರೆ, ಗಾಯನದ ಸೃಜನ ಶೀಲತೆಯ ಬಗ್ಗೆ ಹದಿನಾರು ಪ್ರಶ್ನೆಗಳನ್ನಿರಿಸಿಕೊಂಡು ಸಾಹಿತಿ, ಕಲಾವಿದರ ಸಂದರ್ಶನ ಮಾಡಿದ್ದಾರೆ. ಇದು ಈ ಕ್ಷೇತ್ರದ ಬಗ್ಗೆ ಚರ್ಚಿಸಲು ಸಹಕಾರಿಯಾಗಿದೆ. ಸುಗಮ ಸಂಗೀತ ಕಲಾವಿದರ ವಿಳಾಸಗಳು, ಕಲಾವಿದರ ಪ್ರಸಿದ್ಧ ನೂರ ಎಪ್ಪತ್ತಕ್ಕೂ ಹೆಚ್ಚು ಧ್ವನಿ ಸುರುಳಿ, ಸುಗಮ ಸಂಗೀತ ಇಲಾಖೆ ಮತ್ತು ಸಂಸ್ಥೆಗಳ ವಿವರವಾದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಸುಗಮ ಸಂಗೀತ ಕ್ಷೇತ್ರ ಪ್ರವೇಶ ಮಾಡುವವರಿಗೆ ಇದು ಹೆಚ್ಚು ಪ್ರಯೋಜನಕಾರಿಯಾಗಿದೆ.

ಪುಸ್ತಕ ಅವಲೋಕನ

ಲೇ : ಡಾ. ಸರ್ಫ್ರಾಜ್ ಚಂದ್ರಗುತ್ತಿ
ಬೆಲೆ : 250/-
ಪ್ರಕಾಶನ : ಸಹನಾ ಪ್ರಕಾಶನ
"ಅವಿನಾಶ್", 22, 2ನೇ ಮುಖ್ಯರಸ್ತೆ,
ನರಸಿಂಹರಾಜ ಕಾಲೋನಿ,
ಬೆಂಗಳೂರು-560 019

ಡಾ. ಎ. ರಘುರಾಂ

ಈಗಾಗಲೇ ಹಲವು ಕೃತಿಗಳ ಮೂಲಕ ಕನ್ನಡದ ಓದುಗರಿಗೆ ಪರಿಚಯವಾಗುತ್ತಿರುವ ಡಾ.ಸರ್ಫ್ರಾಜ್ ಚಂದ್ರಗುತ್ತಿಯವರ ಮಹತ್ವಾಕಾಂಕ್ಷೆಯ ಫಲವಾಗಿ ಈ ಕೃತಿ ಮೂಡಿಬಂದಿದೆ. ಇದು ಕನ್ನಡ ಸಾಹಿತ್ಯ ಮತ್ತು ಸಂಗೀತದ ಚರಿತ್ರೆಯಲ್ಲಿಯೆ ಐತಿಹಾಸಿಕ ಕೃತಿ. ಇದರಲ್ಲಿ ಎಂಟು ಅಧ್ಯಾಯಗಳಿವೆ.

ಅಧ್ಯಯನದ ವ್ಯಾಪ್ತಿ ಮತ್ತು ಮಹತ್ವ, ಸಂಗೀತ ಮತ್ತು ಕಾವ್ಯದ ಸಂಬಂದ, ಸಂಗೀತದ ವಿಭಿನ್ನ ಮಾದರಿಗಳು ಮತ್ತು ಸಾಹಿತ್ಯ, ಆಧುನಿಕ ಕನ್ನಡ ಕಾವ್ಯ ಮತ್ತು ಸುಗಮ ಸಂಗೀತ, ಸುಗಮ ಸಂಗೀತಕ್ಕೆ ಆಧುನಿಕ ಕನ್ನಡ ಕವಿಗಳ ಕೊಡುಗೆ, ಸುಗಮ ಸಂಗೀತದಲ್ಲಿ ಕವಿತೆಯ ವಸ್ತು, ಭಾಷೆ ಮತ್ತು ಶೈಲಿ-ಪ್ರಾತಿನಿಧಿಕ ನೆಲೆಗಳು ಎಂದು ಅಧ್ಯಾಯಗಳನ್ನು ವರ್ಗೀಕರಿಸಿಕೊಂಡಿದ್ದಾರೆ.

ಅನುಬಂಧದಲ್ಲಿ ಸುಗಮ ಸಂಗೀತ ಕಲಾವಿದರ ವಿಳಾಸ, ಧ್ವನಿ ಸುರುಳಿಗಳು, ಸುಗಮ ಸಂಗೀತ ಸಂಸ್ಥೆಗಳ ವಿವರಗಳಿವೆ. ಕನ್ನಡ ಕಾವ್ಯ ಮತ್ತು ಹಾಡುಗಾರಿಕೆಯ ಸಂಬಂದ, ಸುಗಮ ಸಂಗೀತವನ್ನು ಚಿತ್ರ ಸಂಗೀತ, ಜನಪದ ಸಂಗೀತ, ರಂಗ ಸಂಗೀತದೊಂದಿಗೆ ಇಟ್ಟು ನೋಡುವ ಕ್ರಮ, ಗೇಯರೂಪದ ಆಧುನಿಕ ಕನ್ನಡ ಕವಿತೆಯ ಸ್ವರೂಪವನ್ನು ಗುರುತಿಸುವುದು, ಸಂವಹನದ ಒಂದು ವಿಧಾನವಾಗಿ ಭಾವಗೀತೆಯ ಹಾಡುಗಾರಿಕೆಯನ್ನು ಪರಿಭಾವಿಸುವುದು- ಹೀಗೆ ವಿಸ್ತೃತ ಅಧ್ಯಯನವನ್ನು ಲೇಖಕರು ಮಾಡಿದ್ದಾರೆ.

ಸುಗಮ ಸಂಗೀತದ ಭಿನ್ನ ಶೈಲಿಗಳನ್ನು ಸಾಹಿತ್ಯದ ನೆಲೆಯಲ್ಲಿ ಚರ್ಚಿಸುವ ಆರನೆಯ ಅಧ್ಯಾಯ ಅತ್ಯಂತ ಮಹತ್ವಪೂರ್ಣವಾದದ್ದು. ಹೆಚ್.ಕೆ.ನಾರಾಯಣ-ಪದ್ಮಚರಣರ ರಾಗನಿಷ್ಠತೆ, ಪಿ.ಕಾಳಿಂಗರಾಯ-ಮೈಸೂರು ಅನಂತಸ್ವಾಮಿಯವರ ಸಂಗೀತ ಮತ್ತು ಸಾಹಿತ್ಯನಿಷ್ಠೆ ಹಾಗೂ ಸಿ.ಅಶ್ವಥ್‌ರ ಸಾಹಿತ್ಯನಿಷ್ಠ ಸಂಗೀತದ ಮೂರು ಶೈಲಿಗಳನ್ನು ವಿಸ್ತೃತವಾಗಿ ಹಾಗೂ ಸೋದಾಹರಣವಾಗಿ ಚರ್ಚಿಸಿದ್ದಾರೆ.

"ರಾಗ ಸಂಯೋಜನೆಯ ಸಂದರ್ಭದಲ್ಲಿ ಎರಡು ಮುಖ್ಯ ಪ್ರಶ್ನೆಗಳಿವೆ. ರಾಗ ಸಂಯೋಜನೆಗೊಂಡ ಸಾಹಿತ್ಯ ಶಾಸ್ತ್ರೀಯ ಸಂಗೀತದ ಭಾಗವಾಗಬಹುದೇ ವಿನಃ ಅದಕ್ಕೆ ಸ್ವತಂತ್ರ ಅಸ್ತಿತ್ವವಿರುವುದು ಕಷ್ಟ ಸಾಧ್ಯ.

ಸಿದ್ಧರಾಗವೊಂದರ ಚೌಕಟ್ಟಿಗೆ ಸಾಹಿತ್ಯವನ್ನು ಹೊಂದಿಸುವ ಪ್ರಯತ್ನ ಸಾಹಿತ್ಯನಿಷ್ಠೆಯ ಹಿನ್ನೆಲೆಯಲ್ಲಿ ಎಷ್ಟು ಸರಿ? ಇಂತಹ ರಾಗ ಸಂಯೋಜನೆಯ ಪ್ರಯತ್ನ ಕವಿತೆಯನ್ನು ರಾಗವೊಂದರಿಂದ ನಿರ್ಬಂಧಿಸಿದಂತಾಗುವುದಿಲ್ಲವೆ?" ಈ ಮಾತಿಗೆ ಅಪವಾದಗಳಿದ್ದರೂ ಅವುಗಳ ಪ್ರಮಾಣ ತೀರ ಕಡಿಮೆ ಎನ್ನುತ್ತಾರೆ.

ರಾಗವೊಂದರಿಂದ ಕವಿತೆಯನ್ನು ನಿರ್ಬಂಧಿಸಿದರೆ ಆಗುವ ಅನಾಹುತಗಳ ಬಗ್ಗೆ ಅನೇಕ ಉದಾಹರಣೆಗಳನ್ನು ನೀಡಿ ಸ್ವರಸಂಯೋಜನೆ ಇದಕ್ಕೆ ಉತ್ತರ ಎಂದು ಹೇಳುತ್ತಾರೆ. ರಾಗ ಸಂಯೋಜನೆ ಕವಿತೆಗೆ ನ್ಯಾಯ ಒದಗಿಸಲಾರದು ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸಂಗೀತ ಸಾಹಿತ್ಯದ ಅನುವರ್ತಿಯಾಬೇಕೇ ಹೊರತು, ಸಾಹಿತ್ಯ

ಸಂಗೀತದ ಅನುವರ್ತಿಯಾಗಬಾರದು. ಗಾಯನದಲ್ಲಿ ಅರ್ಥ, ಭಾವ, ಧ್ವನಿಗಳನ್ನು ಉದ್ದೀಪಿಸುವ ಕ್ರಮ ಅನನ್ಯವಾದುದು.

ಸಿದ್ಧರಾಗವನ್ನು ಕವಿತೆಗೆ ಅನ್ವಯಿಸಿ ಹಾಡುವ ಕ್ರಮವನ್ನು ತಿರಸ್ಕರಿಸಿ ಕವಿತೆಯೊಳಗೆ ಹುದುಗಿರುವ ಕಾವ್ಯಾರ್ಥವನ್ನು ನಾದಾರ್ಥದೊಂದಿಗೆ ಹೊರಗೆಳೆದು ತರುವ "ಸ್ವರ ಸಂಯೋಜನೆ" ಸಿದ್ಧಾಂತದ ಮೇಲೆ ಲೇಖಕರು ಸುಗಮ ಸಂಗೀತದ ಥಿಯರಿಯನ್ನು ಬೆಳೆಸಿದ್ದಾರೆ.

ಸುಗಮ ಸಂಗೀತಕ್ಕೆ ತನ್ನದೇ ಆದ ಅಭಿವ್ಯಕ್ತಿಯ ಶೈಲಿಯಿದೆ. ಇದೊಂದು ಸಂಪೂರ್ಣ ಸಾಹಿತ್ಯನಿಷ್ಠವಾದ ಸಂಗೀತದ ಮಾದರಿ ಎಂಬ ಪ್ರಮೇಯವನ್ನು ನಿರೂಪಿಸುವ ಪ್ರಯತ್ನ ಈ ಕ್ಷೇತ್ರದಲ್ಲಿಯೆ ಹೊಸದು. ತಮ್ಮ ವಿಚಾರಗಳನ್ನು ಪ್ರತಿಪಾದಿಸುವಾಗ ಕನ್ನಡ ಹಾಗೂ ಕನ್ನಡೇತರ ಉದಾಹರಣೆಗಳನ್ನು ಲೇಖಕರು ನೀಡಿದ್ದಾರೆ.

ಕವಿ, ಕಲಾವಿದರು, ವಿಮರ್ಶಕರ ಹಲವಾರು ಮಾತುಗಳನ್ನು ತಮ್ಮ ವಾದ ಸಮರ್ಥನೆಗೆ ಬಳಸಿಕೊಂಡಿದ್ದಾರೆ. ಕಾವ್ಯಗಾಯನದ ಪರ-ವಿರೋಧಗಳ ಚರ್ಚೆಯನ್ನು ನವ್ಯ ಕಾವ್ಯದ ಹಿನ್ನೆಲೆಯಲ್ಲಿ ವಿಸ್ತೃತವಾಗಿ ತೆರೆದಿಟ್ಟಿದ್ದಾರೆ.

ವಿದ್ಯಾರ್ಥಿ ದಿನಗಳಿಂದಲೂ ಕನ್ನಡ ಭಾವಗೀತೆಗಳನ್ನು ಹಾಡಿಕೊಂಡು ಬಂದಿರುವ ಸರ್ಫ್ರಾಜ್ ಸುಗಮ ಸಂಗೀತದ ನೆಲೆ-ಬೆಲೆಗಳನ್ನು ಚೆನ್ನಾಗಿ ಅರಿತುಕೊಂಡಿರುವುದರಿಂದ ಅವರ ಅಧ್ಯಯನವು ಒಂದು ವಿಶಿಷ್ಟವಾದ ತಾತ್ವಿಕ ಚೌಕಟ್ಟನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ.

ಸುಗಮ ಸಂಗೀತ ಪದ್ಧತಿ, ಪರಂಪರೆ, ಗಾಯನದ ಸೃಜನ ಶೀಲತೆಯ ಬಗ್ಗೆ ಹದಿನಾರು ಪ್ರಶ್ನೆಗಳನ್ನಿರಿಸಿಕೊಂಡು ಸಾಹಿತಿ, ಕಲಾವಿದರ ಸಂದರ್ಶನ ಮಾಡಿದ್ದಾರೆ. ಇದು ಈ ಕ್ಷೇತ್ರದ ಬಗ್ಗೆ ಚರ್ಚಿಸಲು ಸಹಕಾರಿಯಾಗಿದೆ.

ಸುಗಮ ಸಂಗೀತ ಕಲಾವಿದರ ವಿಳಾಸಗಳು, ಕಲಾವಿದರ ಪ್ರಸಿದ್ಧ ನೂರ ಎಪ್ಪತ್ತಕ್ಕೂ ಹೆಚ್ಚು ಧ್ವನಿ ಸುರುಳಿ, ಸುಗಮ ಸಂಗೀತ ಇಲಾಖೆ ಮತ್ತು ಸಂಸ್ಥೆಗಳ ವಿವರವಾದ ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಸುಗಮ ಸಂಗೀತ ಕ್ಷೇತ್ರ ಪ್ರವೇಶ ಮಾಡುವವರಿಗೆ ಇದು ಹೆಚ್ಚು ಪ್ರಯೋಜನಕಾರಿಯಾಗಿದೆ.

ಒಟ್ಟಾರೆಯಾಗಿ ಸುಗಮ ಸಂಗೀತಕ್ಕೆ ಶಾಸ್ತ್ರ ಗ್ರಂಥವಾಗಿ ಈ ಕೃತಿ ಮೂಡಿಬಂದಿದೆ. ಸರಳ ಉದಾಹರಣೆಗಳ ಮೂಲಕ ಲೇಖಕರು ತಮ್ಮ ವಾದವನ್ನು ಮಂಡಿಸಿರುವುದರಿಂದ ಸುಗಮ ಸಂಗೀತದ ಕುರಿತಾಗಿ ಆಸಕ್ತಿಯಿರುವ ಯಾರೇ ಆಗಲಿ ಕೃತಿಯನ್ನು ಓದಿ ಅರ್ಥೈಸಿಕೊಳ್ಳಬಹುದು.

ಸುಗಮ ಸಂಗೀತ ಒಂದರ್ಥದಲ್ಲಿ ಕನ್ನಡ ಕಾವ್ಯದ ಒಂದು ವಿಮರ್ಶಾ ಮಾದರಿ ಹೌದು. ಆದರೆ ಅದು ಸಂಗೀತದ ಮೂಲಕ ಮಾತನಾಡುತ್ತದೆ ಎನ್ನುತ್ತಾರೆ ಲೇಖಕರು.

ಸುಗಮ ಸಂಗೀತದ ಬಗ್ಗೆ ಸಮಗ್ರ ಮಾಹಿತಿ ಒದಗಿಸುವಲ್ಲಿ ಈ ಕೃತಿ ಸಫಲವಾಗಿದೆ. ಕನ್ನಡ ಕಾವ್ಯಾಸಕ್ತರು, ಸುಗಮ ಸಂಗೀತ ಕಲಾವಿದರು ಈ ಕೃತಿಯನ್ನು ಅಗತ್ಯವಾಗಿ ಓದಬೇಕಾಗಿದೆ. ಕಾವ್ಯ ಗಾಯನವನ್ನು ವಿರೋಧಿಸುವವರೂ ಕೂಡ ಒಮ್ಮೆ ಈ ಕೃತಿಯನ್ನು ಓದಬಹುದು.

ಈ ಕ್ಷೇತ್ರದಲ್ಲಿ ಗಂಭೀರ ಅಧ್ಯಯನ ಮಾಡಿ ಗ್ರಂಥ ನೀಡಿದ ಲೇಖಕ ಸರ್ಫ್ರಾಜ್ ಚಂದ್ರಗುತ್ತಿ ಹಾಗೂ ಕೃತಿಯನ್ನು ಪ್ರಕಟಿಸಿದ ಸಹನಾ ಪ್ರಕಾಶನದ ಮಾಲೀಕರು ಈ ಇಬ್ಬರೂ ಅಭಿನಂದನಾರ್ಹರು. □

ನಿನಗೊಂದು ಬೀಗದ ಕೈ ಕೊಟ್ಟಿದ್ದೆ



ನಿನಗೊಂದು ಬೀಗದ ಕೈಕೊಟ್ಟಿದ್ದೆ
ಇದೆಯಾ,
ಆಸ್ಪತ್ರೆಗೆ ಹೊರಡುತ್ತ
ಆಪರೇಷನ್ ಥಿಯೇಟರ್‌ಗೆ ಹೋದರು,
ನಾನು ಹೊರಟು ಹೋದರು ಬೀಗದ ಕೈ ಹೋಗಬಾರದು

ಬೀಗದ ಕೈ ಇಲ್ಲದಿದ್ದರೆ
ನಿನ್ನನ್ನು ನೀನು ತೆರೆದುಕೊಳ್ಳಲಾಗದು
ನಿನ್ನನ್ನು ನೀನು ತೆರೆದುಕೊಳ್ಳಲಾಗದಿದ್ದರೆ
ನಿನ್ನನ್ನು ನೀನು ಮುಚ್ಚಿಕೊಳ್ಳಲಾಗದು

'ಮನುಷ್ಯ ಒಂದು ಕಣ್ಣು'
ಮುಚ್ಚಬೇಕು, ತೆರೆಯಬೇಕು.

ನಿನಗೊಂದು ಬೀಗದ ಕೈಕೊಟ್ಟಿದ್ದೆ
ಇದೆಯಾ, ಕಳೆದುಕೊಂಡೆಯಾ?..

○ ತೆಲುಗು ಮೂಲ: ಡಾ. ಕೆ. ಸಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ, ಮಾಲೂರು

ಗಾಂಧಿಯ ರ್‍ಯಾಡಿಕಲಿಸಂ: ರ್‍ಯಾಡಿಕಲಿಸಂನ ಗಾಂಧಿ!



ಕಾಲಮಾನ-೧

ಡಾ. ಮುಜಾಫ್ಫರ್ ಅಸ್ಸಾದಿ

ಹಿಂದ್ ಸ್ವರಾಜ್ ಅನ್ನು "ರಾಷ್ಟ್ರಿಯ ಹೋರಾಟದ ಪ್ರಣಾಳಿಕೆ", "ಬೈಬಲ್", "ಗಾಂಧಿ ಚಿಂತನೆಯ ಹೆಮ್ಮರ" "ಪಾಶ್ಚಿಮಾತ್ಯ ಆಧುನಿಕತೆಯ ವಿಮರ್ಶೆ" ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತದೆ. ಖ್ಯಾತ ಗಾಂಧಿ ಚಿಂತಕ ಆಂಟನಿ ಪರೇಲ್ ಪ್ರಕಾರ ಹಿಂದ್ ಸ್ವರಾಜ್ ಗಾಂಧಿಯವರ ಮೂಲಭೂತ ಹಾಗೂ ಮಹತ್ತರವಾದ ಕೃತಿ. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಇದೊಂದು ಮಹತ್ವದ ಕೃತಿಯಾಯಿತ್ತಲ್ಲದೆ, ಹೋರಾಟಕ್ಕೆ ಹೊಸ ನೆಲೆಯನ್ನು, ಆಯಾಮವನ್ನು ಹಾಗೂ ದೃಷ್ಟಿಕೋನವನ್ನು ನೀಡಿತ್ತು. ಇದು ಸಾಧ್ಯವಾದದ್ದು ಹಿಂದ್ ಸ್ವರಾಜ್‌ನ ಇಂಗ್ಲೀಷ್ ಅನುವಾದದಿಂದ. ಅದು ಗುಜರಾತಿ ಭಾಷೆಯಲ್ಲಿರುತ್ತಿದ್ದರೆ ಹಿಂದ್ ಸ್ವರಾಜ್ ಒಂದು ಜನಪ್ರಿಯ ಕೃತಿಯಾಗುತ್ತಿರಲಿಲ್ಲ, ರಾಷ್ಟ್ರೀಯ ಹೋರಾಟಕ್ಕೆ ಹೊಸ ಆಯಾಮ ನೀಡುತ್ತಿರಲಿಲ್ಲ.

ಗಾಂಧಿ ಬರೆದ "ಹಿಂದ್ ಸ್ವರಾಜ್"ನ ಶತಮಾನೋತ್ಸವದ ಸಂದರ್ಭದಲ್ಲಿ ಒಂದು ಪ್ರಶ್ನೆಯೊಂದಿಗೆ ಲೇಖನವನ್ನು ಆರಂಭಿಸುತ್ತೇನೆ. ಹಿಂದ್ ಸ್ವರಾಜ್ ಬರೆದ ಇಸವಿ ಯಾವುದು? 1908? 1909? ಅಥವಾ 1910? ವಾಸ್ತವವಾಗಿ 1909 ಸರಿಯಾದ ವರುಷ. 1909 ರಲ್ಲಿ ಹಿಂದ್ ಸ್ವರಾಜ್ ಎರಡು ಕಂತುಗಳಲ್ಲಿ ಗಾಂಧಿಯೇ ಪ್ರಕಟಿಸುತ್ತಿದ್ದ 'ಇಂಡಿಯನ್ ಒಪಿನಿಯನ್' ಎಂಬ ಗುಜರಾತಿ ಪತ್ರಿಕೆಯಲ್ಲಿ ದಕ್ಷಿಣ ಆಫ್ರಿಕಾದಿಂದ ಪ್ರಕಟವಾಯಿತು. ಇದನ್ನು ಗಾಂಧಿಯವರು ನವೆಂಬರ್ 13 ಹಾಗೂ 23 1909ರ ಸುಮಾರಿಗೆ ಹತ್ತು ದಿನದೊಳಗಾಗಿ ಲಂಡನ್ನಿನಿಂದ ಆಫ್ರೀಕಾಗೆ ಹಡಗು "ಕಿಲ್ಡೋನರ್ ಕ್ಯಾಸಲ್"ನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಬರೆದರು. ಆದ ಕಾರಣ "ಹಿಂದ್ ಸ್ವರಾಜ್" ಅನ್ನು "ಸಮುದ್ರದ ಮೇಲಿನ ಸುವಾರ್ತೆ"ಗಳೆಂದೂ ಕರೆಯುವ ವಾಡಿಕೆ ಇದೆ. ಗಾಂಧಿ ಹಿಂದ್ ಸ್ವರಾಜ್ ಅನ್ನು ಹತ್ತು ದಿನಗಳಲ್ಲಿ ಬರೆದು ಮುಗಿಸಿದ್ದು ಒಂದು ದಾಖಲೆ ಎನ್ನಬಹುದು. ಹಿಂದ್ ಸ್ವರಾಜ್ ಅನ್ನು ಅವರು ಬರೆಯಲು ಉಪಯೋಗಿಸಿದ ಭಾಷೆ: ಗುಜರಾತಿ. ಇದನ್ನು ಬರೆದಾಗ ಗಾಂಧಿಗೆ 40 ವರುಷ. ಈ ಯೌವನ ಕಾಲದಲ್ಲಿ ಬರೆದ ಪುಸ್ತಕ ರಾಜಕೀಯ ಪ್ರಬುದ್ಧತೆಯನ್ನು ಪ್ರತಿಬಿಂಬಿಸುತ್ತದೆಯೆ? ಎಂಬ ಗುಮಾನಿ ಬರುವುದು ಸಹಜ.

1910 ರಲ್ಲಿ ಪುಸ್ತಕ ರೂಪದಲ್ಲಿ ಹಿಂದ್ ಸ್ವರಾಜ್ ಪ್ರಕಟವಾದಂತೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಪುಸ್ತಕವನ್ನು ನಿಷೇದಿಸಿತ್ತು. ಇಲ್ಲೊಂದು ಸ್ವಾರಸ್ಯಕರವಾದ ಅಂಶವಿದೆ. ಗಾಂಧಿಗೆ ವಾಸ್ತವವಾಗಿ ಬ್ರಿಟಿಷರು ಯಾವ ಮೂಲ ಕಾರಣಕ್ಕಾಗಿ ಪುಸ್ತಕವನ್ನು ನಿಷೇಧಿಸಿದ್ದರು ಎಂದು ತಿಳಿದಿರಲಿಲ್ಲ. ಅವರ ಪ್ರಕಾರ ಬ್ರಿಟಿಷರಿಗೆ ಗುಜರಾತಿ ತಿಳಿಯದಿದ್ದ ಕಾರಣ ಅವರು ನಿಷೇಧಿಸಿರಬಹುದು. ವಾಸ್ತವವಾಗಿ ಇದು ತಪ್ಪು ಕಲ್ಪನೆಯಾಗಿತ್ತು. ಹಿಂದ್ ಸ್ವರಾಜ್‌ನಲ್ಲಿದ್ದ ರ್‍ಯಾಡಿಕಲ್ ಚಿಂತನೆ ಅದಕ್ಕೆ ಮೂಲ ಕಾರಣವಾಗಿದ್ದನ್ನು ಇಲ್ಲಿ ನೆನೆಪಿಸಬೇಕು. ತನ್ನ ಅಭಿಪ್ರಾಯಾ ಹಾಗೂ ಚಿಂತನೆಗಳನ್ನು ಬ್ರಟಿಷರಿಗೆ ಅಥವಾ ವಸಾಹತುಶಾಹಿಗೆ ತಲುಪಿಸಲು ಗಾಂಧಿ ಸ್ವತಹ ಪುಸ್ತಕವನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದನ್ನು ಇಲ್ಲಿ ನೆನೆಪಿಸಬೇಕು. ಇದೊಂದೆ ಪುಸ್ತಕವನ್ನು ಗಾಂಧಿ ತನ್ನ ಜೀವಮಾನದಲ್ಲಿ ಭಾಷಾಂತರಿಸಿದ್ದು.

ಹಿಂದ್ ಸ್ವರಾಜ್ ಅನ್ನು "ರಾಷ್ಟ್ರೀಯ ಹೋರಾಟದ ಪ್ರಣಾಳಿಕೆ" ,"ಬೈಬಲ್", "ಗಾಂಧಿ ಚಿಂತನೆಯ ಹೆಮ್ಮರ" "ಪಾಶ್ಚಿಮಾತ್ಯ ಆಧುನಿಕತೆಯ ವಿಮರ್ಶೆ" ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತದೆ. ಖ್ಯಾತ ಗಾಂಧಿ ಚಿಂತಕ ಆಂಟನಿ ಪರೇಲ್ ಪ್ರಕಾರ ಹಿಂದ್ ಸ್ವರಾಜ್ ಗಾಂಧಿಯವರ ಮೂಲಭೂತ ಹಾಗೂ ಮಹತ್ತರವಾದ ಕೃತಿ. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಇದೊಂದು ಮಹತ್ವದ ಕೃತಿಯಾಯಿತ್ತಲ್ಲದೆ, ಹೋರಾಟಕ್ಕೆ ಹೊಸನೆಲೆಯನ್ನು, ಆಯಾಮವನ್ನು ಹಾಗೂ ದೃಷ್ಟೀಕೋನವನ್ನು ನೀಡಿತ್ತು. ಇದು ಸಾಧ್ಯವಾದದ್ದು ಹಿಂದ್ ಸ್ವರಾಜ್‌ನ ಇಂಗ್ಲೀಷ್ ಅನುವಾದದಿಂದ. ಅದು ಗುಜರಾತಿ ಭಾಷೆಯಲ್ಲಿರುತ್ತಿದ್ದರೆ ಹಿಂದ್ ಸ್ವರಾಜ್ ಒಂದು ಜನಪ್ರಿಯ ಕೃತಿಯಾಗುತ್ತಿರಲಿಲ್ಲ, ರಾಷ್ಟ್ರೀಯ ಹೋರಾಟಕ್ಕೆ ಹೊಸ ಆಯಾಮ ನೀಡುತ್ತಿರಲಿಲ್ಲ. ಬಹಳಷ್ಟು ಪಾಶ್ಚತ್ಯರಿಗೆ ಈ ಕೃತಿ ಒಂದು ಕಬ್ಬಿಣದ ಕಡಲೆಕಾಯಿ. ಭಾಷೆ ದೃಷ್ಟಿಯಲ್ಲಿ ಹಿಂದ್ ಸ್ವರಾಜ್‌ನ ಭಾಷೆ ಅತ್ಯಂತ ಸರಳವಾಗಿದ್ದರೂ, ಕೆಲವೊಮ್ಮೆ "ಸಂಪಾದಕ" ಹಾಗೂ "ಓದುಗ" ನಡುವೆ ಇರುವ ಗ್ಯಲಿಬಿಲಿ ಇದಕ್ಕೆ ಕಾರಣ. ಕೆಲವೊಮ್ಮೆ ಸಂಪಾದಕ ಹಾಗೂ ಓದುಗನ್ಯಾರು ಎಂಬ ವ್ಯತ್ಯಾಸವೇ ಕಂಡು ಬರುವುದಿಲ್ಲ.

ಗಾಂಧಿ ಬರೆದ ಪುಸ್ತಕಗಳ ಸಂಖ್ಯೆ ಬಹಳ ಕಡಿಮೆ. ಇಲ್ಲಿ ಗಾಂಧಿ ಬರೆದ ಮೂರು ಪುಸ್ತಕಗಳ ಉಲ್ಲೇಖ ಅತೀ ಮುಖ್ಯ. ಈ ಮೂರು ಪುಸ್ತಕಗಳಲ್ಲಿ ಅತೀ ಹೆಚ್ಚು ಗಮನ ಸೆಳೆಯುವುದು ಹಿಂದ್ ಸ್ವರಾಜ್ ಇನ್ನಿತರ ಪುಸ್ತಕಗಳೆಂದರೆ: ಮೈ ಎಕ್ಸಪರಿಮೆಂಟ್ ವಿದ್ ಟ್ರುತ್ ಹಾಗೂ ಸತ್ಯಾಗ್ರಹ ಇನ್ ಆಫ್ರಿಕಾ. ಹಿಂದ್ ಸ್ವರಾಜ್ ಗಾಂಧಿಯವರ ಮಹತ್ವದ ಕೃತಿಯೇ ಎಂಬುದರ ಕುರಿತು ಸಾಕಷ್ಟು ಜಿಜ್ಞಾಸೆ ಇದೆ. ಪಾಶ್ಚತ್ಯರ ಪ್ರಕಾರ ಅದೊಂದು ಮಹತ್ವದ ಕೃತಿಯಲ್ಲ. ಈ ರೀತಿಯ ಅಪವಾದವನ್ನು ಮಾಡಿದವರಲ್ಲಿ ಭಾರತೀಯ ಚಿಂತಕರು ಇಲ್ಲವೆಂದಿಲ್ಲ. ಖ್ಯಾತ ಇತಿಹಾಸ ತಜ್ಞ ರಾಮಚಂದ್ರ ಗುಹ ಇದರಿಂದ ಹೊರತಾಗಿಲ್ಲ.

ಹಿಂದ್ ಸ್ವರಾಜ್ ಅನ್ನು ಬರೆದ ಸಂದರ್ಭದಲ್ಲಿ ಭಾರತದಲ್ಲಿ ತೀವ್ರಗಾಮಿಗಳ ರಾಜಕೀಯ ಬಹಳ ಜೋರಾಗಿತ್ತು. ಕೆಲವರಂತೂ ಸ್ವರಾಜ್ಯಕ್ಕಾಗಿ ರಾಜಕೀಯ ಹತ್ಯೆಯನ್ನು ಪ್ರತಿಪಾದಿಸುತ್ತಿದ್ದರು. 1908ರಲ್ಲಿ ಗಾಂಧಿ ಆಫ್ರಿಕಾದಲ್ಲಿ ಭಾರತೀಯರಿಗಾಗಿ ಹಕ್ಕುಗಳನ್ನು ಪ್ರತಿಪಾದಿಸುತ್ತಿದ್ದ ಕಾಲ. ಅದೇ ಕಾಲದಲ್ಲಿ ಕೆಲ ಆರ್ಯ ಸಮಾಜಿಗಳು ಲಂಡನ್ನಿನಲ್ಲಿ ರಾಜಕೀಯ ಹತ್ಯೆಯನ್ನು ಮಾಡಿದ್ದರು. ಈ ಸಂದರ್ಭದಲ್ಲಿ ಗಾಂಧಿಗೆ ಮುಖಾಮುಖಿಯಾದ್ದು ಮೂರು ಅಂಶಗಳು: ಹಿಂಸೆಯನ್ನು ಪ್ರತಿಪಾದಿಸುತ್ತಿದ್ದ ತೀವ್ರಗಾಮಿಗಳು. ಇಲ್ಲಿ ಗಾಂಧಿ ಹಾಗೂ ವೀರ್ ಸವರ್ಕಾರ್‌ರೊಂದಿಗೆ ನಡೆದ ಚರ್ಚೆಗಳು ಮಹತ್ವ ಪಡೆಯುತ್ತದೆ. ವಾಸ್ತವವಾಗಿ ಇವೆರಡರ ನಡುವೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದವು.. ಅದು ಹಿಂಸೆ –ಅಹಿಂಸೆ, ರಾಷ್ಟ್ರೀಯ ಹೋರಾಟ, ಹಿಂದು ಮುಸ್ಲಿಂ ಸಂಬಂಧಗಳು, ಆಧುನೀಕತೆ–ರಾಷ್ಟ್ರೀಯತೆ ಇತ್ಯಾದಿಗಳ ಕುರಿತಾಗಿತ್ತು ಎರಡನೇದಾಗಿ ವಸಾಹತುಶಾಹಿಯ ಗಟ್ಟಿಯಾದ ಅಥವಾ ತೀವ್ರವಾದ ಹಿಡಿತ ಹಾಗೂ ಹಿಂಸೆ–ಅಹಿಂಸೆಯ ಮುಖಾಮುಖಿ.

ಗಾಂಧಿಗೆ ತನ್ನದೇ ಆದ ರ್‍ಯಾಡಿಕಲಿಸಂ ಅನ್ನು ಈ ಸಂದರ್ಭದಲ್ಲಿ ಪ್ರತಿಪಾದಿಸಬೇಕಿತ್ತು. ಅದು ಹಿಂಸೆ ಹಾಗೂ ಮಾರ್ಕ್ಸವಾದದಿಂದ ವಿಭಿನ್ನವಾಗಿರಬೇಕಿತ್ತು. ಇದನ್ನು ಸ್ಪಷ್ಟವಾಗಿ ತಮ್ಮ ಪತ್ರವೊಂದರಲ್ಲಿ ಚಿತ್ರಿಸುತ್ತಾರೆ. ಹಿಂದ್ ಸ್ವರಾಜ್ ಬರೆಯುವ ಕೆಲವೇ ದಿನಗಳ ಮೊದಲು ಈ ಪತ್ರ ಬರೆದದ್ದು ಇಲ್ಲಿ ಉಲ್ಲೇಖನೀಯ. "I must say that those who believe and argue that such murder may do good to India, are ignorant men indeed". ಈ ರೀತಿಯ ಬೆಳವಣಿಗೆ ಮುಂದೆ ಕೊಲೆಗಡುಕರ ಆಳ್ವಿಕೆಗೆ ದಾರಿಮಾಡಿಕೊಡಬಹುದೆಂಬ ನಂಬಿಕೆ ಹಾಗೂ ಹೆದರಿಕೆ

ಗಾಂಧಿಗೆ ಇತ್ತು. ಈ ಹಿನ್ನಲೆಯಲ್ಲಿ ಹುಟ್ಟಿಕೊಂಡದ್ದು ಹಿಂದ್ ಸ್ವರಾಜ್.

ಈ ಸಂದರ್ಭದಲ್ಲಿ ನಾವು ಕೇಳಬೇಕಾದ ಪ್ರಶ್ನೆಗಳಿವೆ: ಗಾಂಧಿ ಒಬ್ಬ ರ್‍ಯಾಡಿಕಲ್ ಆಗಿದ್ದರೆ? ಗಾಂಧಿಯಲ್ಲಿ ರ್‍ಯಾಡಿಕಲಿಸಂ ಇತ್ತೇ? ಗಾಂಧಿಯ ರ್‍ಯಾಡಿಕಲಿಸಂ ಹೇಗಿತ್ತು ಮತ್ತು ಅದರಲಲ್ಲಿದ್ದ ಯಾವುವು? ಹಿಂದ್ ಸ್ವರಾಜ್ ಪುಸ್ತಕವನ್ನು ಈ ಸಂದರ್ಭದಲ್ಲಿ ಹೇಗೆ ವಿಶ್ಲೇಷಿಸಬಹುದು?

ಹಿಂದ್ ಸ್ವರಾಜ್ ಅನ್ನು ವಿಶ್ಲೇಷಿಸುವ ರೂಪವೇ ಬೇರೆ, ಅಥವಾ ದೃಷ್ಟಿಕೋನವೇ ಬೇರೆ. ಬಹಳಷ್ಟು ಸಲ ಹಿಂದ್ ಸ್ವರಾಜ್‌ಗೂ ರ್‍ಯಾಡಿಕಲಿಸಂಗೂ ಸಂಬಂಧವಿಲ್ಲವೆಂದು ಮೊದಲೇ ತೀರ್ಮಾನಿಸಲಾಗುತ್ತದೆ. ಈ ತೀರ್ಮಾನದ ಹಿಂದೆ ಇರುವ ಕಲ್ಪನೆಗಳೆಂದರೆ: ರ್‍ಯಾಡಿಕಲಿಸಂ ಮೂಲತಃವಾಗಿ ಅಹಿಂಸಾ ವಿರೋಧಿ, ಅದು ಮೂಲತಃವಾಗಿ ಎಡಪಂಥೀಯ ಚಿಂತನೆಗಳಿಂದ ಪ್ರೇರಿಪಿತವಾಗಿರುತ್ತದೆ, ಅದು ಸಾಮಾಜಿಕ ಬದಲಾವಣೆಗಳನ್ನು ಕ್ರಾಂತಿಕಾರಿ ತಂತ್ರಗಳಿಂದ ತರಲು ಬಯಸುತ್ತದೆ. ಗಾಂಧಿ ಮೂಲತಃವಾಗಿ ಕಮ್ಯೂನಿಸ್ಟರ ಪರವಾಗಿರಲಿಲ್ಲ. ಇದು ಗಾಂಧಿಯ ಜೀವನದಲ್ಲಿ ಆಗಾಗ ಕಂಡು ಬರುತ್ತದೆ. ಇದನ್ನು ಕಾಂಗ್ರೆಸ್ ಸೋಶಿಯಲಿಸ್ಟರ ಕುರಿತು ಗಾಂಧಿಗಿದ್ದ ಅಸಹನೀಯತೆಯಲ್ಲಿ ವ್ಯಕ್ತವಾಗುತ್ತದೆ.. ಒಂದೆರಡು ಸಾರಿ ಗಾಂಧಿಗೂ ಮಾರ್ಕ್ಸ್‌ವಾದಕ್ಕೂ ವೈಚಾರಿಕವಾಗಿ ಸಂಬಂಧಗಳನ್ನು ಕಲ್ಪಿಸಲಾಗುತ್ತದೆ. 1934ರಲ್ಲಿ ಆಗಸ್ಟ್ 2ರಂದು ಗಾಂಧಿ ಕಲ್ಕತ್ತದ ಅಮೃತ ಬಜಾರ್ ಪತ್ರಿಕೆಗೆ ಕಾರ್ಮಿಕರ ಶ್ರಮದ ಕುರಿತು ಬರೆದ ಪತ್ರವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಲಾಗುತ್ತದೆ:

"what the two hands of labour would achieve, the capitalist would never get all his gold and silver. Can anyone live on gold. But labour has to be master, conscious of its strength". ಗಾಂಧಿಯನ್ನು ಈ ಸಂದರ್ಭದಲ್ಲಿ ರ್‍ಯಾಡಿಕಲ್ ಮಾರ್ಕ್ಸ್‌ವಾದಿಯೆಂದು ಕರೆಯಲೂ ಸಾಧ್ಯವಿಲ್ಲ. ವಾಸ್ತವವಾಗಿ ತಮ್ಮ ಹಿಂದ್ ಸ್ವರಾಜ್ ಕೃತಿಯಲ್ಲಿ ತಮ್ಮನ್ನು ಒಂದು ರೀತಿಯ ಸಮಾಜವಾದಿಯೆಂದು ಕರೆದರೂ ಅವರನ್ನು "ರ್‍ಯಾಡಿಕಲ್ ಸೋಶಿಯಲಿಸ್ಟ್" ಎಂದು ವಿಮರ್ಶಿಸಬಾರದು.ಅವರನ್ನು ಆದಕಾರಣವೇ ಎಡಪಂಥೀಯ ಚಿಂತನೆಗಳೊಂದಿಗೆ ಅಥವಾ ಎಡಪಂಥೀಯ ರ್‍ಯಾಡಿಕಲಿಸಂನೊಂದಿಗೆ ಸಮೀಕರಿಸುವುದು ಸರಿಯಲ್ಲ. ಗಾಂಧಿ ಹಿಂದ್ ಸ್ವರಾಜ್ ಬರೆಯುವ ಕಾಲದಲ್ಲಿ ರಶ್ಯದಲ್ಲಿ ಕೂಡ ಕ್ರಾಂತಿಯಾಗಿರಲ್ಲ.

ಗಾಂಧಿಯ ರ್‍ಯಾಡಿಕಲಿಸಂ ಒಂದು ರೀತಿಯಲ್ಲಿ ವಿಚಿತ್ರ ಅನ್ನಬಹುದು. ಅದರಲ್ಲಿ ವೈರುಧ್ಧಗಳೂ ಇವೆ, ತೀವ್ರವಾದ ವಿಮರ್ಶೆಯೂ ಇಗೆ, ಕಾಳಜಿಯೂ ಇದೆ, ಭವಿಷ್ಯತಿನ ಕುರಿತಾದ ಗಂಭೀರವಾದ ಕಲ್ಪನೆಗಳೂ ಇವೆ. ಗಾಂಧೀಯ ರ್‍ಯಾಡಿಕಲಿಸಂ ಅನ್ನು ವಸಾಹತುಶಾಹಿಯ ಮುಖಾಮುಖಿ ಸಂದರ್ಭದಲ್ಲಿ ವಿಶ್ಲೇಷಿಸಬೇಕು. ವಸಾಹತುಶಾಹಿ ಸಂದರ್ಭದಲ್ಲಿ ಇಡೀ ಪಾಶ್ಚತ್ಯ ನಾಗರಿಕತೆಯನ್ನು, ಆಧುನಿಕತೆಯನ್ನು, ವಿಮರ್ಶಗೆ ಒಳಪಡಿಸುವುದು, ಅದನ್ನು ತಿರಸ್ಕರಿಸುವುದು, ಅಥವಾ ಅದಕ್ಕೆ ಪರ್ಯಾಯವನ್ನು ನಿರ್ಮಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ.

ಹಿಂದ್ ಸ್ವರಾಜ್‌ನಲ್ಲಿ ಇಪ್ಪತ್ತು ಅಧ್ಯಾಯಗಳಿವೆ. ಹಿಂದ್ ಸ್ವರಾಜ್ ಉಪಯೋಗಿಸುವ ತಂತ್ರ ಹೊಸತೇನಲ್ಲ. ಅಲ್ಲಿರುವ ಮೆಥಡಾಲಜಿ ಮೂಲತಃವಾಗಿ ಗ್ರೀಕ್ ದಾರ್ಶನಿಕ

ಸಾಕ್ರಟೀಸ್ ಉಪಯೋಗಿಸಿದ ಸಂಕಥನ ಅಥವಾ ಡಯಲೆಕ್ಟಿಕಲ್ ಮೆಥಡ್‌ನಿಂದ ಬಂದಿದೆ. ಇದನ್ನು ಪ್ಲೇಟೋ ಅನುಸರಿಸಿದ್ದ. ಇಲ್ಲಿ ಎರಡು ಪ್ರಮುಖ ಪಾತ್ರದಾರಿಗಳನ್ನು ಗುರುತಿಸಬೇಕು: "ಓದುಗ" ಹಾಗೂ "ಸಂಪಾದಕ". ಇಲ್ಲಿ ಗಾಂಧಿ ಒಬ್ಬ ಅನ್ವೇಷಕನಾಗಿರುವುದು ವಾಸ್ತವ. ಈ ರೀತಿಯ ಪ್ರಯೋಗ ಗಾಂಧಿಯಲ್ಲಿ ಹೊಸತೇನಲ್ಲ. ಅದನ್ನು ಸತ್ಯಾಗ್ರಹದ ಆಳವಡಿಕೆಯ ಸಂದರ್ಭದಲ್ಲಿ, ಅಹಿಂಸಾವನ್ನು ಒಂದು ಆದರ್ಶವಾಗಿ ತೆಗೆದುಕೊಂಡ ಸಂದರ್ಭಗಳಲ್ಲಿ ವ್ಯಕ್ತವಾಗುತ್ತದೆ. ಗಾಂಧಿ ಈ ಮೆಥಡನ್ನು ಉಪಯೋಗಿಸಲು ಕಾರಣವಿದೆ. ಈ ಮೆಥಡ್ ಓದುಗರಲ್ಲಿ ಹೆಚ್ಚು ಪ್ರಿಯವಾಗಬಲ್ಲದೇ ವಾದಗಳನ್ನು ಸಮರ್ಥವಾಗಿ ಮಂಡಿಸಬಹುದೆಂಬ ತರ್ಕವನ್ನು ಗಾಂಧಿ ಈ ಸಂದರ್ಭದಲ್ಲಿ ಮುಂದಿಡುತ್ತಾರೆ.

ಗಾಂಧಿಯ ರ್‍ಯಾಡಿಕಲಿಸಂ ಒಂದು ರೀತಿಯಲ್ಲಿ ವಿಚಿತ್ರ ಅನ್ನಬಹುದು. ಅದರಲ್ಲಿ ವೈರುಧ್ಧಗಳೂ ಇವೆ, ತೀವ್ರವಾದ ವಿಮರ್ಶೆಯೂ ಇದೆ, ಕಾಳಜಿಯೂ ಇದೆ, ಭವಿಷ್ಯತಿನ ಕುರಿತಾದ ಗಂಭೀರವಾದ ಕಲ್ಪನೆಗಳೂ ಇವೆ. ಗಾಂಧೀಯ ರ್‍ಯಾಡಿಕಲಿಸಂ ಅನ್ನು ವಸಾಹತುಶಾಹಿಯ ಮುಖಾ ಮುಖಿ ಸಂದರ್ಭದಲ್ಲಿ ವಿಶ್ಲೇಷಿಸಬೇಕು. ವಸಾಹತುಶಾಹಿ ಸಂದರ್ಭದಲ್ಲಿ ಇಡೀ ಪಾಶ್ಚತ್ಯ ನಾಗರಿಕತೆಯನ್ನು, ಆಧುನಿಕತೆಯನ್ನು, ವಿಮರ್ಶಗೆ ಒಳಪಡಿಸುವುದು, ಅದನ್ನು ತಿರಸ್ಕರಿಸುವುದು, ಅಥವಾ ಅದಕ್ಕೆ ಪರ್ಯಾಯವನ್ನು ನಿರ್ಮಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ.

ವಾಸ್ತವಾಗಿ ಗಾಂಧಿಯ ರ್‍ಯಾಡಿಕಲಿಸಂ ನಿಂತಿರುವುದು ಕೆಲವು ಅಂಶಗಳ ಮೇಲೆ. ಅದರಲ್ಲಿ ಪಾಶ್ಚಾತ್ಯ ನಾಗರಿಕತೆಯ ವಿಮರ್ಶೆ ಬಹಳ ಮುಖ್ಯ. ಪಾಶ್ಚಾತ್ಯ ನಾಗರಿಕತೆಯನ್ನು "ಸೈತಾನನ ನಾಗರಿಕತೆಯೆಂದು" ಜರೆಯುವುದರಲ್ಲಿ, ಟೀಕಿಸುವುದರಲ್ಲಿ ಹಿಯಾಳಿಸುವುದರಲ್ಲಿ ಹಾಗೂ ತಿರಸ್ಕರಿಸುವುದರಲ್ಲಿ ಗಾಂಧಿಯ ರ್‍ಯಾಡಿಕಲಿಸಂನ ಒಂದು ಮಹತ್ತರವಾದ ಅಂಶ ಕಂಡುಬರುತ್ತದೆ.ಗಾಂಧಿಗೆ ಪಾಶ್ಚತ್ಯ ನಾಗರಿಕತೆ "ಹುಚ್ಚುತನ", "ಶುದ್ಧ ಅಧರ್ಮ", "ಮಾಯಾಜಾಲ", "ಮದ್ಯದ ಅಮಲು", "ವಿನಾಶಕಾರಿ", "ಕಲಿಯುಗ", "ರೋಗ" ಹಾಗೂ "ಗೆದ್ದಲು ಹುಳ". ಅಲ್ಲದೇ "ಈ ನಾಗರಿಕತೆಯಲ್ಲಿ ನೀತಿಯೂ ಇಲ್ಲ, ಧರ್ಮವೂ ಇಲ್ಲ." ಗಾಂಧಿ ಈ ಸಂದರ್ಭದಲ್ಲಿ ಎರಡು ಕಾರ್‍ಯ ತಂತ್ರಗಳನ್ನು ಮುಂದಿಡುತ್ತಾರೆ. ಒಂದನೇದಾಗಿ, "ತಾಳ್ಮೆ" – "ನಾವು ತಾಳ್ಮೆಯಿಂದ ಇದ್ದರೆ ಈ ನಾಗರಿಕತೆ ತನ್ನ ಬೆಂಕಿಗೆ ತಾನೇ ಸುಟ್ಟು ಬೂದಿಯಾಗುತ್ತದೆ". ಎರಡನೇದಾಗಿ "ಬಹಿಷ್ಕಾರ"– ಅವುಗಳ ಅನುಕರಣೆಯ ಬಹಿಷ್ಕಾರ, ಮೌಲ್ಯಗಳ ಬಹಿಷ್ಕಾರ, ಹಾಗೂ ಚೌಕಟ್ಟಿನ ಬಹಿಷ್ಕಾರ. ವಾಸ್ತವವಾಗಿ ನಾಗರೀಕತೆಯ ವಿರುದ್ಧವಾದ ಈ ರೀತಿಯ ಕರೆ ಸಾಮಾನ್ಯ ವಿಷಯವೆಂತಲೂ ಅಥವಾ ಸಾಧಾರಣ ವಿಷಯವೆಂದೂ ತಳ್ಳಿ ಹಾಕಲು ಸಾಧ್ಯವಲ್ಲ.

ಯಾಕೆಂದರೆ ಇದು ಭವಿಷ್ಯತ್ತಿನಲ್ಲಿ ಇಡೀ ಪಾಶ್ಚತ್ಯ ನಾಗರಿಕತೆಯನ್ನೇ ಬುಡಮೇಲು ಮಾಡುವ ಸಾಧ್ಯತೆಯನ್ನು ಯಾರೂ ತಳ್ಳಿಹಾಕುವಂತಿಲ್ಲ. ಈ ಕರೆಯಲ್ಲಿಯೇ "ರಾಜದ್ರೋಹ"ದ ಲಕ್ಷಣಗಳು ವಸಾಹತುಶಾಹಿಗೆ ಕಂಡು ಬಂದದ್ದು ಉಲ್ಲೇಖನಿಯ. ಪುಸ್ತಕ ನಿಷೇಧಕ್ಕೆ ಇದೊಂದು ಮಹತ್ತರವಾದ ಕಾಣಿಕೆಯಾಯಿತು. ವಾಸ್ತವವಾಗಿ ಈ ರೀತಿಯ ಕರೆ ನೀಡಲು ಅಸಾಧರಣವಾದ ನೈತಿಕ ಶಕ್ತಿ,

[illegible] ಅವಶ್ಯಕ. ಅಂದಿನ ಸಂದರ್ಭದಲ್ಲಿ ಗಾಂಧಿಗೆ ಮಾತ್ರ ಈ ರೀತಿಯ ಕರೆ ನೀಡಲು ಸಾಧ್ಯವಿತ್ತು. ಮಾರ್ಕ್ಸ್‌ವಾದಿಗಳು ಆ ಸಂದರ್ಭದಲ್ಲಿ ಭಾರತದಲ್ಲಿ ರಾಜಕೀಯವಾಗಿ ಬೆಳೆದಿರಲಿಲ್ಲ ಹಾಗೂ ಅವರಿಗೆ ನೆಲೆಯೂ ಇರಲಿಲ್ಲ, ತೀವ್ರಗಾಮಿ ಗಳ ಯೋಜನೆಗಳಲ್ಲಿ ತತ್‌ಕ್ಷಣದ ಲಾಭಕ್ಕೆ ಒತ್ತು ಇತ್ತೇ ಹೊರತು ವಿಶಾಲವಾದ ವಸಾಹತು ಪೂರಿತ ನಾಗರಿಕತೆಯನ್ನು ಪ್ರಶ್ನಿಸುವ ಇಚ್ಛಾ ಶಕ್ತಿ ಇರಲಿಲ್ಲ.

ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಕೇಳಲೇಬೇಕು: ಹಿಂದ್ ಸ್ವರಾಜ್‌ನ ಹಿಂದಿರುವ ತಾತ್ವಿಕ ತಳಹದಿಗಳೇನು? ಅಥವಾ ಅದಕ್ಕೆ ನೈತಿಕ ತಳಹದಿಗಳಿದ್ದವೇ? ಖ್ಯಾತ ಗಾಂಧಿವಾದಿ ರಾಮಶೆ ರಾಯ್ ಪ್ರಕಾರ ಅದಕ್ಕೆ ನೈತಿಕ ತಳಹದಿಗಳಿದ್ದವು. ಗಾಂಧಿಯ ಸ್ವರಾಜ್ ನಿಂತದ್ದೇ ನೈತಿಕ ತಳಹದಿ ಮೇಲೆ. ಸತ್ಯಾಗ್ರಾಹಿ ಈ ನೈತಿಕತೆಯ ಬುನಾದಿ ಅಥವಾ ತಳಹದಿ. ಅಹಿಂಸೆ, ಸತ್ಯ, ಇವುಗಳು ನೈತಿಕತೆಯ ಇನ್ನೊಂದು ಸ್ವರೂಪ. ವಾಸ್ತವವಾಗಿ ಗಾಂಧಿಗೆ ಸತ್ಯ ಹಾಗೂ ಅಹಿಂಸೆ ಬೇರೆ ಬೇರೆಯಲ್ಲ. ಆದ ಕಾರಣವೇ ಗಾಂಧಿ ಹಿಂದ್ ಸ್ವರಾಜ್‌ನ ಅಂತಿಮ ಭಾಗದಲ್ಲಿ ಈ ರೀತಿಯಾಗಿ ವಾದಿಸುತ್ತಾರೆ: "ನಿಜವಾದ ಸ್ವರಾಜ್ಯವೆಂದರೆ ಮನೋರಾಜ್ಯ ಅಥವಾ ಆತ್ಮ ಸಂಯಮ. ಅದಕ್ಕಾಗಿ ಸತ್ಯಾಗ್ರಹ, ಸ್ವದೇಶಿ". ಗಾಂಧಿಗೆ ನೈತಿಕತೆಯಿಲ್ಲದ ರಾಜಕೀಯ ಅದು ನಿಜವಾದ ರಾಜಕೀಯವಲ್ಲ. ಇಲ್ಲಿ ಹೊರಹೊಮ್ಮುವ ರಾಜಕಾರಣ ನೈತಿಕ ಆಧಾರಿತ ರಾಜಕಾರಣ. ರಾಜಕೀಯವನ್ನು ರಾಜಕಾರಣಿಗಳ ಹತ್ಯೆ ಮೂಲಕ ಅಥವಾ ಅವರ ಹೆಣಗಳ ಮೇಲೆ ಕಟ್ಟಲು ಬಯಸುತ್ತಿದ್ದ ಸಂದರ್ಭದಲ್ಲಿ ಗಾಂಧಿ ಬಯಸಿದ ರಾಜಕೀಯ ಅಥವಾ ರಾಜಕಾರಣ ವಿಶಿಷ್ಟವೂ, ವಿಚಿತ್ರವೂ ಆಗಿದೆ. ಈ ವಿಶಿಷ್ಟತೆಯಲ್ಲಿ ಗಾಂಧಿಯ ರ್‍ಯಾಡಿಕಲಿಸಂ ಅನ್ನು ನೋಡಬಹುದು.

ಗಾಂಧಿಯ ಸ್ವರಾಜ್ಯದ ಕಲ್ಪನೆ ಕೂಡ ರ್‍ಯಾಡಿಕಲಿಸಂನ ಒಂದು ಭಾಗ. ಈ ಸಂದರ್ಭದಲ್ಲಿ ಗಾಂಧಿ ಸ್ವದೇಶಿ ರೂಪದ ಸ್ವರಾಜ್ಯವನ್ನು ನಿರ್ಮಿಸಲು ಬಯಸುವುದನ್ನು ನಾವು ಕಾಣಬಹುದು. ವಾಸ್ತವವಾಗಿ ಗಾಂಧಿಗೆ ಪೊಲಿಟಿಕಲ್ ಅಥವಾ ರಾಜಕೀಯ ಸ್ವರಾಜ್ಯ ಮುಖ್ಯವಾಗಿರಲಿಲ್ಲ, ಅಥವಾ ಪೊಲಿಟಿಕಲ್ ಸ್ವರಾಜ್ಯ ಗಾಂಧಿಗೂ ಬೇಕಿರಲಿಲ್ಲ, ಅಲ್ಲದೇ ಆ ರೀತಿಯ ಸ್ವರಾಜ್ಯ ಅವರ ಕಲ್ಪನೆಗೆ ನಿಲುಕದ್ದು ಆಗಿತ್ತು. ಹಿಂದ್ ಸ್ವರಾಜ್‌ನಲ್ಲಿ ಗಾಂಧಿಗೆ "ಇಂಗ್ಲೀಷ್ತಾನ"ವಾಗುವ ಭಾರತ ಬೇಕಿರಲಿಲ್ಲ. "ಇಂಥ ಸ್ವರಾಜ್ಯ ನನಗೆ ಬೇಡ".

ಹಿಂದೂಸ್ತಾನದ ಪರಾಧೀನತೆಯ ಕುರಿತು ವಿಶ್ಲೇಷಿಸುವ ಸಂದರ್ಭದಲ್ಲಿ ಗಾಂಧಿ ಹೇಳುವ ಮಾತು ಇಲ್ಲಿ ಸೂಕ್ತ. "ಇಂಗ್ಲೀಷರು ಹಿಂದೂಸ್ತಾನವನ್ನು ತೆಗೆದುಕೊಳ್ಳಲಿಲ್ಲ. ನಾವೇ ಅವರಿಗೆ ಒಪ್ಪಿಸಿದೇವು. ಈ ಸಂದರ್ಭದಲ್ಲಿ ಸ್ವರಾಜ್ಯ ಹೇಗೆ ಬರುತ್ತದೆ ಎಂಬ ಪ್ರಶ್ನೆಗೆ ಗಾಂಧಿ ನೀಡಿದ ಉತ್ತರ ಸಹಜವಾಗಿಯೇ ಇತ್ತು." ಹಿಂದಿನಂತೆ ಮನೆಯಲ್ಲಿ ಬೆಳೆದ ಹತ್ತಿಯಿಂದ ಹತ್ತಿ ಮಾರಿ ಹಣತೆಗಳಲ್ಲಿ ದೀಪ ಉರಿಸೋಣ. ಹಾಗೇ ಮಾಡಿದರೆ ನಮ್ಮ ಹಣ ಉಳಿಯುತ್ತದೆ. ಕಣ್ಣು ಹಾಳಾಗುವುದು ತಪ್ಪುತ್ತದೆ. ಸ್ವದೇಶಿಗೆ ನೆರವಾಗಿ ಸ್ವರಾಜ್ಯ ಉಳಿಸಲು ದಾರಿಯಾಗುತ್ತದೆ". ಈ ಸ್ವದೇಶಿ ಪರಿಕಲ್ಪನೆ ಅಂತಿಮ ವಿಶ್ಲೇಷಣೆಯಲ್ಲಿ ವಸಾಹತುಶಾಹಿಯ ಆರ್ಥಿಕ ತಳಹದಿಯನ್ನು ಬುಲಮೇಡು ಮಾಡುವ ಸಾಧ್ಯತೆ ಇಲ್ಲಿ ನಿಚ್ಚಳವಾಗಿ ಕಂಡು ಬರುತ್ತದೆ. ವಾಸ್ತವವಾಗಿ ಆ ಸಂದರ್ಭದಲ್ಲಿ ದಾದಾಬಾಯಿ ನವರೋಜಿಯವರ ಡ್ರೇನ್ ಥಿಯರಿ ಚಾಲ್ತಿಯಲ್ಲಿದ್ದರೂ, ಅಥವಾ ದತ್‌ರವರ "ಎಕಾನಾಮಿಕ್ ಹಿಸ್ಟರಿ" ಪುಸ್ತಕ ಪ್ರಕಟಗೊಂಡಿದ್ದರೂ ಅವುಗಳಲ್ಲಿ ಸ್ವರಾಜ್ಯ ಅಥವಾ ಸ್ವದೇಶಿಯನ್ನು ಗಟ್ಟಿಗೊಳಿಸುವ ಅಥವಾ ವಿಶ್ಲೇಷಿಸುವ ಆಯಾಮಗಳಿರಲ್ಲ. ಬಹಳ ಮುಖ್ಯವಾಗಿ ಅವುಗಳಲ್ಲಿ ವಸಾಹತುಶಾಹಿಯ ಶೋಷಣೆ ಪ್ರಮುಖ ವಿಷಯವಾಗಿತ್ತು. ಹಿಂದ್ ಸ್ವರಾಜ್ ಇವುಗಳಿಂದ ವಿಭಿನ್ನವಾಗಿತ್ತು. ಪುಸ್ತಕದಲ್ಲಿ ವಾದಕ್ಕೆ ಪೂರಕವಾದ ಯಾವುದೇ ಅಂಕಿಅಂಶಗಳಿಲ್ಲದಿದ್ದರೂ, ಸಂವಾದವೇ ಸಾಕ್ಷಧಾರಗಳನ್ನು ಒದಗಿಸಿ ಕೊಡುವ ಚಾಕಚಾಕ್ಷತೆ ಗಾಂಧಿಯ ಹಿಂದ್ ಸ್ವರಾಜ್‌ನಲ್ಲಿತ್ತು.

ಹಿಂದ್ ಸ್ವರಾಜ್‌ನ ರ್‍ಯಾಡಿಕಲಿಸಂನ ತಳಹದಿ ಇರುವುದು ಕೈಗಾರಿಕರಣದ ವಿಮರ್ಶೆಯಲ್ಲಿಯೂ ಹೌದು. ಖ್ಯಾತ ಇತಿಹಾಸ ತಜ್ಞ ಬಿಪನ್ ಚಂದ್ರ ಈ ರೀತಿಯ ರ್‍ಯಾಡಿಕಲಿಸಂ ಅನ್ನು ಎರಡು ರೂಪದಲ್ಲಿ ನೋಡಬಹುದೆಂದು ಬಹಳ ಹಿಂದೆಯೇ ವಾದಿಸಿದ್ದರು. ಇದರಲ್ಲಿ ಕೈಗಾರಿಕರಣದೊಂದಿಗೆ ಕೃಷಿಯನ್ನು ಕೂಡ ಸೇರಿಸಿದ್ದರು. ಕೈಗಾರಿಕರಣವನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಇಡೀ ಆಧುನಿಕ ಜಗತ್ತಿನ ಯಾಂತ್ರೀಕರಣದ ಭ್ರಾಂತಿಯನ್ನು ಪ್ರಶ್ನಿಸುವ ಯತ್ನ ಗಾಂಧಿಯ ಹಿಂದ್ ಸ್ವರಾಜ್‌ನಲ್ಲಿದೆ. ಇದರ ವಿಶಾಲಾರ್ಥದಲ್ಲಿ ಇಡೀ ಕೈಗಾರೀಕರಣವನ್ನೇ ಪ್ರಶ್ನಿಸುವ ಯತ್ನ ಕಂಡುಬರುತ್ತದೆ.

"ಯಂತ್ರವನ್ನಲ್ಲ ನಾನು ಬೇಡವೆನ್ನುವುದು. ಶರೀರ ಶ್ರಮವನ್ನು ಕಡಿಮೆ ಮಾಡುವ ಯಂತ್ರಬೇಕೆನ್ನುವ ಭ್ರಾಂತಿ ಈಗ ಬೆಳೆಯುತ್ತಿದೆ. ದುಡಿತ ಕಡಿಮೆಯಾಗಿ ಸಾವಿರಾರು ಜನ ಹಸಿವಿನಿಂದ ಸಾಲಾಗಿ ಬೀದಿಯಲ್ಲಿ ಬಿದ್ದಾರು". "ಹತ್ತು ಜನರ ಕೈಯಲ್ಲಿ ಧನ ಸೇರಬೇಕೆಂದಿಲ್ಲ ಹೊರತು ಎಲ್ಲರ ಕೈಯಲ್ಲು ಹಣ ಸೇರಲಿ ಎಂಬುದೇ ನನ್ನ ಬಯಕೆ". ಕೊನೆಯ ವಾಕ್ಯವನ್ನು ತೆಗೆದುಕೊಂಡು ಗಾಂಧಿಯನ್ನು ಮಾರ್ಕ್ಸ್‌ವಾದಿ ರ್‍ಯಾಡಿಕಲ್ ಎಂದು ಗುರುತಿಸಲು ಸಾಧ್ಯವಿಲ್ಲ. ಗಾಂಧಿಯ ರ್‍ಯಾಡಿಕಲಿಸಂ ಎಂಬುದು ಸಾಮಾಜಿಕ ಚೌಕಟ್ಟನ್ನೇ ಬದಲಾಯಿಸದೇ ಸಂಬಂಧಗಳ ಸಂರಚನೆಯಲ್ಲಿ ಬದಲಾವಣೆಯನ್ನು ತರುವುದಾಗಿತ್ತು.

ಹಿಂದೂಸ್ತಾನದ ಪರಾಧೀನತೆಯ ಕುರಿತು ವಿಶ್ಲೇಷಿಸುವ ಸಂದರ್ಭದಲ್ಲಿ ಗಾಂಧಿ ಹೇಳುವ ಮಾತು ಇಲ್ಲಿ ಸೂಕ್ತ. "ಇಂಗ್ಲೀಷರು ಹಿಂದೂಸ್ತಾನವನ್ನು ತೆಗೆದುಕೊಳ್ಳಲಿಲ್ಲ. ನಾವೇ ಅವರಿಗೆ ಒಪ್ಪಿಸಿದ್ದೆವು. ಈ ಸಂದರ್ಭದಲ್ಲಿ ಸ್ವರಾಜ್ಯ ಹೇಗೆ ಬರುತ್ತದೆ ಎಂಬ ಪ್ರಶ್ನೆಗೆ ಗಾಂಧಿ ನೀಡಿದ ಉತ್ತರ ಸಹಜವಾಗಿಯೇ ಇತ್ತು." ಹಿಂದಿನಂತೆ ಮನೆಯಲ್ಲಿ ಬೆಳೆದ ಹತ್ತಿಯಿಂದ ಹತ್ತಿ ಮಾರಿ ಹಣತೆಗಳಲ್ಲಿ ದೀಪ ಉರಿಸೋಣ. ಹಾಗೇ ಮಾಡಿದರೆ ನಮ್ಮ ಹಣ ಉಳಿಯುತ್ತದೆ. ಕಣ್ಣು ಹಾಳಾಗುವುದು ತಪ್ಪುತ್ತದೆ. ಸ್ವದೇಶಿಗೆ ನೆರವಾಗಿ ಸ್ವರಾಜ್ಯ ಉಳಿಸಲು ದಾರಿಯಾಗುತ್ತದೆ".

ಆದ ಕಾರಣ ಗಾಂಧಿ ಒಬ್ಬ ಅದ್ಭುತ ಕನಸುಗಾರ. ಇಂಗ್ಲೇಂಡಿನ ಪಾರ್ಲಿಮೆಂಟನ್ನು ಗಾಂಧಿ "ಬಂಜೆ" ಮತ್ತು "ವ್ಯೇಶ್ಯೆ" ಎಂದಲ್ಲಾ ಕರೆದದ್ದು ಒಂದು ಇತಿಹಾಸ ಸಂಗತಿ, ವಸಾಹತುಶಾಹಿ ಹಿಂದ್ ಸ್ವರಾಜ್ ಅನ್ನು ನಿಷೇಧಿಸಿದಾಗ ಅದು ಮುಂದಿಟ್ಟ ವಾದ ಬೇರೆಯಾಗಿದ್ದರೂ (ಮೂಲತಃವಾಗಿ ರಾಜದ್ರೋಹ) ವಾಸ್ತವತೆ ಬೇರೇನೆ ಆಗಿತ್ತು. ಆ ವಾಸ್ತವತೆಯಲ್ಲಿ "ಬಂಜೆ" ಮತ್ತು "ವ್ಯೇಶ್ಯೆ" ಶಬ್ದದ ಪ್ರಯೋಗ ನಿಚ್ಚಳವಾಗಿತ್ತು. ಈ ಶಬ್ದಗಳ ಪ್ರಯೋಗ 1909ರಲ್ಲಿ ರಾಜಕೀಯ ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸಿತ್ತು. ಈ ಶಬ್ದಗಳ ಪ್ರಯೋಗಗಳ ಹಿಂದೆ ಇಡೀ ವಸಾಹತುಶಾಹಿಯ ಕಲ್ಪನೆಯನ್ನು, ವಿಶಾಲವಾದ ಅಜೆಂಡಾವನ್ನು, ಹಿಡಿತವನ್ನು, ಯಜಮಾನಿಕೆಯನ್ನು, ತಾತ್ವಿಕ ಬುನಾದಿಯನ್ನು ನಷ್ಟ ಮಾಡುವ ಕಾರ್‍ಯತಂತ್ರವೂ ಅಡಗಿತ್ತು. ಬ್ರಿಟಿಷರಿಗೆ ಈ ಶಬ್ದದ ಪ್ರಯೋಗ ಶಾಕ್ ಅನ್ನು ನೀಡುತಿತ್ತು ಅಂದರೂ ತಪ್ಪಾಗಲಾರದು.. ಇಲ್ಲಿ ಗಾಂಧಿಗಿಂತಲೂ ಗಾಂಧಿಯ ಪುಟ್ಟ ಕೃತಿ ವಸಾಹತು ಶಾಹಿಗೆ ಅತೀ ದೊಡ್ಡ ಶತ್ರು ಆಗಿ ಪರಿಣಮಿಸಿದ್ದು ಸತ್ಯ ಸಂಗತಿ.

ಇಂಗ್ಲೇಂಡಿನ ಪಾರ್ಲಿಮೆಂಟನ್ನು "ಬಂಜೆ"ಎನ್ನಲು ಕಾರಣವಿದೆ: "ಇದುವರೆಗೂ ಪಾರ್ಲಿಮೆಂಟ್ ತಾನಾಗಿ ಒಂದಾದರೂ ಕೆಲಸವನ್ನು ಮಾಡಲಿಲ್ಲ.". ಅಷ್ಟೇ ಅಲ್ಲದೇ "ವ್ಯೇಶ್ಯೇ"ಯನ್ನಲು ಗಾಂಧಿಗೆ ಇನ್ನೊಂದು ಪ್ರಭಲವಾದ ಕಾರಣವೂ ಇತ್ತು.ಗಾಂಧೀ ಪ್ರಕಾರ "ಪದೇ ಪದೇ ಬದಲಾಗುವ ಮಂತ್ರಿಗಳು ಅದರ ನಾಯಕರು. ಆದ್ದರಿಂದ ವ್ಯೇಶ್ಯೆ". ಪಾರ್ಲಿಮೆಂಟಿನ ಕುರಿತು ಗಾಂಧಿಯ ವಿಮರ್ಶೆ ಇಲ್ಲಿಗೆ ಸಂಪೂರ್ಣಗೊಳ್ಳುವುದಿಲ್ಲ. "ಮಹತ್ತರವಾದ ಪ್ರಶ್ನೆಗಳ ಚರ್ಚೆ ನಡೆಯುವಾಗ ಸದಸ್ಯರು ತೂಕಡಿಸುತ್ತಾರೆ. ಒಂದೊಂದು ಸಲ ಕೇಳುವವರಿಗೆ ಬೇಸರ ತರುವಷ್ಟು ಬರೀ ಮಾತನಾಡುತ್ತಾರೆ. ಸದಸ್ಯರು ಏನೂ ಯೋಚಿಸದೇ ಕಣ್ಣು ಮುಚ್ಚಿ ತಮ್ಮ ಪಕ್ಷದ ಕಡೆ ವೋಟು ಹಾಕುತ್ತಾರೆ". ಬಹುಷ; ಗಾಂಧಿಯ ಕೊನೆಯ ಮಾತು ಅಂದಿನ ಇಂಗ್ಲೇಂಡಿನ ವಾಸ್ತವತೆಯನ್ನು ತೆರೆದು ಇಡುತ್ತದೆ. ಅದರ ಗೂಡಾರ್ಥದಲ್ಲಿ ಇಂಗ್ಲೇಂಡಿನ ದುಸ್ತಿತಿಗೆ ಪಾರ್ಲಿಮೆಂಟ್ ಕಾರಣವೆಂದು ಅಪಾದಿಸುತ್ತದೆ.

ಗಾಂಧಿಯ ಹಿಂದ್ ಸ್ವರಾಜ್‌ನ ರ್‍ಯಾಡಿಕಲಿಸಂ ಪಾರ್ಲಿಮೆಂಟ್ ವ್ಯವಸ್ಥೆಗೆ ಕುರಿತಂತೆ ಹೊಸ ಸಂಕಥನವನ್ನು ಸೃಷ್ಟಿಸಿದ್ದು ವಾಸ್ತವ. 1900 ದಶಕದಲ್ಲಿ ಈ ರೀತಿಯ ಚಿಂತನೆಗಳು ರ್‍ಯಾಡಿಕಲ್ ಚಿಂತನೆಗಳೆಂದರೆ ಅತಿಶಯೋಕ್ತಿ ಅಲ್ಲ.

1909 ಗಾಂಧಿಯ ರ್‍ಯಾಡಿಕಲಿಸಂನ ಪ್ರಥಮ ಘಟ್ಟ ಎನ್ನಬಹುದು. ಅದು ದಕ್ಷಿಣ ಆಫ್ರೀಕಾದಿಂದ ಆರಂಭಗೊಂಡರೂ, ಅದಕ್ಕೆ ನಿರ್ಧಿಷ್ಟ ಚೌಕಟ್ಟು, ಅಯಾಮ ಹಾಗೂ ದೃಷ್ಟಿಕೋನ ದೊರೆತದ್ದು ಹಿಂದ್ ಸ್ವರಾಜ್‌ನಿಂದ. ಇವತ್ತೂ ಕೂಡ ಅದರ ಪ್ರಭಾವ ಇದೆ. ಜಾಗತೀಕರಣದ ಸಂದರ್ಭದಲ್ಲಂತೂ ಅದರ ಪ್ರಭಾವ ನಿಚ್ಚಳವಾಗಿರುವುದು ಸ್ಪಷ್ಟ.ಜಾಗತೀಕರಣ ವಿರೋಧಿ ಹೋರಾಟಗಳಿಗಂತೂ ಹಿಂದ್ ಸ್ವರಾಜ್ ಒಂದು ಸ್ಪೂರ್ತಿ. ಹಿಂದ್ ಸ್ವರಾಜ್ ಈ ಶತಮಾನದಲ್ಲಿ ಹೊಸ ರೂಪದ ರ್‍ಯಾಡಿಕಲಿಸಂಗೆ ಅವಕಾಶ ಮಾಡಿಕೋಡುತ್ತಿರುವುದು ವಾಸ್ತವ. ಅದು ಅಭಿವೃದ್ಧಿಯ ಪಥವನ್ನು ಪ್ರಶ್ನಿಸುವುರಲ್ಲಿ, ಸಾಮಾಜಿಕ ವರ್ಗಗಳ ಅಸ್ತಿತ್ವಗಳ ಹುಡುಕಾಟದಲ್ಲಿ ನೋಡಬಹುದು. ಇದು ಹಿಂದ್ ಸ್ವರಾಜ್‌ನ ಜೀವಂತಿಕೆಗೆ ಸಾಕ್ಷಿ. □

ಭಾಗ್ಯ ಲಕ್ಷ್ಮಿ

ವನಿತೆಯರ ಪಾಲಿಗೆ ವರದಾನ

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಕ್ಕೆ ಹೆಚ್ಚಿನ ಮನ್ನಣೆ ದೊರಕಿಸಿಕೊಡುವ ಸದುದ್ದೇಶದಿಂದ ಕರ್ನಾಟಕ ಸರ್ಕಾರವು ಕೈಗೊಂಡಿರುವ ಮಹತ್ವದ ಯೋಜನೆ-ಭಾಗ್ಯಲಕ್ಷ್ಮಿ. ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ 31ನೇ ಮಾರ್ಚ್ 2006ರ ನಂತರ ಜನಿಸಿದ ಇಬರು ಹೆಣ್ಣು ಮಕ್ಕಳಿಗೆ, ಅವರು 18 ವರ್ಷ ವಯಸ್ಸು ತಲುಪಿದಾಗ ರೂ: ಒಂದು ಲಕ್ಷ ಮೊತ್ತವನ್ನು ನೀಡುವುದು ಈ ಯೋಜನೆಯ ಸಾರಾಂಶ.

<u>ಯೋಜನೆಯ ಮುಖ್ಯಾಂಶಗಳು:</u>

* 2006-07 ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ: 10850/- ಠೇವಣಿ.
* 2007-08ನೇ ಸಾಲಿನಲ್ಲಿ ನೋಂದಾಯಿತರಾದ ಫಲಾನುಭವಿಗಳಿಗೆ ರೂ: 20,000/- ಠೇವಣಿ 2008-09ನೆ ಸಾಲಿಗೆ ಇದನ್ನು ಇಮ್ಮಡಿಗೊಳಿಸಲಾಗಿದೆ.
* 31ನೇ ಮಾರ್ಚ್ 2006 ನಂತರ ಬಿಪಿಎಲ್ ಕುಟುಂಬದಲ್ಲಿ ಜನಿಸಿದ ಇಬ್ಬರು ಹೆಣ್ಣು ಮಕ್ಕಳು ಈ ಯೋಜನೆಗೆ ಅರ್ಹರು. ಆ ಕುಟುಂಬ 3 ಕ್ಕಿಂತ ಹೆಚ್ಚು ಮಕ್ಕಳನ್ನು ಹೊಂದಿರಬಾರದು.
* ಒಂದನೇ ತರಗತಿಯಿಂದ ಹತ್ತನೆಯ ತರಗತಿವರೆಗೆ ರೂ: 300/- ರಿಂದ ರೂ: 1000/- ವರೆಗಿನ ವಾರ್ಷಿಕ ವಿದ್ಯಾರ್ಥಿ ವೇತನ
* 18 ವರ್ಷ ವಯಸ್ಸಿನವರೆಗೆ ರೂ: 25,000/-ದಷ್ಟು ಆರೋಗ್ಯ ವಿಮೆ.
* ದುಡಿಯುತ್ತಿರುವ ತಂದೆ, ತಾಯಿ ಅಥವಾ ಪೋಷಕರ ಸಾವು ಸಂಭವಿಸಿದಲ್ಲಿ ರೂ: 1 ಲಕ್ಷದವರೆಗೆ ಕುಟುಂಬ ವಿಮೆ.

ಸ್ತ್ರೀ ಸಬಲೀಕರಣಕ್ಕೆ ವಿನೂತನ ಕ್ರಮ

ಕರ್ನಾಟಕ ವಾರ್ತೆ
Karnataka Information

'ಆಹಾರದ ಬಿಕ್ಕಟ್ಟು : ಆಹಾರದ ಹಕ್ಕು'



ಡಾ. ಟಿ.ಆರ್. ಚಂದ್ರಶೇಖರ್

ದೇಹಾರ ಮಾಡುವ ಅಣ್ಣಗಳಿರಾ ಅಣ್ಣಗಳಿರಾ
ಒಂದು ತುತ್ತು ಆಹಾರವನ್ನಿಕ್ಕಿರಯ್ಯಾ.
ದೇಹಾರಕ್ಕೆ ಆಹಾರವೇ ನಿಚ್ಚಣಿಕೆ.
ದೇಹಾರವ ಮಾಡುತ್ತೇ ಆಹಾರವನಿಕ್ಕದಿದ್ದರೆ
ಆ ಹರನಿಲ್ಲೆಂದ ನಂಬಿಗ ಚೌಡಯ್ಯ.

ಪ್ರಸ್ತಾವನೆ

ಆಹಾರವು ಜನರಿಗೆ ದೊರೆಯಬೇಕು. ಸಮಾಜದಲ್ಲಿ ಲಭ್ಯವಿರುವ ಆಹಾರವನ್ನು ಧಾರಣೆ ಮಾಡಿಕೊಳ್ಳುವ ಸಾಮರ್ಥ್ಯ ಜನರಿಗಿರಬೇಕು. ಇದನ್ನೇ ಆಹಾರ ಭದ್ರತೆಯೆಂದು ಕರೆಯಬಹುದು. ಜೀವಿಸುವ ಹಕ್ಕಿಗೂ ಮತ್ತು ಆಹಾರದ ಭದ್ರತೆಗೂ ಅಥವಾ ಆಹಾರದ ಹಕ್ಕಿಗೂ ನಡುವೆ ಸಂಬಂಧವಿದೆ. ಇವೆರಡೂ ಪರಸ್ಪರ ಪೂರಕವಾದ ಹಕ್ಕುಗಳು. ಆಹಾರ ಭದ್ರತೆಯನ್ನು ಒದಗಿಸದೆ ಜೀವಿಸುವ ಹಕ್ಕಿನ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾಗುತ್ತದೆ. ಜನರಿಗೆ ಆಹಾರವು ದೊರೆಯುವ ರೀತಿಯಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ. ಒಂದು ಸಾಮಾಜಿಕ/ರಾಜಕೀಯ/ಆರ್ಥಿಕ ವ್ಯವಸ್ಥೆಯು ನ್ಯಾಯಯುತವಾಗಿದೆಯೋ ಅಥವಾ ಇಲ್ಲವೋ ಎಂಬುದಕ್ಕೆ ಒರೆಗಲ್ಲು ಜನರ ಆಹಾರ ಭದ್ರತೆಯಾಗಿದೆ. ಆಹಾರ ಹಕ್ಕಿನ ಬಗ್ಗೆ ಮಾತನಾಡುವಾಗ ಅವಶ್ಯಕವಾಗಿ 'ದೇಶದ ಆಹಾರ ಭದ್ರತೆ' ಮತ್ತು 'ಜನರ ಆಹಾರ ಭದ್ರತೆ'ಗಳ ನಡುವಿನ ಭಿನ್ನತೆಯನ್ನು ಗುರುತಿಸಬೇಕಾಗುತ್ತದೆ. ಇವೆರಡರ ನಡುವೆ ಸಂಬಂಧವಿದೆ. ಆದರೆ ಅವೆರಡೂ ಅಭಿನ್ನವಲ್ಲ.

ದೇಶದ ಆಹಾರ ಭದ್ರತೆ ಬಗ್ಗೆ ಹೇಳಿದಷ್ಟೇ ಖಚಿತವಾಗಿ, ವಿಶ್ವಾಸಾರ್ಹವಾಗಿ ಜನರ ಆಹಾರ ಭದ್ರತೆ ಬಗ್ಗೆ ಮಾತನಾಡುವುದು ಸಾಧ್ಯವಿಲ್ಲ. ಇದಕ್ಕೆ ನಮ್ಮ ರಾಜ್ಯದ ಆಹಾರ ಅರ್ಥಶಾಸ್ತ್ರದ ಉದಾಹರಣೆಯನ್ನೇ ನೋಡಬಹುದು. ನಮ್ಮ ರಾಜ್ಯದಲ್ಲಿ ಸರಿಸುಮಾರು 60 ಲಕ್ಷ ದಿನಗೂಲಿ ದುಡಿಮೆಗಾರರಿದ್ದಾರೆ. ಅವರಲ್ಲಿ 40 ಲಕ್ಷ ಮಹಿಳಾ ದಿನಗೂಲಿ ದುಡಿಮೆಗಾರರಿದ್ದಾರೆ. ಇವರ ಉದ್ಯೋಗವು ಅನಿಶ್ಚಿತವಾದುದು, ಅಲ್ಲಿ ಕೂಲಿಯು ಕನಿಷ್ಠತಮವಾದುದು ಮತ್ತು ಅದು ಅಸಂಘಟಿತ ರೂಪದಲ್ಲಿದೆ. ಅಲ್ಲಿ ದುಡಿಮೆಗಾರರಿಗೆ ಯಾವುದೇ ಭದ್ರತೆಯಿಲ್ಲ. ಅವರೆಲ್ಲರೂ ಸಾಮಾನ್ಯವಾಗಿ ಅನಕ್ಷರಸ್ಥರಿರುತ್ತಾರೆ. ಅಪೌಷ್ಟಿಕತೆಯು ಇವರೆಲ್ಲರನ್ನೂ ಕಾಡುವ ಸಮಸ್ಯೆಯಾಗಿದೆ.

ಈ ಕಾರಣದಿಂದಾಗಿ ಇವರು ಆಹಾರ ಅಭದ್ರತೆಯಿಂದ ನರಳುತ್ತಿದ್ದಾರೆಂದು ಹೇಳಬಹುದು. ನಮ್ಮ ದೇಶವು ಸಾಧಿಸಿಕೊಂಡಿರುವ ಆಹಾರ ಭದ್ರತೆಯು ಜನರನ್ನು ಒಳಗೊಳ್ಳುವ ಸ್ವರೂಪದಲ್ಲಿಲ್ಲ. ಅಲ್ಲಿ ಉಳ್ಳವರು ಒಳಗಣದವರಾದರೆ ಉಳಿದವರು ಹೊರಗಣದವರಾಗಿದ್ದಾರೆ. ಆಹಾರ ಭದ್ರತೆಯು ನಿಜವಾಗಿ ಅರ್ಥಪೂರ್ಣವಾಗ ಬೇಕಾದರೆ ಅದು ಜನರನ್ನು ಒಳಗೊಳ್ಳುವಂತಿರಬೇಕು. ಆಹಾರ ಕುರಿತಂತೆ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ ಜನರ ಆಹಾರ ಭದ್ರತೆಯೆ ವಿನಾ ದೇಶದ ಆಹಾರ ಭದ್ರತೆಯಲ್ಲ.

ಸರಕು ಸಂಸ್ಕೃತಿ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವುದಕ್ಕೂ ಮತ್ತು ಜನರನ್ನು ಮೂಲಧಾತುವನ್ನಾಗಿ ಮಾಡಿಕೊಂಡು ಅಭಿವೃದ್ಧಿಯನ್ನು ನಿರ್ವಚಿಸಿಕೊಳ್ಳುವುದಕ್ಕೂ ನಡುವೆ ಮೂಲಭೂತ ಭಿನ್ನತೆಯಿದೆ. ಮೊದಲನೆಯ ಮಾದರಿಯಲ್ಲಿ ಅಭಿವೃದ್ಧಿಯ ಸಾಧನಕ್ಕೆ, ಅಂದರೆ ಸರಕಿಗೆ, ಉತ್ಪಾದನೆಗೆ, ತಂತ್ರಜ್ಞಾನಕ್ಕೆ ಒತ್ತು ಬೀಳುತ್ತಿದೆ ವಿನಾ ಜನರ ಮೇಲಲ್ಲ. ಎರಡನೆಯ ಮಾದರಿಯಲ್ಲಿ ಸರಕಿಗೆ ಪ್ರತಿಯಾಗಿ ಜನರಿಗೆ, ಜನರ ಅಕ್ಷರ ಸಂಸ್ಕೃತಿಗೆ, ಜನರ ಆರೋಗ್ಯಕ್ಕೆ, ಜನರ ಆಹಾರ ಭದ್ರತೆಗೆ, ಲಿಂಗ ಸಮಾನತೆಗೆ ಮುಂತಾದವುಗಳಿಗೆ ಒತ್ತು ದೊರೆಯುತ್ತದೆ. ಮೊದಲನೆಯ ಪ್ರಣಾಳಿಕೆಯಲ್ಲಿ ಜನರು ಅಭಿವೃದ್ಧಿಗಾಗಿರುತ್ತಾರೆ ವಿನಾ ಜನರಿಗಾಗಿ ಅಭಿವೃದ್ಧಿಯಲ್ಲ. ಆದರೆ ಎರಡನೆಯ ಪ್ರಣಾಳಿಕೆಯಲ್ಲಿ ಅಭಿವೃದ್ಧಿಯು ಜನರಿಗಾಗಿರುತ್ತದೆ.

ಆಹಾರ ಭದ್ರತೆಯು ಜನರಿಗಾಗಿರ ಬೇಕು, ಅದು ಜನರನ್ನು ಒಳಗೊಳ್ಳುವಂತಿರಬೇಕು. ಆಗ ಮಾತ್ರ ಅಲ್ಲಿ ಜನರು ಸಮೃದ್ಧಿಯಿಂದ ಬದುಕುವುದು ಸಾಧ್ಯ. ಆದರೆ ಇದನ್ನು ಸಾಧಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ಇದಕ್ಕೆ ಅಭಿವೃದ್ಧಿಯನ್ನು ಕುರಿತಂತೆ ನಮ್ಮ ಸೈದ್ಧಾಂತಿಕ ನಿಲವು ಬದಲಾಗಬೇಕಾಗುತ್ತದೆ. ಸಾಂಪ್ರದಾಯಿಕ ವರಮಾನ ಕೇಂದ್ರಿತ ಅಭಿವೃದ್ಧಿ ಪ್ರಣಾಳಿಕೆಯನ್ನು ಬಿಟ್ಟು ನಾವು ಜನರನ್ನು ಮೂಲಧಾತುವನ್ನಾಗಿ ಮಾಡಿಕೊಂಡಿರುವ ಧಾರಣಾ ಸಾಮರ್ಥ್ಯ ಆಧರಿತ ಅಭಿವೃದ್ಧಿ ಸಿದ್ಧಾಂತವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಸಿದ್ಧಾಂತದ ಮೂಲಕ ನಾವು ಆಹಾರ ಭದ್ರತೆಯ ಪ್ರಶ್ನೆಯನ್ನು ಪರಿಶೀಲಿಸಬೇಕು. ಪ್ರಸ್ತುತ ಪ್ರಬಂಧದಲ್ಲಿ ಆಹಾರ ಬಿಕ್ಕಟ್ಟು ಎಂಬುದು ಹೇಗೆ ಕೃತಕವಾದುದು ಮತ್ತು ಹಸಿವಿಗೂ ಅದಕ್ಕೂ ಸಂಬಂಧವಿಲ್ಲವೆಂಬುದನ್ನು ಇಲ್ಲಿ ಕರ್ನಾಟಕವನ್ನು ನಿದರ್ಶನವನ್ನಾಗಿಟ್ಟುಕೊಂಡು ಚರ್ಚಿಸಲಾಗಿದೆ.

ಹಸಿವಿನಿಂದ ಸ್ವಾತಂತ್ರ್ಯ

'ಸ್ವಾತಂತ್ರ್ಯವಾಗಿ ಅಭಿವೃದ್ಧಿ'ಯೆಂದು ಅಮರ್ತ್ಯಸೇನ್(1999) ಹೇಳಿದಾಗ ಅವನು ಹಸಿವಿನಿಂದ ಜನರು ಸ್ವಾತಂತ್ರ್ಯವನ್ನು ಪಡೆದಿದ್ದಾರೆಯೇ ಅಥವಾ ಇಲ್ಲವೇ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಮಾತನಾಡುತ್ತಿದ್ದಾನೆ ಎಂಬುದನ್ನು ನಾವು ಮರೆಯಬಾರದು. ಇಲ್ಲಿ ಸೇನ್ ಇತ್ಯಾತ್ಮಕ ಸ್ವಾತಂತ್ರ್ಯ ಮತ್ತು ನೇತ್ಯಾತ್ಮಕ ಸ್ವಾತಂತ್ರ್ಯಗಳ ನಡುವಿನ ಭಿನ್ನತೆಯ ಕಡೆ ನಮ್ಮ ಗಮನಸೆಳೆಯುತ್ತಿದ್ದಾನೆ. ಆಹಾರಕ್ಕೆ ಸಂಬಂಧಿಸಿದ ಮಾರುಕಟ್ಟೆಯ ಮುಕ್ತತೆ ಬಗ್ಗೆ, ಸರ್ಕಾರದ ನಿಯಂತ್ರಣಗಳಿಂದ ಅತೀತವಾದ ಸ್ಥಿತಿಯ ಬಗ್ಗೆ ಅವನು ಮಾತನಾಡುತ್ತಿಲ್ಲ. ಮಾರುಕಟ್ಟೆಯನ್ನು ನಿಯಂತ್ರಣಗಳಿಂದ ಮುಕ್ತಗೊಳಿಸುವುದು ನೇತ್ಯಾತ್ಮಕ ಸ್ವಾತಂತ್ರ್ಯ.

ಅಮರ್ತ್ಯಸೇನ್ 'ಸ್ವಾತಂತ್ರವಾಗಿ ಅಭಿವೃದ್ಧಿ' ಎಂದಾಗ ಅವನು ಜನರು ಹಸಿವಿನಿಂದ ಸ್ವಾತಂತ್ರ್ಯ ಸಾಧಿಸಿಕೊಳ್ಳುವಂತಹ ಸಾಮರ್ಥ್ಯ ಪಡೆದುಕೊಂಡಿದ್ದಾರೆಯೇ, ಅನಕ್ಷರತೆಯಿಂದ ಸ್ವಾತಂತ್ರ್ಯ, ಅಸ್ವಸ್ಥತೆಯಿಂದ ಸ್ವಾತಂತ್ರ್ಯ, ಲಿಂಗ ಅಸಮಾನತೆಯಿಂದ ಸ್ವಾತಂತ್ರ್ಯ, ಸಾಮಾಜಿಕ ಅವಮಾನದಿಂದ ಸ್ವಾತಂತ್ರ್ಯ ಪಡೆದುಕೊಳ್ಳುವ ಸಾಮರ್ಥ್ಯ ಪಡೆದಿದ್ದಾರೆಯೇ ಎಂಬುದರ ಬಗ್ಗೆ ಮಾತನಾಡುತ್ತಿದ್ದಾನೆ. ಈ ಬಗೆಯ ಸ್ವಾತಂತ್ರ್ಯ ಮತ್ತು ಸಾಮರ್ಥ್ಯ ಜನರಿಗಿದೆಯೇ ಎಂಬುದು ನಾವು ಇಲ್ಲಿ ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿದೆ. ಈ ಸ್ವಾತಂತ್ರ್ಯ, ಈ ಸಾಮರ್ಥ್ಯವನ್ನೇ

ದೇಶದ ಆಹಾರ ಭದ್ರತೆ ಬಗ್ಗೆ ಹೇಳಿದಷ್ಟೇ ಖಚಿತವಾಗಿ, ವಿಶ್ವಾಸಾರ್ಹವಾಗಿ ಜನರ ಆಹಾರ ಭದ್ರತೆ ಬಗ್ಗೆ ಮಾತನಾಡುವುದು ಸಾಧ್ಯವಿಲ್ಲ. ಇದಕ್ಕೆ ನಮ್ಮ ರಾಜ್ಯದ ಆಹಾರ ಅರ್ಥಶಾಸ್ತ್ರದ ಉದಾಹರಣೆಯನ್ನೇ ನೋಡಬಹುದು. ನಮ್ಮ ರಾಜ್ಯದಲ್ಲಿ ಸರಿ ಸುಮಾರು ೬೦ ಲಕ್ಷ ದಿನಗೂಲಿ ದುಡಿಮೆಗಾರರಿದ್ದಾರೆ. ಅವರಲ್ಲಿ ೪೦ ಲಕ್ಷ ಮಹಿಳಾ ದಿನ ಗೂಲಿ ದುಡಿಮೆಗಾರರಿದ್ದಾರೆ. ಇವರ ಉದ್ಯೋಗವು ಅನಿಶ್ಚಿತವಾದುದು, ಅಲ್ಲಿ ಕೂಲಿಯು ಕನಿಷ್ಟತಮವಾದುದು ಮತ್ತು ಅದು ಅಸಂಘಟಿತ ರೂಪದಲ್ಲಿದೆ. ಅಲ್ಲಿ ದುಡಿಮೆಗಾರರಿಗೆ ಯಾವುದೇ ಭದ್ರತೆಯಿಲ್ಲ. ಅವರೆಲ್ಲರೂ ಸಾಮಾನ್ಯವಾಗಿ ಅನಕ್ಷರಸ್ಥರಿರುತ್ತಾರೆ. ಅಪೌಷ್ಟಿಕತೆಯು ಇವರೆಲ್ಲರನ್ನೂ ಕಾಡುವ ಸಮಸ್ಯೆಯಾಗಿದೆ. ಈ ಕಾರಣದಿಂದಾಗಿ ಇವರು ಆಹಾರ ಅಭದ್ರತೆಯಿಂದ ನರಳುತ್ತಿದ್ದಾರೆಂದು ಹೇಳಬಹುದು.

ನಾವು ಆಹಾರ ಭದ್ರತೆಯೆಂದು ಕರೆಯುತ್ತಿದ್ದೇವೆ. ಆಹಾರ ಉತ್ಪಾದನೆ ಎಂಬುದು ಕೇವಲ ಸರಕಿಗೆ ಸಂಬಂಧಿಸಿದ ಸಂಗತಿ. ಆದರೆ ಹಸಿವು ಎಂದಾಗ ಅದು ಸರುಕು-ಜನರ ನಡುವಿನ ಸಂಬಂಧಕ್ಕೆ ಸೇರಿದ ಸಂಗತಿ. ಹಸಿವು ಎಂದಾಗ ಅದು ಜನರಿಗೆ ಸಂಬಂಧಿಸಿದ ಸಂಗತಿ. ಈ ಬಗ್ಗೆ ಅಮರ್ತ್ಯಸೇನ್ ಹೇಳುವ ಮಾತುಗಳು ಮಾರ್ಮಿಕವಾಗಿವೆ.

'ಆಹಾರೋತ್ಪಾದನೆಗೆ ಸಂಬಂಧಿಸಿದ ಹೇಳಿಕೆಗಳು ಆಹಾರವನ್ನು ಪ್ರತ್ಯೇಕವಾಗಿ ಪರಿಗಣಿಸಿದ ನಿರಪೇಕ್ಷ ಹೇಳಿಕೆಗಳು. ಆದರೆ ಹಸಿವಿಗೆ ಸಂಬಂಧಿಸಿದ ಹೇಳಿಕೆಗಳು ಆಹಾರ ಮತ್ತು ಜನರ ನಡುವಿನ ಸಂಬಂಧಕ್ಕೆ ಸೇರಿದ ಸಾಪೇಕ್ಷ ಹೇಳಿಕೆಗಳಾಗಿವೆ'.

ಆಹಾರೋತ್ಪಾದನೆಯೆಂಬುದು ಜನರನ್ನು ಒಳಗೊಳ್ಳದೆ ನಡೆಯಬಹುದು. ಜನರನ್ನು ಒಳಗೊಳ್ಳದೆಯೂ ದೇಶವೊಂದು ಆಹಾರ ಭದ್ರತೆಯನ್ನು, ಆಹಾರದಲ್ಲಿ ಸ್ವಾವಲಂಬನೆಯನ್ನು ಸಾಧಿಸಿಕೊಳ್ಳಬಹುದು. ಆದರೆ ಹಸಿವು ಮತ್ತು ಆಹಾರದ ಹಕ್ಕು ಎಂಬುದು ಆಹಾರ ಮತ್ತು ಜನರ ನಡುವಿನ ಸಂಬಂಧವನ್ನು ಸೂಚಿಸುವ ಸಂಗತಿಯಾಗಿದೆ. ಆಹಾರದ ಬಿಕ್ಕಟ್ಟನ್ನು ಅಥವಾ ಆಹಾರದ ಭದ್ರತೆಯನ್ನು ಕುರಿತಂತೆ ಚರ್ಚೆಯನ್ನು ಸಂಬಂಧವಾದಿ ನೆಲೆಯಲ್ಲಿ ನಡೆಸುವ ಅಗತ್ಯವಿದೆ. ಅದು ಜನರನ್ನು ಒಳಗೊಳ್ಳುವಂತೆ ಮಾಡಲು ನಾವು ಪ್ರಜ್ಞಾಪೂರ್ಣ ಪ್ರಯತ್ನ ಮಾಡಬೇಕಾಗುತ್ತದೆ. ಆಹಾರೋತ್ಪಾದನೆಯನ್ನು ಹೆಚ್ಚಿಸಿಬಿಟ್ಟರೆ, ಅದರಲ್ಲಿ ಸ್ವಾವಲಂಬನೆಯನ್ನು ಸಾಧಿಸಿಕೊಂಡುಬಿಟ್ಟರೆ, ಹಸಿರು ಕ್ರಾಂತಿಯು ನಡೆದು ಬಿಟ್ಟರೆ ಹಸಿವು ನಿವಾರಣೆಯಾಗಿ ಬಿಡುತ್ತದೆ ಎಂದು ಮುಗ್ಧವಾಗಿ ನಂಬಲಾಗಿದೆ. ಇದು ಸರಿಯಲ್ಲವೆಂಬುದು ಈಗಾಗಲೇ ದೃಢಪಟ್ಟಿದೆ.

ಆಹಾರೋತ್ಪಾದನೆಯೆಂಬುದು ಜನರನ್ನು ಒಳಗೊಳ್ಳದೆ ನಡೆಯಬಹುದು. ಜನರನ್ನು ಒಳಗೊಳ್ಳದೆಯೂ ದೇಶವೊಂದು ಆಹಾರ ಭದ್ರತೆಯನ್ನು, ಆಹಾರದಲ್ಲಿ ಸ್ವಾವಲಂಬನೆಯನ್ನು ಸಾಧಿಸಿಕೊಳ್ಳಬಹುದು. ಆದರೆ ಹಸಿವು ಮತ್ತು ಆಹಾರದ ಹಕ್ಕು ಎಂಬುದು ಆಹಾರ ಮತ್ತು ಜನರ ನಡುವಿನ ಸಂಬಂಧವನ್ನು ಸೂಚಿಸುವ ಸಂಗತಿಯಾಗಿದೆ. ಆಹಾರದ ಬಿಕ್ಕಟ್ಟನ್ನು ಅಥವಾ ಆಹಾರದ ಭದ್ರತೆಯನ್ನು ಕುರಿತಂತೆ ಚರ್ಚೆಯನ್ನು ಸಂಬಂಧವಾದಿ ನೆಲೆಯಲ್ಲಿ ನಡೆಸುವ ಅಗತ್ಯವಿದೆ.

'ಟ್ರಿಕಲ್ ಡೌನ್' ಸಿದ್ಧಾಂತವು ವಿಫಲವಾಗಿದೆಯೆಂದು ನೊಬಲ್ ಅರ್ಥಶಾಸ್ತ್ರಜ್ಞ ಜೊಸೆಫ್ ಸ್ಟಿಗ್‌ಲಿಟ್ಜ್ ಹೇಳುತ್ತಿದ್ದಾನೆ. ಉತ್ಪಾದನೆಯಾದ ಆಹಾರವು ತನ್ನಷ್ಟಕ್ಕೆ ತಾನೆ ಜನರಿಗೆ ಒದಗುವುದಿಲ್ಲ. ಆಹಾರ ಉತ್ಪಾದನೆ ಬೇರೆ, ಅದು ಜನರಿಗೆ ದೊರಕುವುದು ಬೇರೆ. ಮೊದಲನೆಯದು ಆರ್ಥಿಕ- ತಾಂತ್ರಿಕ ಸಂಗತಿಯಾದರೆ ಎರಡನೆಯದು ಸಾಮಾಜಿಕ-ರಾಜಕೀಯ ಸಂಗತಿಯಾಗಿದೆ. ಆಹಾರವು ಜನರಿಗೆ ದೊರಕಬೇಕು. ಅದನ್ನು ಪಡೆದುಕೊಳ್ಳುವ ಸಾಮರ್ಥ್ಯ ಜನರಿಗಿರಬೇಕು. ಇಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಯ ಪಾತ್ರ ಮಹತ್ವದ್ದಾಗಿದೆ. ಅದರ ನಿರ್ವಹಣೆಗೆ ಆಹಾರದ ಹಕ್ಕು ಸಂಬಂಧಿಸಿದೆ. ನಾವು ಅಭಿವೃದ್ಧಿಯ ಸಾಧನಗಳ ಬಗ್ಗೆ ನೀಡಿದಷ್ಟೇ ಗಮನವನ್ನು ಅಭಿವೃದ್ಧಿಯ ಗುರಿಯ ಬಗ್ಗೆಯೂ ನೀಡಬೇಕಾದುದು ಅಗತ್ಯ. ಜನರು ಅಭಿವೃದ್ಧಿಯ ಸಾಧನವೂ ಹೌದು ಮತ್ತು ಅವರು ಅಭಿವೃದ್ಧಿಯ ಕರ್ತೃಗಳೂ ಹೌದು. ಅಭಿವೃದ್ಧಿಗೆ ಸಂಪನ್ಮೂಲಗಳು ಬೇಕು, ನಿಜ. ಜನರು ಕೇವಲ ಸಂಪನ್ಮೂಲವಲ್ಲ. ಅವರು ಸಂಪನ್ಮೂಲವನ್ನು ಹೊಂದಿರುತ್ತಾರೆ. ಆ ಸಂಪನ್ಮೂಲದ ಫಲವಾಗಿ ಪ್ರಾಪ್ತವಾಗುವ ಉತ್ಪತ್ತಿಗೆ ಅವರು ವಾರಸುದಾರರಾಗಿರುತ್ತಾರೆ. ಅಂದರೆ ಅಭಿವೃದ್ಧಿಯು ಜನರನ್ನು ಒಳಗೊಳ್ಳುವಂತಿರಬೇಕು.

ಮಾಲ್ಥಸ್‌ನ ಭೂತ

ಜನಸಂಖ್ಯೆಯ ಬೆಳವಣಿಗೆಗೆ ಸಂಬಂಧಿಸಿದಂತೆ ಆತಂಕಕಾರಿ ಸಿದ್ಧಾಂತವನ್ನು ಮಂಡಿಸಿದ ಅರ್ಥಶಾಸ್ತ್ರಜ್ಞನೆಂದರೆ ಟಿ.ಆರ್.ಮಾಲ್ಥಸ್. ಈ ಬಗ್ಗೆ ಅವನ ಪ್ರಮೇಯವೆಂದರೆ ಆಹಾರೋತ್ಪಾದನೆಯ ಬೆಳವಣಿಗೆ ಪ್ರಮಾಣ ಮತ್ತು ನಡೆ ಕಾಲಕ್ರಮೇಣ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಮತ್ತು ನಡೆಗಿಂತ ಕಡಿಮೆಯಾಗುವುದರಿಂದ ಅಲ್ಲಿ ಆಹಾರದ ಬೇಡಿಕೆ ಮತ್ತು ಅದರ ಉತ್ಪಾದನೆಗಳ ನಡುವೆ ಅಸಮತೋಲನ ಉಂಟಾಗುತ್ತದೆ. ಅದರಿಂದ ಆರ್ಥಿಕತೆಯಲ್ಲಿ ಸಮಸ್ಯೆಗಳುಂಟಾಗುತ್ತವೆ. ಈ ಕಾರಣದಿಂದಾಗಿ ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸಬೇಕು ಎಂಬುದು ಮಾಲ್ಥಸ್‌ನ ಸಿದ್ಧಾಂತ. ಕೃಷಿಯು ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮಕ್ಕೆ ಒಳಪಡುವ ಉದ್ಯಮವಾಗಿದೆ. ಇದರಿಂದಾಗಿ ಕಾಲಕ್ರಮೇಣ ಆಹಾರೋತ್ಪಾದನೆಯ ಬೆಳವಣಿಗೆ ನಡೆ ಮತ್ತು ಪ್ರಮಾಣವು ಕುಸಿಯತೊಡಗುತ್ತದೆ. ಈ ನಿಯಮ ಜನಸಂಖ್ಯೆಯ ಬೆಳವಣಿಗೆಗೆ ಅನ್ವಯಿಸುವುದಿಲ್ಲ. ಆದ್ದರಿಂದ ಜನಸಂಖ್ಯೆಯ ಬೆಳವಣಿಗೆಯು ಆರ್ಥಿಕತೆಗೆ ಅಪಾಯಕಾರಿಯಾಗಿ ಬಿಡುತ್ತದೆ.

ಆದರೆ ಮಾಲ್ಥಸ್‌ನ ಪ್ರಮೇಯವು ಹುಸಿಯೆಂಬುದು ಈಗ ಸಿದ್ಧವಾದ ಸಂಗತಿಯಾಗಿದೆ. ಚಾರಿತ್ರಿಕವಾಗಿ ಅದು ವಿಫಲವಾಗಿದೆ. ವಿಶ್ವದ ಯಾವ ದೇಶದಲ್ಲೂ ಅವನ ಪ್ರಮೇಯವು ವಾಸ್ತವ ಸ್ಥಿತಿಯಾಗಿ ದೃಢಪಡಲಿಲ್ಲ. ಈ ಪ್ರಮೇಯವನ್ನು ಕರ್ನಾಟಕಕ್ಕೆ ಅನ್ವಯಿಸಿದರೆ ನಮಗೆ ಅಲ್ಲಿ ಭಿನ್ನವಾದ ಚಿತ್ರ ಕಂಡು ಬರುತ್ತದೆ. ಇಲ್ಲಿ ಕರ್ನಾಟಕದ ಉದಯದ(1956)ನಂತರ ಯಾವ ದಶಕದಲ್ಲೂ ಆಹಾರೋತ್ಪಾದನೆಯ ವಾರ್ಷಿಕ ಬೆಳವಣಿಗೆ ಪ್ರಮಾಣವು ಅದರ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣಕ್ಕಿಂತ ಕಡಿಮೆಯಾಗಿಲ್ಲ(ಆಹಾರೋತ್ಪಾದನೆ ಕರ್ನಾಟಕದಲ್ಲಿ 2001ರಲ್ಲಿ 88.97 ಲಕ್ಷ ಟನ್ನಗಳಷ್ಟಿದ್ದುದು 2009ರಲ್ಲಿ 108.77 ಲಕ್ಷ ಟನ್ನುಗಳಷ್ಟಾಗಿದೆ).

ನಮ್ಮ ರಾಜ್ಯದಲ್ಲಿ ಆಹಾರೋತ್ಪಾದನೆಯ ಬೆಳವಣಿಗೆ ಪ್ರಮಾಣವು 2001-2009ರ ಅವಧಿಯಲ್ಲಿ ವಾರ್ಷಿಕ ಶೇ 2.78 ರಷ್ಟಿದೆ. ಆದರೆ ಜನ ಸಂಖ್ಯೆಯ ಬೆಳವಣಿಗೆ ಪ್ರಮಾಣವು 1981-1991ರ ದಶಕದಲ್ಲಿ ವಾರ್ಷಿಕ ಶೇ 2.11 ರಷ್ಟಿದ್ದುದು 1991-2001ರ ದಶಕದಲ್ಲಿ ಅದು ಶೇ 1.75 ರಷ್ಟಕ್ಕಿಳಿದಿದೆ. ರಾಜ್ಯದ ಹೈದರಾಬಾದ್ ಕರ್ನಾಟಕ ಪ್ರದೇಶದ ನಾಲ್ಕು ಮತ್ತು ಬಳ್ಳಾರಿ ಜಿಲ್ಲೆಗಳನ್ನು ಬಿಟ್ಟು ಉಳಿದ ಇಪ್ಪತ್ತೆರಡು ಜಿಲ್ಲೆಗಳಿಗೆ ನಾವು ಲೆಕ್ಕ ಹಾಕಿದರೆ ಜನ ಸಂಖ್ಯೆಯ ಬೆಳವಣಿಗೆ ಪ್ರಮಾಣ 2001 ರಲ್ಲಿ ಕೇವಲ ಶೇ 1.72. ಇದು 2001-2011ರ ದಶಕದಲ್ಲಿ ಇನ್ನೂ ಹೆಚ್ಚಿನ ನಡೆಯಲ್ಲಿ ಕಡಿಮೆಯಾಗುವ ಸಾಧ್ಯತೆಯಿದೆ. ವಾಸ್ತವವಾಗಿ ನಾವು ಯಾವುದನ್ನು ಅತ್ಯಂತ ಹಿಂದುಳಿದ ಪ್ರದೇಶವೆಂದು ಕರೆಯುತ್ತಿದ್ದೆವೆಯೋ ಆ ಹೈ. ಕ. ಪ್ರದಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣವು 1981 -1991 ರಲ್ಲಿ ವಾರ್ಷಿಕ ಶೇ 2.66 ರಷ್ಟಿದ್ದುದು 1991-2001ರಲ್ಲಿ ವಾರ್ಷಿಕ ಶೇ 1.85 ರಷ್ಟಾಗಿದೆ. ನಾವು ಜನಸಂಖ್ಯೆಗೆ ಸಂಬಂಧಿಸಿದಂತೆ ಮಾಲ್ಥಸ್‌ನ ಭೂತದ ಭಾದೆಯಿಂದ ಬಹಳ ದೂರ ಬಂದುಬಿಟ್ಟಿದ್ದೇವೆ. ಇಂದು ನಾವು ಜನಸಂಖ್ಯೆಯ ಗುಣಮಟ್ಟದ ಬಗ್ಗೆ ಗಮನಹರಿಸಬೇಕಾಗಿದೆ.

ಜನಸಂಖ್ಯೆಯ ಬೆಳವಣಿಗೆಯು ಇಳಿಮುಖವಾಗುತ್ತಿದೆ ಎಂಬುದಕ್ಕೆ ಮತ್ತೊಂದು ಸೂಚಿಯೆಂದರೆ ಜನಸಂಖ್ಯೆಯಲ್ಲಿನ 0-6 ವಯೋಮಾನದ ಮಕ್ಕಳ ಸಂಖ್ಯೆ. ರಾಜ್ಯದಲ್ಲಿ 1991ರಲ್ಲಿ 0-6 ವಯೋಮಾನದ ಮಕ್ಕಳ ಸಂಖ್ಯೆ 74.78 ಲಕ್ಷವಿದ್ದುದು 2001ರಲ್ಲಿ ಅದು 71.82ಲಕ್ಷಕ್ಕಿಳಿದಿದೆ. ಒಟ್ಟು ಜನಸಂಖ್ಯೆಯಲ್ಲಿ 0-6 ವಯೋಮಾನದ ಮಕ್ಕಳ ಪ್ರಮಾಣ 1991ರಲ್ಲಿ ಶೇ 16.62ರಷ್ಟಿದ್ದುದು 2001ರಲ್ಲಿ ಅದು ಶೇ 13.59ಕ್ಕಿಳಿದಿದೆ. ಅದೇ ರೀತಿಯಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿಯೂ(ಐದು ಜಿಲ್ಲೆಗಳು) 0-6 ವಯೋಮಾನದ ಮಕ್ಕಳ ಸಂಖ್ಯೆ 1991ರಲ್ಲಿ 16.24 ಲಕ್ಷದಷ್ಟಿದ್ದುದು 2001ರಲ್ಲಿ ಅದು 15.88 ಲಕ್ಷಕ್ಕಿಳಿದಿದೆ.

ಅಂದರೆ ಇಲ್ಲಿ 1991ರಲ್ಲಿ ಒಟ್ಟು ಜನಸಂಖ್ಯೆಯಲ್ಲಿ 0–6 ವಯೋಮಾನದ ಮಕ್ಕಳ ಪ್ರಮಾಣ ಶೇ 20.20 ರಷ್ಟಿದ್ದುದು 2001ರಲ್ಲಿ ಶೇ 16.67ಕ್ಕಿಳಿದಿದೆ.

ಇವೆಲ್ಲವೂ ಏನನ್ನು ಸೂಚಿಸುತ್ತಿವೆ?. ನಮ್ಮ ಜನಸಂಖ್ಯೆಯ ಬೆಳವಣಿಗೆಯ ನಡೆ ಇಳಿಮುಖವಾಗುತ್ತಿದೆ. ಅದು ತನ್ನ ಎಳೆತನವನ್ನು ಕಳೆದು ಕೊಳ್ಳುತ್ತಿದೆ. ನಿಜವಾಗಿ ಇಲ್ಲಿರುವುದು ಅಭಿವೃದ್ಧಿಯ ಪ್ರಶ್ನೆಯೇ ವಿನಾ ಜನಸಂಖ್ಯೆಯ ಅಪರಿಮಿತ ಬೆಳವಣಿ ಗೆಯ ಪ್ರಶ್ನೆಯಲ್ಲ. ಈ ದಿಶೆಯಲ್ಲಿ ಅಮರ್ತ್ಯಸೇನ್ 'ವಿಶ್ವದಲ್ಲಿ ಜನಸಂಖ್ಯೆಯ ಬೆಳವಣಿಗೆಯನ್ನು ಕುರಿತಂತೆ ಉತ್ಪ್ರೇಕ್ಷೆಯ ಭಾವನೆಯಿದೆ' ಯೆಂದು ಹೇಳುತ್ತಿರುವುದರಲ್ಲಿ ಸತ್ಯಾಂಶವಿರುವಂತೆ ಕಾಣುತ್ತಿದೆ. ಜನಲೋಲುಪತೆಗೆ ಪ್ರತಿಯಾಗಿ ಇದನ್ನು ನಾವು ವಿವೇಚನಾಶೀಲರಾಗಿ ಸಮಸ್ಯೆಯನ್ನು ಪರಿಶೀಲಿಸುವ ಅಗತ್ಯವಿದೆ.

ಕರ್ನಾಟಕದಲ್ಲಿ ಆಹಾರ ಭದ್ರತೆ!

ಕರ್ನಾಟಕದಲ್ಲಿ 2008–09ರಲ್ಲಿನ ಆಹಾರೋತ್ಪಾದನೆ 109 ಲಕ್ಷ ಟನ್ನುಗಳು. ಇದನ್ನು ಕೆ.ಜಿ. ಮಾನಕ್ಕೆ ಪರಿವರ್ತಿಸಿದರೆ ನಮಗೆ 109000 ಲಕ್ಷ ಕೆ.ಜಿ. ದೊರೆಯುತ್ತದೆ. ನಮ್ಮ ರಾಜ್ಯದಲ್ಲಿ 2008ರಲ್ಲಿನ ಜನಸಂಖ್ಯೆ 594.46 ಲಕ್ಷ. ಈ 594.46 ಲಕ್ಷ ಜನಸಂಖ್ಯೆಗೆ 109000 ಲಕ್ಷ ಕೆ.ಜಿ. ಈ ಆಹಾರವನ್ನು ಹಂಚಿದರೆ ಒಬ್ಬೊಬ್ಬರಿಗೆ ವಾರ್ಷಿಕ 183.35 ಕೆ.ಜಿ. ದೊರೆಯುತ್ತದೆ. ಐದು ಜನರ ಒಂದು ಕುಟುಂಬಕ್ಕೆ ವಾರ್ಷಿಕ 917 ಕೆ.ಜಿ. ದೊರೆಯುತ್ತದೆ. ಅಂದರೆ ಇದರರ್ಥ ನಾವು ನಮ್ಮ ರಾಜ್ಯದ ಎಲ್ಲರಿಗೂ ಸಾಕಾಗುವಷ್ಟು ಆಹಾರ ಪದಾರ್ಥವನ್ನು ಬೆಳೆಯುತ್ತಿದ್ದೇವೆ. ಕರ್ನಾಟಕವು ಆಹಾರ ಭದ್ರತೆಯನ್ನು ಸಾಧಿಸಿಕೊಂಡಿದೆ. ಆದರೆ ಇಲ್ಲಿರುವ ಪ್ರಶ್ನೆಯೆಂದರೆ ಜನರ ಆಹಾರ ಭದ್ರತೆ. 'ದೇಶದ ಆಹಾರ ಭದ್ರತೆ' ಮತ್ತು 'ಜನರ ಆಹಾರ ಭದ್ರತೆ' ಎರಡು ಅಭಿನ್ನವಲ್ಲ. ನಮ್ಮ ರಾಜ್ಯದಲ್ಲಿ ಆಹಾರಕ್ಕೆ ಕೊರತೆಯಿಲ್ಲ. ಅಮರ್ತ್ಯಸೇನ್ ಹೇಳುವಂತೆ ಹಸಿವು ಎಂಬುದು ಆಹಾರೋತ್ಪಾದನೆ ಇಲ್ಲದುದರಿಂದ ಉಂಟಾಗುವ ಸಮಸ್ಯೆಯಲ್ಲ. ಈ ಹಿನ್ನೆಲೆಯಲ್ಲಿ ನಾವು ಅಮರ್ತ್ಯಸೇನ್‌ನ ಬೀಜ ಸದೃಶ ಮಾತುಗಳನ್ನು ಪರಿಶೀಲಿಸಬೇಕು.

'ಹಸಿವು ಎಂಬುದು ಸಮಾಜದಲ್ಲಿ ಕೆಲವರಿಗೆ ಆಹಾರವು ಅನುಭೋಗಿಸಲು ದೊರೆಯದಿರುವುದರ ಲಕ್ಷಣವಾಗಿದೆ.

ಅದು ಆಹಾರವು ಎಷ್ಟು ಬೇಕೋ ಅಷ್ಟು ಅನುಭೋಗಿಸಲು ಇಲ್ಲದಿರುವುದರ ಲಕ್ಷಣವಲ್ಲ'.

ಅಂದರೆ ಹಸಿವು ಎಂಬುದು ಆಹಾರ ಕೊರತೆಯಿಂದ ಉಂಟಾಗುವ ಸಮಸ್ಯೆಯಲ್ಲ. ಅದು ಜನರ ಧಾರಣ ಸಾಮರ್ಥ್ಯದ ಕೊರತೆಯಿಂದ ಉಂಟಾಗುವ ಸಮಸ್ಯೆ. ಆಹಾರೋತ್ಪಾದನೆಯ ಕುಸಿತದಿಂದ ಬರಗಾಲಗಳು ಉಂಟಾಗುವುದಿಲ್ಲ, ಹಸಿವು ಉಂಟಾಗುವುದಿಲ್ಲ ಎಂಬುದನ್ನು ವಿಸ್ತೃತವಾದ ಅಧ್ಯಯನಗಳಿಂದ ಅಮರ್ತ್ಯಸೇನ್ ಸಿದ್ಧ ಮಾಡಿ ತೋರಿಸಿದ್ದಾನೆ. ಆಹಾರವನ್ನು ದಕ್ಕಿಸಿಕೊಳ್ಳಲು ಜನರಲ್ಲಿನ ಧಾರಣಾ ಸಾಮರ್ಥ್ಯ ದುರ್ಬಲವಾಗಿದ್ದಾಗ ಅಲ್ಲಿ ಹಸಿವು, ಆಹಾರ ಅಭದ್ರತೆ, ಅಪೌಷ್ಟಿಕತೆ ಉಂಟಾಗುತ್ತವೆ. ನಮ್ಮ ಉತ್ಪಾದನಾ ಕ್ಷಮತೆಯ ನೆಲೆಯಲ್ಲಿ ನಮಗೆ ಆಹಾರದ ಹಕ್ಕನ್ನು ಪೂರೈಸುವುದು ಏನೇನೂ ಕಷ್ಟವಾಗಬಾರದು. ಅದಕ್ಕೆ ಬೇಕಾದುದು ನಾವು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುತ್ತಿರುವ ಕ್ರಮದಲ್ಲಿ ಬದಲಾಗಬೇಕು. ಅಭಿವೃದ್ಧಿಯ ಮೂಲಧಾತು ಜನರೇ ವಿನಾ ಸರಕಲ್ಲ, ಸಂಪತ್ತಲ್ಲ ಎಂಬುದು ಸ್ಪಷ್ಟವಾಗಬೇಕು.

ಹಸಿವು ಎಂಬುದು ಆಹಾರ ಕೊರತೆಯಿಂದ ಉಂಟಾಗುವ ಸಮಸ್ಯೆಯಲ್ಲ. ಅದು ಜನರ ಧಾರಣ ಸಾಮರ್ಥ್ಯದ ಕೊರತೆಯಿಂದ ಉಂಟಾಗುವ ಸಮಸ್ಯೆ. ಆಹಾರೋತ್ಪಾದನೆಯ ಕುಸಿತದಿಂದ ಬರಗಾಲಗಳು ಉಂಟಾಗುವುದಿಲ್ಲ, ಹಸಿವು ಉಂಟಾಗುವುದಿಲ್ಲ ಎಂಬುದನ್ನು ವಿಸ್ತೃತವಾದ ಅಧ್ಯಯನಗಳಿಂದ ಅಮರ್ತ್ಯಸೇನ್ ಸಿದ್ಧ ಮಾಡಿ ತೋರಿಸಿದ್ದಾನೆ. ಆಹಾರವನ್ನು ದಕ್ಕಿಸಿಕೊಳ್ಳಲು ಜನರಲ್ಲಿನ ಧಾರಣಾ ಸಾಮರ್ಥ್ಯ ದುರ್ಬಲವಾಗಿದ್ದಾಗ ಅಲ್ಲಿ ಹಸಿವು, ಆಹಾರ ಅಭದ್ರತೆ, ಅಪೌಷ್ಟಿಕತೆ ಉಂಟಾಗುತ್ತವೆ. ನಮ್ಮ ಉತ್ಪಾದನಾ ಕ್ಷಮತೆಯ ನೆಲೆಯಲ್ಲಿ ನಮಗೆ ಆಹಾರದ ಹಕ್ಕನ್ನು ಪೂರೈಸುವುದು ಏನೇನೂ ಕಷ್ಟವಾಗಬಾರದು. ಅದಕ್ಕೆ ಬೇಕಾದುದು ನಾವು ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುತ್ತಿರುವ ಕ್ರಮದಲ್ಲಿ ಬದಲಾಗಬೇಕು.

ನಮ್ಮ ಅಭಿವೃದ್ಧಿ ಕುರಿತ ಸೈದ್ಧಾಂತಿಕ ನಿಲವಿನಲ್ಲಿ ಪರಿವರ್ತನೆಯಾಗಬೇಕು. ಆಹಾರದ ಹಕ್ಕು ಶಾಸನಾತ್ಮಕವಾಗಿರಲಿ ಅಥವಾ ಇಲ್ಲದಿರಲಿ ಅದು ನಮಗೆ ಮುಖ್ಯವಾಗಬೇಕು. ಹಸಿವು ಎಂಬುದು ಮಾನವ ಹಕ್ಕಿನ ಉಲ್ಲಂಘನೆಯ ಬಹು ಮುಖ್ಯ ನಿದರ್ಶನವಾಗಿದೆ. ಆಹಾರ ಭದ್ರತೆಯೆಂಬುದು ಮಾನವ ಹಕ್ಕು. ಅದನ್ನು ಒತ್ತಾಯಿಸುವ ಅಧಿಕಾರ ಜನರಿಗಿದೆ. ಹಕ್ಕು ಅನ್ನುವುದು ಒಂದು ಒತ್ತಾಯ. ಅದೊಂದು ಕ್ಲೈಮ್. ಅದನ್ನು ಒದಗಿಸಬೇಕಾದುದು ನಾಗರಿಕ ಸಮಾಜದ ಜವಾಬುದಾರಿ. ಜನರಿಗೆ ಜೀವಿಸುವ ಅಧಿಕಾರ ಹೇಗೆ ಮಾನವ ಹಕ್ಕೋ ಅದೇ ರೀತಿಯಲ್ಲಿ ಅಹಾರದ ಮೇಲಿನ ಅಧಿಕಾರವೂ ಕೂಡ ಮಾನವ ಹಕ್ಕು.

ಆಹಾರ ಭದ್ರತೆ–ಒಂದು ಮಾನವ ಹಕ್ಕು

'ಸಮಾಜದಲ್ಲಿ ತನ್ನ ಕ್ರಮಗಳಿಂದ ಹಸಿವಿನ ಸ್ಥಿತಿ, ಆಹಾರ ಅಭದ್ರತೆ ಮತ್ತು ಅಪೌಷ್ಟಿಕತೆಯು ಉಂಟಾಗದಂತೆ ಮತ್ತು ಹೆಚ್ಚಾಗದಂತೆ ಸರ್ಕಾರವು ನೋಡಿಕೊಳ್ಳುವುದಕ್ಕೆ ಆಹಾರದ ಹಕ್ಕು ಎಂದು ಕರೆಯಲಾಗುತ್ತದೆ. ಸಮಾಜದಲ್ಲಿ ಯಾರಿಂದಲೂ ಆಹಾರದ ಹಕ್ಕಿನ ಉಲ್ಲಂಘನೆಯಾಗದಂತೆ ಸರ್ಕಾರವು ನೋಡಿಕೊಂಡರೆ ಅದನ್ನು ಅಹಾರದ ಹಕ್ಕೆಂದು ಪರಿಗಣಿಸಬಹುದು. ಸರ್ಕಾರವು ತನ್ನಲ್ಲಿರುವ ಸಂಪನ್ಮೂಲದಲ್ಲಿ ಎಷ್ಟು ಸಾಧ್ಯವಾಗುತ್ತದೋ ಅಷ್ಟನ್ನು ಬಡತನದ ನಿವಾರಣೆಗಾಗಿ ವಿನಿಯೋಗಿಸಬೇಕಾಗುತ್ತದೆ. ಆಹಾರದ ಹಕ್ಕು ಎಂಬುದು ದತ್ತಿ–ದಾನ–ದಕ್ಷಿಣೆಯಲ್ಲ. ಪ್ರತಿಯೊಬ್ಬರೂ ಘನತೆಯಿಂದ ತಮ್ಮ ಆಹಾರವನ್ನು ತಾವು ಪಡೆದುಕೊಳ್ಳುವಂತಹ ಧಾರಣಾ ಸಾಮರ್ಥ್ಯವನ್ನು ಪಡೆದುಕೊಳ್ಳುವ ಕ್ರಮವೇ ಆಹಾರದ ಹಕ್ಕು'.

ಇದು ಆಹಾರದ ಮಾನವ ಹಕ್ಕು. ಆಹಾರದ ಹಕ್ಕು ಮಾನವ ಹಕ್ಕು. ಜನರಿಗೆ ಎಷ್ಟು ಆಹಾರ ಬೇಕೋ, ಎಷ್ಟು ಪೌಷ್ಟಿಕ ಆಹಾರ ಬೇಕೋ ಅಷ್ಟು ಆಹಾರವನ್ನು ಒದಗಿಸುವುದು, ಅದನ್ನು ಗೌರವದಿಂದ ಪಡೆಯುವುದು, ಅದನ್ನು ಅನುಭವಿಸುವುದು ಜನರ ಹಕ್ಕು. ಅದೊಂದು ಒತ್ತಾಯ. ಅದು ಜನರ ಅಧಿಕಾರ. ಆಹಾರವು ಜನರಿಗೆ ಒದಗುವಂತೆ –ದೊರಕುವಂತೆ ಮಾಡುವ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಬೇಕಾಗುತ್ತದೆ. ಇದು ಸರ್ಕಾರದ–ಸಮಾಜದ ಕರ್ತವ್ಯವಾಗಿದೆ. ಹಸಿವು ಅನ್ನುವುದು ಒಂದು ಅಸ್ವಾತಂತ್ರ್ಯ ಅದರಿಂದ ಜನರನ್ನು ಬಿಡುಗಡೆಗೊಳಿಸುವುದೇ ಆಹಾರದ ಭದ್ರತೆ. ಈ ಕಾರಣದಿಂದಾಗಿಯೇ ಅಮರ್ತ್ಯಸೇನ್ ಅಭಿವೃದ್ಧಿಯನ್ನು ಸ್ವಾತಂತ್ರ್ಯದ ಚೌಕಟ್ಟಿನಲ್ಲಿ ಪರಿಭಾವಿಸಿಕೊಳ್ಳುತ್ತಾನೆ.

'ಜನರು ತಮ್ಮ ವಿವೇಚನೆಯಿಂದ ಮತ್ತು ಕರ್ತೃತ್ವಶಕ್ತಿಯಿಂದ ಧಾರಣೆ ಮಾಡಿಕೊಳ್ಳಬಹುದಾದ ಅವಕಾಶ ಮತ್ತು ಆಯ್ಕೆಗಳನ್ನು ಸೀಮಿತಗೊಳಿಸುವ ಅಸ್ವಾತಂತ್ರ್ಯಗಳನ್ನು ನಿರ್ಮೂಲನ ಮಾಡುವುದೇ ಅಭಿವೃದ್ಧಿ'.

ಸೇನ್ ಪ್ರಕಾರ ಹಸಿವು ಒಂದು ಅಸ್ವಾತಂತ್ರ್ಯ. ಅನಕ್ಷರತೆಯು ಒಂದು ಅಸ್ವಾತಂತ್ರ್ಯ. ಅಪೌಷ್ಟಿಕತೆಯು ಒಂದು ಅಸ್ವಾತಂತ್ರ್ಯ. ಲಿಂಗ ಅಸಮಾನತೆಯು ಒಂದು ಅಸ್ವಾತಂತ್ರ್ಯ. ಈ ಬಗೆಯ ಅಸ್ವಾತಂತ್ರ್ಯಗಳನ್ನು ನಿವಾರಣೆ ಮಾಡಿ ಜನರ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವ ಪ್ರಕ್ರಿಯೆಯೇ ಅಭಿವೃದ್ಧಿ. ಆಹಾರೋತ್ಪಾದನೆಯಲ್ಲಿನ ಏರಿಕೆಗೂ ಮತ್ತು ಬಡತನ–ಹಸಿವುಗಳ ನಿವಾರಣೆಗೂ ನಡುವಿನ ಸಂಬಂಧವು ಸಂಕೀರ್ಣವಾದುದು. ಇವೆರಡ ನಡುವೆ 'ಒಂದು–ಒಂದು' ರೀತಿಯ ವಿಲೋಮ ಬಿಂಬಕ ಸಂಬಂಧವಿಲ್ಲ. ಇಲ್ಲಿ ಮೂರು ಬಗೆಯ ಸಂಬಂಧಗಳನ್ನು ಗುರುತಿಸಬಹುದಾಗಿದೆ.

ಆಹಾರೋತ್ಪಾದನೆಯು ಏರಿಕೆಯಾಗಬಹುದು.

ಬಡತನ-ಹಸಿವುಗಳ ಮೇಲೆ ಪರಿಣಾಮ ಕಿಂಚಿತ್ತೂ ಇಲ್ಲದಿರಬಹುದು. ಆಹಾರೋತ್ಪಾದನೆಯು ಏರಿಕೆಯಾಗಬಹುದು. ಬಡತನ-ಹಸಿವು ಉಲ್ಬಣಗೊಳ್ಳಬಹುದು.

ಆಹಾರೋತ್ಪಾದನೆಯು ಏರಿಕೆಯಾಗಬಹುದು. ಬಡತನ-ಹಸಿವು ಕಡಿಮೆಯಾಗಬಹುದು.

ಈ ಮೂರು ಬಗೆಯ ವಿಕಲ್ಪಗಳಲ್ಲಿ ಮೊದಲೆರಡು ಅಪೇಕ್ಷಣೀಯವಾದ ಸಂಗತಿಗಳಲ್ಲ. ನಮಗೆ ಆಹಾರ ಹಕ್ಕಿನ, ಆಹಾರ ಭದ್ರತೆಯ ದೃಷ್ಟಿಯಿಂದ ಮೂರನೆಯ ವಿಕಲ್ಪವು ಅತ್ಯಂತ ಅಪೇಕ್ಷಣೀಯವಾದ ಸಂಗತಿಯಾಗಿದೆ.

ಆಹಾರೋತ್ಪಾದನೆಯು ತೀವ್ರ ಏರಿಕೆಯಾಗುವ ಸಂದರ್ಭದಲ್ಲೂ ಹಸಿವು, ಬಡತನ, ಅಪೌಷ್ಟಿಕತೆ ಮುಂದುವರಿಯಬಹುದು. ಏರಿಕೆಯಾದ ಆಹಾರೋತ್ಪದನೆಯು ತನ್ನಷ್ಟಕ್ಕೆ ತಾನು ಸಹಜವಾಗಿ ಜನರ ಬದುಕಾಗಿ, ಜನರ ಆರೋಗ್ಯವಾಗಿ ಪರಿವರ್ತನೆಯಾಗುವುದಿಲ್ಲ. ಖ್ಯಾತ ಅರ್ಥಶಾಸ್ತ್ರಜ್ಞ ದೀಪಕ್ ನಯ್ಯರ್(2007) ತನ್ನ ಒಂದು ಪ್ರಬಂಧದಲ್ಲಿ 'ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಏರಿಕೆಯಾದ ವರಮಾನ, ಆಹಾರೋತ್ಪಾದನೆ ಮುಂತಾದವುಗಳನ್ನು ಜನರ ಬದುಕಾಗಿ ಪರಿವರ್ತನೆ ಮಾಡಿಕೊಳ್ಳಲು ಸಾಧ್ಯವಾಗದಿರುವುದೇ ಭಾರತವು ಅನುಭವಿಸಿರುವ ಬಹುದೊಡ್ಡ ವೈಫಲ್ಯವಾಗಿದೆ'ಯೆಂದು ಹೇಳಿದ್ದಾನೆ. ಈ ಪರಿವರ್ತನೆಯು ತನ್ನಷ್ಟಕ್ಕೆ ತಾನೆ ನಡೆಯುವುದಿಲ್ಲ. ಅದು ತನ್ನಷ್ಟಕ್ಕೆ ತಾನೆ ನಡೆಯುತ್ತದೆಯೆಂದು ಹೇಳುವ ಟ್ರಿಕಲ್ ಡೌನ್ ಸಿದ್ಧಾಂತವು ವಿಫಲವಾಗಿದೆಯೆಂದು ಜೊಸೆಫ್ ಸ್ಟಿಗ್‌ಲಿಡ್ಜ್ ಪ್ರತಿಪಾದಿಸಿದ್ದಾನೆ.

ಹಸಿವು ಎನ್ನುವುದು ಜನಸಂಖ್ಯೆಯ ಮಿತಿಮೀರಿದ ಏರಿಕೆಯಿಂದ ಉಂಟಾದ/ಉಂಟಾಗುವ ಸಮಸ್ಯೆಯಲ್ಲ. ಆ ಆಹಾರೋತ್ಪಾದನೆಯ ಕೊರತೆಯಿಂದ ಉಂಟಾದ/ಉಂಟಾಗುವ ಸಮಸ್ಯೆಯೂ ಅಲ್ಲ. ಅದು ಆಹಾರೋತ್ಪಾದನೆಗೆ ಸಂಬಂಧಿಸಿದಂತೆ ಜನರಿಗೆ ಇರುವ ಧಾರಣಾ ಸಾಮರ್ಥ್ಯ ಮತ್ತು ಜನರ ಹಕ್ಕುದಾರಿಕೆಯ ವೈಫಲ್ಯದಿಂದ ಉಂಟಾಗುವ ಸಮಸ್ಯೆಯಾಗಿದೆ. ಈ ಮಾತು ಕರ್ನಾಟಕಕ್ಕೆ ಸಂಬಂಧಿಸಿದಂತೆ ನೂರಕ್ಕೆ ನೂರರಷ್ಟು ಸತ್ಯವಾಗಿವೆ. ನಮ್ಮ ರಾಜ್ಯದ ಸಂದರ್ಭದಲ್ಲಿ ಸಮಸ್ಯೆಯೇ ಅಲ್ಲದ ಸಂಗತಿಗಳನ್ನು ಸಮಸ್ಯೆಯನ್ನಾಗಿ ಮಾಡಲಾಗುತ್ತಿದೆ. ಉದಾಹರಣೆಗೆ ಜನಸಂಖ್ಯಾ ಬೆಳವಣಿಗೆ ಸಮಸ್ಯೆ. ಅರ್ಥಶಾಸ್ತ್ರದ ಸಾಮಾನ್ಯ ವಿದ್ಯಾರ್ಥಿಗೂ ತಿಳಿದಿರಬಹುದಾದ ಸಂಗತಿಯೆಂದರೆ ಕರ್ನಾಟಕದಲ್ಲಿ ಜನಸಂಖ್ಯೆಯ ಮಿತಿಮೀರಿದ ಬೆಳವಣಿಗೆಯ ಸಮಸ್ಯೆಯಿಲ್ಲ. ಇದ್ದರೂ ಅದು ವಿಭಿನ್ನ ಸ್ವರೂಪದಲ್ಲಿದೆ. ಅದಕ್ಕೆ ಪರಿಹಾರ 'ಎರಡು ಮಕ್ಕಳ ಕುಟುಂಬ' ನೀತಿಯಲ್ಲ. ನಾನೀಗಾಗಲೇ ತೋರಿಸಿರುವಂತೆ ಕರ್ನಾಟಕದಲ್ಲಿ ಆಹಾರದ ಸಮಸ್ಯೆಯಿಲ್ಲ. ಆಹಾರದ ಮೇಲೆ ಜನರ ಹಕ್ಕುದಾರಿಕೆಯನ್ನು, ಧಾರಣಾ ಸಾಮರ್ಥ್ಯವನ್ನು ಹೇಗೆ ಸಾಧಿಸಿಕೊಳ್ಳಬೇಕೆಂಬುದು ನಮ್ಮ ಮುಂದಿರುವ ಬಹು ಮುಖ್ಯ ಪ್ರಶ್ನೆಯಾಗಿದೆ.

ಜನಸಂಖ್ಯಾ ಬೆಳವಣಿಗೆ ಬಗ್ಗೆ ಮಾತನಾಡ ಬೇಕಾದರೆ ಸಾಮಾನ್ಯವಾಗಿ ಅಲ್ಲಿನ ಮಹಿಳೆಯರ ಸ್ಥಾನವನ್ನು, ಪಾತ್ರವನ್ನು, ಮಹತ್ವವನ್ನು ಗುರುತಿಸುವುದಿಲ್ಲ. ಉದಾಹರಣೆಗೆ ಎರಡು ಮಕ್ಕಳ ನೀತಿಯ ಬಗ್ಗೆ ನಮ್ಮಲ್ಲಿ ಚರ್ಚೆ ಆರಂಭವಾದಾಗ ಅದನ್ನು ಆರಂಭಿಸಿದ ಮುಖಂಡರು ಆ ಬಗ್ಗೆ ಲಿಂಗ ಸಂಬಂಧಿ ಆಯಾಮದ ಬಗ್ಗೆ ಮಾತಾಡಲಿಲ್ಲ. ಅಮರ್ತ್ಯಸೇನ್ ಭಾರತವನ್ನು ಕುರಿತಂತೆ ಜೀನ್ ಡ್ರೀಜ್ ಜೊತೆ ಸಿದ್ಧಪಡಿಸಿದ ತನ್ನ ಕೃತಿಯಲ್ಲಿ(2002) ಪ್ರತಿ

ಪಾದಿಸಿರುವಂತೆ ಜನಸಂಖ್ಯೆಯ ಬೆಳವಣಿಗೆಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮಹಿಳೆಯರು ಎಷ್ಟರ ಮಟ್ಟಿಗೆ ಕುಟುಂಬದಲ್ಲಿ ಸ್ವಾತಂತ್ರ್ಯ ಪಡೆದಿದ್ದಾರೆ-ಕುಟುಂಬದ ನಿರ್ವಹಣೆಯಲ್ಲಿ ಮಹಿಳೆಯರಿಗೆ ಎಷ್ಟರ ಮಟ್ಟಿಗೆ ತೀರ್ಮಾನ ತೆಗೆದುಕೊಳ್ಳುವಲ್ಲಿ ಅವಕಾಶವಿದೆ ಎಂಬುದು ಮುಖ್ಯವಾಗುತ್ತದೆ ಎಂದಿದ್ದಾನೆ.

ಜನಸಂಖ್ಯೆಯ ಮಿತಿಮೀರಿದ ಬೆಳವಣಿಗೆಯಿಂದ ಅತಿ ಹೆಚ್ಚಿನ ಒತ್ತಡಕ್ಕೆ-ದುಸ್ಥಿತಿಗೆ ಒಳಗಾಗುವವರು ಮತ್ತು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವವರು ಮಹಿಳೆಯರಾಗಿದ್ದಾರೆ. ಏಕೆಂದರೆ ಮಕ್ಕಳನ್ನು ಮತ್ತೆ ಮತ್ತೆ ಹೆರುವ ಹಾಗೂ ಸಾಕುವ-ಪೋಷಿಸುವ ಜವಾಬುದಾರಿಯು ಮಹಿಳೆಯರ ಮೇಲಿರುತ್ತದೆ. ಮತ್ತೆ ಮತ್ತೆ ಮಕ್ಕಳನ್ನು ಹೆರುವುದೆಂದರೆ ಮತ್ತು ಪೋಷಿಸುವುದೆಂದರೆ ಅಷ್ಟರ ಮಟ್ಟಿಗೆ ಅವರ ಸ್ವಾತಂತ್ರ್ಯ ಸೀಮಿತವಾದಂತೆ. ಈ ಬಗೆಯ ಸ್ವಾತಂತ್ರ್ಯ ಹರಣದಿಂದ ಮಹಿಳೆಯರನ್ನು ರಕ್ಷಿಸುವುದರ ಮೂಲಕ ಜನಸಂಖ್ಯೆಯ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ತಡೆಗಟ್ಟಬಹುದಾಗಿದೆ. ಮತ್ತೆ ಮತ್ತೆ ಮಕ್ಕಳನ್ನು ಹೆರುವುದನ್ನು ತಪ್ಪಸುವುದೆಂದರೆ ಜನಸಂಖ್ಯೆಯ ಬೆಳವಣಿಗೆಯನ್ನು ತಹಬಂದಿಗೆ ತಂದಂತೆಯೇ ಲೆಕ್ಕ. ಜನಸಂಖ್ಯೆಯನ್ನು ಕುರಿತ ಚರ್ಚೆಗಳಲ್ಲಿ ಮಹಿಳೆಯರ ಪಾತ್ರವನ್ನು ನಮ್ಮ ಸಾಂಪ್ರದಾಯಿಕ ಅರ್ಥಶಾಸ್ತ್ರವು ನಿರ್ಲಕ್ಷಿಸಿದೆ. ಈ ಸಂಗತಿಯನ್ನು ನಾವು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕಾಗಿದೆ. ಆಹಾರದ ವಿಷಯದಲ್ಲೂ ಅದು ನಿಜ. ಆಹಾರದ ಸಂಗ್ರಹಣೆ, ಸಂಸ್ಕರಣೆ, ನಿರ್ವಹಣೆ, ಅನುಭೋಗ ಇವುಗಳಲ್ಲಿ ಮಹಿಳೆಯರ ಪಾತ್ರವು ಮಹತ್ವದ್ದಾಗಿದೆ. ಅದರಲ್ಲೂ ಅಪೌಷ್ಟಿಕತೆಯ ನಿವಾರಣೆಯಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರ ನಿರ್ವಹಿಸಬಹುದಾಗಿದೆ.

ಆಹಾರೋದ್ಯಮ ಮತ್ತು ಆಹಾರೋತ್ಪಾದನೆ ಹಾಗೂ ಆಹಾರ ಭದ್ರತೆ

ಆಹಾರೋದ್ಯಮ-ಆಹಾರ ವ್ಯವಹಾರದಲ್ಲಿ ಲಾಭಕ್ಕೆ ಅವಕಾಶವಿರಬೇಕು. ನಾವು ಒಪ್ಪಿಕೊಂಡಿರುವ ಮಾರುಕಟ್ಟೆ ವ್ಯವಸ್ಥೆಯಲ್ಲಿ ಅದನ್ನು ನಿರಾಕರಿಸುವುದು ಸಾಧ್ಯವಿಲ್ಲ-ಸಾಧುವಲ್ಲ. ಆದರೆ ಸಮಸ್ಯೆ ಎಲ್ಲಿ ಬರುತ್ತದೆಯೆಂದರೆ ಈ ಆಹಾರೋದ್ಯಮದ ಘಟಕಗಳು ಅರ್ಥಶಾಸ್ತ್ರದ ತತ್ವಗಳಿಗೆ ಅನುಗುಣವಾಗಿ ಲಾಭವನ್ನು ನಿರ್ವಹಿಸುವುದಿಲ್ಲ. ಮಾರುಕಟ್ಟೆಯು ಅರ್ಥಶಾಸ್ತ್ರದ ನಿಯಮಗಳಿಗೆ-ತತ್ವಗಳಿಗೆ ಬದ್ಧವಾಗಿ ನಡೆಯುವುದಿಲ್ಲ. ಅರ್ಥಶಾಸ್ತ್ರದ ತತ್ವಗಳ ಪ್ರಕಾರ ಲಾಭವೆನ್ನುವುದು ಉತ್ಪಾದನಾ ವೆಚ್ಚದ ಅವಿಭಾಜ್ಯ ಅಂಗವಾಗಿದೆ. ಆದಾಯ ಮತ್ತು ವೆಚ್ಚಗಳ ನಡುವಿನ ಆಧಿಕ್ಯವನ್ನು ಅರ್ಥಶಾಸ್ತ್ರದಲ್ಲಿ 'ಅಸಾಧಾರಣ ಲಾಭ'ವೆಂದು ಕರೆಯಲಾಗುತ್ತದೆ. ಇದು ಶೋಷಣೆಯ ಮೂಲ ಮತ್ತು ಇದು ಅನ್ಯಾಯದ ಸೂಚಿ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಾರುಕಟ್ಟೆ ಶಕ್ತಿಗಳು ಸದಾಕಾಲ ಇಂತಹ ಅಸಾಧಾರಣ ಲಾಭದ ಬಗ್ಗೆ ಮಾತ್ರ ಗಮನ ನೀಡುತ್ತಿರುತ್ತವೆ. ಉದ್ದಿಮೆಯಲ್ಲಿ ಆದಾಯ ಮತ್ತು ವೆಚ್ಚಗಳು ಪರಸ್ಪರ ಸಮನಾಗಿ ಬಿಟ್ಟರೆ ಅಲ್ಲಿ ಲಾಭವು 'ಯೋಗ್ಯ'ವಾದುದಾಗುತ್ತದೆ ಮತ್ತು 'ನ್ಯಾಯ'ಯುತವಾದುದಾಗಿ ಬಿಡುತ್ತದೆ.

ಉದ್ಯಮದ ನಿರ್ವಹಣೆಯಲ್ಲಿ ಅನೇಕ ಗಂಡಾಂತರಗಳಿರುತ್ತವೆ. ಅಲ್ಲಿ ಅನಿಶ್ಚಿತತೆಯಿರುತ್ತದೆ. ಅಲ್ಲಿ ಸಂಘಟನೆಯ ಅಗತ್ಯವಿರುತ್ತದೆ. ಅಲ್ಲಿ ವ್ಯವಹಾರ ಚಾತುರ್ಯ ಬೇಕಾಗುತ್ತದೆ. ಅಲ್ಲಿ ಕುಶಲ ಬುದ್ಧಿಶಕ್ತಿಯ ಪಾತ್ರ ಆಯಕಟ್ಟಿನದಾಗಿರುತ್ತದೆ. ಈ ಬಗೆಯ ಕಾರ್ಯಗಳನ್ನು ನಿರ್ವಹಿ

(49ನೇ ಪುಟಕ್ಕೆ)

ಯುರೋಪಿನ ಅನೇಕ ದೇಶಗಳಲ್ಲಿ ಮತ್ತು ಅಮೇರಿಕೆಯಲ್ಲಿ ಅನೇಕ ಬ್ಯಾಂಕುಗಳು 2008ರಲ್ಲಿನ ಆರ್ಥಿಕ ದುಸ್ಥಿತಿಯಿಂದಾಗಿ ಮುಳುಗಿದವು. ಅದಕ್ಕೆ ಅನೇಕ ಕಾರಣಗಳಿವೆ. ಅಲ್ಲಿ ಉನ್ನತ ಹುದ್ದೆಗಳಲ್ಲಿದ್ದ ನಿರ್ವಹಣಾ ತಜ್ಞರು, ಆಡಳಿತ ಚತುರರು, ನಿರ್ವಹಣಾ ಸಲಹೆಗಾರರು, ಸಿಈಒಗಳು ಉದ್ದಿಮೆಗಳ ಹಣಕಾಸನ್ನು ತಮಗೆ ತಿಳಿದ ರೀತಿಯಲ್ಲಿ ಬಳಸುತ್ತಾ, ನಿಯಮಗಳನ್ನು ಗಾಳಿಗೆ ತೂರುತ್ತಾ ಜೋಬಿಗೆ ಲಾಭವನ್ನು ತುಂಬಿಕೊಳ್ಳುತ್ತಿದ್ದುದು ಒಂದು ಪ್ರಧಾನ ಕಾರಣವೆಂಬುದು ಇಂದು ಸ್ಪಷ್ಟವಾಗಿದೆ. ಈ ಕಾರಣದಿಂದಾಗಿ ಲಾಭವೆನ್ನುವುದು ಶೇರುದಾರರ ಪಾಲಾಗುವುದಕ್ಕೆ ಪ್ರತಿಯಾಗಿ ನಿರ್ವಹಣಾ ತಜ್ಞರ, ನಿರ್ವಹಣಾ ಸಲಹೆಗಾರರ, ಸಿಈಒಗಳ ಜೇಬಿಗೆ ಹರಿಯುತ್ತಿದೆ.

ಯಾರು ಅಂಬೇಡ್ಕರ್ ವಾದಿಗಳು?

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಅನು: ಸತ್ಯಪ್ರಕಾಶ್ ಎಂ ಆರ್

> **ಇತ್ತೀಚೆಗೆ ಮುಂಬೈನ ಕಲ್ಪನಾ ಸರೋಜ್ ಎಂಬ ದಲಿತ ಮಹಿಳೆ ಸುದ್ದಿಯಲ್ಲಿದ್ದರು. ವಾರ್ಷಿಕ ೩೦೦೦ ದಶಲಕ್ಷ ರೂ. ವಹಿವಾಟು ನಡೆಸುವ ಉದ್ಯಮದ ಮುಖ್ಯಸ್ಥಳಾದ ಈಕೆಯನ್ನು "ನಿಜವಾದ ಸ್ಲಂಡಾಗ್ ಮಿಲಿಯ ನೇರ್" ಎಂದು ಬಣ್ಣಿಸ ಲಾಗುತ್ತಿದೆ. ಬಡತನ, ಶೋಷಣೆಯ ಹಿನ್ನೆಲೆ ಹೊಂದಿರುವ ಇವರು ಐತಿಹಾಸಿಕ ಕರ್ನಾನಿ ಟ್ಯೂಬ್ಸ್‌ನ ಒಡತಿಯಾಗಿ ದ್ದಾರೆ. ದಲಿತ ವೆಬ್ ಸಮೂಹಗಳು (ವೆಬ್ ಗ್ರೂಪ್) ಇವರನ್ನು ದಲಿತ ಸಮುದಾಯದ ಪ್ರತಿಷ್ಠೆಯ ಸಂಕೇತವಾಗಿ ಬಿಂಬಿಸಿ ದವು. ಆದರೆ ದಲಿತ ಸಮುದಾಯದ ಪರವಾಗಿ ಅವರ ಕೊಡುಗೆಯ ಬಗ್ಗೆ ಪತ್ರಿಕೆಗಳಲ್ಲಿ ಒಂದೇ ಒಂದು ಪದ ಕೂಡ ಪ್ರಕಟವಾಗಲಿಲ್ಲ. ಆಕೆ ಮಹಾನ್ ಅಂಬೇಡ್ಕರ್ ವಾದಿಯೂ ಹೌದು, ಉದ್ಯಮದ ಮಾಯಾ ವತಿಯೂ ಹೌದು. ಕೆನಡಾ ದಲ್ಲಿ ನಾನು ಅವರನ್ನು ಭೇಟಿ ಮಾಡಿದ್ದರಿಂದ ಈ ಮಾತನ್ನು ಹೇಳಬಲ್ಲೆ. ಎಲ್ಲ ಕ್ಷೇತ್ರಗಳಲ್ಲಿ ದಲಿತ ಸಾಧಕರ ಇಂತಹ ನೂರಾರು ಕಥೆಗಳಿವೆ.**

ಕಳೆದ ವಾರ ನಾನು ದಲಿತ ಉದ್ದಿಮೆದಾರರನ್ನು ಭೇಟಿ ಮಾಡುವ ಉದ್ದೇಶದಿಂದ ಈಶಾನ್ಯ ರಾಜ್ಯವೊಂದಕ್ಕೆ ಹೋಗಿದ್ದೆ. ಅಲ್ಲಿನ ಜಿಲ್ಲೆಯೊಂದರ ದಲಿತ ಉದ್ದಿಮೆದಾರೊಡನೆ ಭೇಟಿ ಮಾಡಲು ವ್ಯವಸ್ಥೆ ಮಾಡಲು ದಲಿತ ಕಾರ್ಯಕರ್ತನನ್ನು ಕೇಳಿಕೊಂಡೆ. ಕೆಲಕ್ಷಣ ಕಸಿವಿಸಿಗೊಂಡ ಆತ ಯಾವ ಕಾರಣಗಳಿಗಾಗಿ ದಲಿತ ಉದ್ದಿಮೆದಾರರ ಬಳಿ ಕರೆದೊಯ್ಯಲಾಗುವುದಿಲ್ಲವೆಂದು ವಿವರಿಸಿದ. ದಲಿತ ಉದ್ದಿಮೆದಾರರು ಹಣ ಮಾಡುವುದರಲ್ಲಿ ನಿರತರಾಗಿ ಸಮುದಾಯದ ಕಾರ್ಯಗಳಿಗೆ ಸಮಯ ವಿನಿಯೋಗಿಸುವುದಿಲ್ಲ ಎಂದು ಆತ ಆರೋಪ ಮಾಡಿದ.

ಕೆಲವು ವರ್ಷಗಳ ಹಿಂದೆ ನನ್ನ ಮನೆಗೆ ದಲಿತ ವೈದ್ಯರೊಬ್ಬರು ಬಂದಿದ್ದರು. ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ಪುಸ್ತಕ ಬರೆಯುವ ಆಲೋಚನೆ ಇದೆ, ಪರಾಮರ್ಶನಕ್ಕಾಗಿ ಪುಸ್ತಕಗಳನ್ನು ನೀಡಬೇಕೆಂದು ಅವರು ಚಹಾ ಕುಡಿಯುತ್ತಾ ಕೇಳಿದರು. ನನ್ನ ಪುಟ್ಟ ಗ್ರಂಥಾಲಯವನ್ನು ಪರಾಮರ್ಶೆಗೆ ಬಳಸಿಕೊಳ್ಳಬಹುದು ಆದರೆ ಪುಸ್ತಕವನ್ನು ಹೊರಗೆ ಕೊಡುವುದಿಲ್ಲವೆಂದು ಹೇಳಿದೆ. ಈ ರೀತಿ ನೀಡಿದ ಹಲವು ಪುಸ್ತಕಗಳು ವಾಪಸ್ಸಾಗಿಲ್ಲವೆಂದು ಸಮುಜಾಯಿಷಿ ನೀಡಿದೆ. ಅವರು ಹೊರಡುವ ಮುನ್ನ "ನೀವು ವೈದ್ಯಕೀಯ ವೃತ್ತಿಯ ಬಗ್ಗೆ ಯಾಕೆ ಪುಸ್ತಕ ಬರೆಯಬಾರದು" ಎಂದು ಸಲಹೆ ನೀಡಿದೆ. ಕಳೆದ ನಾಲ್ಕು ವರ್ಷಗಳಿಂದ ಅವರು ಮತ್ತೆ ನನ್ನನ್ನು ಭೇಟಿ ಮಾಡಿಲ್ಲ. ನನ್ನ ಸಲಹೆ ಅವರಿಗೆ ಹಿಡಿಸಲಿಲ್ಲ ಅನಿಸುತ್ತೆ.

ನಾನು ಭೇಟಿ ಮಾಡಿದ ಬಹಳಷ್ಟು ರಾಜ್ಯಗಳಲ್ಲಿ ದಲಿತ ಐಎಎಸ್ ಅಧಿಕಾರಿಗಳ ಬಗ್ಗೆ ದೂರುಗಳು ಕೇಳಿಬರುತ್ತವೆ. ಈ ದಲಿತ ಅಧಿಕಾರಿಗಳು ಅಂಬೇಡ್ಕರ್ ಅವರ ಚಿಂತನೆಗೆ ಬೆಲೆ ನೀಡಿಲ್ಲವೆಂದು ಕಾರ್ಯಕರ್ತರು ದೂರುತ್ತಾರೆ. ಇದು ಕೇವಲ ನೈತಿಕ ಸಮಸ್ಯೆಯಷ್ಟೇ ಅಲ್ಲ, ತಂತ್ರಗಾರಿಕೆಯ ಸಮಸ್ಯೆಯೂ ಹೌದು.

ಎಲ್ಲ ದಲಿತ ಸಾಧಕರು ತಮ್ಮ ವೃತ್ತಿ ಜೀವನದ ಯಾವುದಾದರೂ ಘಟ್ಟದಲ್ಲಿ ಅಂಬೇಡ್ಕರರ ಹೋರಾಟದ ಲಾಭ ಪಡೆದವರಾಗಿರುತ್ತಾರೆ. ಹೀಗಾಗಿ ಅಂಬೇಡ್ಕರ್ ಚಳವಳಿಯ ಭಾಗವಾಗುವುದು ಇವರೆಲ್ಲರ ನೈತಿಕ ಧರ್ಮ. ಜೊತೆಗೆ ಶೋಷಿತ ಸಮುದಾಯಗಳಿಂದ ಬಂದವರಾಗಿರುವುದರಿಂದ ಬಿಡುಗಡೆಯ ದಾರಿ ತಪ್ಪಿರುವ ತಮ್ಮ ಸಹೋದರರ ಸಮಸ್ಯೆಗಳಿಗೆ ಸ್ಪಂದಿಸುವ ಹೊಣೆಗಾರಿಕೆಯೂ ಇವರ ಮೇಲಿದೆ. ಇವುಗಳೆಲ್ಲವನ್ನು ವಿಶ್ಲೇಷಿಸುವ ಮೊದಲು ಅಂಬೇಡ್ಕರ್ ಚಳವಳಿ ಅಥವಾ ಅಂಬೇಡ್ಕರ್‌ವಾದ ಎಂದರೇನು ಎಂದು ವ್ಯಾಖ್ಯಾನಿಸಬೇಕಾದ ಅವಶ್ಯಕತೆಯಿದೆ.

ಮುಂದಿನ ಈ ಎರಡು ನಿದರ್ಶನಗಳನ್ನು ನೋಡಿ. ಅಂಬೇಡ್ಕರ್ ಚಳವಳಿಯ ಭಾಗವಾಗಲು ನಿರಾಕರಿಸುವ ಓರ್ವ ದಲಿತ ವಿಜ್ಞಾನಿ ತನ್ನ ಸಮುದಾಯದಿಂದ ಕೂಡ ದೂರ ಉಳಿದು, ಸಂಶೋಧನಾ ಕಾರ್ಯದಲ್ಲಿ ಬದ್ಧತೆ ಪ್ರದರ್ಶಿಸಿದ ಪರಿಣಾಮವಾಗಿ ತನ್ನ ವೃತ್ತಿಯಲ್ಲಿ ಯಶಸ್ಸು ಗಳಿಸಿ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸುತ್ತಾನೆ ಎಂದಿಟ್ಟುಕೊಳ್ಳಿ.

ಈ ಯಶಸ್ವಿ ವಿಜ್ಞಾನಿ ಅಂಬೇಡ್ಕರ್ ಚಳವಳಿಯ ಲಾಭ ಪಡೆದವನೆ, ಇಲ್ಲವೇ? ಟಾಟಾ ಸಂಸ್ಥೆ ಇಂಡಿಕಾ ಕಾರ್ ಬಿಡುಗಡೆ ಮಾಡಿದಾಗ, ಈ ಕಾರ್‌ನ ಇಂಜಿನನ್ನು ದಲಿತ ಇಂಜಿನಿಯರೊಬ್ಬರು ಅಭಿವೃದ್ಧಿಪಡಿಸಿದ್ದಾರೆಂಬ ಸಂದೇಶಗಳು ವೆಬ್‌ಸೈಟ್‌ಗಳಲ್ಲಿ ರಾರಾಜಿಸಿದವು. ಆದರೆ ಒಟ್ಟಾರೆ ಸಂದೇಶದಲ್ಲಿ ಅಂಬೇಡ್ಕರ್ ಚಳವಳಿಯ ಬಗ್ಗೆ ಆತನ ಬದ್ಧತೆ ಕುರಿತು ಒಂದಿನಿತೂ ಅಂಶವಿರಲಿಲ್ಲ.

ಅದೇ ರೀತಿ ದಲಿತ ಸಮುದಾಯದ ಬಗ್ಗೆ ಕಾಳಜಿ ಇರದ, ಅಂಬೇಡ್ಕರ್ ಚಳವಳಿಯ ಬಗ್ಗೆ ಗೊತ್ತೇ ಇಲ್ಲದ ದಲಿತ ಉದ್ಯಮಿಯೊಬ್ಬ ವಾರ್ಷಿಕ 1000 ದಶಲಕ್ಷ ರೂಪಾಯಿಗಳಷ್ಟು ವಹಿವಾಟು ನಡೆಸುತ್ತಾ ಬ್ರಾಹ್ಮಣ, ಮರಾಠ, ಜಾಟ್, ಪಟೇಲ್, ಕಮ್ಮ, ರೆಡ್ಡಿ, ತೇವರ್, ಗೌಡ ಮತ್ತು ಒಕ್ಕಲಿಗ ಜಾತಿಯ ಜನರಿಗೆ ಉದ್ಯೋಗ ನೀಡಿ ಐಷಾರಾಮಿ ಜೀವನ ನಡೆಸುತ್ತಿದ್ದಾನೆ ಎಂದಿಟ್ಟುಕೊಳ್ಳಿ, ಈತ ದಲಿತ ಸಮುದಾಯದ ಪರವಾಗಿದ್ದಾನೆಯೇ ಅಥವಾ ಈತ ಅಂಬೇಡ್ಕರ್‌ವಾದಿಯೇ?

ಇತ್ತೀಚೆಗೆ ಮುಂಬೈನ ಕಲ್ಪನಾ ಸರೋಜ್ ಎಂಬ ದಲಿತ ಮಹಿಳೆ ಸುದ್ದಿಯಲ್ಲಿದ್ದರು. ವಾರ್ಷಿಕ 3000 ದಶಲಕ್ಷ ರೂ. ವಹಿವಾಟು ನಡೆಸುವ ಉದ್ಯಮದ ಮುಖ್ಯಸ್ಥಳಾದ ಈಕೆಯನ್ನು "ನಿಜವಾದ ಸ್ಲಂಡಾಗ್ ಮಿಲಿಯನೇರ್" ಎಂದು ಬಣ್ಣಿಸಲಾಗುತ್ತಿದೆ. ಬಡತನ, ಶೋಷಣೆಯ ಹಿನ್ನೆಲೆ ಹೊಂದಿರುವ ಇವರು ಐತಿಹಾಸಿಕ ಕರ್ನಾನಿ ಟ್ಯೂಬ್ಸ್‌ನ ಒಡತಿಯಾಗಿದ್ದಾರೆ. ದಲಿತ ವೆಬ್ ಸಮೂಹಗಳು (ವೆಬ್ ಗ್ರೂಪ್) ಇವರನ್ನು ದಲಿತ ಸಮುದಾಯದ ಪ್ರತಿಷ್ಠೆಯ ಸಂಕೇತವಾಗಿ ಬಿಂಬಿಸಿದವು. ಆದರೆ ದಲಿತ ಸಮುದಾಯದ ಪರವಾಗಿ ಅವರ ಕೊಡುಗೆಯ ಬಗ್ಗೆ ಪತ್ರಿಕೆಗಳಲ್ಲಿ ಒಂದೇ ಒಂದು ಪದ ಕೂಡ ಪ್ರಕಟವಾಗಲಿಲ್ಲ. ಆಕೆ ಮಹಾನ್ ಅಂಬೇಡ್ಕರ್‌ವಾದಿಯೂ ಹೌದು, ಉದ್ಯಮದ ಮಾಯಾವತಿಯೂ ಹೌದು. ಕೆನಡಾದಲ್ಲಿ ನಾನು ಅವರನ್ನು ಭೇಟಿ ಮಾಡಿದ್ದರಿಂದ ಈ ಮಾತನ್ನು ಹೇಳಬಲ್ಲೆ. ಎಲ್ಲ ಕ್ಷೇತ್ರಗಳಲ್ಲಿ ದಲಿತ ಸಾಧಕರ ಇಂತಹ ನೂರಾರು ಕಥೆಗಳಿವೆ.

ಈ ವಿಚಾರವನ್ನು ಪ್ರಸ್ತಾಪ ಮಾಡಲು ಕಾರಣವಿದೆ. ನನ್ನ ಪ್ರಕಾರ ಅಂಬೇಡ್ಕರ್‌ವಾದ ಹಲವಾರು ಆಯಾಮಗಳನ್ನು ಹೊಂದಿರುವ ತತ್ವ, ಅವುಗಳಲ್ಲಿ ಒಂದು ಆಯಾಮದ ಬಗ್ಗೆ ಮಾತ್ರ ನಾನಿಲ್ಲಿ ಪ್ರಸ್ತಾಪಿಸಿದ್ದೇನೆ. ಅಂಬೇಡ್ಕರ್‌ವಾದಿ ಎಂದು ಹೇಳಿಕೊಳ್ಳುತ್ತಾ ಮೇಲ್ಜಾತಿ ಹಿಂದೂಗಳ ಕೈಕೆಳಗೆ ಕೆಲಸ ಮಾಡುವುದರಲ್ಲಿ ಅರ್ಥವಿಲ್ಲ.

ರೇಷನ್ ಕಾರ್ಡ್‌ಗಳು, ಮಧ್ಯಾಹ್ನದ ಊಟ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳ ಹಿಡಿತದಿಂದ ದಲಿತರು ಹೊರಬರಬೇಕಿದೆ. ಆತ್ಮವಿಶ್ವಾಸವನ್ನು ರೂಢಿಸಿಕೊಂಡು ಸಾಧನೆಯ ಹಾದಿ ತುಳಿಯಬೇಕಿದೆ. ಎಲ್ಲ ಕ್ಷೇತ್ರಗಳಲ್ಲಿ ನಾಯಕತ್ವ ಸಾಧಿಸಿ ಮೇಲ್ಜಾತಿ ಹಿಂದೂಗಳನ್ನು ಕೂಡ ತಮ್ಮ ಜೊತೆ ಕರೆದೊಯ್ಯುವ ದಲಿತ ಸಾಧಕರ ವರ್ಗವೊಂದು ಹುಟ್ಟಿಕೊಳ್ಳಬೇಕಿದೆ.

ದಲಿತರ ಆತ್ಮವಿಶ್ವಾಸಕ್ಕೆ ಕಿಡಿ ಹೊತ್ತಿಸಲು ಎಲ್ಲ ಕ್ಷೇತ್ರಗಳಲ್ಲಿಯೂ ಸಾವಿರಾರು ದಲಿತ ಸಾಧಕರು ಸೃಷ್ಟಿಯಾಗಬೇಕಿದೆ. ನಿಜವಾದ ಅಂಬೇಡ್ಕರ್‌ವಾದಿಗಳು ದಲಿತ ಸಾಧಕರು; ದಲಿತ ಚಳವಳಿಕಾರರಲ್ಲ. ನಿಜವಾದ ಅಂಬೇಡ್ಕರ್‌ವಾದಿಯೊಬ್ಬ ಇತರರ

ಜೀವನಕ್ಕೆ ಆಸರೆಯಾಗುತ್ತಾನೆಯೇ ಹೊರತು ಶೋಷಿತರ ಬಳಿ ಉದ್ಯೋಗಕ್ಕಾಗಿ ಕೈ ಚಾಚುವುದಿಲ್ಲ. ದಲಿತ ಸಾಧಕರು ಸಮುದಾಯದ ಪ್ರೇರಕರಾಗಿ ಬೆಳೆದ ದಿನ ದ್ವುನ್ನಂತರ ಕಾಲ ಆರಂಭವಾಗುತ್ತದೆ.

ಇಂಗ್ಲಿಷ್ ಮತ್ತು ಪ್ರಾದೇಶಿಕತೆ

ಸ್ವಲ್ಪ ಯೋಚಿಸಿ. ಫ್ರಾನ್ಸ್ ಮತ್ತು ಬ್ರಿಟನ್, ಬ್ರಿಟನ್ ಮತ್ತು ಜರ್ಮನಿ ದೇಶಗಳನ್ನು ಬೇರ್ಪಡಿಸುವ ಅಂಶಗಳು ಯಾವುವು? ಈ ಮೂರು ದೇಶಗಳು ವರ್ಣದ ಆಧಾರದಲ್ಲಿ ಭಿನ್ನವಾಗಿವೆಯೇ? ಈ ಮೂರು ದೇಶಗಳಲ್ಲಿ ಮೂರು ಪ್ರತ್ಯೇಕ ಧರ್ಮಗಳಿವೆಯೇ? ಬೇರೆ ಬೇರೆ ಹವಾಮಾನ ವಲಯಗಳಲ್ಲಿ ಈ ದೇಶಗಳಿವೆಯೇ? ಈ ದೇಶಿಗಳ ಆಹಾರ ಪದ್ಧತಿ, ಜೀವನಶೈಲಿ ಮತ್ತು ಸಂಸ್ಕೃತಿಗಳು ಭಿನ್ನವಾಗಿವೆಯೇ? ಇಲ್ಲ. ಹಾಗಾದರೆ ಈ ಮೂರು ದೇಶಗಳನ್ನು ಬೇರ್ಪಡಿಸುವ ಅಂಶ ಭಾಷೆ ಮತ್ತು ಭಾಷೆ ಮಾತ್ರ ಅಲ್ಲವೇ?

ಇನ್ನು ಭಾರತದ ವಿಷಯಕ್ಕೆ ಬರುವುದಾದರೆ, ಮಹಾರಾಷ್ಟ್ರ ಮತ್ತು ಗುಜರಾತ್ ಯಾಕೆ ಪ್ರತ್ಯೇಕ ರಾಜ್ಯಗಳಾಗಿ ಅಸ್ತಿತ್ವದಲ್ಲಿವೆ? ಒಂದೇ ಭೂ ಪ್ರದೇಶದಲ್ಲಿದ್ದರೂ ಕೂಡ ಯಾಕೆ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕೇರಳ ಪ್ರತ್ಯೇಕ ರಾಜ್ಯಗಳಾಗಿ ವಿಭಜನೆಯಾಗಿವೆ? ಪಶ್ಚಿಮಬಂಗಾಳ ಮತ್ತು ಒರಿಸ್ಸಾ, ಹರಿಯಾಣ ಮತ್ತು ಪಂಜಾಬ್ ರಾಜ್ಯಗಳು ಪ್ರತ್ಯೇಕಗೊಳ್ಳಲು ಕಾರಣವೇನು? ಭಾಷೆಯಲ್ಲವೇ?

ಸ್ಥಳೀಯತೆ ಮನುಷ್ಯ ಜನಾಂಗಕ್ಕೆ ಅಂಟಿದ ಶಾಪ. ಜಾಗತೀಕರಣಕ್ಕೆ ಸ್ಥಳೀಯತೆಯ ಎಲ್ಲ ಆಯಾಮಗಳನ್ನು ಮೆಟ್ಟುವ ಸಾಮರ್ಥ್ಯವಿದೆ. ಆದರೆ ಭಾವನೆಗಳು ಸಾರ್ವತ್ರಿಕವಾಗಳ್ಳದೆ ಹೋದರೆ ಜಾಗತೀಕರಣ ವ್ಯವಸ್ಥೆ ಕೂಡ ಸಮಸ್ಯೆಗಳನ್ನು ಎದುರಿಸುವುದರಲ್ಲಿ ಸಂಶಯವಿಲ್ಲ. ತಂತಮ್ಮ ಭಾಷೆ ಮತ್ತು ಭಾಷಾಧಾರಿತ ಭಾವನೆಗಳ ಬಿಗಿಹಿಡಿತದಲ್ಲಿ ಜಾಗತಿಕ ಹಳ್ಳಿ ಇನ್ನೂ ನಲುಗುತ್ತಿದೆ. "ಒಂದು ವಿಶ್ವ ಭಾಷೆ" ಇಲ್ಲದೆ "ಒಂದು ವಿಶ್ವ- ಒಂದು ಜನಾಂಗ" ಎಂಬ ಗುರಿಯನ್ನು ನಾವು ಹೇಗೆ ತಲುಪಲು ಸಾಧ್ಯ?

"ಒಂದು ವಿಶ್ವ- ಒಂದು ವಿಶ್ವ ಭಾಷೆ- ಒಂದು ಜನಾಂಗದ" ಪರಿಕಲ್ಪನೆಗಿರುವ ದೊಡ್ಡ ತೊಡಕು ಈ ಭಾಷೆ. ಉದಾಹರಣೆಗೆ ಓರ್ವ ರಷ್ಯಾದವ ಮತ್ತು ಚೀನಾದವನನ್ನು ಒಂದೇ ಕೋಣೆಯಲ್ಲಿ ಕೂಡಿ ಹಾಕಿದರೆ ಏನಾಗಬಹುದು? ಇಬ್ಬರಲ್ಲಿ ಒಬ್ಬರಿಗಾದರೂ ಎರಡೂ ಭಾಷೆ ಬರಬೇಕು. ಅದೇ ರೀತಿ ಚೀನಾ, ರಷ್ಯಾ, ಜಪಾನ್ ಮತ್ತು ಕೊರಿಯಾದ ನಾಲ್ಕು ಮಂದಿ ಒಂದೇ ಕೋಣೆಯಲ್ಲಿ ಇದ್ದರೆ, ಇವರಲ್ಲಿ ಒಬ್ಬರಿಗೆ ಎಲ್ಲ ಭಾಷೆಗಳ ಜ್ಞಾನವಿರಬೇಕು. ಹೀಗೆ ವಿವಿಧ ದೇಶಗಳ ನಾಗರಿಕರು ಒಂದೆಡೆ ಸೇರಿದಾಗ ಇವರಲ್ಲಿ ಯಾರಾದರೂ ಒಬ್ಬರಿಗೆ ಎಲ್ಲ ಭಾಷೆಗಳ ಅರಿವಿರಬೇಕಾಗುತ್ತದೆ.

ಇದೇ ತರ್ಕವನ್ನು ತಮಿಳು, ತೆಲುಗು, ಕನ್ನಡ, ಮಲಯಾಳಿ, ಮರಾಠಿ, ಗುಜರಾತಿ, ಬೆಂಗಾಲಿ, ಒರಿಯಾ, ಪಂಜಾಬಿ ಮತ್ತು ಹಿಂದೂಸ್ಥಾನಿ ಭಾಷಿಕರಿಗೂ ಅನ್ವಯಿಸಬಹುದು. ಈ ಭಾಷೆಯನ್ನಾಡುವ ಜನರೆಲ್ಲರೂ ಒಂದೆಡೆ ಸೇರಿದಾಗ, ಒಬ್ಬರಿಗಾದರೂ ಎಲ್ಲ ಭಾಷೆಗಳ ಜ್ಞಾನವಿರಬೇಕಾಗುತ್ತದೆ ಅಲ್ಲವೇ? ಇದು ಸಾಧ್ಯವೇ? ಖಂಡಿತ ಇಲ್ಲ.

ಹಾಗಾದರೆ ಇವರೆಲ್ಲರನ್ನೂ ಒಂದೆಡೆ ಸೇರಿಸಿ, ಭಾವನಾತ್ಮಕವಾಗಿ ಬೆಸೆಯಲು ಒಂದು ಸಮಾನವಾದ ಭಾಷೆ ಅತ್ಯವಶ್ಯಕವಲ್ಲವೇ? ಅಂತಹ ಭಾಷೆ ಇದೆಯೇ? ಎಲ್ಲ ಭಾಷೆಗಳು ಕೂಡ ಇಂತಹ ಗುಣವನ್ನು ಹೊಂದಿದೆ ಎಂದು ವಾದಿಸಬಹುದು. ಆದರೆ ಈ ಯಾವ ಭಾಷೆಗಳು ಇಂಗ್ಲಿಷ್‌ನಂತೆ ಜ್ಞಾನವಿನಿಮಯದ ಭಾಷೆಯಾಗಿ, ಸಂಪರ್ಕ ಭಾಷೆಯಾಗಿ ಸಾರ್ವತ್ರಿಕ ಮಾನ್ಯತೆಯನ್ನು ಪಡೆದಿಲ್ಲ. ಹೀಗಾಗಿ ಕೇವಲ ಇಂಗ್ಲಿಷ್ ಮಾತ್ರ ಸಮಾನ ಭಾಷೆಯಾಗುವ ಸಾಧ್ಯತೆಯನ್ನು ಹೊಂದಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಇಂಗ್ಲಿಷ್ ಇಂದು ಜಗತ್ತಿನ ಸಂಪರ್ಕ ಭಾಷೆಯಾಗಿರುವುದು ಎಲ್ಲರಿಗೂ ಒಪ್ಪಿತವಾದ ಸಂಗತಿ. ಹೀಗಾಗಿ ಇಂಗ್ಲಿಷ್ ಮಾತ್ರ, ಬರಹ ರೂಪದಲ್ಲಿ ಮತ್ತು ಆಡುಭಾಷೆಯಾಗಿ ಸಾರ್ವತ್ರಿಕ ಮನ್ನಣೆ ಗಳಿಸಲು ಸಾಧ್ಯ. ವಿಶ್ವದ ಒಳಿತಿಗಾಗಿ ಇಂಗ್ಲಿಷ್ ಭಾಷೆ, ಚೀನಿ, ಫ್ರೆಂಚ್, ಜಪಾನಿ, ಹಿಂದಿ, ತಮಿಳು, ಜರ್ಮನ್‌ನಂತಹ ಪ್ರಾದೇಶಿಕ ಭಾಷೆಗಳ ಸ್ಥಳವನ್ನು ಆವರಿಸಿಕೊಳ್ಳಬೇಕಿದೆ.

ಆಧುನಿಕ ಜ್ಞಾನದ ರವಾನೆಗೆ ಇಂಗ್ಲಿಷ್ ಭಾಷೆ ಅತ್ಯಂತ ಸೂಕ್ತವಾಗಿದೆ. ಇದಕ್ಕೆ ಪುರಾವೆಗಳು ಕೂಡ ಇವೆ. ಜಾತಿ, ವರ್ಣ, ಧರ್ಮ, ಇವುಗಳನ್ನು ಹೊರತುಪಡಿಸಿ ಎಲ್ಲರೂ ಕೂಡ ಸಮಾನ ಪ್ರತಿಭೆ ಹೊಂದಿರುತ್ತಾರೆ. ಫ್ರಾನ್ಸ್‌ನ ಜನರು ಬ್ರಿಟನ್ ಜನರಿಗಿಂತ ಯಾವುದೇ ರೀತಿಯಲ್ಲಿ ಕೀಳಲ್ಲ. ಆದರೆ ಬ್ರಿಟನ್ ಇದುವರೆಗೆ 101 ನೊಬೆಲ್ ಪ್ರಶಸ್ತಿಗಳನ್ನು ಪಡೆದಿದ್ದರೆ, ಫ್ರಾನ್ಸ್ 49 ಪ್ರಶಸ್ತಿಗಳನ್ನು ಮಾತ್ರ ಪಡೆದಿದೆ. ಜರ್ಮನಿ 76 ನೊಬೆಲ್ ಪ್ರಶಸ್ತಿಗಳನ್ನು ಪಡೆದಿದ್ದರೆ, ಜಪಾನ್ 12 ಪ್ರಶಸ್ತಿಗಳಿಗೆ ಮಾತ್ರ ತೃಪ್ತಿ ಪಟ್ಟು ಕೊಂಡಿದೆ. ಚೀನಾ ಇದುವರೆಗೆ ನೊಬೆಲ್ ಪ್ರಶಸ್ತಿಯನ್ನೇ ಪಡೆದಿಲ್ಲ. 14 ಪ್ರಶಸ್ತಿಗಳನ್ನು ಪಡೆದಿರುವ ರಷ್ಯಾ ತಾರತಮ್ಯದ ಆರೋಪ ಮಾಡುತ್ತಾ ಬಂದಿದೆ.

> **ಆಧುನಿಕ ಜ್ಞಾನದ ರವಾನೆಗೆ ಇಂಗ್ಲಿಷ್ ಭಾಷೆ ಅತ್ಯಂತ ಸೂಕ್ತವಾಗಿದೆ. ಇದಕ್ಕೆ ಪುರಾವೆಗಳು ಕೂಡ ಇವೆ. ಜಾತಿ, ವರ್ಣ, ಧರ್ಮ, ಇವುಗಳನ್ನು ಹೊರತು ಪಡಿಸಿ ಎಲ್ಲರೂ ಕೂಡ ಸಮಾನ ಪ್ರತಿಭೆ ಹೊಂದಿರುತ್ತಾರೆ. ಫ್ರಾನ್ಸ್‌ನ ಜನರು ಬ್ರಿಟನ್ ಜನರಿಗಿಂತ ಯಾವುದೇ ರೀತಿಯಲ್ಲಿ ಕೀಳಲ್ಲ. ಆದರೆ ಬ್ರಿಟನ್ ಇದುವರೆಗೆ 101 ನೊಬೆಲ್ ಪ್ರಶಸ್ತಿಗಳನ್ನು ಪಡೆದಿದ್ದರೆ, ಫ್ರಾನ್ಸ್ 49 ಪ್ರಶಸ್ತಿಗಳನ್ನು ಮಾತ್ರ ಪಡೆದಿದೆ. ಜರ್ಮನಿ 76 ನೊಬೆಲ್ ಪ್ರಶಸ್ತಿಗಳನ್ನು ಪಡೆದಿದ್ದರೆ, ಜಪಾನ್ 12 ಪ್ರಶಸ್ತಿಗಳಿಗೆ ಮಾತ್ರ ತೃಪ್ತಿ ಪಟ್ಟು ಕೊಂಡಿದೆ. ಚೀನಾ ಇದುವರೆಗೆ ನೊಬೆಲ್ ಪ್ರಶಸ್ತಿಯನ್ನೇ ಪಡೆದಿಲ್ಲ. 14 ಪ್ರಶಸ್ತಿಗಳನ್ನು ಪಡೆದಿರುವ ರಷ್ಯಾ ತಾರತಮ್ಯದ ಆರೋಪ ಮಾಡುತ್ತಾ ಬಂದಿದೆ. ಇನ್ನು 270 ನೊಬೆಲ್ ಪಾರಿತೋಷಕಗಳೊಂದಿಗೆ ಇಂಗ್ಲಿಷ್ ಭಾಷೆ ಮಾತನಾಡುವ ಅಮೆರಿಕಾ ಮಂಚೂಣಿಯಲ್ಲಿದೆ.**

ಇನ್ನು 270 ನೊಬೆಲ್ ಪಾರಿತೋಷಕಗಳೊಂದಿಗೆ ಇಂಗ್ಲಿಷ್ ಭಾಷೆ ಮಾತನಾಡುವ ಅಮೆರಿಕಾ ಮಂಚೂಣಿಯಲ್ಲಿದೆ. ಇಂಗ್ಲಿಷ್ ಭಾಷೆ ಮಾತನಾಡುವ ರಾಷ್ಟ್ರಗಳು ಅಲ್ಪಸಂಖ್ಯಾತವಾಗಿದ್ದರೂ ಶೇ. 60ರಷ್ಟು ನೊಬೆಲ್ ಪ್ರಶಸ್ತಿಗಳನ್ನು ಈ ರಾಷ್ಟ್ರಗಳೇ ಪಡೆದಿವೆ. ಇಂಗ್ಲಿಷ್ ಭಾಷೆ ಬಳಸುವ ರಾಷ್ಟ್ರಗಳು ಜ್ಞಾನಶಾಖೆಗೆ ಹೆಚ್ಚು ಕೊಡುಗೆಗಳನ್ನು ನೀಡುವುದು ಯಾಕೆ ಎಂಬ ಪ್ರಶ್ನೆಗಳನ್ನು ನಾವೆಲ್ಲರೂ ಕೇಳಿಕೊಳ್ಳಬೇಕಾಗಿದೆ. ಆಂಗ್ಲೇತರ ರಾಷ್ಟ್ರಗಳ ನೊಬೆಲ್ ಪ್ರಶಸ್ತಿ ವಿಜೇತರು ಕೂಡ ಇಂಗ್ಲಿಷ್ ಭಾಷೆಯಲ್ಲಿಯೇ ತಮ್ಮ ಕಾರ್ಯಗಳನ್ನು ಮಾಡಿದ್ದಾರೆ. ರವೀಂದ್ರನಾಥ್ ಠ್ಯಾಗೋರ್ ಅವರನ್ನು ಹೊರತುಪಡಿಸಿದರೆ, ನೊಬೆಲ್ ಪ್ರಶಸ್ತಿ ಪಡೆದ ಭಾರತದ ಇತರ ಐದು ಮಂದಿ ಇಂಗ್ಲಿಷ್ ಭಾಷೆಯಲ್ಲಿಯೇ ತಮ್ಮ ಕಾರ್ಯವನ್ನು ಮಾಡಿದ್ದಾರೆ. ಠ್ಯಾಗೋರ್ ಅವರಿಗೂ ಇಂಗ್ಲಿಷ್ ಭಾಷೆಯ ಮೇಲೆ ಹಿಡಿತವಿತ್ತು ಮತ್ತು 'ಗೀತಾಂಜಲಿ' ಇಂಗ್ಲಿಷ್‌ಗೆ ಭಾಷಾಂತರಗೊಂಡ ಮೇಲೆ ಅದಕ್ಕೆ ನೊಬೆಲ್ ಪ್ರಶಸ್ತಿ ದೊರಕಿದ್ದು.

ಪ್ರಾದೇಶಿಕ ಭಾಷೆಗಳಿಂದಾಗಿ ಕೋಟ್ಯಾಂತರ ಮಂದಿ ತಮ್ಮ ಪ್ರತಿಭೆಯನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಇದು ನಿಲ್ಲಬೇಕು. ಮನುವಿಗೆ ಕೂಡ ಇಂಗ್ಲಿಷ್ ಗೊತ್ತಿರಲಿಲ್ಲ. ಹೀಗಾಗಿ ಒಟ್ಟಾರೆ ಭಾರತ ಇಂಗ್ಲಿಷ್ ಭಾಷೆಯನ್ನು ಬಳಸಲಾರಂಭಿಸಿದರೆ, ಮನುವಿನ ಜಗತ್ತು ಚಿದ್ರವಾಗುತ್ತದೆ.

ಹೀಗಾಗಿ ಪ್ರಾದೇಶಿಕ ಭಾಷೆಗಳಿಗೆ ಹೆಚ್ಚಿನ ಮನ್ನಣೆ ನೀಡದೆ, ನಾವೆಲ್ಲರೂ ಇಂಗ್ಲಿಷ್ ಭಾಷೆಯನ್ನು ಬಳಸೋಣ ಬನ್ನಿ.

* * *

ಇಡೀ ಜಗತ್ತು ಇಂಗ್ಲಿಷ್ ಪರವಾಗಿ ಬದಲಾಗುತ್ತಲಿದೆ. ಟ್ಯಾಕ್ಸಿ ಚಾಲಕರು ಕೂಡ ಇಂಗ್ಲಿಷ್ ಭಾಷೆಯನ್ನು ಬಳಸಬೇಕಾದ ಅನಿವಾರ್ಯತೆ ಈಗಾಗಲೇ ನಿರ್ಮಾಣವಾಗಿದೆ.

ದೆಹಲಿ ಮತ್ತು ಮುಂಬೈನಂತಹ ಬೃಹತ್ ನಗರಗಳಲ್ಲಿ ರೇಡಿಯೋ ಟ್ಯಾಕ್ಸಿಯ ಹೊಸ ಸೇವೆ ಇತ್ತೀಚಿನ ದಿನಗಳಲ್ಲಿ ಆರಂಭವಾಗಿದೆ. ಇದು ಸಣ್ಣ ನಗರಗಳಿಗೂ ಕೂಡ ಅತಿ ಶೀಘ್ರದಲ್ಲಿ ಪ್ರವೇಶಿಸಲಿದೆ. ರೇಡಿಯೋ ಟ್ಯಾಕ್ಸಿ ವ್ಯವಸ್ಥೆ ಹೇಗಿದೆ ಮತ್ತು ಇದರಲ್ಲಿ ಇಂಗ್ಲಿಷ್ ಭಾಷೆಯ ಪಾತ್ರವೇನು ಎಂಬುದರ ಬಗ್ಗೆ ಸ್ವಲ್ಪ ವಿವರಣೆ ಅಗತ್ಯ.

ಉದಾಹರಣೆಗೆ ಓರ್ವ ವ್ಯಕ್ತಿ 100 ಕಾರ್‌ಗಳನ್ನು ಒಳಗೊಂಡ 'ಫಾಸ್ಟ್‌ಕ್ಯಾಬ್' ಎಂಬ ಸಂಸ್ಥೆಯನ್ನು ಆರಂಭಿಸುತ್ತಾನೆ ಎಂದಿಟ್ಟುಕೊಳ್ಳಿ. ಸಂಸ್ಥೆ ಚಾಲಕರಿಗಾಗಿ ಪತ್ರಿಕೆಗಳಲ್ಲಿ ಜಾಹೀರಾತು ನೀಡುತ್ತದೆ. ಅಭ್ಯರ್ಥಿಗಳ ಸಂದರ್ಶನ ನಡೆಸಿ, ಅವರ ಚಾಲನೆಯ ಕೌಶಲ್ಯವನ್ನು ಪರೀಕ್ಷಿಸಿದ ನಂತರ, ಆಯ್ಕೆಯಾದ ಅಭ್ಯರ್ಥಿಗಳಿಗೆ ಕೆಲವು ದಿನಗಳ ತರಬೇತಿ ನೀಡುತ್ತದೆ. ಚಾಲಕರು ರಸ್ತೆಗಿಳಿದು ತಮ್ಮ ಕಾರ್ಯವನ್ನು ಆರಂಭಿಸಿದ ಬಳಿಕ ಜಿಪಿಎಸ್ ತಂತ್ರಜ್ಞಾನದ ಪರಿಧಿಗೆ ಒಳಪಟ್ಟಿರುತ್ತಾರೆ. ಕಾರ್ ನಿಖರವಾಗಿ ಯಾವ ಸ್ಥಳದಲ್ಲಿದೆ ಎಂದು ಸಂಸ್ಥೆಯ ಮುಖ್ಯ ಕಚೇರಿಗೆ ಗೊತ್ತಿರುತ್ತದೆ. ಗ್ರಾಹಕರು ಟ್ಯಾಕ್ಸಿ ಸೇವೆಯನ್ನು ಪಡೆಯಲು ಸಂಸ್ಥೆಗೆ ದೂರವಾಣಿ ಕರೆ ಮಾಡುತ್ತಾರೆ. ಸದರಿ ಪ್ರದೇಶದಲ್ಲಿ ಟ್ಯಾಕ್ಸಿಗಳ ಲಭ್ಯತೆಯ ಆಧಾರದ ಮೇಲೆ ಗ್ರಾಹಕರಿಗೆ ಕಾರ್ ಚಾಲಕರ ಹೆಸರು, ಮೊಬೈಲ್ ನಂಬರ್ ಮತ್ತು ಕಾರ್‌ನ ಸಂಖ್ಯೆಯನ್ನು ನೀಡಲಾಗುತ್ತದೆ. ಚಾಲಕರು ಪ್ರತಿ

ಇಂಗ್ಲಿಷ್ ಭಾಷೆಯ ಆಂದೋಲನ

ನ ಸಂಸ್ಥೆಗೆ 600ರಿಂದ 800 ರೂ. ಬಾಡಿಗೆ ಪಾವತಿಸುತ್ತಾರೆ ಹಾಗೂ ಟ್ಯಾಕ್ಸಿಯನ್ನು ತಮ್ಮ ಬಳಿಯಲ್ಲಿಯೇ ಇರಿಸಿಕೊಳ್ಳುತ್ತಾರೆ. ನಾನು ರೇಡಿಯೋ ಟ್ಯಾಕ್ಸಿ ಸೌಲಭ್ಯವನ್ನು ಯಾವಾಗಲೂ ಬಳಸಿಕೊಳ್ಳುತ್ತೇನೆ ಮತ್ತು ಬಹಳಷ್ಟು ಸಲ ಚಾಲಕರ ಜೊತೆ ಮಾತನಾಡಿದ್ದೇನೆ. ರೇಡಿಯೋ ಟ್ಯಾಕ್ಸಿ ಚಾಲಕರು ಮಾಸಿಕ ಸುಮಾರು 15,000 ರೂ. ಹಣ ಗಳಿಸುತ್ತಾರೆ.

ಟ್ಯಾಕ್ಸಿ ನಿಲ್ದಾಣಗಳಲ್ಲಿ ಕಾಲ ಕಳೆಯುತ್ತಾ ಮಾಸಿಕ 3,500– 4,000 ರೂ. ಗಳಿಸುವ ಟ್ಯಾಕ್ಸಿ ಚಾಲಕರು ರೇಡಿಯೋ ಟ್ಯಾಕ್ಸಿ ಸೇವೆಗೆ ಯಾಕೆ ಅರ್ಜಿ ಹಾಕುವುದಿಲ್ಲ? ಇದಕ್ಕೆ ಉತ್ತರ ಪ್ರಶ್ನೆಯಲ್ಲಿಯೇ ಅಡಗಿದೆ. ರೇಡಿಯೋ ಟ್ಯಾಕ್ಸಿ ಚಾಲಕರಿಗೆ ಕನಿಷ್ಠ ಇಂಗ್ಲಿಷ್ ಭಾಷಾ ಜ್ಞಾನ ಇರಬೇಕು. ಸ್ವಲ್ಪ ಮಟ್ಟಗಿನ ಇಂಗ್ಲಿಷ್ ಭಾಷಾ ಜ್ಞಾನವಿಲ್ಲದೆ ಈ ಕೆಲಸಕ್ಕೆ ಅರ್ಜಿ ಹಾಕುವಂತಿಲ್ಲ.

ಭಾರತದ ಮಧ್ಯಮವರ್ಗದ ಗಾತ್ರ ಹೆಚ್ಚಾಗುತ್ತಾ ಜೀವನಶೈಲಿ ಸುಧಾರಿಸುತ್ತಾ ಹೋದಂತೆ, ಅನಕ್ಷರಸ್ಥರು ಮಾಡುವಂತಹ ಕೆಲಸಗಳಿಗೆ ಕೂಡ ಇಂಗ್ಲಿಷ್ ಭಾಷೆಯ ಜ್ಞಾನ ಅತ್ಯವಶ್ಯಕವಾಗಿದೆ. ದೆಹಲಿಯಲ್ಲಿರುವ ನನ್ನ ಬ್ರಿಟಿಷ್ ಪತ್ರಕರ್ತ ಮಿತ್ರ ತನ್ನ ಮನೆಗೆಲಸದವಳಿಗೆ 10,000 ರೂ. ಮಾಸಿಕ ಸಂಬಳ ನೀಡುತ್ತಾನೆ. ಮನೆಗೆಲಸದಾಕೆಗೆ ಇಂಗ್ಲಿಷ್ ಭಾಷೆ ಗೊತ್ತು. ಇನ್ನು ಕೆಲವೇ ದಶಕಗಳಲ್ಲಿ ಎಲ್ಲ ಕಚೇರಿಗಳಲ್ಲಿ ಅಟೆಂಡರ್ ಹುದ್ದೆಗೆ ಕೂಡ ಇಂಗ್ಲಿಷ್ ಭಾಷಾ ಜ್ಞಾನದ ಅರ್ಹತೆಯನ್ನು ಕೇಳಲಾಗುತ್ತದೆ. ಇಂಗ್ಲಿಷ್ ಭಾಷೆ ಮಾತನಾಡಲು ಬಲ್ಲ ಕೆಲಸದವರಿಗೆ ಇಂಗ್ಲಿಷ್ ಗೊತ್ತಿಲ್ಲದವರಿಗಿಂತ ಹೆಚ್ಚು ಬೇಡಿಕೆ. ಸ್ಟಾರ್ ಹೋಟೆಲ್‌ಗಳಲ್ಲಿನ ದ್ವಾರಪಾಲಕರು, ಸೆಕ್ಯೂರಿಟಿ ಗಾರ್ಡ್‌ಗಳಿಗೆ ಕೂಡ ಸ್ವಲ್ಪ ಇಂಗ್ಲಿಷ್ ಭಾಷೆ ಗೊತ್ತಿರಬೇಕು. ಜಾಗತೀಕರಣದ ಪ್ರಭಾವದಿಂದಾಗಿ ಜಾತಿರಹಿತವಾದ ಬಹಳಷ್ಟು ಉದ್ಯೋಗಗಳಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಅತ್ಯವಶ್ಯಕವಾಗಿದೆ. ನಾಯಿ ತರಬೇತುದಾರರು ಕೂಡ ಇಂಗ್ಲಿಷ್ ಭಾಷೆಯನ್ನು ಕಲಿತಿರಬೇಕು. ಯಾಕೆಂದರೆ ವಿದೇಶದ ನಾಯಿಗಳು ಇಂಗ್ಲಿಷ್ ಭಾಷೆಯ ಸೂಚನೆಗಳನ್ನಷ್ಟೆ ಅರ್ಥೈಸಿಕೊಳ್ಳುವುದು.

ಕೆಲವೇ ದಶಕಗಳಲ್ಲಿ ಕೃಷಿಯೇತರ ಉದ್ಯೋಗಳಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಅತ್ಯವಶ್ಯಕ ಅರ್ಹತೆಯಾಗಿ ಹೊರಹೊಮ್ಮಲಿದೆ. ಹೀಗಾಗಿ ಈಗ ಐದು ವರ್ಷ ಪ್ರಾಯದ ಮಗು ಬೆಳೆದಾಗ ಇಂಗ್ಲಿಷ್ ಜ್ಞಾನವಿಲ್ಲದಿದ್ದರೆ, ಉದ್ಯೋಗ ಮಾರುಕಟ್ಟೆಯಲ್ಲಿ ಅನರ್ಹ ಎನಿಸಿಕೊಳ್ಳುತ್ತದೆ.

ಜಗತ್ತು ದಿನದಿಂದ ದಿನಕ್ಕೆ ಸಣ್ಣದಾಗುತ್ತಿರುವ ಸಂದರ್ಭದಲ್ಲಿ ವಾಣಿಜ್ಯ ವ್ಯವಹಾರ ಮತ್ತು ಅಂತರಾಷ್ಟ್ರೀಯ ಸಂಪರ್ಕಕ್ಕೆ ಇಂಗ್ಲಿಷ್ ಭಾಷೆಯೊಂದೇ ರಹದಾರಿಯಾಗಿದೆ. ಯುರೋಪ್ ಈ ಕಟುಸತ್ಯವನ್ನು ಅರ್ಥ ಮಾಡಿಕೊಳ್ಳಲು ಹೆಣಗಾಡಿತು. ಈಗ ಫ್ರಾನ್ಸ್‌ನ ಶೇ. 36ರಷ್ಟು ಮಂದಿಗೆ ಇಂಗ್ಲಿಷ್ ಎರಡನೆಯ ಭಾಷೆಯಾಗಿದೆ. ಜರ್ಮನಿಯ ಶೇ. 48ರಷ್ಟು ಮಂದಿಗೆ ಇಂಗ್ಲಿಷ್ ಎರಡನೆಯ ಭಾಷೆಯಾಗಿದೆ. ಐತಿಹಾಸಿಕವಾಗಿ ಫ್ರಾನ್ಸ್, ಜರ್ಮನಿ ಮತ್ತು ಗ್ರೀಸ್ ತಂತಮ್ಮ ಭಾಷೆಗಳು ಇತರ ಎಲ್ಲ ಭಾಷೆಗಳಿಗಿಂತ ಮೇಲು ಎಂದು ಪ್ರತಿಷ್ಠೆ ಮೆರೆದಂತಹ ದೇಶಗಳಾಗಿವೆ. ಪಾರಂಪರಿಕವಾಗಿ ಕೂಡ ಈ ದೇಶಗಳು ಇಂಗ್ಲಿಷ್ ಭಾಷೆಯನ್ನು ಕೀಳಾಗಿ ಕಾಣುತ್ತಾ ಬಂದಿರುವುದು ಸುಳ್ಳಲ್ಲ. ಇನ್ನೂ ಸ್ವೀಡನ್‌ನಂತರ ರಾಷ್ಟ್ರದ ಸುಮಾರು ಶೇ. 89ರಷ್ಟು ಮಂದಿಗೆ ಇಂಗ್ಲಿಷ್ ಎರಡನೆಯ ಭಾಷೆಯಾಗಿದೆ.

ಆಧುನಿಕ ವಿಜ್ಞಾನ, ವಾಣಿಜ್ಯ ವ್ಯವಹಾರ ಮತ್ತು ರಾಯಭಾರಿಕೆಯ ಭಾಷೆಯಾಗಿ ಇಂಗ್ಲಿಷ್ ಬೆಳೆದಿರುವುದರಿಂದ, ಫ್ರಾನ್ಸ್, ಜರ್ಮನಿ ಮತ್ತು ಗ್ರೀಸ್ ತಂತಮ್ಮ ಭಾಷಾ ವ್ಯಾಮೋಹ ಬಿಟ್ಟು ಇಂಗ್ಲಿಷ್‌ಗೆ ಶರಣಾಗಲೇಬೇಕಾಯಿತು. ಇಂಗ್ಲಿಷ್ ಮಾತನಾಡದ ಯುರೋಪ್‌ನ ರಾಷ್ಟ್ರಗಳಲ್ಲಿ ಇಂಗ್ಲಿಷ್ ಶಿಕ್ಷಕರಿಗೆ ಈಗ ಭಾರಿ ಬೇಡಿಕೆಯಿದೆ. ಭಾರತದಲ್ಲಿ ಕೂಡ ವಿಜ್ಞಾನದ ಶಿಕ್ಷಕರಿಗಿಂತ ಇಂಗ್ಲಿಷ್ ಶಿಕ್ಷಕರಿಗೆ ಬೇಡಿಕೆ ಹೆಚ್ಚು.

ಹಾಗಾದರೆ ಇಂಗ್ಲಿಷ್ ಭಾಷೆಯ ಜ್ಞಾನವಿಲ್ಲದೆ ಹೋದರೆ ದಲಿತ ಮಗುವಿನ ಪರಿಸ್ಥಿತಿಯೇನಾಗಬಹುದು? ಶ್ರೇಣೀಕೃತ ಜಾತಿವ್ಯವಸ್ಥೆಯಿಂದ ಹೊರಬರಬೇಕಾಗಿರುವುದರಿಂದ ಭಾರತದ ಇತರ ಯಾವುದೇ ಸಾಮಾಜಿಕ ವರ್ಗಕ್ಕಿಂತ ಹೆಚ್ಚಾಗಿ ದಲಿತರಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಅತ್ಯವಶ್ಯಕವಾಗಿದೆ.

ಇದೆಲ್ಲದಕ್ಕೆ ಪೂರಕವಾಗಿ ಇಂಗ್ಲಿಷ್ ಭಾಷೆ ದಲಿತರ ದೇವತೆಯಾಗಿ ಹೊರಹೊಮ್ಮಿದೆ. ತಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣವನ್ನು ನೀಡುವುದು ಎಲ್ಲ ದಲಿತ ಪೋಷಕರ ಜವಾಬ್ದಾರಿಯಾಗಿದೆ. ದಲಿತರು ಮತ್ತು ಆದಿವಾಸಿಗಳ ಪರವಾಗಿ ಕೆಲಸ ಮಾಡುವ ಎಲ್ಲ ಸಾಮಾಜಿಕ ಕಾರ್ಯಕರ್ತರು, ಸರ್ಕಾರೇತರ ಸಂಸ್ಥೆಗಳು ಮತ್ತು ಸರ್ಕಾರದ ಏಜೆನ್ಸಿಗಳು ದಲಿತ ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣ ನೀಡುವಂತೆ ಪ್ರೇರಣೆ ನೀಡಬೇಕಾದ ಹೊಣೆಗಾರಿಕೆಯನ್ನು ನಿರ್ವಹಿಸಬೇಕಿದೆ. □

ಕೋಣೆಯೊಳಗೆ...



ಕೋಣೆಯೊಳಗೆ ಕುಳಿತಿರುವವನ ಪ್ರಪಂಚಕ್ಕೆ ಬೇರೆ
ಕಣ್ಣೀರುತ್ತವೆ.
ಪರಿಮಿತವಾದ ದೃಶ್ಯಗಳಿಗೆ ಪರಿಮಿತ
ಮುಚ್ಚಿದ ಕಿಟಕಿಗಳನ್ನ, ಗೋಡೆಗಳನ್ನ ದಾಟಲಾರೆ
ಸರ್ಕಸ್ ಬೋನೊಳಗಿನ ಸಿಂಹದಂತೆ, ಅಸಹಾಯಕವಾಗಿ
ಎಲ್ಲವನ್ನು ನುಂಗಿ ಬಿಡುವಂತೆ ಅಲ್ಲಲ್ಲೆ ತಿರುಗುತ್ತಿರುತ್ತಿಯಾ.

ನಿಂತಿರುವ ಪುಸ್ತಕಗಳು, ಬಿದ್ದು ಹೋಗಿರುವ ಪುಸ್ತಕಗಳು
ಹಳೆಯ ಪೇಪರುಗಳು, ಕೆಲವು ಜ್ಞಾಪಕಗಳು, ಖಾಲಿ ಫ್ಲವರ್‌ಪಜ್
ಅರ್ಧ ಹಸಿವಿನಿಂದಿರುವ ಬೌದ್ಧಬಿಕ್ಷುವೂ
ಕೆಟ್ಟುಹೋಗಿರುವ ಟೆಲಿಫೋನ್, ಖಾಲಿ ಕುರ್ಚಿಗಳು
ಮೂವತ್ತು ವರ್ಷದ ಹಿಂದಿನ ಯೌವ್ವನದ ಫೋಟೊಗಳು
ಟಿಷ್ಯೂ ಪೇಪರ್ಸ್.

ದಯಾಮಯಿ ವಾಕರ್
ಅಲ್ಲಲ್ಲಿ ಹರಿದು ಬಿಸಾಡಿದ ಕತ್ತಲ ಚೂರುಗಳು

ಇವೆಲ್ಲಾ ಭಯಂಕರ ಸ್ವಪ್ನಗಳನ್ನು ಗರ್ಭಿಕರಿಸಿಕೊಂಡು
ನೀರಿಂಗಿ ಹೋದ ನೇತ್ರಗಳಂತೆ,
ಕೋಣೆಯೊಳಗೆ ಕುಳಿತಿರುವವನ ಪ್ರಪಂಚವೇ ಬೇರೆ,
ಪರಿಮಿತವಾದರು
ಅಪರಿಮಿತ ದೃಶ್ಯಗಳಿಗೆ ಪರಿಮಿತ

○ ತೆಲುಗು ಮೂಲ: ಡಾ. ಕೆ. ಸಿವಾರೆಡ್ಡಿ
ಕನ್ನಡಕ್ಕೆ: ವೆಂಕಟಾಪು ಸತ್ಯಂ, ಮಾಲೂರು

'ಆಹಾರದ ಬಿಕ್ಕಟ್ಟು : ಆಹಾರದ ಹಕ್ಕು'

(45ನೇ ಪುಟದಿಂದ)

ಸುವವರನ್ನು ನಾವು ಉದ್ಯಮ ಸಾಹಸಿಗಳೆಂದು ಕರೆಯುತ್ತೇವೆ. ಇಂತಹ ಕಾರ್ಯಗಳನ್ನು ನಿರ್ವಹಿಸುವುದಕ್ಕೆ ನೀಡುವ ಸಂಭಾವನೆಯೇ ಲಾಭ. ಲೆಕ್ಕ ಪರಿಶೋಧಕರು ಗಣನೆ ಮಾಡುವಂತೆ ಆದಾಯದಿಂದ ವೆಚ್ಚವನ್ನು ಕಳೆದರೆ ಉಳಿಯುವುದೇ ಲಾಭವಲ್ಲ. ಅಂದರೆ ಅರ್ಥಶಾಸ್ತ್ರದಲ್ಲಿ ಲಾಭದ ನಿರ್ವಚನ ಭಿನ್ನವಾಗಿದೆ. ಆದಾಯ ಮತ್ತು ವೆಚ್ಚಗಳ ನಡುವಿನ ವ್ಯತ್ಯಾಸವು ಅಸಾಧಾರಣ ಲಾಭ. ಯಾವುದನ್ನು ನಾವು 'ಯೋಗ್ಯ ಲಾಭ' ವೆಂದು ಹೇಳುತ್ತಿದ್ದೇವೆಯೋ ಅದು ಉದ್ಯಮಪತಿ ಅಥವಾ ಉದ್ಯಮಸಾಹಸಿ ಪಡೆಯುವ ಸಂಭಾವನೆ.

ಇಂದು ಯೋಗ್ಯ ಲಾಭ, ಯೋಗ್ಯ ಬೆಲೆ(ಉತ್ಪಾದನಾ ವೆಚ್ಚ ಮತ್ತು ಸರಕಿನ ಮಾರಾಟದಿಂದ ಬರುವ ಆದಾಯವು ಸಮವಾಗುವ ಮಟ್ಟದಲ್ಲಿ ನಿರ್ಧರಿಸಿದ ಬೆಲೆ), ಯೋಗ್ಯ ಸರಕು-ಮುಂತಾದವು ಮೂಲೆ ಗುಂಪಾಗಿ ನೇರವಾಗಿ ಅಪಾರ ಪ್ರಮಾಣದಲ್ಲಿ ಲಾಭವನ್ನು ಗುಡ್ಡೆ ಹಾಕಿಕೊಳ್ಳುವುದೇ ಉದ್ದಿಮೆಯ ಪ್ರಧಾನ ಕೆಲಸವಾಗಿ ಬಿಟ್ಟಿದೆ. ಉದ್ದಿಮೆಗಳು ವಾಮಮಾರ್ಗಗಳನ್ನು ಹಿಡಿದು, ಯೋಗ್ಯವಲ್ಲದ ಸಾಧನಗಳನ್ನು ಬಳಸಿ, ಲೆಕ್ಕ ಪರಿಶೋಧನೆಯ ನಿಯಮಗಳನ್ನು ತಿರುಚಿ ಲಾಭ ಗಳಿಸುತ್ತಿವೆ. ಅರ್ಥಶಾಸ್ತ್ರದ ನಿಯಮಗಳನ್ನು ಅವು ಪಾಲಿಸುತ್ತಿಲ್ಲ.

ಯುರೋಪಿನ ಅನೇಕ ದೇಶಗಳಲ್ಲಿ ಮತ್ತು ಅಮೆರಿಕದಲ್ಲಿ ಅನೇಕ ಬ್ಯಾಂಕುಗಳು 2008ರಲ್ಲಿನ ಆರ್ಥಿಕ ದುಸ್ಥಿತಿಯಿಂದಾಗಿ ಮುಳಿಗಿದವು. ಅದಕ್ಕೆ ಅನೇಕ ಕಾರಣಗಳಿವೆ. ಅಲ್ಲಿ ಉನ್ನತ ಹುದ್ದೆಗಳಲ್ಲಿದ್ದ ನಿರ್ವಹಣಾ ತಜ್ಞರು, ಆಡಳಿತ ಚತುರರು, ನಿರ್ವಹಣಾ ಸಲಹೆಗಾರರು, ಸಿಈಒಗಳು ಉದ್ದಿಮೆಗಳ ಹಣಕಾಸನ್ನು ತಮಗೆ ತಿಳಿದ ರೀತಿಯಲ್ಲಿ ಬಳಸುತ್ತಾ, ನಿಯಮಗಳನ್ನು ಗಾಳಿಗೆ ತೂರುತ್ತಾ ಜೋಬಿಗೆ ಲಾಭವನ್ನು ತುಂಬಿಕೊಳ್ಳುತ್ತಿದ್ದುದು ಒಂದು ಪ್ರಧಾನ ಕಾರಣವೆಂಬುದು ಇಂದು ಸ್ಪಷ್ಟವಾಗಿದೆ. ಈ ಕಾರಣದಿಂದಾಗಿ ಲಾಭವೆನ್ನುವುದು ಶೇರುದಾರರ ಪಾಲಾಗುವುದಕ್ಕೆ ಪ್ರತಿಯಾಗಿ ನಿರ್ವಹಣಾ ತಜ್ಞರ, ನಿರ್ವಹಣಾ ಸಲಹೆಗಾರರ, ಸಿಈಒಗಳ ಜೇಬಿಗೆ ಹರಿಯುತ್ತಿದೆ.

ಉದ್ದಿಮೆಗಳು ಲಾಭ ಮಾಡಿಕೊಳ್ಳಬೇಕು. ಉದ್ದಿಮೆಗಳು ತಾವು ಎದುರಿಸುತ್ತಿರುವ ಗಂಡಾಂತರಗಳಿಗೆ, ಅನಿಶ್ಚಿತತೆಗಳಿಗೆ, ಮುಂದಾಗುವ ಏರುಪೇರುಗಳನ್ನು ನಿರೀಕ್ಷಿಸುವುದಕ್ಕೆ ಸಂಭಾವನೆ ಪಡೆಯಬೇಕು. ಆದರೆ ಉದ್ದಿಮೆಗಳ ಸಿಈಒಗಳು 10-20-30 ಕೋಟಿ ರೂಪಾಯಿಗಳವರೆಗೆ ಮಾಸಿಕ ಸಂಭಾವನೆಯನ್ನು ಖುಷಿ, ಮನೆ ಭತ್ಯೆ, ವಾಹನ ಭತ್ಯೆ, ಲಾಭದಲ್ಲಿ ಪಾಲು, ದಳ್ಳಾಳಿ, ಸಂಬಳ ಇತ್ಯಾದಿಗಳ ರೂಪದಲ್ಲಿ ಪಡೆಯುತ್ತಿದ್ದಾರೆ. ಇದನ್ನು ಒಪ್ಪುವುದು ಸಾಧ್ಯವಿಲ್ಲ. ಈ ಉದ್ದಿಮೆಗಳು ತಾವು ಗಳಿಸಿದ ಲಾಭವನ್ನು ವಿವೇಚನಾಯುಕ್ತವಾಗಿ ಬಳಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದ ಪಾತ್ರ ತುಂಬಾ ಮಹತ್ವವಾದುದು. ಉದ್ದಿಮೆಗಳ ಹಣಕಾಸು ನಿರ್ವಹಣೆ ಮೇಲೆ ಸರ್ಕಾರದ ನಿಯಂತ್ರಣ ಅಗತ್ಯ. ಒಂದು ಕಾಲದಲ್ಲಿ ಇದನ್ನು 'ಸಾಮಾಜಿಕ ನಿಯಂತ್ರಣ'ವೆಂದು ಕರೆಯುತ್ತಿದ್ದರು. ಆಹಾರೋದ್ಯಮದ ಮೇಲೂ ಸರ್ಕಾರ ತನ್ನ ನಿಯಂತ್ರಣವನ್ನು ಇಟ್ಟುಕೊಳ್ಳಬೇಕು. ಯಾವ ಕಾರಣಕ್ಕೂ ಆಹಾರೋದ್ಯಮಕ್ಕೆ 'ಅಸಾಧಾರಣ ಲಾಭ' ಗಳಿಸಲು ಅವಕಾಶವಿರಕೂಡದು. ಅಲ್ಲಿ ಲೆಕ್ಕಪತ್ರಗಳ ಬೇಕಾಬಿಟ್ಟಿ ತಿದ್ದುವಿಕೆಗೆ ಅಥವಾ ತಿರುಚುವಿಕೆಗೆ ಅವಕಾಶಗಳಿರಕೂಡದು.

ಆಹಾರದ ಮೇಲಿನ ಜನರ ಹಕ್ಕುದಾರಿಕೆಯ ವೈಫಲ್ಯದಲ್ಲಿ ಅಮರ್ತ್ಯಸೇನ್ ಹಸಿವಿಗೆ ಕಾರಣವನ್ನು ಹುಡುಕುತ್ತಿದ್ದಾನೆ. ಆಹಾರೋತ್ಪಾದನೆಯಲ್ಲಿನ ವೈಫಲ್ಯದಲ್ಲಿ ಸರ್ಕಾರವು ಹಸಿವಿಗೆ ಕಾರಣವನ್ನು ಹುಡುಕುತ್ತಿದೆ. ಇವೆರಡರ ನಡುವಿನ ವೈರುದ್ಯವನ್ನು ನಾವು ಅರ್ಥ ಮಾಡಿಕೊಂಡು ಬಿಟ್ಟರೆ ನಮಗೆ ಹಸಿವಿನ ಮೂಲ ಎಲ್ಲಿದೆ ಎಂಬುದು ತಿಳಿಯುತ್ತದೆ. ಜನರ ಆಹಾರದ ಮೇಲಿನ ಹಕ್ಕುಾರಿಕೆಯ ವೈಫಲ್ಯವನ್ನು ತಡೆಗಟ್ಟುವುದರ ಮೂಲಕ ಜನರನ್ನು ಹಸಿವಿನಿಂದ, ಅಪ್ರಾಪ್ತ ಸಾವುಗಳಿಂದ ರಕ್ಷಿಸಬಹುದು ಎಂಬುದನ್ನು ಅಮರ್ತ್ಯಸೇನ್ ತನ್ನ ಅನೇಕ ಅಧ್ಯಯನಗಳಲ್ಲಿ ತೋರಿಸಿಕೊಟ್ಟಿದ್ದಾನೆ.

ಆಹಾರೋದ್ಯಮದಲ್ಲಿ ಅರ್ಥವಾಗದ, ಸಂಕೀರ್ಣವಾದ ರೀತಿಯ ಹಣಕಾಸು ನಿರ್ವಹಣಾ ತಂತ್ರಗಳನ್ನು ತುರುಕಬಾರದು. ಆಹಾರದ ಹಕ್ಕನ್ನು ಸಾಧಿಸಿಕೊಳ್ಳಬೇಕಾದರೆ ಆಹಾರೋದ್ಯಮದಲ್ಲಿ 'ಯೋಗ್ಯ ಲಾಭ'ಕ್ಕೆ ಮಾತ್ರ ಅವಕಾಶವಿರಬೇಕು. ಅಲ್ಲಿ 'ಅಸಾಧಾರಣ ಲಾಭ'ಕ್ಕೆ ಅವಕಾಶವಿರಬಾರದು. ಆಹಾರದ ಬಿಕ್ಕಟ್ಟನ್ನು ನಿವಾರಿಸಲು, ಆಹಾರದ ಭದ್ರತೆಯನ್ನು ಸಾಧಿಸಿಕೊಳ್ಳಲು ಅಲ್ಲಿನ ಅಸಾಧಾರಣ ಲಾಭದ ಅವಕಾಶಗಳನ್ನು ಹತ್ತಿಕ್ಕಬೇಕು. ಆ ಮೂಲಕ ನಾವು ಆಹಾರ ಭದ್ರತೆಯನ್ನು ಸಾಧಿಸಿಕೊಳ್ಳಬಹುದು. ಆಹಾರದ ಹಕ್ಕನ್ನು ಜನರಿಗೆ ಒದಗಿಸುವ ಪರಿ ಇದಾಗಿದೆ. ಇಲ್ಲಿ ಸರ್ಕಾರದ ಪಾತ್ರ ತುಂಬಾ ಮಹತ್ವದ್ದಾಗಿದೆ.

ಆಹಾರ ಪದಾರ್ಥಗಳ ಸಂಸ್ಕರಣೆ, ಸಿದ್ಧ ಭೋಜನ ವಸ್ತುಗಳ ತಯಾರಿಕೆ, ಸಿಹಿ ತಿನುಸುಗಳ ಉತ್ಪಾದನೆ, ಖಾದ್ಯ ಪದಾರ್ಥಗಳ ವ್ಯಾಪಾರ, ಫಾಸ್ಟ್ ಫುಡ್ ವ್ಯವಹಾರ ಮುಂತಾದವುಗಳನ್ನು ಒಳಗೊಂಡ ಆಹಾರೋದ್ಯಮವು ಇಂದು ಬೃಹತ್ ಪ್ರಮಾಣದಲ್ಲಿ, ದೊಡ್ಡ ನಡೆಯಲ್ಲಿ ಬೆಳೆಯುತ್ತಿದೆ. ನಮ್ಮ ಸಾಮಾಜಿಕ-ಆರ್ಥಿಕ ವ್ಯವಸ್ಥೆಯಲ್ಲಿ ಇವೆಲ್ಲ ಅಗತ್ಯ. ಆದರೆ ಆಹಾರೊದ್ಯಮವೆನ್ನುವುದು ಆಹಾರ ಭದ್ರತೆಗೆ ಗಂಡಾಂತರ ಉಂಟು ಮಾಡುವ ರೀತಿಯಲ್ಲಿ ಬೆಳೆಯಬಾರದು. ಅವು ಜನರಿಗೆ ಜವಾಬುದಾರಿಯಾಗಿ, ವಿವೇಚನಾಯುಕ್ತವಾಗಿ, ಆರೋಗ್ಯಸ್ಪಂದಿಯಾಗಿ ಮತ್ತು ಲಿಂಗ ಸಂಬಂಧಗಳಿಗೆ ಅನುಕೂಲಕರವಾಗಿ ಬೆಳೆಯಬೇಕು. ಸರ್ಕಾರವು ಆಹಾರೋದ್ಯಮವನ್ನು ನಿರ್ವಹಿಸಬೇಕು. ಇಲ್ಲಿ ನಿಯಂತ್ರಣಕ್ಕಿಂತ ನಿರ್ವಹಣೆ ಬಹಳ ಮುಖ್ಯ. ಆಹಾರ ಹಕ್ಕಿಗೆ ಪರವಾದ ರೀತಿಯಲ್ಲಿ ಆಹಾರೋತ್ಪಾದನೆಯನ್ನು ನಿರ್ವಹಿಸುವ ಜವಾಬುದಾರಿಯನ್ನು ಸರ್ಕಾರವು ನಿಭಾಯಿಸಬೇಕಾಗುತ್ತದೆ.

ಆಹಾರದ ಮೇಲಿನ ಜನರ ಹಕ್ಕುದಾರಿಕೆಯ ವೈಫಲ್ಯದಲ್ಲಿ ಅಮರ್ತ್ಯಸೇನ್ ಹಸಿವಿಗೆ ಕಾರಣವನ್ನು ಹುಡುಕುತ್ತಿದ್ದಾನೆ. ಆಹಾರೋತ್ಪಾದನೆಯಲ್ಲಿನ ವೈಫಲ್ಯದಲ್ಲಿ ಸರ್ಕಾರವು ಹಸಿವಿಗೆ ಕಾರಣವನ್ನು ಹುಡುಕುತ್ತಿದೆ. ಇವೆರಡರ ನಡುವಿನ ವೈರುದ್ಯವನ್ನು ನಾವು ಅರ್ಥಮಾಡಿಕೊಂಡು ಬಿಟ್ಟರೆ ನಮಗೆ ಹಸಿವಿನ ಮೂಲ ಎಲ್ಲಿದೆ ಎಂಬುದು ತಿಳಿಯುತ್ತದೆ. ಜನರ ಆಹಾರದ ಮೇಲಿನ ಹಕ್ಕುದಾರಿಕೆಯ ವೈಫಲ್ಯವನ್ನು ತಡೆಗಟ್ಟುವುದರ ಮೂಲಕ ಜನರನ್ನು ಹಸಿವಿನಿಂದ, ಅಪೌಷ್ಟಿಕತೆಯಿಂದ, ಅಪ್ರಾಪ್ತ ಸಾವುಗಳಿಂದ ರಕ್ಷಿಸಬಹುದು ಎಂಬುದನ್ನು ಅಮರ್ತ್ಯಸೇನ್ ತನ್ನ ಅನೇಕ ಅಧ್ಯಯನಗಳಲ್ಲಿ ತೋರಿಸಿಕೊಟ್ಟಿದ್ದಾನೆ. ಆದ್ದರಿಂದ ಆಹಾರೋತ್ಪಾದನೆ-ಆಹಾರೋದ್ಯಮಗಳ ನಿರ್ವಹಣೆ ಜವಾಬುದಾರಿಯನ್ನು ಮಾರುಕಟ್ಟೆ ಶಕ್ತಿಗಳಿಗೆ ನೀಡದೆ ಅದರ ನಿರ್ವಹಣೆ ಜವಾಬ್ದಾರಿಯನ್ನು ಸರ್ಕಾರವು ತನ್ನ ವಶಕ್ಕೆ ತೆಗೆದುಕೊಳ್ಳಬೇಕು.

ಈ ಬಗೆಯ ಚಟುವಟಿಕೆಗಳನ್ನು ಸರ್ಕಾರವು ವಹಿಸಿಕೊಂಡರೆ ಏನಾಗಬಹುದು ಎಂಬುದರ ಅರಿವು ನನಗಿದೆ. ಅದೇ ಸಮಯದಲ್ಲಿ ನನಗೆ ಮಾರುಕಟ್ಟೆ ವೈಫಲ್ಯದ ಬಗ್ಗೆಯೂ ಅರಿವಿದೆ. ಒಂದು ವೇಳೆ ಮಾರುಕಟ್ಟೆಗಳಿಗೆ ಜವಾಬುದಾರಿ ನೀಡಿದರೂ ಸಹ ಅಲ್ಲಿ ಮಾರುಕಟ್ಟೆಯ ಮೇಲೆ ಸರ್ಕಾರಕ್ಕೆ ನಿಯಂತ್ರಣವಿರಬೇಕಾಗುತ್ತದೆ. ಇದು ಮಧ್ಯಮಮಾರ್ಗ. ಮಾರುಕಟ್ಟೆಯು ಅರ್ಥಶಾಸ್ತ್ರದ ನಿಯಮಗಳಿಗೆ ಬದ್ಧವಾಗಿ ನಡೆಯುವಂತೆ ಸರ್ಕಾರವು ನೋಡಿಕೊಳ್ಳಬೇಕಾಗುತ್ತದೆ.

ಜನತಾಂತ್ರಿಕ ವ್ಯವಸ್ಥೆಯಲ್ಲಿ ಸರ್ಕಾರವು ಅಂತಹ ಜವಾಬುದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕಾಗುತ್ತದೆ. ಆಹಾರದ ಬಿಕ್ಕಟ್ಟು, ಹಸಿವು, ಆಹಾರದ ಅಭದ್ರತೆ, ಅಪೌಷ್ಟಿಕತೆ, ಲಿಂಗ ಅಸಮಾನತೆ ಮುಂತಾದವು ಸಾಮಾಜಿಕವಾದ ಸಂಗತಿಗಳು. ಅವುಗಳನ್ನು ಸಾಮಾಜಿಕವಾಗಿ ಸರ್ಕಾರವು ನಿರ್ವಹಿಸಬೇಕಾಗುತ್ತದೆ. ಈ ಸಂಗತಿಗೆ ಆಹಾರೋತ್ಪಾದನೆಯಲ್ಲಿ ಉತ್ತರವನ್ನು ಹುಡುಕುವುದಕ್ಕೆ ಪ್ರತಿಯಾಗಿ ಆಹಾರದ ಮೇಲಿನ ಜನರ ಹಕ್ಕುದಾರಿಕೆಯ ವೈಫಲ್ಯದಲ್ಲಿ ಉತ್ತರ ಹುಡುಕುವುದು ಸೂಕ್ತ. ಹಸಿವಿಗೆ ಆಹಾರೋತ್ಪಾದನೆಯಲ್ಲಿ ಉತ್ತರ ಕಂಡುಕೊಳ್ಳುವುದು ಸುಲಭ. ಆದರೆ ಅಲ್ಲಿ ಅದಕ್ಕೆ ಉತ್ತರವಿಲ್ಲ. ಅದಕ್ಕೆ ಉತ್ತರ ಜನರ ಧಾರಣಾ ಸಾಮರ್ಥ್ಯದಲ್ಲಿನ ಕೊರತೆಯಲ್ಲಿದೆ. ಈ ಧಾರಣಾ ಸಾಮರ್ಥ್ಯವನ್ನು ದಷ್ಟಪುಷ್ಟಗೊಳಿಸದೆ ನಾವು ಹಸಿವನ್ನು, ಆಹಾರದ ಅಭದ್ರತೆಯನ್ನು, ಅಪೌಷ್ಟಿಕತೆಯನ್ನು ನಿವಾರಿಸುವುದು ಸಾಧ್ಯವಿಲ್ಲ.

(ಸಮುದಾಯ ಸಂಘಟನೆಯ ಸಾಹಿತ್ಯ ವಿಭಾಗವು 05-11-09ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ವಿಚಾರಸಂಕಿರಣದಲ್ಲಿ ಮಂಡಿಸಿದ ಪ್ರಬಂಧದ ಪರಿಷ್ಕೃತ ರೂಪ) □

ಬುದ್ಧಾಯಣ

೨೧

ಹಣಕ್ಕಾಗಿ ಆತ ಹೊದಿಕೆ ಹಾಸಿದ ಆದರೆ...!!

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ತಮ್ಮ ಅಸಂಖ್ಯಾತ ಭಿಕ್ಷುಗಳ ಜೊತೆಯಲ್ಲಿ ಕಾಶೀ ಬಳಿಯ ವೇಳುವನದಲ್ಲಿ ತಂಗಿದ್ದರು. ಬ್ರಹ್ಮದತ್ತ ರಾಜನು ವಾರಾಣಸಿಯಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಅಂಥಹ ಸಂದರ್ಭದಲ್ಲಿ ಬೋಧಿಸತ್ವರು ರುದ್ರವನ ದಲ್ಲಿ ವೃಕ್ಷದೇವತೆಯಾಗಿ ಹುಟ್ಟಿದರು.

ಆಗ ವಾರಣಾಸಿಯಲ್ಲಿ ನಾಡ ಹಬ್ಬದ ಘೋಷಣೆಯಾ ಯಿತು. ಜನರೆಲ್ಲ ಯಕ್ಷ ದೇವತೆಗಳಿಗೆ ಬಲಿ ಕೊಡುವ ಸಲುವಾಗಿ ನಾಲ್ಕು ದಿಕ್ಕುಗಳಿಂದಲೂ ಬಂದು ನಗರದ ಮಧ್ಯಭಾಗದ ಬಯಲಿ ನಲ್ಲಿ ಸೇರಿದರು.

ತಾವು ತಂದ ಮತ್ಸ್ಯ ಮಾಂಸಾದಿಗಳನ್ನು ದೇವತೆಗಳ ಮುಂದೆ ಚೆಲ್ಲಿ ತಲೆಯೋಡುಗಳಲ್ಲಿ ಹೆಂಡವನ್ನು ತುಂಬಿಟ್ಟು ಪೂಜಿ ಸಿದರು. ಪೂಜಾ ವಿಧಿಗಳೆಲ್ಲ ಮುಗಿದ ಬಳಿಕ ರಾತ್ರಿ ಜನರು ತಮ್ಮ ನಿವಾಸಗಳತ್ತ ನೆಡೆದರು. ನಡುರಾತ್ರಿಯ ಸಮಯದಲ್ಲಿ ಒಂದು ಗುಳ್ಳೇನರಿ ಮೌನವಾಗಿ ನಗರವನ್ನು ಪ್ರವೇಶಿಸಿತು. ಮತ್ಸ್ಯಮಾಂಸದ ವಾಸನೆಯ ಜಾಡು ಹಿಡಿದು ನಗರದ ನಡುವಿನ ಪೂಜಾಸ್ಥಳವನ್ನು ತಲುಪಿತು. ಅಲ್ಲಿ ಯಕ್ಷ ದೇವತೆಗಳಿಗೆ ಎಡೆಯಾಗಿ ಅರ್ಪಿಸಿದ್ದ ಮತ್ಸ್ಯ ಮಾಂಸವನ್ನು ತಿಂದು ಮತ್ತೇರುವಂತೆ ಹೆಂಡವನ್ನು ಕುಡಿ ಯಿತು. ಪ್ರಜ್ಞೆ ತಪ್ಪಿ ಅಲ್ಲಿಯೇ ಮಲಗಿತು. ಕಣ್ಣು ಬಿಟ್ಟಾಗ ಬೆಳಕು ಹರಿದಿತ್ತು.

ಈಗ ನಾನು ನಗರವನ್ನು ದಾಟಿ ಸ್ಮಶಾನಕ್ಕೆ ಹೊರಟರೆ ಜನರು ನನ್ನನ್ನು ಬೇಟೆಯಾಡದೆ ಬಿಡುವುದಿಲ್ಲ ಎಂಬ ಸತ್ಯವನ್ನು ಅರಿಯಲು ತಬ್ಬಿಬಾಯಿತು. ತಕ್ಷಣವೆ ಮೇಲೆದ್ದು ಮೈಕೊಡವಿಕೊಂಡ ಆ ಗುಳ್ಳೇ ನರಿಯು ಸಮೀಪವೇ ಇದ್ದ ಹೊಳೆಯ ಬದಿಯ ಒಂದು ಮರದ ಪೊಟರೆಯಲ್ಲಿ ಅವಿತು ಕುಳಿತುಕೊಂಡಿತು. ನಸುಕಿನಲ್ಲಿ ಜನರು ಸ್ನಾನ ಕ್ಕಾಗಿ ಒಬ್ಬೊಬ್ಬರಾಗಿ ಹೊಳೆಯ ಬಳಿ ನೆಡೆದು ಬರ ತೊಡಗಿದರು. ಅವರನ್ನೆಲ್ಲ ಕಣ್ಣಲ್ಲಿ ಕಣ್ಣಿಟ್ಟು ಗುಳ್ಳೇನರಿ ನೋಡ ತೊಡಗಿತು. ಅವರೆಲ್ಲ ಅಪಾಯಕಾರಿಗಳು ಎಂದು ನಿರ್ಧರಿಸಿ ಸುಮ್ಮನಾಯಿತು.

ಕೊನೆಗೊಬ್ಬ ಬ್ರಾಹ್ಮಣನು ಏಕಾಂಗಿಯಾಗಿ ನೆಡೆದು ಬರುತ್ತಿದ್ದ ಆತನನ್ನು ಸೂಕ್ಷ್ಮವಾಗಿ ಗಮನಿಸಲು ತೊಡಗಿತು. ಆ ಬ್ರಾಹ್ಮಣನು ದುರಾಸೆಯಿಂದ ಕೂಡಿದ ಧನಲೋಭಿ ಎಂಬುದನ್ನು ಖಾತರಿ ಪಡಿಸಿ ಕೊಂಡಿತು.

"ಎಲೈ ಪೂಜ್ಯ ಬ್ರಾಹ್ಮಣನೇ?' ಎಂದು ಕೂಗಿತು. ಮರದ ಪೊಟರೆಯ ಬಳಿ ಬಂದ ಬ್ರಾಹ್ಮಣ:

"ನನ್ನನ್ನು ಕರೆಯುತ್ತಿರುವವರು ಯಾರು?" ಎನ್ನಲು

"ಬ್ರಾಹ್ಮಣ ಮಹಾಶಯರೆ ನಾನು!"

"ಏತಕ್ಕೆ ಕೂಗಿದೆ?"

"ಪೂಜ್ಯರೇ, ನನ್ನ ಬಳಿ ಇನ್ನೂರು ಚಿನ್ನದ ನಾಣ್ಯಗಳಿವೆ. ತಾವು ನನ್ನ ಮೇಲೆ ಕೃಪೆ ತೋರಿ ತಮ್ಮ ಬಟ್ಟೆಯಲ್ಲಿ ನನ್ನನ್ನು ಸುತ್ತಿಕೊಂಡು ಯಾರಿಗೂ ಕಾಣದಂತೆ ತಮ್ಮ ತೋಳಿನಲ್ಲಿ ಎತ್ತಿಕಂಡು ನನ್ನನ್ನು ಈ ನಗರದಿಂದ ಆಚೆ ದಾಟಿಸುವೀರಾ?"

"ದಾಟಿಸಿದರೆ ನನಗೇನು ಕೊಡುವೆ?"

"ಪೂಜ್ಯರೇ, ನನ್ನ ಬಳಿ ಇರುವ ಇನ್ನೂರು ಚಿನ್ನದ ನಾಣ್ಯಗಳನ್ನು ತಮಗೆ ಕೊಡಗೆಯಾಗಿ ಕೊಡುವೆ!"



"ಅಯ್ಯಾ ಮಿತ್ರ, ನೀನು ಸುರೆಯನ್ನು ಕುಡಿದ ನರಿ ಯನ್ನು ಹೇಗೆ ನಂಬಿದೆ? ಅದರ ಬಳಿ ನೂರು ಕಪ್ಪೆ ಚಿಪ್ಪುಗಳೂ ಇಲ್ಲದೆ ಇರು ವಾಗ ಇನ್ನೂ ಇನ್ನೂರು ಚಿನ್ನದ ನಾಣ್ಯಗಳು ಎಲ್ಲಿಂದ ಬರಬೇಕು? ಪಂಡಿತರಾದ ತಾವು ಸ್ವಲ್ಪ ವಿವೇಕಿಗಳಾಗಿ ಬದಲಾಗ ಬಾರದೆ? ಆದದ್ದು ಆಗಿತು ಹೋಗಿ ನಿಮ್ಮ ಹೊದಿಕೆ ಯನ್ನು ಚನ್ನಾಗಿ ತೊಳೆದು ಸ್ನಾನ ಮಾಡಿರಿ. ಶುಭ್ರ ವಾಗಿ ಮನೆಗೆ ಹೋಗಿ ಇನ್ನೂ ಮುಂದಾದರೂ ದುರಾಸೆಗೆ ಮನಸೋಲ ಬೇಡಿ. ಬದಲಿಗೆ ವಿವೇಕ -ವಿಮರ್ಶೆಯನ್ನು ಮೈಗೂ ಡಿಸಿಕೊಳ್ಳಿ!" ಎನ್ನಲು, ಆ ಬ್ರಾಹ್ಮಣ: "ಹೌದು ಪೂಜ್ಯರೇ, ತಮ್ಮ ಮಾತಿ ನಲ್ಲಿ ಸತ್ಯವಿದೆ! ನಾನು ದುರಾಸೆಗೆ ಬಲಿಯಾಗಿ ತನ್ನ ಪಾಠ ಕಲಿತೆ!!" ಎಂದು ಮನೆಗೆ ತೆರಳಿದ.

ಸಿ. ಹೆಚ್. ರಾಜಶೇಖರ್

"ಹಾಗೇನು ಹಾಗೇ ಆಗಲಿ!' ಎಂದು ಅತ್ತಿತ್ತ ಕಣ್ಣಾಡಿಸಿದ. ಜನರ ಸುಳಿವು ಕಾಣದಿರಲು ಮೈಮೇಲೆ ಹೊದಿದ್ದ ಹೊದಿಕೆಯನ್ನು ತೆಗೆದು ಗುಳ್ಳೇನರಿಗೆ ಮುಚ್ಚಿದ.

ಬಳಿಕ ಅದನ್ನು ತನ್ನ ತೋಳುಗಳಲ್ಲಿ ಎತ್ತಿಕೊಂಡು ಬಿರುಸಾಗಿ ನೆಡೆದ. ನಗರವನ್ನು ದಾಟಿ ಹೊರ ಬರುತ್ತಿದ್ದಂತೆ ಗುಳ್ಳೇನರಿಗೆ ಸ್ವಲ್ಪ ಧೈರ್ಯ ಬಂದಿತು:

"ಎಲೈ ಬ್ರಾಹ್ಮಣ, ಇದು ಯಾವ ಸ್ಥಳ?"

"ಗುಳ್ಳೇನರಿ ರಾಜ, ಇದು ಹೊರ ದ್ವಾರ!"

"ಹಾಗಾದರೆ ಇನ್ನೂ ಸ್ವಲ್ಪ ಮುಂದಕ್ಕೆ ಕರೆದುಕೊಂಡು ಹೋಗು"

"ಹಾಗೆಯೇ ಆಗಲಿ ನರಿರಾಜ" ಎಂದ. ಮತ್ತೆ ಸ್ವಲ್ಪ ಮುಂದೆ ಸಾಗಿದ ಬಳಿಕ:

"ಎಲೈ ಬ್ರಾಹ್ಮಣ . ಇದು ಯಾವ ಸ್ಥಳ?"

"ನರಿ ರಾಜ, ಇದು ಸ್ಮಶಾನ!"

"ಸರಿಯಾದ ಜಾಗಕ್ಕೆ ಬಂದು ತಲುಪಿದೆವು. ಹಾಗಾದರೆ ನನ್ನನ್ನು ಇಲ್ಲಿಯೇ ಇಳಿಸು!" ಎಂದಿತು. ಅವನು ಹಾಗೆಯೆ ಮಾಡಿದ.

ಬಳಿಕ ಆ ಬ್ರಾಹ್ಮಣನು ನಮ್ರನಾಗಿ:

ಸ್ವಾಮಿ, ನರಿರಾಜ ನನ್ನ ಹಣ?'

"ಬ್ರಾಹ್ಮಣ, ಹೌದಲ್ಲವೆ? ಹಣಕ್ಕಾಗಿ ಹೊದಿಕೆಯನ್ನು ಹಾಸು!" ಎನ್ನಲು ಆ ಧನಲೋಭಿಯು ಹೊದ್ದ ಹೊದಿಕೆಯನ್ನು ಚನ್ನಾಗಿ ಕೊಡಕಿ ಅತಿ ಸಂಭ್ರಮದಿಂದ ಅದರೆದುರು ಹಾಸಿದ. ಆಗ ಗುಳ್ಳೆನರಿಯು ತಾನು ನಿಂತ ಮರದ ಬುಡವನ್ನು ತೋರಿಸುತ್ತಾ:

"ಅಯ್ಯಾ, ಬ್ರಾಹ್ಮಣ ಈ ಮರದ ಬುಡದಲ್ಲಿ ನಾನು ಇನ್ನೂರು ಚಿನ್ನದ ನಾಣ್ಯವನ್ನು ಹೂತು ಇಟ್ಟಿದ್ದೇನೆ. ಅಗೋ ನೋಡು ಆ ಸ್ಮಶಾನದ ಬಳಿ ಹಾರೆ ಮತ್ತು ಗುದ್ದಲಿ ಇದೆ ಅದನ್ನು ತಂದು ಈ ಜಾಗವನ್ನು ಅಗಿ!" ಎಂದಿತು. ಆತ ಓಡೋಡಿ ಹೋಗಿ ಹಾರೆ ಗುದ್ದಲಿಯನ್ನು ತಂದು ಮರದ ಬುಡದಲ್ಲಿ ಅಗಿಯ ತೊಡಗಿದ. ಗುಂಡಿಯು ಮಂಡಿಯ ಆಳಕ್ಕೆ ಇಳಿದಾಗ ಬ್ರಾಹ್ಮಣನು:

"ಅಯ್ಯಾ, ನರಿ ರಾಜ ನಿಧಿಯು ಕಾಣುತ್ತಿಲ್ಲವಲ್ಲ?" ಎನ್ನಲು:

"ಮೇಲೆ ಮೇಲೆ ಹೂತ್ತರೆ ಕಳ್ಳಕಾಕರು ದೋಚುತ್ತಾರೆಂದು ಬಗೆದು ಆಳಕ್ಕೆ ಹೂತು ಹಾಕಿದ್ದೇನೆ. ಇನ್ನೂ ಸ್ವಲ್ಪ ಆಳಕ್ಕೆ ಅಗಿ ಸಿಗುತ್ತದೆ!" ಎನ್ನಲು;

ಆತ ಆಳುದ್ದದ ಗುಂಡಿ ತೋಡಿದ. ಇನ್ನೂ ಗುಂಡಿ ತೋಡಲಾರದೆ ಸುಸ್ತಾಗಿ ಗುಂಡಿಯೊಳಗಿನಿಂದ ಹೀಗೆ ಕೂಗಿದ:

"ಅಯ್ಯಾ ಒಡಯನೇ ಎಲ್ಲಿ ನನ್ನ ಇನ್ನೂರು ಚಿನ್ನದ ನಾಣ್ಯಗಳು?" ಎನ್ನಲು:

"ಪ್ರಿಯ ಬ್ರಾಹ್ಮಣ, ಚಿಂತಿಸದಿರು. ಮೇಲೆದ್ದು ಬಾ. ನಿನ್ನ ಇನ್ನೂರು ಚಿನ್ನದ ನಾಣ್ಯಗಳನ್ನು ಕೊಡುತ್ತೇನೆ!" ಎನ್ನಲು ಆತ ಸಂತೋಷದಿಂದ ಮೇಲೆದ್ದು ಬಂದು ತಾನು ಹಾಸಿದ ಹೊದಿಕೆಯ ಮುಂದೆ ನಿಂತ.

ಆ ಗುಳ್ಳೇ ನರಿಯು ಮರವೇರಿ ಹಾಸಿದ ಹೊದಿಕೆಯ ನೇರದ ಕೊಂಬೆಯ ಮೇಲೆ ಕುಳಿತು:

"ಪೂಜ್ಯರೇ, ನಿಮ್ಮ ಇನ್ನೂರು ಚಿನ್ನದ ನಾಣ್ಯಗಳನ್ನು ಪಡೆಯಿರಿ?" ಎನ್ನುತ್ತಾ ಹಾಸಿದ ಹೊದಿಕೆಯ ನಾಲ್ಕೂ ಮೂಲೆಗಳಿಗೂ ಮತ್ತು ಮಧ್ಯಯೂ ಮಲ ವಿಸರ್ಜನೆ ಮಾಡಿತು. ಬಳಿಕ ಬ್ರಾಹ್ಮಣನನ್ನು ಅಣಕಿಸುತ್ತಾ:

"ಪೂಜ್ಯರೇ, ಇಷ್ಟೇ ಸಾಕೇ? ಇನ್ನೂ ಬೇಕೆ?!" ಎನ್ನಲು ಆ ಧನಲೋಭಿ ಬ್ರಾಹ್ಮಣನು ನಿರಾಸೆಯಿಂದ ಕೆಂಡ ಮಂಡಲವಾಗಿ ಆ ಗುಳ್ಳೇನರಿಗೆ ಕಡು ಶಾಪವನ್ನು ಹಾಕುತ್ತಾ ಅದರತ್ತ ಕಲ್ಲು ತೂರ ತೊಡಗಿದ. ಅದೂ ಮತ್ತೂ ಜೋರಾಗಿ ಕೇಕೆ ಹಾಕಿ ನಗುತ್ತಾ ಕೊಂಬೆಯಿಂದ ಕೊಂಬೆಗೆ ಜಿಗಿದು ಕಾಡಿನಲ್ಲಿ ಕಣ್ಮರೆಯಾಯಿತು.

ಅದೇ ಸಂದರ್ಭದಲ್ಲಿ ವನದೇವತೆಯಾಗಿ ಜನಿಸಿದ್ದ ಬೋಧಿಸತ್ವರು ಕಾಡಿನಲ್ಲಿ ಅಲೆಯುತ್ತಾ ಸ್ಮಶಾನದ ಬಳಿ ಬಂದರು. ಅಲ್ಲಿ ಈ ಬ್ರಾಹ್ಮಣನ ಅಸಾಧಾರಣವಾದ ರೋಧನವನ್ನು ಕಂಡು ವಿಷಯವನ್ನು ಕೇಳಿದರು. ಆತ ನೆಡೆದ ಸಂಗತಿಯನ್ನು ವಿವರಿಸಿದ.

ನಸುನಕ್ಕ ಬೋದಿ ಸತ್ವರು:

"ಅಯ್ಯಾ ಮಿತ್ರ, ನೀನು ಸುರೆಯನ್ನು ಕುಡಿದ ನರಿಯನ್ನು ಹೇಗೆ ನಂಬಿದೆ? ಅದರ ಬಳಿ ನೂರು ಕಪ್ಪೆ ಚಿಪ್ಪುಗಳೂ ಇಲ್ಲದೆ ಇರುವಾಗ ಇನ್ನೂ ಇನ್ನೂರು ಚಿನ್ನದ ನಾಣ್ಯಗಳು ಎಲ್ಲಿಂದ ಬರಬೇಕು? ಪಂಡಿತರಾದ ತಾವು ಸ್ವಲ್ಪ ವಿವೇಕಿಗಳಾಗಿ ಬದಲಾಗಬಾರದೆ?

ಆದದ್ದು ಆಗಿತು ಹೋಗಿ ನಿಮ್ಮ ಹೊದಿಕೆಯನ್ನು ಚನ್ನಾಗಿ ತೊಳೆದು ಸ್ನಾನ ಮಾಡಿರಿ. ಶುಭ್ರವಾಗಿ ಮನೆಗೆ ಹೋಗಿ ಇನ್ನೂ ಮುಂದಾದರೂ ದುರಾಸೆಗೆ ಮನಸೋಲಬೇಡಿ. ಬದಲಿಗೆ ವಿವೇಕಮತ್ತು ವಿಮರ್ಶೆಯನ್ನು ಮೈಗೂಡಿಸಿಕೊಳ್ಳಿ!" ಎನ್ನಲು , ಆ ಬ್ರಾಹ್ಮಣ:

"ಹೌದು ಪೂಜ್ಯರೇ, ತಮ್ಮ ಮಾತಿನಲ್ಲಿ ಸತ್ಯವಿದೆ! ನಾನು ದುರಾಸೆಗೆ ಬಲಿಯಾಗಿ ತನ್ನ ಪಾಠ ಕಲಿತೆ!!" ಎಂದು ಮನೆಗೆ ತೆರಳಿದ. □

ತಾವು ತಂದ ಮತ್ಸ್ಯ ಮಾಂಸಾದಿಗಳನ್ನು ದೇವತೆಗಳ ಮುಂದೆ ಚೆಲ್ಲಿ ತಲೆಯೋಡುಗಳಲ್ಲಿ ಹೆಂಡವನ್ನು ತುಂಬಿಟ್ಟು ಪೂಜಿಸಿದರು. ಪೂಜಾ ವಿಧಿಗಳೆಲ್ಲ ಮುಗಿದ ಬಳಿಕ ರಾತ್ರಿ ಜನರು ತಮ್ಮ ನಿವಾಸಗಳತ್ತ ನೆಡೆದರು. ನಡುರಾತ್ರಿಯ ಸಮಯದಲ್ಲಿ ಒಂದು ಗುಳ್ಳೇನರಿ ಮೌನವಾಗಿ ನಗರವನ್ನು ಪ್ರವೇಶಿಸಿತು. ಮತ್ಸ್ಯಮಾಂಸದ ವಾಸನೆಯ ಜಾಡು ಹಿಡಿದು ನಗರದ ನಡುವಿನ ಪೂಜಾಸ್ಥಳವನ್ನು ತಲುಪಿತು. ಅಲ್ಲಿ ಯಕ್ಷ ದೇವತೆಗಳಿಗೆ ಎಡೆಯಾಗಿ ಅರ್ಪಿಸಿದ್ದ ಮತ್ಸ್ಯ ಮಾಂಸವನ್ನು ತಿಂದು ಮತ್ತೇರುವಂತೆ ಹೆಂಡವನ್ನು ಕುಡಿಯಿತು. ಪ್ರಜ್ಞೆ ತಪ್ಪಿ ಅಲ್ಲಿಯೇ ಮಲಗಿತು. ಕಣ್ಣು ಬಿಟ್ಟಾಗ ಬೆಳಕು ಹರಿದಿತ್ತು. ಈಗ ನಾನು ನಗರವನ್ನು ದಾಟಿ ಸ್ಮಶಾನಕ್ಕೆ ಹೊರಟರೆ ಜನರು ನನ್ನನ್ನು ಬೇಟೆಯಾಡದೆ ಬಿಡುವುದಿಲ್ಲ ಎಂಬ ಸತ್ಯವನ್ನು ಅರಿಯಲು ತಬ್ಬಿಬಾಯಿತು.



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

'SAMVADA' Kannada Monthly, December 2009 RNI-KAR KAN/2002/9246 CPMG/KA/BGW-
Office of Posting: RAJAJINAGAR HO, Date of Posting: 1st & 7th of Every Month